# ಬಿ.ಎಸ್ಸಿ.(ಫ್ಯಾಡ್)

# ಎರಡನೇ  ಸೆಮಿಸ್ಟರ್

ಬೆಂಗಳೂರು ನಗರ ವಿಶ್ವವಿದ್ಯಾಲಯ
BENGALURU CITY UNIVERSITY

BE BOUNDLESS

## 2021

# ಪರಿವಿಡಿ

## ಎರಡನೇಯ ಸೆಮಿಸ್ಟರ್

## ಬಿ.ಎಸ್ಸಿ.(ಫ್ಯಾಡ್.)

**ಬದುಕು**

೧. ಗಜಕುಮಾರನ ಕಥೆ – ವಡ್ಡಾರಾಧನೆ 109-111

೨. ಕಳಕಳಿ – ಡಾ.ಕರೀಗೌಡ ಬೀಚನಹಳ್ಳಿ 112-121

೩. ಪ್ರಾರ್ಥನೆ – ಎ. ಆರ್. ಮಣಿಕಾಂತ್ 122-126

೪. ಕಟ್ಟಡದ ಕೆಲಸಗಾರರು – ಡಾ.ಹೆಚ್.ಎಸ್.ಶಿವಪ್ರಕಾಶ್ [ಓದು ಪಠ್ಯ] 127-128

**೨. ರಾಜಕೀಯ**

೧. ನರಗುಂದ ಬಂಡಾಯ – ಜನಪದ 131-132

೨. ಅನಾಮಿಕ ಆಂಗ್ಲರು – ಕೆ.ಎಸ್. ನಿಸಾರ್ ಅಹಮದ್ 133-135

೩. ಕಲೆ ಮತ್ತು ಪ್ರಭುತ್ವ – ಡಾ. ಬಂಜಗೆರೆ ಜಯಪ್ರಕಾಶ್ 136-140

೪. ದೊಡ್ಡವರ ನಾಯಿ– –ಕಲಿಗಣನಾಥ ಗುಡದೂರು [ಓದು ಪಠ್ಯ] 141-153

**೩. ವಿವಾಹ**

೧. ವಿವಾಹಿತ ಹೆಣ್ಣು (ಸೆಕೆಂಡ್ ಸೆಕ್ಸ್ – ಸಿಮೋನ್ ದಿ ಬೋವಾ (ಕನ್ನಡಕ್ಕೆ – ಎಚ್.ಎಸ್.ಶ್ರೀಮತಿ) 156-171

೨. ಅಭಿಮನ್ಯು – ವಿವಾಹ ಪ್ರಸಂಗ – ಜನಪದ 172-174

೩. ವಿವಾಹ ಪದ್ಧತಿಗಳು – ಎಸ್. ಕೆ. ರಾಮಚಂದ್ರರಾವ್ 175-180

೪. ಉತ್ತರೆ ಕಲ್ಯಾಣ – ಎ.ಆರ್.ಕೃಷ್ಣಶಾಸ್ತ್ರಿ (ವಚನಭಾರತ) [ಓದು ಪಠ್ಯ]181-184

**೪. ಬೇಸಾಯ / ಕೃಷಿ**

೧. ನೀರು ಮತ್ತು ಜನಪದ ಪರಂಪರೆ – ಡಾ॥ಕೆ.ವೈ.ನಾರಾಯಣಸ್ವಾಮಿ 186-196

೨. ಕೃಷಿ ಮೊದಲು ಸರ್ವಕ್ಕೆ – ಡಾ॥ ರಂಗಾರೆಡ್ಡಿ ಕೋಡಿರಾಂಪುರ 197-201

೩. ಸುಸ್ಥಿರ ಕೃಷಿ ಪಾಠಗಳು – ಎಲ್. ನಾರಾಯಣ ರೆಡ್ಡಿ 202-206

೪. ಕೃಷಿ ಉತ್ಪನ್ನಕ್ಕೂ ಆನ್‌ಲೈನ್ ಸ್ಪರ್ಶ – ಸಚ್ಚಿದಾನಂದ ಕುರಗುಂದ [ಓದು ಪಠ್ಯ] 207-213

## ಬದುಕು ಅಥವಾ ಜೀವನ

ಸದಾ ಹರಿಯುವ ನೀರಿನಂತೆ ಜೀವನ. ಅದು ಸದಾ ಹರಿಯುತ್ತಲೇ ಇರಬೇಕು. ಜೀವನ ಸಾಗರವನ್ನು ಈಜಿ ದಡ ಸೇರುವ ಪ್ರಯತ್ನ ಪ್ರತಿಯೊಬ್ಬರು ಮಾಡಬೇಕು. ಬದುಕುವುದು ಮುಖ್ಯವಲ್ಲ ಬದುಕಿ ಬದುಕಿಸುವುದು ಮುಖ್ಯ. ಬದುಕಿನಲ್ಲಿ ಬರುವ ಕಷ್ಟ–ಸುಖಗಳನ್ನು ಸದಾ ಸ್ವೀಕರಿಸುವ ಮನಸಿದ್ದರೆ ಅದು ಬದುಕಿಗೆ ಅರ್ಥ ತಂದುಕೊಡುತ್ತದೆ. ನಮಗೆ ಏನೇ ಕಷ್ಟಗಳಿದ್ದರು ಅದನ್ನು ತೋರ್ಪಡಿಸದೆ ಎಲ್ಲರಿಗಾಗಿ ಬದುಕುವುದು ಕಷ್ಟವಾದರು ಎಲ್ಲರೊಳಗೆ ಒಂದಾಗುವುದೇ ಜೀವನ. ಜೀವ ಜಗತ್ತಿನಲ್ಲಿ ಹುಟ್ಟು ಸಾವುಗಳು ಸ್ವಾಭಾವಿಕ. ಹುಟ್ಟು ಹೇಗೆ ಆಕಸ್ಮಿಕವೋ, ಸಾವು ಅಷ್ಟೇ ಅನಿವಾರ್ಯ ಎಂಬ ವಿಚಾರ ಎಲ್ಲರಿಗೂ ತಿಳಿದಿದೆ. ‘‘ಸರಸ ಜನನ, ವಿರಸ ಮರಣ , ಸಮರಸವೇ ಜೀವನ’’ ಎಂದು ನಮ್ಮ ವರಕವಿ ದ.ರಾ.ಬೇಂದ್ರೆ ಹೇಳಿದ್ದಾರೆ. ಇದೆ ನಿಜವಾದ ಬದುಕಿನ ಅರ್ಥ ಎನಿಸುತ್ತದೆ. ಹಾಗೂ ಇಲ್ಲಿ ಎಲ್ಲದಕ್ಕೂ ಉತ್ತರ ಸಿಗುತ್ತದೆ. ಜೀವನ ಒಂದು ಸಮರ ಮನುಷ್ಯ ಅದರಲ್ಲಿ ಅವಿರತವಾಗಿ ಹೋರಾಡುವ ಸೇನಾನಿ ಇದ್ದಂತೆ. ನಿರಂತರವಾಗಿ ಜೀವನ ಸಂಘರ್ಷದಲ್ಲಿ ಭಾಗಿಯಾಗಿ ಜಯ ಅಪಜಯಗಳನ್ನು ತಾಳ್ಮೆಯಿಂದ ಸ್ವೀಕರಿಸುವತ್ತ ಮುನ್ನುಗ್ಗುವುದು ಮುಖ್ಯ. ಹಾಗೂ ಪ್ರೀತಿ ವಿಶ್ವಾಸಗಳ ಮನೋಭೂಮಿಕೆಯನ್ನು ಸೃಷ್ಟಿಸುವುದು ನಿಜವಾದ ಬದುಕಿನ ಅರ್ಥವಾಗುತ್ತದೆ.

*****

# ೧. ಗಜಕುಮಾರನ ಕಥೆ

**– ಶಿವಕೋಟಾಚಾರ್ಯ**

**ಗಜಕುಮಾರನ ಕಥೆಯಂ ಪೇಳ್ವೆಂ:**

**ಗಾಹೆ ॥ಭೂಮಿಏ ಸಮಂ ಖೀಲಾಭಾ ಇದ ದೇಹೋವಿ ಅಲ್ಲಚಮ್ಮಂ ವ।**
**ಭಗವಂ ಪಿ ಗಜಕುಮಾರೋ ಪಡಿವಣ್ಣೋ ಉತ್ತಮಂ ಅಟ್ಟ ॥**

(ಭೂಮಿ ಏ ಸಮಂ – ನೆಲದೊಳೋರಂತಾಗೆ ಮಲರ್ಚಿಕ್ಕಿಯುರದಿಂ ತಗುಳ್ದು ನಾಭಿವರೆಗಂ ಬಸಿರಂ ಪೋಳ್ದು, ಅಲ್ಲಚಮ್ಮಂ – ಪಂದೋವಲಂ ತೆಗೆದು, ಖೀಲಾಭಾ ಇದ ದೇಹೋವಿ – ಕಾಯ್ದು ಕಬ್ಬೊನ್ನ ನಿಡಿಯವುಂ ತೋರಮುಮಪ್ಪ ಕೀಲ್ಗಳಿಂದಂ ಮೆಯ್ಯೆಲ್ಲಮುಂ ನಿರಂತರಮುರ್ಚಿ ಪೋಗಿ ನೆಲಲಂ ತಾಪಿನಂ ಕೀಲಿರೆಯೆಪಟ್ಟಮೆಯ್ಯನೊಡೆಯನಾಗಿಯುಂ, ಭಗವಂ – ಪಿರಿದಪ್ಪ ಪೆರ್ಮೆಯನೊಡೆಯಂ, ಗಜಕುಮಾರೋಪಿ – ಗಜಕುಮಾರನುಂ, ಪಡಿವಣ್ಣೋ–ಪೊರ್ದಿದೊಂ, ಉತ್ತಮಂ ಅಟ್ಠಂ – ಮಿಕ್ಕ ದರ್ಶನಜ್ಞಾನಚಾರಿತ್ರಂಗಳಾರಾಧನೆಯಂ)

**ಅದೆಂತೆಂದೊಡೆ :**

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ಸುರಥಮೆಂಬುದು ನಾಡಲ್ಲಿ ದ್ವಾರಾವತಿಯೆಂಬುದು ಪೊಳಲದನಾಳ್ವೊಂ ವಿಷ್ಣು ಅರ್ಧಚಕ್ರಿಯಾತನ ತಂದೆ ವಸುದೇವ ಸ್ವಾಮಿಯೆಂಬೊನಾ ವಸುದೇವಸ್ವಾಮಿಯರಸಿ ಗಾಂಧರ್ವದತ್ತೆಯೆಂಬೊಳಾಯಿರ್ವರ್ಗಂ ಗಜಕುಮಾರನೆಂಬೊಂ ಮಗನಪ್ಪೊನಂತವರ್ಗಳಿಷ್ಟ ವಿಷಯಕಾಮ ಭೋಗಂಗಳನನುಭವಿಸುತ್ತಂ ಕಾಲಂ ಸಲೆ ಮತ್ತಿತ್ತ ಸೂರದತ್ತಮೆಂಬುದು ನಾಡಲ್ಲಿ ಪೌದನಪುರಮೆಂಬುದು ಪೊಳಲದನಾಳ್ವೊನಪರಾಜಿತನೆಂಬೊನರಸನಾದಮಾನುಂ ಪ್ರಚಂಡ ಬಳಗರ್ವಿತನಾರುಮನುರಿದೊಂ ವಿಷ್ಣುಗಂ ಬೆಸಕೆಯ್ಯನೊಂದು ದಿವಸಂ ವಿಷ್ಣು ಪೊಳಲೊಳ್ ಗೋಸಣೆಯಂ ತೊಳಲ್ಚಿದನಾವನೊರ್ವಂ ಪೌದನಪುರಾಧಿ ಪತಿಯಪ್ಪಪರಾಜಿತನಂ ಸಂಗ್ರಾಮದೊಳ್ ಕಾದಿ ಗೆಲ್ದು ಪಿಡಿಕೊಂಡು ಬರ್ಕು ಮಾತಂಗೆಯಾತನ ಬೇಡುವುದೆಲ್ಲಮಂ ಕುಡುವೆನೆಂದು ತೊಳಲ್ವ ಗೋಸಣೆಯಂ ಗಜಕುಮಾರಂ ಪಿಡಿದೊಡಾಮಾತನರಸಂ ಕೇಳ್ದು ಗಜಕುಮಾರನಂ ಕರೆಯಿಸಿಯಾತನೊಡನೆ ಚಾತುರ್ದಂತ ಬಳಮಂ ಕೂಡಿಯಟ್ಟಿದೊಡಾತನುಂ ಪೋಗಿಯಪರಾಜಿತನೊಡನೆ ಮಹಾಯುದ್ದಂಗೆಯ್ದು ಗೆಲ್ದು ಪೆಡಂಗೆಯ್ಯುಡಿಯೆ ಕಟ್ಟಿ ಗಜತುರಗವಸ್ತು ವಾಹನ ಸಹಿತಂ ತಂದು ವಿಷ್ಣುಗೊಪ್ಪಿಸಿದೊಡಾತನುಮೊಸೆದು ನೀನ್ ಮೆಚ್ಚುದುದಂ ಬೇಡಿಕೊಳ್ಳೆನೆ ಪೆರತೇನುಮನೊಲ್ಲೆನ್ ನಿಮ್ಮ ಪ್ರಸಾದದಿಂದೆನಗೆಲ್ಲಮುಂಟು ಒಂದಂ ಬೇಳ್ವೆಂ ನಿಮ್ಮಂತಃಪುರಮುರಿಯೆ ಪೊಳಲೊಳಗೆನ್ನ

ಮೆಚ್ಚಿದ ಪೆಂಡಿರನೆ ಕೊಂಡೆನ್ನಿಚ್ಚೆಯೊಳ್ ಮೆಚ್ಚಿದಂತೆ ಬಾಳ್ವೆನೀ ದಾಯಮಂ ಬೇಡಿರ್ದೆನಿದನೆನಗೆ ದಯೆಗೆಯ್ದುಸಲಿಸುವುದೆಂದೊಡರಸನುಮಂತೆಗೆಯ್ವೆಂದು ಗಜಕುಮಾರಂಗೆ ಬೇಡಿದುದಂ ಕೊಟ್ಟಂ

ಗಜಕುಮಾರನುಂ ತನ್ನ ಬೇಡಿದ ವರಮಂ ಪೆತ್ತು ಪರದರ ಪಾರ್ವರೊಕ್ಕಲಿಗರ ಸಾಮಂತರ ಪೊಳಲೊಳಗುಳ ಒಳ್ಪೆಂಡಿರೆಲ್ಲರಂ ಕಣ್ಗಂ ಮನಕ್ಕಂ ಮೆಚ್ಚಿದವರೊಳ್ ತನ್ನಿಚ್ಚೆಯಿಂದಂ ಮೊರೆದು ಮೊಟ್ಟಯಿಸಿಯುಯ್ದು ಬಾಳುತ್ತಿರೆ ಮತ್ತಮಾ ಪೊಳಲೊಳ್ ಪಂಗುಳನೆಂಬ ಸುವರ್ಣಗಾರನ ಪೆಂಡತಿ ವಸುಂಧರಿಯೆಂಬೊಳತ್ಯಂತ ರೂಪಲಾವಣ್ಯ ಸೌಭಾಗ್ಯಕಾಂತಿ ಹಾವಭಾವವಿಲಾಸ ವಿಭ್ರಮಂಗಳನೊಡೆಯೊಳಂ ಕಂಡು ಗಜಕುಮಾರನಾಕೆಗಾಟಿಸಿ ತನ್ನ ಮನೆಯೊಳಿಟ್ಟಾಕೆಗಾಸಕ್ತನಾಗಿ ಬಾಳುತ್ತಿರ್ಕುಮಾ ಏರಣಿಗನುಂ ಪೆಂಡತಿಯ ವಿಯೋಗದೊಳ್ ಸಂತಾಪದಿಂದಮಿರುಳುಂ ಪಗಲುಮನವರತಂ ಬೇ(ಯು)ತ್ತಮಸಮರ್ಥನಪ್ಪುದರಿಂದಂ ಮನದೊಳ್ ಗಜಕುಮಾರಂಗೆ ಮುಳಿಯುತ್ತಿರ್ಕುಂ

ಇಂತು ಪಲಕಾಲಂ ಸಲೆ ಮತ್ತೊಂದು ದಿವಸಮರಿಷ್ಟನೇಮಿ ಭಟ್ಟಾರರ ಸಮವಸರಣಂ ವಿಹಾರಿಸುತ್ತಂ ದ್ವಾರಾವತಿಗೆ ವಂದೊಡೆ ವಿಷ್ಣುವಿನೊಡನೆ ಗಜಕುಮಾರಂ ತ್ರಿಭುವನ ಪರಮೇಶ್ವರನಲ್ಲಿಗೆ ವೋಗಿ ವಂದಿಸಿ ಪೂಜಿಸಿರ್ದು ಭಟಾರರ್ ಧರ್ಮಮಂ ಪೇಳ್ವಲ್ಲಿಯಗಮ್ಯಾಗಮನಂಗೆಯ್ವೊಡಂ ಪೆರರ ಸಜ್ಜನಂಗಳೊಳ್ ಬರ್ದೋಡಮೆಯ್ದುವ ದುರ್ಗತಿಗಳೊಳಪ್ಪ ದುಃಖಂಗಳಂ ಪೇಳೆ ಕೇಳ್ದು ನಾನ್ಯಥಾಜಿನಭಾಷಿತಮೆಂದು ನಂಬಿ ಭೋಗಂಗಳ್ಗೆ ಪೇಸಿ ವೈರಾಗ್ಯಮಾಗಿ ಎಲ್ಲಮಂ ತೊರೆದರಿಷ್ಟನೇಮಿ ಭಟ್ಟಾರರ ಪಕ್ಕದೆ ತಪಂಬಟ್ಟುಗ್ರೋಗ್ರ ತಪಶ್ಚರಣಂಗೆಯ್ದು ಪನ್ನೆರಡು ವರ್ಷಂ ಪೋದೊಡೆ ಗ್ರಾಮನಗರಖೇಡಖರ್ವಡ ಮಡಂಬಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತಂ ಮತ್ತವಾ ದ್ವಾರಾವತಿಗೆ ವಂದ ರೇವತೋದ್ಯಾನ ವನದೊಳ್ ರಾತ್ರಿ ಪ್ರತಿಮೆನಿಂದೊನಂ ಸ್ವಜನ ಪರಿಜನ ಬಂಧುವರ್ಗಮುಂ ಶ್ರಾವಕರ್ಕಳುಂ ಬಂದರ್ಚಿಸಿ ಪೊಪವಂಟು ಪೋಪರಂ ಪಂಗುಳನೆಂಬ ಸುವರ್ಣಕಾರಕಂ ಕಂಡು ಬೆಸಗೊಂಡು ಭಟಾರರ ಬರವಂ ಕೇಳ್ದರಿದು ಪಗೆವನನಿರೆಯಲ್ಪೆತ್ತೆನೆಂದು ರಾಗಿಸಿ ಪಲವು ನಿಡಿಯವುಂ ತೋರಮುಮಪ್ಪ ಕರ್ಬೊನ್ನ ಕೀಲ್ಗಳಂ ಕೊಂಡು ಬಂದುಕ್ಷಮಾಂಗನಾಲಿಂಗಿತನಪ್ಪ ಮಹಾಮುನಿಯಂ ಮಲರ್ಚೆ ಪಟ್ಟರಿಸಿಯುರಂಃ ಸ್ಥಲಮಂ ನಾಭಿವರೆಗಂವಿದಾರಿಸಿ ಪಂದೊವಲ್ ಪೊರೆತಾಪಿನೆಗಂ ಸಮನವಯವ ಪ್ರದೇಶಂಗಳೊಳ್ ಕಾಯ್ದು ಕರ್ಬೊನ್ನ ಕೀಲ್ಗಳಂ ನೆಲನಂ ತಾಪಿನಮುರ್ಚೆ ಪೋಗಿರುದೊಡೆ ಕ್ಷಮೆಯಂ ಭಾವಿಸಿ ಧರ್ಮ್ಯಧ್ಯಾನ ಶುಕ್ಲಧ್ಯಾನಂಗಳಂ ಜಾನಿಸಿ ರತ್ನತ್ರಯಮಂ ಸಾಧಿಸಿ ಸಮಾಧಿಮರಣದಿಂ ಮುಡಿಪಿ ದೇವಲೋಕಮೆಂಬ ಪ್ರಾಸಾದಕ್ಕೆ ಕಳಸಮಾಗುತ್ತಿರ್ದ್ದ ಸರ್ವಾರ್ಥಸಿದ್ಧಿಯೆಂಬ ಸ್ವರ್ಗದೊಳ್

ಮೂವತ್ತುಮೂರು ಸಾಗರೋಪಮಾಯುಷ್ಯಸ್ಥಿತಿಯನೊಡೆಯನೇಕಹಸ್ತಪ್ರಮಾಣನುಂ ಪುಂಡರೀಕ ವರ್ಣಂಗಳನೊಡೆಯೊನಹಮಿಂದ್ರದೇವನಾಗಿ ಪುಟ್ಟಿದೊಂ

ಮತ್ತಂ ಪೆರುರುಮಾರಾಧಕರಪ್ಪವರ್ಗಳ್ ಗಜಕುಮಾರನ ಮನುಷ್ಯೋಪಸರ್ಗದೊಳಾದ ವೇದನೆಯಂ ಮನದೊಳ್ ಭಾವಿಸುತ್ತಂ ಪಸಿವು ನೀರಳ್ಕೆ ದಾಹ ವಾತಂ ಸೂಲೆ ಮೊದಲಾಗೊಡೆಯ ವೇದನೆಗಳ ಸೈರಿಸಿ ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ ಸಮಾಧಿಮರಣದಿಂದಂ ಮುಡಿಪಿ ಸ್ವರ್ಗಾಪವರ್ಗ ಸುಖಂಗಳನೆಯ್ದುಗೆ.

**ಕಠಿಣ ಪದಗಳ ಅರ್ಥ :–**

ಪೊಳಿಲು – ಪಟ್ಟಣ, ಗೋಸಣೆ – ಘೋಷಣೆ, ಬಳ – ಬಲ, ಸೇನೆ, ತುರಗ – ಕುದುರೆ, ಪಾರ್ವ – ಬ್ರಾಹ್ಮಣ, ಒಳ್ವ – ಒಳ್ಳೆಯ, ಸುವರ್ಣಗಾರ – ಚಿನ್ನದ ಕೆಲಸ ಮಾಡುವವನು, ಅಕ್ಕಸಾಲಿ, ಪೇಸಿ – ಬೇಸರ ಪಟ್ಟು, ಜುಗುಪ್ಸೆ ಪಟ್ಟು, ಶ್ರಾವಕರು – ಜೈನ ಸಂನ್ಯಾಸಿಗಳು, ತೋರ – ದಪ್ಪ, ಕರ್ಬೊನ್ನು – ಕಬ್ಬಿಣ, ಕೀಲ – ಮೊಳೆ, ಮಲರ್ಚಿ – ಮಲಗಿಸಿ, ಉರ್ಚು – ಕಚ್ಚಿಸಿಕೊಳ್ಳುವುದು, ಸೂಲೆ – ಶೂಲ, ಪುಂಡರೀಕವರ್ಣ – ತಾವರೆಯ ಬಣ್ಣ, ಚಮ್ಮರಿ – ಚರ್ಮ

*****

## ೨. ಕಳಕಳಿ

**–ಡಾ. ಕರೀಗೌಡ ಬೀಚನಹಳ್ಳಿ**

ಮಲಗಿದ್ದಲ್ಲಿಂದಲೇ ಕಣ್ಣುಬಿಟ್ಟು ಮನೆಯೊಳಗೆಲ್ಲಾ ಕಣ್ಣುಗೊಂಬೆ ಹಾಯಿಸಿದ. ದೃಷ್ಟಿಗೆ ಏನೂ ಕಾಣಲಿಲ್ಲ. ತನ್ನ ಪಕ್ಕದಲ್ಲಿ ಮಲಗಿರುವ ತನ್ನಪ್ಪನ ಸ್ವರೂಪವೂ ತನಗೆ ಕಾಣಿಸದು. ಆದರೆ ಅಪ್ಪನ ಭಯಂಕರ ಗೊರಕೆ ಮಾತ್ರ ರಾತ್ರಿಯ ಭೀಕರ ಮೌನವನ್ನು ಕಲಕಿಬಿಟ್ಟಿದೆ. ಮೇಲೆ ಜಂತಿಯಲ್ಲಿ ಇಲಿಗಳ ಆರ್ಭಟ ನಿರಾತಂಕವಾಗಿ ಸಾಗಿದೆ. ಅವುಗಳ ಗದ್ದಲದಿಂದ ಜಂತಿಯೂ ಗಾಬರಿಗೊಂಡು ಕೆಡಗಿದ ಮಣ್ಣು ಕಣ್ಣುಬಿಟ್ಟು ಮಲಗಿದ್ದ ಅವನ ಕಣ್ಣಿಗೆ ನೇರವಾಗಿ ಬಿದ್ದಿತು. 'ಥೂ ನನ್ಮಗನವ' ಎಂದು ಅವುಗಳ ಮೇಲೆ ಸಿಟ್ಟುಕಾರಿ, ಕಣ್ಣು ಒಸಕಿಕೊಳ್ಳುತ್ತಾ, 'ಅಪ್ಪಾ,... ಅಪ್ಪಾ....' ಎಂದು ಕೂಗುತ್ತಾ ಎದ್ದು ಕೂತ.

ಮಗನ ಕೂಗನ್ನು ಕೇಳಿಸಿಕೊಂಡು ಅಪ್ಪ ನಿದ್ದೆಯಿಂದ ಎಚ್ಚೆತ್ತು ಓ ಎನ್ನುವ ಹೊತ್ತಿಗೆ ಸುಮಾರು ಹೊತ್ತೇ ಆಯಿತು. ಯಾವುದೋ ಲೋಕದಿಂದ ಆಗತಾನೆ ಇಳಿದು ಬಂದವನಂತೆ "ಏನ್ಲ ಅದು? ನಿದ್ದೆ ಹೊತ್ನಲ್ಲಿ? ನಿನ್ದು ಕಾಟ...." ಎನ್ನುತ್ತಾ ಎದ್ದ.

ಎಚ್ಚರಗೊಂಡ ಅಪ್ಪನಿಗೆ ಮಗ, "ದೀಪ ಹಚ್ಚಪ್ಪ" ಎಂದು ಕೇಳಿದ "ಯಾಕ್ಲಾ"? ಎಂದು ಅಪ್ಪ ಕುಪಿತನಾಗಿ ಕೇಳಿದ. "ಓದ್ಕೋಬೇಕು, ನಾಳೆ ಪರೀಕ್ಷೆ ಅದೆ" ಎಂದ, ಅಷ್ಟೇನಾ? ಮಲಿಕೊ! ನಾನೆಲ್ಲೋ ಏನೋ ಆಗೋಯ್ತೇನೋ ಅಂತ್ಕೊಂಡಿದ್ದೆ" ಎಂದವನೇ ನಿದ್ದೆ ಹೋಗಲು ಅಪ್ಪ ಸಿದ್ಧನಾದ.

ಆದರೆ ಮಗ ಬಿಡಲಿಲ್ಲ, ಮತ್ತೆ ಕೇಳಿದ. ಆಗ ಅಪ್ಪ ತನ್ನ ತಲೆದಸಿಯಲ್ಲಿ ಕೈ ಹಾಕಿ ಕತ್ತಲಲ್ಲೇ ತಡಕಿದ. ತಡಕುವಾಗ ದೀಪ ಕೈಗೆ ತಗುಲಿ ಬಿದ್ದು ಹೋಗುವುದರಲ್ಲಿದ್ದುದ್ದನ್ನು ತಕ್ಷಣ ಬಿಗಿಯಾಗಿ ಹಿಡಿದುಕೊಂಡು, "ಇಲ್ಲೆ ಅದಲ್ಲ ದೀಪ, ಹಚ್ಕೊಳ್ಳ. ಅದ್ನ ಹಚ್ಕೋಳ್ಳೋಕೆ ನನ್‌ಬ್ಯಾರೆ ಎಳಸ್ಬೇಕಿತ್ತೆನೋ!" ಎಂದು ಸಿಟ್ಟಾದ.

"ಬೆಂಕಿಕಡ್ಡಿ ಗೀರಪ್ಪ" ಎಂದ ಮಗ. ಅಪ್ಪ ಮತ್ತೆ ರಾತ್ರಿ ಮಲಗುವಾಗ ತನ್ನ ತಲೆದಸಿಯಲ್ಲಿ ಇಟ್ಟಿದ್ದ ಬೀಡಿ ಕಟ್ಟು, ಬೆಂಕಿಪೊಟ್ಟಣ ಎರಡನ್ನೂ ತಡಕಾಡಿದ. ಅವನ ಹುಡುಕಾಟದ ಕೈಗೆ ಬೀಡಿಕಟ್ಟು ಸಿಕ್ಕಿತು. ಮತ್ತೆ ತಡಕಿದ. ಅದರ ಪಕ್ಕದಲ್ಲಿ ನಿದ್ದೆ ಹೊತ್ತಿನಲ್ಲಿ ಕೈಗೆ ತಗುಲಿ ದೂರ ಸರಿದಿದ್ದ ಬೆಂಕಿಪೊಟ್ಟಣವೂ ಸಿಕ್ಕಿತು.. ಬೆಂಕಿಪೊಟ್ಟಣವ ಕೈಗೆ ಎತ್ತಿಕೊಂಡು ಅಲ್ಲಾಡಿಸಿದ. ಅಲ್ಲಾಡಲಿಲ್ಲ. ಆಗ "ಕಡ್ಡಿ ಇಲ್ಲ ಕಣ್ಲ. ಮುಗ್ದೋಗವೆ" ಎಂದವನೆ, ತನಗೆ ನಿದ್ದೆ ಹೊತ್ತಿನಲ್ಲಿ ತನ್ನ ಮಗ ತುಂಬಾ ತೊಂದರೆ ಕೊಡುತ್ತಿದ್ದಾನೆ ಎಂಬ ಯೋಚನೆ ಅವನ ಮನಸ್ಸಿಗೆ ಬಂದು. "ಬಿದ್ಕೊ

ಏನು ಓದ್ತೀಯ ಇಷ್ಟೊತ್ನಲ್ಲಿ. ಮಕ್ಕಳು ಬೆಳೆಯೋ ಹೊತ್ತು. ಹೊತ್ತಾರಕ್ಕೆ ಮುಂಚೆ ಎದ್ದಿ ಓದ್ಕೊಳ್ಳಿವಂತೆ. ಈಗ ಮಲಿಕೊ ಅತ್ತ!" ಅಂದು ಗದರಿ ಅಪ್ಪ ನಿದ್ದೆ ಹೋಗಿಯೇ ಬಿಟ್ಟ.

ಮಗ ರಾಮಣ್ಣನಿಗೆ ನಿದ್ದೆ ಬರಲೇ ಇಲ್ಲ. ನಾಳೆ ಪರೀಕ್ಷೆ. ಇಂಗ್ಲಿಷ್ ಸಬ್ಜೆಕ್ಟ್, ಐದನೆಯ ತರಗತಿಗೆ ಬಂದಾಗಲೇ ಇಂಗ್ಲಿಷ್ ಅಂತ ಒಂದು ಸಬ್ಜೆಕ್ಟ್ ಅದೆ ಎಂದು ಅದರ ಮುಖ ನೋಡಿದ್ದು. ಆದ್ದರಿಂದ ಅವನಿಗೆ ಅದು ಎಷ್ಟು ಓದಿದರೂ ತಲೆಗೆ ಹತ್ತುತ್ತಿರಲಿಲ್ಲ. ಎ ಬಿ ಸಿ ಡಿ ಮುಂತಾದ ವರ್ಣಮಾಲೆಯನ್ನು ಕಲಿಯುವುದಕ್ಕೇ ಆತ ಅನೇಕ ದಿನಗಳನ್ನು ತೆಗೆದುಕೊಂಡಿದ್ದ. ಮೊನ್ನೆದಿನ ಇಂಗ್ಲಿಷ್ ಮೇಷ್ಟ್ರು ವಿದ್ಯಾರ್ಥಿಗಳಿಗೆ 'ನೀವು ಪರೀಕ್ಷೆಯಲ್ಲಿ ಚೆನ್ನಾಗಿ ಬರೆಯದೆ ಇದ್ದರೆ ಫೇಲ್ ಮಾಡ್ತೀನಿ. ಯಾರ ಮುಖಾನು ನಾನು ನೋಡೋದಿಲ್ಲ' ಎಂದು ಹೇಳಿದ್ದು ರಾಮಣ್ಣನಿಗೆ ನೆನಪಿಗೆ ಬಂದು ಆತನಿಗೆ ಮತ್ತೆ ಗಾಬರಿಯಾಯಿತು. ರಾತ್ರಿ ಮಲಗುವಾಗ ಅಪ್ಪ, 'ಹೊತ್ತಾರಿಕ್ಕೆ ಹೊತ್ನಂತೆ ಎದ್ದು ಓದ್ಕೊಳ್ಳಿವೆ ಮಲಗು, ದೀಪ ಇದ್ರೆ ದೀಪದ ಬೆಳಕ್ಕೆ ನನ್ಗೆ ನಿದ್ದೆನೇ ಬರಲ್ಲ' ಎಂದು, ದೀಪ ತುಂಬಿಬಿಟ್ಟ. ತನ್ನ ಮನೆಯ ಎಮ್ಮೆ ಕಳೆದುಹೋದ ನೋವಿನಲ್ಲಿದ್ದ ಅಪ್ಪ, 'ದೀಪಕ್ಕೆ ಸೀಮೆಎಣ್ಣೆ ಬ್ಯಾರೆ ಸಿಕ್ತಾ ಇಲ್ಲ, ಕಾಸ್‌ಬ್ಯಾರೆ ಇಲ್ಲ' ಎಂದು, 'ಎಷ್ಟೊತ್ತಿನ ತನಕ ನೀನ್ ದೀಪ ಉರ್ಸೋದು....' ಎಂದು ರೇಗಿದಾಗ ಮಗ ರಾಮಣ್ಣನಿಗೆ ಎಲ್ಲಿಲ್ಲದ ಅಳುವೇ ಬಂದಂತಾಗಿತ್ತು.

ತರುವಾಯ ರಾಮಣ್ಣ, 'ಅವ್ವ... ಅವ್ವಾ...' ಎಂದು ಸ್ವಲ್ಪ ದೂರದಲ್ಲಿ ನಡುಮನೆಯಲ್ಲಿ ತೊಪ್ಪೆಚಕ್ಕೆಯ ನೆಲದ ಮೇಲೆ, ತಾನು ಹುಟ್ಟಿದ್ದ ಸೀರೆಯ ಸೆರಗನ್ನೇ ಹಾಸಿ, ಒದ್ದು ಮಲಗಿದ್ದ ಅವ್ವನನ್ನು ಕೂಗಿದ, ಅವ್ವನಿಗೆ ಯಮನಿದ್ದೆ. ಅವ್ವನ ದಣಿದ ಜೀವ ಮಲಗಿ ನಿದ್ದೆ ತೆಗೆಯುತ್ತಿರುವಾಗ ಅದು ಮಗ ರಾಮಣ್ಣನಿಗೆ ಹೇಗೆ ಅರಿವಾಗಬೇಕು! ಅವ್ವ ಬೆಳಿಗ್ಗೆ ಹೊಲಕ್ಕೆ ಹೋದರೆ ಸಂಜೆಗೆ ಮನೆಗೆ ಬರುತ್ತಾಳೆ. ಗಂಡಸಿನ ಹಾಗೆ ಗೇಯುತ್ತಾಳೆ. ಅಪ್ಪ ಇವತ್ತು ಊರಿನಲ್ಲಿ ಒಬ್ಬ ಕುಳ, ಒಬ್ಬ ಮನುಷ್ಯ ಅನ್ನಿಸಿಕೊಂಡಿರಬೇಕಾದರೆ ಅದಕ್ಕೆಲ್ಲಾ ಅವ್ವನ ಶ್ರಮ, ದುಡಿಮೆ ಕಾರಣ. ಕೂಗಿದ ಮಗನ ದನಿ ಹಿಡಿದು ಅವ್ವ ನಿದ್ದೆಯಿಂದ ಎದ್ದಳು. 'ಏನೋ ಅದು' ಎನ್ನುತ್ತ ಎದ್ದು ಕೂತು, "ಯಾಕೋ ಇಷ್ಟೊತ್ಗೇ ಎದ್ದಿದ್ದಿ? ಏನೋ?" ಎಂದು ಗಾಬರಿಯಾದಳು. ಕೂತಲ್ಲಿಂದಲೇ ಕತ್ತಲೆಯಲ್ಲಿಯೇ, "ಓದ್ಕೊಬೇಕು, ನಾಳೆ ಪರೀಕ್ಷೆ ಅದೆ" ಎಂದ ರಾಮಣ್ಣ. ಆಗ ಅವ್ವ "ಇನ್ನೊಂದ್ ಸ್ವಲ್ಪ ಹೊತ್ತು ಮಲಿಕೋ. ಇನ್ನೂ ಬೆಳಕಾಗಿಲ್ಲ, ಕೋಳಿನೇ ಇನ್ನೂ ಕೂಗಿಲ್ಲ ಆಗ್ಲೇ ಎದ್‌ಬಿಟ್ಟಿದ್ದೀಯಲ್ಲ!"

"ಇಲ್ಲ ಕಣವ್ವ, ಆಗ್ಲೇ ಮೊದ್ಲ್ ಕೋಳಿ ಕೂಗ್ತು" ಎಂದ ಮಗ. ಮೊದಲ ಜಾವದ ಕೋಳಿ ಕೂಗಿದಾಗ ಆತ ಎಚ್ಚರವಾಗಿದ್ದ, ಆದರೆ ಆಗ ಅವ್ವ ಇನ್ನೂ ನಿದ್ದೆಯಲ್ಲಿದ್ದಳು.

"ನಿಮ್ಮಪ್ಪನ್ನ ಏಳ್ಸು, ಏಳ್ಸಿ ದೀಪ ಹಚ್ಚಿಸ್ಕೋ" ಎಂದಳು ಅವ್ವ ಅದಕ್ಕೆ ಮಗ ಇಷ್ಟೊತ್ತಿನವರೆಗೂ ನಡೆದ ತನ್ನ ಅಪ್ಪನ ಕಥೆಯನ್ನೆಲ್ಲಾ ಅವ್ವನಿಗೆ ಹೇಳಿದ. ಅದಕ್ಕೆ ಅವ್ವ :

ಹಾಗಾದರೆ ಒಲೆತೊಡೆ ಮೇಲೆ ಬೆಂಕಿಪೊಟ್ನ ಇರ್ಬೇಕು ನೋಡು. ಮೆತ್ಗೆ ಹಾಗೇ ಹೋಗಿ ತಂದ್ ಹಚ್ಕೊಳ್ಳೋ! ನನ್ಗೆ ಯಾಕೋ, ಏಳಾಕ್ಕೇ, ಆಗ್ತಾ ಇಲ್ಲ.... ಮೈಯೆಲ್ಲಾ ತುಂಬಾ ನೋಯ್ತಾ ಅದೆ!..." ಎಂದ ಅವ್ವ ಗಂಡನ ರಾತ್ರಿಯ ವರ್ತನೆ ನೆನದು ಕ್ಷಣ ನೋವಿನ ನಿಟ್ಟುಸಿರು ಬಟ್ಟಳು.

ರಾಮಣ್ಣ ಎದ್ದು ಕೋಣೆಯತ್ತ ಹೆಜ್ಜೆ ಹಾಕಿದ. "ಕತ್ಲಲ್ಲಿ ಯಾತಕ್ಕಾದ್ರು ತಲೆ ಒಡ್ಕೊಂಡಿಯಾ! ಉಷಾರು! ಮೆತ್ಗೋಗು" ಎಂದು ಅವ್ವ ಮಗನಿಗೆ ಒಂದೇ ಸಮನೆ ಎಚ್ಚರಿಸುತ್ತಲೇ ಇದ್ದಳು. ಅವಳು ಎಷ್ಟೇ ಎಚ್ಚರಿಸಿದರೂ ರಾಮಣ್ಣ ಮಾತ್ರ ಕೊನೆಗೂ 'ದಡ್' ಎಂದು ತಲೆಯನ್ನು ಕಂಬಕ್ಕೆ ಡಿಕ್ಕಿ ಒಡೆದುಕೊಂಡ. ಸದ್ದು ಕೇಳಿಸಿಕೊಂಡು, "ಏನೋ, ನೋವಾಯ್ತೇನೋ? ಎನ್ನುತ್ತಾ ಅವ್ವ ಎದ್ದು ಕೂತಳು. ರಾಮಣ್ಣನಿಗೆ ಕ್ಷಣಹೊತ್ತು ಗಿರ್ರಂದ ತಲೆ ನಿಲ್ಲಲಿಲ್ಲ. ಆಮೇಲೆ ಎಷ್ಟೋ ಹೊತ್ತಿನ ಮೇಲೆ ಪ್ರಜ್ಞೆ ಬಂದು, "ಏನೂ ಆಗಿಲ್ಲ ನನ್ಗೆ, ನೀನು ಮಲಗವ್ವ, ಎಲ್ಲೋ ಸ್ವಲ್ಪ ತಗಲ್ತು ಅಷ್ಟೆ" ಎಂದ. ಆದರೆ ಅವನ ಹಣೆ ಮೇಲೆ ಬೊಬ್ಬೆಯೊಂದು ಬರತೊಡಗಿತ್ತು. ಕತ್ತಲಲ್ಲೇ ಅದನ್ನು ಮುಟ್ಟಿ ಮುಟ್ಟಿ ಉಜ್ಜಿಕೊಳ್ಳುತ್ತಾ ನೋವು ತಿನ್ನುತ್ತಾ ಒಳಕೋಣೆಗೆ ಬಂದ.

ಅವ್ವ ಮತ್ತು ಮಗನ ಸದ್ದುಗದ್ದಲ ಕೇಳಿ ಯಾಕೋ ಏನೋ ಅಪ್ಪ ಮತ್ತೆ ಎಚ್ಚರವಾಗಿ ಮಗನ ಮಾತು ಕೇಳಿಸಿಕೊಂಡು, ಅವರ ಗದ್ದಲದಿಂದ ತನಗೆ ಹಿಂಸೆ ಆಗುತ್ತಿದೆ ಎಂಬಂತೆ – "ಬಿದ್ಕೊಳ್ಳ ಅಂತ ನಿನ್ಗೆ ಆಗ್ಲೆ ಹೇಳ್‌ಲಿಲ್ಲವೇನ್ಲ ನಾನು? ನಿನ್ಗೆ ಓದ್ಕೋಳ್ಳೋದೆ ದೊಡ್ಡ ಚಿಂತೆ ಆಗ್ಬಿಟ್ಟಿಲ್ಲ? ನನ್ಗೆ ಹೋದ ಎಮ್ಮೆ ಬರ್ಲಿಲ್ಲವಲ್ಲಪ್ಪ ದೇವ್ರೇ! ಹೋಗಿ ಮೂರ್ ದಿನವಾಯ್ತು..... ಎಲ್ಲೋಯ್ತೋ ಅಂತ ನನ್ ಚಿಂತೆ ನನ್ಗೆ......" ಎಂದು ಕೂಗಾಡಿದ.

ಆಗ ಅವ್ವ ಮಗನ ಪರ ವಹಿಸಿ ಹೇಳಿದಳು. "ನೀನು ಸುಮ್ನೆ ಮಲಿಕೋ ಮತ್ತೆ. ಪಾಪ! ನಿನ್ನೆಮ್ಮೆ ಓಡೋದ್ರೆ ಅದಕ್ಕೆ ಅವ್ನೇನು ಮಾಡಾನು? ಅವ್ನು ಹೋಗು ಅಂದಿದ್ನೆ? ನಾಳೆ ಅವನ್ಗೆ ಪರೀಕ್ಷೆ ಅದಂತೆ, ಓದ್ಕೋಬ್ಯಾಡ್ವೆ?" ಎಂದಳು.

ಅಪ್ಪ ಸುಮ್ಮನಾದ, ರಾಮಣ್ಣ ಹಣೆ ಉಜ್ಜುತ್ತಾ ಒಲೆ ಮುಂದಕ್ಕೆ ಬಂದ. ಬಗ್ಗಿ ಒಲೆಯ ಹಿಂದೆ ತಡಕಿದ. ಪೊಟ್ಟಣ ಕೈಗೆ ಸಿಕ್ಕಿತು. ಆಗ ಅವನಿಗೆ ತುಂಬ ಖುಷಿಯಾಯಿತು. ಅದನ್ನು ಅಲ್ಲಾಡಿಸಿದ. ಆದರೆ ಅದು ಅಲ್ಲಾಡಲಿಲ್ಲ. ಆಗ ಅವನಿಗೆ ಅಷ್ಟೇ ಖೇದವಾಗಿ, "ಇಲ್ಲವಲ್ಲವ್ವ ಬರೀ ಪೊಟ್ನ ಅದೆ!" ಎಂದ.

ಮಗನ ಮಾತು ಅವ್ವನಿಗೆ ಕೇಳಿಸಿ – "ಇಲ್ವಾ? ರಾತ್ರಿ ಒಲೆ ಅಚ್ಚಿದಾಗ್ಲೆ ಬೆಂಕಿಕಡ್ಡಿ ಒಂದೇ ಒಂದಿತ್ತು ಬಿಡು. ನನಗೂ ಹಾಳಾದ್ ಜ್ಞಾಪಕಕ್ಕೇ ಬರ್ಲಿಲ್ಲ, ಹಾಳಾದ ಮರವು!" ಎಂದವಳೇ,

"ಹೋಗ್ಲಿ ಅತ್ತ ಮಲಗು. ಹೊತ್ತಾರಿಕೇನೆ ಎದ್ಮೇಲೆ ಅದೇನ್ ಓದ್ಕೋಳ್ಳಿವಂತೆ" ಎಂದು ಮಗನಿಗೆ ಸಮಾಧಾನ ಹೇಳಿ ನಿದ್ದೆಗೆ ಬಲಿಯಾಗಿಬಿಟ್ಟಳು.

ರಾಮಣ್ಣ ತನ್ನ ಜಾಗಕ್ಕೆ ಬಂದು ಕೂತ, ಮಲಗಿದ. ನಿದ್ದೆ ಬರಲಿಲ್ಲ. ಯೋಚಿಸಿದ. ನಾಳೆ ಪರೀಕ್ಷೆ ಭಯ. ಮತ್ತೆ ಎದ್ದು ಕೂತ. ಮನಸ್ಸಿಗೆ ಏನೋ ಹೊಳೆಯಿತು. ಎದ್ದು ಸದ್ದಾಗದಂಗೆ ಮೆಲ್ಲಗೆ ಬಾಗಿಲು ಅಗಣಿ ತೆಗೆದುಕೊಂಡು ಈಚೆಗೆ ಬಂದ. ಬಂದವನೇ ಅಂಗಳದಲ್ಲಿ ನಿಂತು ಆಕಾಶದತ್ತ ಕಣ್ಣು ಹಾಯಿಸಿದ. ಇನ್ನೂ ಬೆಳಕಾಗಿಲ್ಲ, ಏನೂ ಕಾಣಿಸದು, ಎಲ್ಲವೂ ಕತ್ತಲಲ್ಲಿ ಮುಳುಗಿಹೋದಂತಿತ್ತು.

ಆಗ ಇದ್ದಕ್ಕಿದ್ದಂತೆ ತನ್ನ ಮನಸ್ಸಿಗೆ ಹೊಳೆದ ಯೋಜನೆಯನ್ನು ಮುಂದಿಟ್ಟುಕೊಂಡು ಊರ ಮುಂದಿನ ದೊಡ್ಡೇಗೌಡರ ಜಗುಲಿಯತ್ತ ಹೊರಟ.

ಊರ ಮುಂದಿನ ಅರಳಮರದ ಹತ್ತಿರಕ್ಕೆ ಬಂದ, ಅದನ್ನು ಹಿಂದಕ್ಕೆ ಹಾಕಿ ಮುಂದಕ್ಕೆ ಬಂದರೆ ದೊಡ್ಡೇಗೌಡರ ಮನೆ. ದೊಡ್ಡ ಅರಳಿಮರದ ಸಮಕ್ಕೂ ಬೆಳೆದು ನಿಂತ ದೊಡ್ಡಮನೆ. ಏಳು ಕಂಬಸಾಲೆ ಜಗುಲಿ, ಉದ್ದಕ್ಕೆ ಇರುವ ಜಗಲಿ ಮೇಲೆ ಯಾರು ಬೇಕಾದರೂ ಮಲಗುತ್ತಿದ್ದದ್ದು ರೂಢಿ, ಊರಿನವರು ಪರಸ್ಥಳದವರು – ಹೀಗೆ ರಾತ್ರಿ ಹೊತ್ತು ಬೇಸಿಗೆ ಕಾಲದಲ್ಲಿ ತಮ್ಮ ಮನೆಗಳಲ್ಲಿ ಸೆಖೆ ಅಂತಲೋ, ತಿಗಣೆ ಅಂತಲೋ, ಇಕ್ಕಟ್ಟು ಅಂತಲೋ ಅಲ್ಲಿಗೆ ಬಂದು ಮಲಗುತ್ತಿದ್ದುದ್ದನ್ನು ಊರಿನ ಕೆಲವು ಜನರು ಒಂದು ಪದ್ಧತಿಯಂತೆ ಮಾಡಿಕೊಂಡು ಬಿಟ್ಟಿದ್ದರು.

ರಾಮಣ್ಣ ಜಗುಲಿಯ ಹತ್ತಿರ ಬಂದು ನಿಂತಾಗ ಅವನಿಗೆ ಕಾಳಪ್ಪನ ಕೆಮ್ಮು ಕೇಳಿಸಿತು. ಕಾಳಪ್ಪ ಇಡೀ ರಾತ್ರಿಯೆಲ್ಲಾ ನಿದ್ದೆ ಮಾಡುತ್ತಿರಲಿಲ್ಲ. ಆತ ಮೊಖಡನಾಗಿ ಕುಕ್ಕರುಗಾಲಿನಲ್ಲಿ ಕೊಕ್ಕರಸಿಕೊಂಡು ಮಲಗಿಯೇ ರಾತ್ರಿಗಳನ್ನು ತುಂಬಿಸುತ್ತಾ ಬಂದಿದ್ದ. ರಾಮಣ್ಣ ಹತ್ತಿರ ಬಂದು "ಕಾಳಜ್ಜ" ಎಂದು ಕೂಗಿದ. "ಯಾರಪ್ಪ ಅದು? ಕತ್ಲಲ್ಲಿ!" ಎಂದು ಕೇಳಿದ ಕಾಳಪ್ಪ.

ಕಾಳಪ್ಪ ತನ್ನ ಇಳಿವಯಸ್ಸಿನಿಂದಾಗಿ ಊರಿನಲ್ಲೆಲ್ಲಾ ಕಾಳಜ್ಜ ಎಂದೇ ಖ್ಯಾತಿಯಾಗಿದ್ದ. ಅವನಿಗೆ ಮನೆ, ಮಕ್ಕಳು, ಮಡದಿ, ಆಸ್ತಿ ಅವೆಲ್ಲಾ ಇದ್ದರೂ ಆತ ಬಹುಮಟ್ಟಿಗೆ ಹಗಲು ರಾತ್ರಿಗಳನ್ನು ತುಂಬಿಸುತ್ತಿದ್ದದ್ದು ಮಾತ್ರ ದೊಡ್ಡೇಗೌಡರ ಜಗುಲಿಯ ಮೇಲೆಯೇ. ಆತ ವಯಸ್ಸಿನಲ್ಲಿದ್ದಾಗ ಊರಿನಲ್ಲಿ ನಾಟಕವನ್ನು ಯಾವಾಗಲೇ ಆಡಲಿ, ಆಗೆಲ್ಲಾ ರಾವಣನ ಪಾತ್ರವನ್ನು ಮಾಡುತ್ತಿದ್ದನಂತೆ. ಅವನ ಹಾಗೆ ಈ ಸುತ್ತಳ್ಳಿಯಲ್ಲಿ ಯಾರೂ ಹತ್ತುತಲೆ ರಾವಣನ ಪಾತ್ರ ಮಾಡಲಾರರು ಎಂದು ಹೇಳುತ್ತಾರೆ. ಈಗಲೂ ಒಂದೊಂದು ದಿನ ರಾತ್ರಿಯೆಲ್ಲಾ ಗೌಡರ ಜಗುಲಿಯ ಮೇಲೆ ರಾವಣನ ಪಾತ್ರದ ಕಂದಗಳನ್ನು ಹಾಡುತ್ತಾನೆ. ಆತ ಊಟ ಆಗುವುದೇ ತಡ ತನ್ನ

ಮನೆಯಿಂದ ಚಂಗನೆ ದೊಡ್ಡ ಗೌಡರ ಜಗುಲಿಗೆ ಹಾರಿ ಬಂದು ಬಿಡುತ್ತಿದ್ದದ್ದನ್ನು ಕಂಡು – ಆತ ಸತ್ತರೂ ಅಲ್ಲೇ ಸಾಯ್ತಾನೆ – ಅನ್ನುತ್ತಿದ್ದರು ಜನ.

ಯಾರು ಅಂತ ಕಾಳಪ್ಪ ಕೇಳಿದ ಮೇಲೆ ತನ್ನ ಹೆಸರು, ತಾನು ಏತಕ್ಕೆ ಬಂದದ್ದೀನಿ – ಎಂಬುದನ್ನೆಲ್ಲಾ ರಾಮಣ್ಣ ಹೇಳಿದ, 'ಒಬ್ನೆ ಬಂದಿದ್ದೀಯಲ್ಲೋ ಇಷ್ಟೊತ್ನಲ್ಲಿ' ಎಂದು ಮರುಗುತ್ತಾ ಕಾಳಪ್ಪ. "ಬೆಂಕಿಕಡ್ಡಿ ಬೇಕಾ? ಬಾ!" ಎಂದ. ಕಾಳಪ್ಪನಿಗೆ ಊರಿನಲ್ಲಿ ಗೊತ್ತಿಲ್ಲದ ಹುಡುಗರಿರಲಿಲ್ಲ. ಆತ ಚಿಕ್ಕವರಿಂದ ಹಿಡಿದು ದೊಡ್ಡವರವರೆಗೂ ತುಂಬಾ ಸಲೀಸಾದ ಮನುಷ್ಯನಾಗಿ ಬಿಟ್ಟಿದ್ದ. ಅದರಲ್ಲಿ ಓದೋ ಹುಡುಗರು ಅಂದರೆ ಅವನಿಗೆ ಅತಿ ಪ್ರೀತಿ, ಗೌರವ.

ಕಾಳಪ್ಪ ಜೇಬಿನಿಂದ ಬೆಂಕಿಪೊಟ್ಟಣ ತೆಗೆದು, ಅದರಿಂದ ಎರಡ್ಮೂರು ಕಡ್ಡಿಗಳನ್ನು ತೆಗೆದು ರಾಮಣ್ಣನ ಕೈಗೆ ಕೊಟ್ಟು, "ಯಾಕೆ ನಿಮ್ಮಪ್ಪ ಇಲ್ವಾ ಊರ್ನಲ್ಲಿ, ಎಮ್ಮೆ ಹೊಂಟೋಗದೆ ಅಂತಿದ್ದ. ಹುಡಿಕೊಂಡು ಹೊಂಟೋದ್ನೊಯಂಗೆ?" ಎಂದು ಕೇಳಿದ.

"ಅವ್ರೆ! ನಮ್ಮಪ್ಪತ್ರ ಮುಗ್ದೋಗವಂತೆ ಬೆಂಕಿಕಡ್ಡಿ, ಓದ್ಕೋಬೇಕು, ಕರೀಕ್ಷೆ ಅದೆ" ಎಂದ ರಾಮಣ್ಣ, "ಖಾಲಿ ಪಟ್ನ ಅದೇ ತಾನೆ?" ಎಂದು ಕೇಳಿದ, ಕಾಳಪ್ಪನಿಗೆ 'ಹ್ಞೂ' ಅಂದವನೇ ರಾಮಣ್ಣ ಮನೆಕಡೆ ಹೊರಟ.

ಆತ ಮನೆ ಹತ್ತಿರ ಬರುವ ಹೊತ್ತಿಗೆ ತಮ್ಮವ್ವ ತಮ್ಮ ಮನೆಯ ದೇವರಿಗೆ ಅಂತ ಬಿಟ್ಟಿದ್ದ ಕೋಳಿಹುಂಜ "ಕು ಕ್ಕು ಕ್ಕೂ..." ಎಂದು ಕೂಗಿತು. ಮನಿಯೊಳಗೆ ಬಂದಾಗ ಇನ್ನೂ ಮಬ್ಬು ಕತ್ತಲು ಇತ್ತು. ಅಪ್ಪನಿಗೆ ಇನ್ನೂ ನಿದ್ದೆ ಮುಗಿದಿರಲಿಲ್ಲ. ಅಪ್ಪನ ತಲೆದಸಿಯಲ್ಲಿ ಕೈ ಹಾಕಿ ಖಾಲಿ ಬೆಂಕಿಪೊಟ್ಟಣ ತೆಗೆದುಕೊಂಡು ಕಡ್ಡಿಗೀರಿ ದೀಪ ಹತ್ತಿಸಿದ. ದೀಪ ಕೈ ಕೊಡಲಿಲ್ಲ! ತನ್ನ ಮಾಸಿದ ಚೀಲದಿಂದ ಇಂಗ್ಲಿಷ್ ರೀಡರ್ ಪುಸ್ತಕ ತೆಗೆದು ಓದತೊಡಗಿದ. ಎಷ್ಟು ಓದಿದರೂ ಅದರ ತಲೆಬುಡ ಒಂದೂ ಅವನಿಗೆ ಅರ್ಥವಾಗದು. ಓದಿದ್ದೇ ಪಾಠಗಳನ್ನು ಎಷ್ಟುಸಾರಿ ಓದಿದ್ದಾನೋ ಅವನಿಗೇ ಲೆಕ್ಕವಿಲ್ಲ. ಇಂಗ್ಲೀಷ್ ಪಾಸಾದರೆ ಎಲ್ಲಾ ಸಬ್ಜೆಕ್ಟ್‌ಗಳೂ ಅವನಿಗೆ ಪಾಸು ಮಾಡಿದಂತೆಯೇ. ಈ ಹಾಳಾದ ಇಂಗ್ಲಿಷ್ ಸಬ್ಜೆಕ್ಟ್ ಇಲ್ಲದಿದ್ದರೆ ಎಷ್ಟು ಚೆನ್ನಾಗಿರ್ತಿತ್ತು? ಆದರೆ ಎಷ್ಟು ಓದಿದರೂ ಈ ಹಾಳಾದ್ದು ತಲೆಗೇ ಹತ್ತುವುದಿಲ್ಲವಲ್ಲ ದೇವರೇ? ಎಂದು ಅಂದುಕೊಳ್ಳುತ್ತಿದ್ದ.

ಬೆಳಗಾಯಿತು : "ಬೆಳಗಾದ್ಮೇಲೆ ದೀಪ ಹಚ್ಕೊಂಡು ಕುಂತವ್ನೆ, ಮಹಾರಾಜ! ಇವ್ನು ಓದ್ ಕಡಿದಾಕೋದ್ಕೆ" ಎಂದು ಅಪ್ಪ ಬೈಯುತ್ತಾ ಎದ್ದು ಆಚೆಗೆ ಹೊರಟಾಗ ರಾಮಣ್ಣ ದೀಪ ಆರಿಸಿ, ಬ್ಯಾಗೊಳಕ್ಕೆ ಪುಸ್ತಕವ ಮುದುರಿ ಹಾಕಿ ಅತ್ತ ಚೀಲವ ಗೋಡೆಯ ಮೊಳೆಗೆ ನೇತುಹಾಕಿ ಈಚೆಗೆ ಬಂದ.

ರಾಮಣ್ಣ ತನ್ನ ಮಾಮೂಲಿ ಕೆಲಸಕಾರ್ಯಗಳನ್ನೆಲ್ಲಾ ಮುಗಿಸಿ, ಸ್ಕೂಲಿಗೆ ಹೊರಡಲು ಸಿದ್ಧನಾದ. ಅವನ ಮಾಮೂಲಿ ಕಾಯಕವೆಂದರೆ, ಬೆಳಿಗ್ಗೆ ಸ್ಕೂಲಿಗೆ ಹೋಗುವ ತನಕ ಹೊಲಗದ್ದೆಯ ಹತ್ತಿರವೊ, ಮನೆಯ ಹತ್ತಿರವೊ, ಸಣ್ಣ ಪುಟ್ಟ ಕೆಲಸಗಳನ್ನು ಮಾಡುವುದು. ಮಳೆಗಾಲದಲ್ಲಿ ದನಕರುಗಳಿಗೆ ಹಸಿರು ಹುಲ್ಲು ತರುವುದು. ಬೇಸಿಗೆ ಕಾಲವಾದರೆ, ಕಾಡಿಗೆ ಹೋಗಿ ಸೌದೆ ತರುವುದು. ಇವು ಅವನ ಪಾಲಿಗೆ ಯಾವತ್ತೂ ತಪ್ಪದ ಕೆಲಸಗಳಾಗಿದ್ದವು.

ಅವತ್ತೂ ಸಹ ಆತ ಪರೀಕ್ಷೆ ಅದೆ – ಹೊತ್ತಿನಂತೆಯೇ ಊರು ಬಿಡಬೇಕು ಎಂದುಕೊಂಡರೂ ಅವನಿಗೆ ಬೇಗ ಹೊರಡಲಾಗಲಿಲ್ಲ. ಸ್ಕೂಲಿಗೆ ಎರಡು ಮೈಲಿ ದೂರ ನಡೆಯಬೇಕು, ಕಾಲುಹಾದಿ, ಬೆಳಿಗ್ಗೆ ಹನ್ನೊಂದು ಗಂಟೆಯಿಂದ ಸಂಜೆ ಐದು ಗಂಟೆಯವರೆಗೆ ಕ್ಲಾಸು. ಮಧ್ಯಾಹ್ನ ತಿಂಡಿಗೆ ಒಂದೂವರೆಗೆ ಅರ್ಧ ಗಂಟೆ ಮಾತ್ರ ಬಿಡುವು, ಶನಿವಾರ ಅರ್ಧ ದಿನ ಸ್ಕೂಲು ; ಬೆಳಿಗ್ಗೆ ಎಂಟರಿಂದ ಹನ್ನೆರಡು ಗಂಟೆಯವರೆಗೆ. ಇನ್ನು ಭಾನುವಾರ ರಜ. ಭಾನುವಾರ ಬಂತು ಎಂದರೆ ರಾಮಣ್ಣನಿಗೆ ಖುಷಿ : ತನ್ನ ಬಟ್ಟೆ ಬರೆಗಳನ್ನು ಒಗೆದುಕೊಳ್ಳಲು ; ಕೆರೆಯಲ್ಲಿ ಈಜು ಹೊಡೆಯಲು – ಇದು ರಾಮಣ್ಣನ ಸಾಮಾನ್ಯವಾದ ದಿನಚರಿಯಾಗಿತ್ತು.

ಆಗಲೇ ಅಪ್ಪ ರೊಟ್ಟಿ ತಿನ್ನುತ್ತಾ ನಡುಮನೆಯಲ್ಲಿ ಕೂತಿದ್ದ. ಅವ್ವ ಕೋಣೆಯೊಳಗೆ ರೊಟ್ಟಿ ತಟ್ಟುತ್ತಿದ್ದಳು. ಅವರು ಎಲ್ಲಿಯೋ ಹೊರಟು ಹೋಗಿರುವ ಎಮ್ಮೆಯ ಬಗ್ಗೆ ಮಾತು ಬೆಳೆಸಿದ್ದರು. ರಾಮಣ್ಣ ಒಂದು ಸೌದೆ ಹೊರೆಯ ತಂದು ಮನೆಯ ಮುಂದಿನ ಅಂಗಳದಲ್ಲಿ ಹಾಕಿ ಸರಸರನೆ ಒಳಗೆ ಬಂದ. ಅವನು ಬಂದ ನಿಲುವನ್ನು ಕಂಡ ಅವ್ವ, "ಹೊತ್ತಾಯ್ತು, ರೊಟ್ಟಿ ತಿಂದು ಹೋಗ್ಬಾ, ಪರೀಕ್ಷೆ ಬ್ಯಾರೆ ಅದೆ ಇವತ್ತು ಅಂತಿದ್ದೆ!" ಎಂದು ಕರೆದಳು.

ರಾಮಣ್ಣ ಅವ್ವ ಕೊಟ್ಟ ರೊಟ್ಟಿಯನ್ನು ಈಸಿಕೊಂಡು ಅವಸರ ಅವಸರವಾಗಿ ತಿನ್ನತೊಡಗಿದ. ರೊಟ್ಟಿ ತಿನ್ನುತ್ತಾ ಅವನಿಗೆ ಇದ್ದಕ್ಕಿದಂತೆ ನೆನಪಾದದ್ದು : ಕಳೆದು ಹೋದ ತನ್ನ ಪೆನ್ನು, ತನಗೆ ಇವತ್ತು ಪರೀಕ್ಷೆಯಲ್ಲಿ ಬರೆಯಲು ಪೆನ್ನು ಇಲ್ಲ. ಪೆನ್ನು ಕಳೆದುಹೋಗಿ ಆಗಲೇ ವಾರದ ಮೇಲಾಯಿತು, ಅಪ್ಪನಿಗೆ ಹೇಳಿದರೆ ರೇಗುತ್ತಾನೆಂದು ಭಯದಿಂದ ರಾಮಣ್ಣ ನಡುಗಿ ಹೇಳದೆ ಹಾಗೇ ಇದ್ದ. ಆದರೆ ಇವತ್ತು ಅನಿವಾರ್ಯವಾಗಿ ಹೇಳಲೇಬೇಕಾದ ಪ್ರಸಂಗ ಬಂದಿತ್ತು.

ಮೆಲ್ಲನೆ ತನ್ನವ್ವನ ಹತ್ತಿರ ಬಂದ. ಬಂದವನೇ ಅವ್ವನ ಮೂಲಕ ಹತ್ತಿರ ಮೆಲ್ಲಗೆ ವಿಷಯವ ಗೊಣಗುಟ್ಟಿದ. ಅವ್ವ ಅದಕ್ಕೆ, "ನಾನೇನ್ ಮಾಡ್ಲಿ? ನಿಮ್ಮಪ್ಪನ ಕೇಳೋಗು, ಇನ್ನೊಂದು ತಕ್ಕೊಡ್ತಾನೆ!" ಎಂದು ಸೂಚಿಸಿದಳು. ಈ ಮಾತನ್ನು ಕೇಳಿಸಿಕೊಂಡ ಅಪ್ಪ, "ಏನೇ ಅದು?" ಏನಂತೆ!" ಎಂದು ಹೆಂಡತಿಯ ಕೇಳಿದ.

ಆಗ ಆಕೆ, "ಪೆನ್ನಂತೆ ಪೆನ್ನಿಲ್ವಂತೆ ಬರಿಯೋದಿಕ್ಕೆ! ಇವತ್ತು ಪರೀಕ್ಷೆ ಅದಂತೆ" ಎಂದಳು.

ಆಗ ಆತ ಕುಪಿತನಾಗಿ ಕೂತಲ್ಲೇ ಕುಣಿದಾಡಿದವನಂತೆ, "ಪೆನ್ನು! ಏನಾಯ್ತಂತೆ? ತಕ್ಕೊಟ್ಟಿದ್ನಲ್ಲ. ತಕ್ಕೊಟ್ಟಿನ್ನೂ ವರ್ಷ ಕೂಡ ಆಗಿಲ್ಲ! ಏನ್ಮಾಡಿದ್ನಂತೆ?" ಎಂದ ಹೆಂಡತಿಗೆ, ಆಗ ಅಪ್ಪನ ಸಿಟ್ಟು ಮಗನಿಗೆ ಭಯ ತಂದಿತು. "ಕಳೆದೋಯ್ತಂತೆ!" ಎಂದಳು ಆಕೆ. "ಕಳೆದೋಯ್ತಂತೆ! ತಗೋತಾನೆ ಬಾ! ಅವನಿಗೇನು ಕಡಿಮೆ? ಅವರಪ್ಪ ತುಂಬಾ ಸಾವ್ಕಾರ!" ಎಂದು ಎತ್ತರಿಸಿದ್ದ ದನಿಯನ್ನು ಸಣ್ಣಗೆ ಮಾಡಿದ. ಮತ್ತೆ ದನಿ ಎತ್ತರಿಸಿ ಆತ ಶುರುಮಾಡಿದ: "ಅಲ್ಲಾ! ಕಳೆದೋಯ್ತಂತಾ! ತಗೊಟ್ಟು ಇನ್ನೂ ವರ್ಷನೇ ಆಗಿಲ್ಲ, 'ಅಸೋಕ ಪೆನ್ನು ಚೆನ್ನಾಗಿ ಬರೀತದೆ ಹೊನ್ನಯ್ಯ. ಸರಿಯಾಗಿ ಇಟ್ಕೊಂಡ್ರೆ ನಾಲ್ಕೈದು ವರ್ಷ ಬರ್ತದೆ' ಅಂತ ಹೇಳಕೊಟ್ಟಿದ್ದ ಪ್ಯಾಟೆಯ ಮಲ್ಲಾರಯ್ಯನ ಮಗ. ಅದಕ್ಕೆ ಒಂದು ಬಿಡಿಗಾಸೂ ಬಿಡದೆ ಅವನು ಹನ್ನೆರಡಾಣೆ ಅಮ್ಯಾಕೆ ತಗೊಂಡಿದ್ದ..." ಎಂದು ರೇಗಾಡಿದ.

ಈ ವಿಷಯ ಗಂಡನಿಗೆ ಮತ್ತಷ್ಟು ಸಿಟ್ಟು ತರಿಸಿತು. ಆತ ನೆತ್ತಿಗೆ ಪಿತ್ತ ಏರಿದಂತೆ ಮಾತನಾಡಿದ. "ಹನ್ನೆರಡಾಣೆ! ತರ್ತೀನಿ ತಡಿ ಈಗ! ವಿಷ ತಗೋಳ್ತೀನಿ ಅಂದ್ರುನು ನನ್ನತ್ರ ಈಗ ಒಂದು ಕಾಸಿಲ್ಲ, ಹೋಗೋಗು!" ಎಂದ. ನಂತರ ಮಗ ರಾಮಣ್ಣನ ಐದನೆಯ ತರಗತಿಗೆ ಸೇರಿಸುವಾಗ ಖರ್ಚಾದ ಹಣದ ಬಗ್ಗೆ ಹೆಂಡತಿಗೆ ಲೆಕ್ಕ ಒಪ್ಪಿಸತೊಡಗಿದ :

ಇನ್ನೂ ವರ್ಷ ತುಂಬಿಲ್ಲ, ಏನಿಲ್ಲ! ಆಗ್ಲೇ ಇವನ್ಗೆ ನೂರ್ ರೂಪಾಯ್ ಕೈ ಬಿಟ್ಟೋಯ್ತು. ಇವ್ನು ಕಡಿದಾಕೋದ್ಕೆ. ಟೋಪಿಗೆ, ಜಾಮಿಟ್ರಿಬಾಕ್ಸ್‌ಗೆ, ಹೊಸಬಟ್ಟೆಗೆ, ಪುಸ್ತಕಕ್ಕೆ, ಫೀಜ್ಗೆ ಅಂತ ಎಲ್ಲಾ ಸೇರಿ ಆಗ್ಲೆ ನೂರೂ ಆಗದೆ. ನೂರರ ಮೇಲೂ ಆಗದೆ. ಇವ್ನು ಓದಿ ನನ್ಗೆ ತಂದು ಇಕ್ಕೋದ್ಕೆ! ನಡಿಯಲೇ, ನೀನು ಓದೋದು ಬ್ಯಾಡ! ನಾನಿನ್ನ ಓದಿಸೋದು ಬ್ಯಾಡ! ಅಷ್ಟೊ ಇಷ್ಟೊ ಹಿರಿಯೋರು ಅಂತ ಸಂಪಾದ್ನೆ ಮಾಡ್ದ ಒಂದು ತುಂಡು ಹೊಲಗದ್ದೆ ಅದೆ ಗೇಯಿ! ಗೇಯ್ದೆ ಇದ್ರೆ ಪ್ಯಾಟೆ ಬೈಲಲ್ಲಿ ಕೂಲಿ ಸಿಕ್ತದೆ ಮಾಡಿವಂತೆ. ದಿನದ ಕೂಲಿ ಕೊಡ್ತಾರೆ..." ಎಂದು ಹೆಂಡತಿ ಮಗ ಇಬ್ಬರ ಮೇಲೂ ಹೊನ್ನಯ್ಯ ರೇಗಾಡತೊಡಗಿದ.

ಹೆಂಡತಿಗೆ ತನ್ನ ಗಂಡನ ವರ್ತನೆ ಏನು ಅನ್ನಿಸಿತೋ ಏನೋ, "ಸುಮ್ನಿರು ಸಾಕು ಇನ್ನು! ನೀನು ಕಾಫಿ ಕುಡಿದಿದ್ದು, ಬೀಡಿ ಸೇದಿದ್ದು, ಎಲ್ಲಾ ಸೇರಿಸಿ ಅವನ್ಗೆ ಲೆಕ್ಕ ಹಾಕಿ ಈಗ್ಲೆ ನೂರಾರಯ್ತು, ಇನ್ನೂರಾಯ್ತು ಎಂದು ಲೆಕ್ಕಹಾಕಿ ಕುಣಿಬ್ಯಾಡ" ಎಂದು ಬೈದಳು.

ಮತ್ತೆ "ಎಷ್ಟು ಮಕ್ಕಳ ಓದಿಸೋದಿಕ್ಕೆ ಹಿಂಗಾಡ್ತ ಇದ್ದಿ ನೀನು? ಒಬ್ನು ಓದಿಸೋದಿಕ್ಕೇ ಹಿಂಗಾಡ್ತ ಇದ್ದಿಯಲ್ಲ ನೀನು! ಇನ್ನು ಇವ್ನ ಹಿಂದಿರೋರ್ನ ನೀನೋದ್ಸೋದು ದಿಟವಾ?" ಎಂದು ಕೊರಗುತ್ತಾ ಗಂಡನನ್ನು ಕೇಳಿದಳು.

ನೀನ್ ಸುಮ್ನಿರೆ ಇನ್ನು ಸಾಕು! ನೀನು ಅವ್ನ ಪರವಹಿಸ್ಕೊಂಡು ಬರ್ಬೇಡ. ನಾನು ಸಾಲ್ದೊರ್ಗೇ ಕೊಡ್ಲೊ? ಇವನ್ಗೇ ಕೊಡ್ಲೊ? ವ್ಯವಸಾಯಕ್ಕೇ ಹಾಕ್ಲೊ? ನನಗೆ ಒಂದೂ ದಿಕ್ಕೇ ತೋಚ್ತಾ ಇಲ್ಲ! ಹಾಳಾದ ಎಮ್ಮೆ ಬ್ಯಾರೆ ಹೋಗಿ ಮೂರು ದಿನವಾಯ್ತು, ಎಲ್ಹೋಯ್ತೊ? ಯಾವ್ ದಿಕ್ಕಿಗೋಯ್ತೊ? ಎಲ್ಲಾದ್ರು ದೊಡ್ಡಿಗ್ಗಿಡ್ನಾಯಿ ಬಾಯ್ಗೇನೆ ಸಿಕ್ಕಾಕೋತೋ! ಹೋಗಿ ನೋಡ್ಬೇಕು..." ಎಂದು ಗಂಡ ನಿಟ್ಟುಸಿರುಬಿಟ್ಟ.

ರಾಮಣ್ಣ ತನ್ನ ಅಪ್ಪ ಅವ್ವರ ಜಗಳದ ನಡುವೆ ನಿಸ್ಸಹಾಯಕನಾಗಿ ಕೂತ, ಹೊಟ್ಟೆಯೊಳಗೆ ದುಃಖ ತಳಮಳಿಸಿತು. ತನ್ನ ಪೆನ್ನನ್ನು ಎಲ್ಲಿ ಕಳೆದೆ ಎಂಬುದು ಅವನಿಗೆ ಗೊತ್ತು. ಆದರೆ ಆತ ಅದನ್ನು ತನ್ನ ಅಪ್ಪನ ಹತ್ತಿರವಾಗಲಿ, ತನ್ನ ಅವ್ವನ ಹತ್ತಿರವಾಗಲಿ, ಹೇಳುವ ಧೈರ್ಯ ಮಾಡಲರ. ಅದಕ್ಕಿಂತ ಮಿಗಿಲಾಗಿ ತನ್ನ ಉಪಾಧ್ಯಾಯರ ಹತ್ತಿರ ಕೇಳುವ ಧೈರ್ಯವೂ ಬರಲಾರದು! ಅದು ಯಾರಿಗಾದರೂ ಸಿಕ್ಕಿದ್ದರೆ ನೋಟಿಸ್ ಬೋರ್ಡಿನಲ್ಲಿ 'ಕಳೆದುದು ಸಿಕ್ಕಿದೆ' ಎಂದು ಹಾಕುತ್ತಿರಲಿಲ್ಲವೆ? ಎಂಬುದು ಆತನ ಲೆಕ್ಕಾಚಾರ. ಆತನ ಈ ಯೋಚನೆ ವಾಸ್ತವವೂ ಆಗಿತ್ತೋ ಏನೊ? ಸಂಜೆ ಹೊತ್ತು ಆಟಕ್ಕೆ ಅಂತ ಹುಡುಗರನ್ನು ಬಿಟ್ಟಾಗ ಮೈದಾನದಲ್ಲಿ ಆಟ ಆಡುತ್ತಿದ್ದಾಗ ರಾಮಣ್ಣ ಪೆನ್ನು ಕಳೆದುಕೊಂಡಿದ್ದು. ಮಾರನೆ ದಿನ ಅಲ್ಲೆಲ್ಲಾ ತಡಕಾಡಿದ. ಸಿಗಲಿಲ್ಲ. ತನ್ನ ಸ್ನೇಹಿತರನ್ನೆಲ್ಲಾ ಕೇಳಿದ. ಅವರು ನಮಗೆ ಸಿಗಲಿಲ್ಲ ಎಂದರು. ಆಮೇಲೆ ಆತ ಅದರ ಬಗ್ಗೆ ಆಸೆಯನ್ನೇ ಬಿಟ್ಟು ಸುಮ್ಮನಾಗಿದ್ದ.

ಒಂದು ದಿನ ಮೇಷ್ಟ್ರು ಕೈಯಲ್ಲಿ ತನ್ನ ಹತ್ತಿರ ಇದ್ದಂತಹದೇ ಪೆನ್ನು ಇದ್ದದ್ದನ್ನು ಕಂಡು ರಾಮಣ್ಣ ಬೆರಗಾದ. ಅದನ್ನು ಚೆನ್ನಾಗಿ ಗುರುತಿಸಿದ. ಅದು ತನ್ನದೇ ಪೆನ್ನು! ಅದರ ಬಣ್ಣ, ದಪ್ಪ, ಉದ್ದ ಎಲ್ಲವನ್ನೂ ಸೂಕ್ಷ್ಮವಾಗಿ ವೀಕ್ಷಿಸಿದ. ನಿನ್ನೆದಿನ ತಮ್ಮ ಗುಂಪಿನಲ್ಲಿ ಕಬಡಿ ಆಟ ಆಡಿಸುತ್ತಿದ್ದ ಮೇಷ್ಟ್ರು ಅವರೇ. ಹೇಗೆ ಕೇಳುವುದು ಅವರನ್ನ? ಮೇಷ್ಟ್ರು ಸುಳ್ಳು ಹೇಳ್ತಾರ? ಸಿಕ್ಕಿದ್ದರೆ ಕೊಡುತ್ತಿರಲಿಲ್ಲವೇ?

ರಾಮಣ್ಣ ಕೊನೆಗೂ ನಿರ್ಧಾರ ಮಾಡಿಯೇ ಬಿಟ್ಟ: ಮೇಷ್ಟ್ರನ್ನ ಒಂದು ಮಾತು ಕೇಳೇಬಿಡುವ ಎಂದು. ಆದರೆ ಮರುಕ್ಷಣದಲ್ಲಿ ಅವನಿಗೆ ಬಂದಿದ್ದ ಧೈರ್ಯ ಮಾಯವಾಯಿತು. ಇವತ್ತು ಮೇಷ್ಟ್ರು ಬೇರೆ ಯಾಕೋ ಸಿಟ್ಟಾಗಿದ್ದರು. ಎಂದುಕೊಂಡು ಕೊನೆಗೆ ಮಂಕಾಗಿ ಸುಮ್ಮನೆ ಕೂತ.

ರಾಮಣ್ಣ ಅಲ್ಲಿಂದಾಚೆಗೆ ತನ್ನ ಸ್ನೇಹಿತರ ಹತ್ತಿರ, ದಿನ ಒಬ್ಬೊಬ್ಬನ ಹತ್ತಿರ ಅವನ ಇವನ ಬೇಡಿ, ಪೆನ್ನು ಈಸಿಕೊಂಡು ಬರೆದುಕೊಂಡು ಕತೆ ಹಾಕಿಕೊಂಡು ಬಂದ. ಆದರೆ ಪರೀಕ್ಷೆ ದಿನ ಎಲ್ಲರಿಗೂ ಪೆನ್ನು ಬೇಕು. ಇವತ್ತು ಯಾರ ಹತ್ತಿರ ಕೇಳುವುದು ಎಂಬ ಯೋಚನೆಯಲ್ಲಿ ಸಿಕ್ಕಿ ರಾಮಣ್ಣ ತೊಳಲಾಡುತ್ತಿರುವಾಗ, "ಯಾರ ಹತ್ತಿರವಾದರೂ ಇವತ್ತೊಂದಿನ ಈಸ್ಕೊಂಡ್

ಬರ್ದುಬರೋಗೋ! ನಾಳೆ ಏನಾದ್ರು ಮಾಡ್ತೀನಿ. ನಿಮ್ಮಪ್ಪ ಬ್ಯಾರೆ ಕೇಳಿದ್ರೆ ಹಿಂಗಾಡ್ತಾನೆ! ಕಾಸು ಇಲ್ವೆ ಇಲ್ಲ ಅಂತಾನೆ" ಎಂದಳು ಅವ್ವ.

"ಎಲ್ಲರಿಗೂ ಪರೀಕ್ಷೆ ಅದೆ ಕಣವ್ವ ಇವತ್ತು. ಯಾರ್ನವ್ವ ಕೇಳೋದು? ಯಾರೂ ಕೊಡೋದಿಲ್ಲ ಕಣವ್ವ ಇವತ್ತು" ಎಂದ ರಾಮಣ್ಣ.

ಆಗ ಅವ್ವ "ಹೋಗ್ಲಿ ಇದೊಂದು ಸರಿ ಕಾಸು ಕೊಟ್ಟು ಕಳ್ಸಿಬಿಡು. ಪರೀಕ್ಷೆ ಅದಂತೆ" ಎಂದು ಗಂಡನ ಮುಂದೆ ಗೋಗರೆದಳು.

ಆದರೆ ಅಪ್ಪ ಜಗ್ಗಲಿಲ್ಲ. ಕುಡಿಯುತ್ತಿದ್ದ ನೀರಿನ ಚೆಂಬನ್ನು ನೆಲದ ಮೇಲೆ ಕುಕ್ಕರಿಸಿ, "ಕೆಲಸ ನೋಡೆ! ಯಾವನತ್ರ ಕಾಸಿದ್ದಾದು? ನನ್ನ ತಲೆ ತಿನ್ಬೇಡ ನೀನು! ನಾನೇ ಸರಿಯಾಗಿ ಬೀಡಿ ಸೇದಿ ಮೂರು ದಿನವಾಯ್ತು!" ಎನ್ನುತ್ತಾ ಮೇಲೆದ್ದನು. ಮತ್ತೆ ತನ್ನ ಮಾತು ಮುಂದುವರೆಸಿ, "ಎಮ್ಮೆ ಹೋಗಿ ಮೂರು ದಿನವಾಯ್ತು. ಎಲ್ಲೊಯ್ತೊ? ಯಾವ ಕಳ್‌ನನ್ಮಕ್ಕಳು ಹೊಡ್ಕೊಂಡೊದ್ರೋ ಏನೊ! ಎಷ್ಟೇ ಅಡ್ಡಾದಿಡ್ಡಿಗೆ ಕೊಟ್ಟದ್ರೂ ಯರಾದ್ರೂ ಸಾವ್ರರೂಪಾಯ್ ಕೊಡೋರು. ಈಸಾರಿ ಗಬ್ಬಾದ ಮೇಲೆ ಮಾರಿ ಪ್ಯಾಟಿಯ ಸಿದ್‌ಬಸಪ್ನೋರ ಸಾಲನಾದ್ರೂ ತೀರ್ಸಿ ಬಿಡೋನ. ವರ್ಷ ವರ್ಷ ಬತ್ತದಬಡ್ಡಿ ಅಳೆದು ಸಾಕಾಯ್ತು ಅಂದುಕೊಂಡಿದ್ದೆ. ಆದ್ರಿಂಗಾಯ್ತಲ್ಲ! ಹೊಸಳ್ಳಿ ರಾಜಪುರ, ಆ ದೊಡ್ಕಾಡು, ಅತ್ತೆಲ್ಲಾ ಹೋಗಿ ಬತ್ತೀನಿ! ಇರು. ಅಲ್ಲಿಗೆ ಏನಾದ್ರು ಹೋಗ್‌ಗೀಗಿದೆಯೋ ನೋಡ್ಕೊಂಡು. ನನಗೂ ಮೂರು ದಿನದಿಂದ ಸುತ್ತೀಸುತ್ತೀ ಕಾಲೆಲ್ಲಾ ಬಿದ್ದೋಗವೆ..." ಎಂದವನೇ ದುಪ್ಪಟಿಯನ್ನು ಹೆಗಲ ಮೇಲೆ ಎಸೆದುಕೊಳ್ಳುತ್ತಾ ಕೊರಕೊರನೆ ಆಚೆಗೆ ಹೊರಡಲು ರೆಡಿಯಾದ.

ತೊರೆಸಾಲಿಗೆ ಮೇಯಲು ಹೋದ ಎಮ್ಮೆ ಎಲ್ಲಿಗೋಯಿತೋ? ಹೋಗಿ ಮೂರುದಿನವಾದರೂ ಅದರ ಸುಳಿವು ಪತ್ತೆಯಾಗಲಿಲ್ಲ. ಹಳ್ಳದ ಆಕಡೆ ಇರುವ ಕಾಡಿಗೆ ದೊಡ್ಡನಾಯಿಗಳು ಬಂದವೆ ಅಂತಾರೆ! ಅವೇ ಏನಾದ್ರು ಹೊತ್ಕೊಂಡೋದ್ವೋ ಅಥವಾ ಯಾರಾದ್ರು ಕಳ್ಳರು ಬೆಂಗಳೂರಿನ ಕಡೆಗೆ ಏನಾದರೂ ಹಿಡಿದು ಸಾಗಿಸಿದರೋ ಎಂಬ ಅನುಮಾನಗಳು ಅವ್ವನಿಗೆ ಕಾಡುತ್ತಿದ್ದರಿಂದ, ಆ ಎಮ್ಮೆಯ ಬಗ್ಗೆ ಅವಳು ಆಗಲೇ ಆಸೆ ಬಿಟ್ಟುಬಿಟ್ಟದ್ದರಿಂದ ಹೊರಗೆ ಹೊರಟ ಅಪ್ಪನಿಗೆ, "ಅದರ ಬಗ್ಗೆ ಇನ್ನೂ ಯಾಕೆ ಆಸೆ ಇಟ್ಕೊಂಡಿದ್ದೀ?" ಎಂದಳು. ಅಪ್ಪ, ಅವ್ವನ ಈ ಮಾತು ಕೇಳಿಸಿದರೂ ಕೇಳಿಸದವನ ಹಾಗೆ ಆಚೆಗೆ ಆಗಲೇ ಹೊರಟುಬಿಟ್ಟಿದ್ದ.

ಆಚೆಗೆ ಹೊರಟೇ ಹೋದ ಅಪ್ಪನನ್ನೇ ರಾಮಣ್ಣ ನೋಡುತ್ತಾ ನಿಂತ. ಮೌನವಾಗಿ ಬಹಳ ಹೊತ್ತು ನಿಂತಲ್ಲೇ ನಿಂತಿದ್ದ ಮಗನಿಗೆ ಅವ್ವ ಹೇಳಿದಳು :

"ಇಲ್ಲೇ ನಿಂತರು! ನಿನ್ನೆ ಮಧ್ಯಾಹ್ನ ಈರಕ್ಕ, 'ಹುಂಜ ಕೊಡೆ ನೆಂಟ್ರು ಬಂದವ್ರೆ ನಾಳೆ ಕುಯ್ಬೇಕು' ಅಂತ ಬಂದಿದ್ಲು. ನಾನು 'ಅದ್ನ ನಮ್ಮನೆ ದೇವ್ರಗೆ ಬಿಟ್ಟಿದ್ದೀನಿ ಕೊಡೋದಿಲ್ಲ', ಅಂತ

ಹೇಳಿ ಕಳಿಸಿಬಿಟ್ಟಿದ್ದೆ. ಸಮಯಕಿಲ್ಲದ್ದು! ದೇವ್ರಿಗೆಂತಾದ್ದು? ಇನ್ನೊಂದ್ ಹುಂಜವ ತಲೆ ತರ್ದು ದೇವ್ರಗೆ ಬಿಟ್ರಾಯ್ತು. ಮಧ್ಯಾಹ್ನದ್ಮೇಲೆ ಅದೇನ್ ಯಾಪಾರ ಮಾಡಿ ಇಡ್ಕೊಳ್ಳಿವಂತೆ. ಈಗ ಸದ್ದೀಕೆ ಎರಡ್ ರೂಪಾಯಿ ಕೊಡು. ನನ್ನ ಮಗ ಪರೀಕ್ಷೆಗೋಗ್ಬೇಕಂತೆ, ಪೆನ್ನಿಲ್ವಂತೆ ಅಂತ ಹೇಳಿ ಈಸ್ಕೊಂಡ್ ಬರ್ತೀನಿ ಇರು... ಇನ್ನೇನ್ ಮಾಡಾನ?" ಎಂದು ಹೇಳಿ ಅವ್ವ ಆಚೆಗೆ ಹೊರಟಳು.

ರಾಮಣ್ಣ ಹೊರಗೆ ಹೋದ ಅವ್ವ ಮನೆಗೆ ಬರುವುದನ್ನೇ ಕಾಯುತ್ತಾ ನಿಂತ.

*****

## ೩. ಪ್ರಾರ್ಥನೆ

**–ಎ.ಆರ್. ಮಣಿಕಾಂತ್**

'ಮನೆಯಲ್ಲಿ ಟಿ.ವಿ.ಗೆ ಸಿಗುತ್ತಿರುವಷ್ಟು ಪ್ರಾಮುಖ್ಯತೆ ನನಗೆ ಸಿಗುತ್ತಿಲ್ಲ ಅಪ್ಪ–ಅಮ್ಮ ಇಬ್ಬರೂ ನನಗಿಂತ ಹೆಚ್ಚಿನ ಪ್ರೀತಿಯನ್ನು ಟಿ.ವಿ. ಮೇಲೆ ತೋರಿಸುತ್ತಾರೆ. ಹಾಗಾಗಿ ನನ್ನನ್ನೂ ಒಂದು ಟಿ.ವಿ.ಯನ್ನಾಗಿ ಮಾಡಿಇಡು ದೇವರೇ ಎಂದು ಆ ಮಗು ಪ್ರಾರ್ಥಿಸಿತ್ತು;

ಬೆಂಗಳೂರಿನಲ್ಲಿ ಇರುವ ಜನಕ್ಕೆ ಕತ್ರಿಗುಪ್ಪೆ ಚೆನ್ನಾಗಿ ಗೊತ್ತು. ಕತ್ರಿಗುಪ್ಪೆ ಸಿಗ್ನಲ್‌ನಲ್ಲಿ ಇಳಿದು, ಫುಡ್‌ವರ್ಲ್ಡ್ ದಾಟಿದ್ರೆ ಸಿಗೋದೇ ಅನ್ನ ಕುಟೀರ ಹೋಟೆಲು ಅದರ ಎದುರಿಗೆ ಬಿಗ್‌ಬಜಾರ್. ಅದೇ ರಸ್ತೇಲಿ ಮುಂದೆ ಹೋಗಿ ಮೊದಲು ಎಡಕ್ಕೆ ತಿರುಗಬೇಕು ಹಾಗೇ ಐದು ನಿಮಿಷ ನಡೆದರೆ ಎರಡು ಸಂಪಿಗೆ ಮರಗಳು ಸಿಗುತ್ತವೆ. ಆ ಮರದ ಎದುರಿಗಿರೋದೇ ಹರೀಶ–ಭಾರತಿ ದಂಪತಿಯ ಮನೆ. ಡಬಲ್ ಬೆಡ್‌ರೂಂನ ಆ ಮನೆಗೆ ಎರಡು ಲಕ್ಷ ಅಡ್ವಾನ್ಸ್, ಎಂಟು ಸಾವಿರ ಬಾಡಿಗೆ.

ಭಾರತಿ–ಹರೀಶ್ ದಂಪತಿಗೆ ಒಂದು ಮುದ್ದಾದ ಮಗುವಿದೆ. ಅದರ ಹೆಸರು ಸ್ನೇಹಾ. ಹರೀಶನಿಗೆ ಒಂದು ಎಂಎನ್‌ಸಿಯಲ್ಲಿ ಕೆಲಸವಿದೆ. ಎಂಎನ್‌ಸಿ ಕೆಲಸ ಅಂದ ಮೇಲೆ ಹೇಳೋದೇನಿದೆ? ಆ ನೌಕರಿಯಲ್ಲಿ ಒಳ್ಳೆಯ ಸಂಬಳವೇನೋ ಇದೆ ನಿಜ, ಆದರೆ ಆ ದುಡಿಮೆಗೆ ಹೊತ್ತು–ಗೊತ್ತು ಎಂಬುದೇ ಇಲ್ಲ. ಶಿಫ್ಟ್ ಲಿಸ್ಟಿನ ಪ್ರಕಾರ ಬೆಳಿಗ್ಗೆ ೧೧ರಿಂದ ಸಂಜೆ ಆರೂವರೆಯವರೆಗೂ ಕೆಲಸ ಅಂತ ಇದೆ. ಆದರೆ ಹೆಚ್ಚಿನ ದಿನಗಳಲ್ಲಿ ಕೆಲಸ ಮುಗಿಯುವಷ್ಟರಲ್ಲಿ ರಾತ್ರಿ ಎಂಟು ಗಂಟೆ ದಾಟಿರುತ್ತೆ. ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಆಫೀಸಿಂದ ಹೊರಟು ಹರೀಶ ಕತ್ರಿಗುಪ್ಪೆಯ ಮನೆ ತಲುಪಿಕೊಳ್ಳುವುದರೊಳಗೆ ರಾತ್ರಿ ಒಂಬತ್ತೂವರೆ ಆಗಿಬಿಡುತ್ತಿತ್ತು. ಶನಿವಾರ–ಭಾನುವಾರಗಳಂದು ಆಫೀಸಿನ ಗೆಳೆಯರೊಂದಿಗೆ ವೀಕೆಂಡ್ ಪಾರ್ಟಿಗೆಂದು ಆತ ಹಾರಿಬಿಡುತ್ತಿದ್ದ. ಈ ಎರಡು ದಿನಗಳಲ್ಲಿ ಆತ ಮನೆ ತಲುಪುತ್ತಿದ್ದುದು ರಾತ್ರಿ ಹನ್ನೊಂದು ಹನ್ನೊಂದುವರೆಗೆ!

ಬೆಳಗ್ಗೆ ಒಂಬತ್ತು ಗಂಟೆಗೆಲ್ಲ ಗಂಡ ಆಫೀಸಿಗೆ, ಮಗಳು ಶಾಲೆಗೆ ಹೊರಟು ಬಿಡುತ್ತಿದ್ದರು. ಅನಂತರ ಇಡೀ ದಿನ ಮನೇಲಿ ನಾನೊಬ್ಬಳೇ ಎನ್ನಿಸಿದಾಗ ಭಾರತಿಗೆ ಬೋರ್ ಎನ್ನಿಸತೊಡಗಿತು. ಅವಳಾದರೂ ಇಂಗ್ಲೀಷಿನಲ್ಲಿ ಎಂ.ಎ. ಮಾಡಿಕೊಂಡಿದ್ದವಳು. ಇಡೀ ದಿನ ಮನೇಲಿರುವ ಬದಲು ಯಾವುದಾದರೂ ಸ್ಕೂಲ್‌ನಲ್ಲಿ ಟೀಚರ್ ಆಗಿ ಸೇರಬಾರದೇಕೆ ಅಂದುಕೊಂಡಳು. ಅವಳ ಅದೃಷ್ಟಕ್ಕೆ, ಅದೇ ವೇಳೆಗೆ ಸ್ನೇಹಾ ಓದುತ್ತಿದ್ದ ಶಾಲೆಯಲ್ಲಿ ಶಿಕ್ಷಕಿಯರ ಕೊರತೆ ಇದೆ ಎಂಬ ವಿಷಯವೂ ಗೊತ್ತಾಯಿತು. ಒಮ್ಮೆ ಪ್ರಯತ್ನಿಸಿ ನೋಡೋಣ. ಕೆಲಸ ಸಿಕ್ಕಿಬಿಟ್ಟರೆ ಹೋಗೋದು ಇಲ್ಲವಾದರೆ,

ಒಂದು ಸಂದರ್ಶನ ಎದುರಿಸಿದ ಅನುಭವವಂತೂ ಆಗುತ್ತದೆ ಎಂದುಕೊಂಡು ಅರ್ಜಿ ಹಾಕಿ ಸಂದರ್ಶನಕ್ಕೂ ಹೋಗಿಬಂದಳು. ಹದಿನೈದೇ ದಿನಗಳಲ್ಲಿ ಆ ಕಡೆಯಿಂದ ಉತ್ತರ ಬಂದು :'ಸಹ ಶಿಕ್ಷಕಿಯಾಗಿ ನಿಮ್ಮನ್ನು ನೌಕರಿಗೆ ತೆಗೆದುಕೊಳ್ಳಲಾಗಿದೆ. ಅಭಿನಂದನೆ....'

ಹೆಂಡತಿ ಕೆಲಸಕ್ಕೆ ಹೊರಟು ನಿಂತಾಗ ಹರೀಶ ಎಗರಾಡಿದ. ತಕ್ಷಣವೇ ಭಾರತಿ ಹೇಳಿದಳು :'ಯೋಚನೆ ಮಾಡಿ ಹರೀ. ಬೆಳಗ್ಗಿಂದ ಸಂಜೆಯತನಕ ಮನೇಲಿ ನಾನೊಬ್ಬೇ ಇರಬೇಕು. ಅದರ ಬದಲು ಟೀಚರ್ ಆಗಿ ಕೆಲಸ ಮಾಡಿದ್ರೆ ತಪ್ಪೇನು? ನಾನು ಹೋಗ್ತಿರೋದು ಮಗು ಓದ್ತಾ ಇರೋ ಸ್ಕೂಲೇ ತಾನೆ? ಇದರಿಂದ ಅವಳಿಗೂ ಒಂದು ಕಂಫರ್ಟ್ ಸಿಕ್ಕ ಹಾಗಾಯ್ತು. ಇನ್ನು ಮುಂದೆ ಪ್ರತಿ ತಿಂಗಳೂ ನಾನೂ ಒಂದಿಷ್ಟು ದುಡ್ಡು ಉಳಿಸ್ತೀನಿ. ಒಂದೈದು ವರ್ಷ ನಾವಿಬ್ರೂ ಕಷ್ಟಪಟ್ಟು ಎಷ್ಟು ಸಾಧ್ಯವೋ ಅಷ್ಟು ಉಳಿಸೋಣ. ಎಲ್ಲವನ್ನೂ ಮರೆತು ದುಡಿಯೋಣ. ಹಾಗೆ ಮಾಡಿದ್ರೆ ಆರನೇ ವರ್ಷದ ಹೊತ್ತಿಗೆ ನಾವೂ ಒಂದು ಸ್ವಂತ ಮನೆ ಮಾಡ್ಕೋಬಹುದೋ ಏನೋ....'

ಹೆಂಡತಿಯ ಕಡೆಯ ಮಾತುಗಳು ಹರೀಶನಿಗೆ ತುಂಬ ಇಷ್ಟವಾದವು. ತಿಂಗಳು ತಿಂಗಳೂ ನಾನೂ ಒಂದಿಷ್ಟು ದುಡ್ಡು ಉಳಿಸ್ತೀನಿ ಅಂದಳಲ್ಲ? ಅದೊಂದೇ ಕಾರಣದಿಂದ ಅವಳನ್ನು ಕೆಲಸಕ್ಕೆ ಕಳುಹಿಸಲು ಒಪ್ಪಿಕೊಂಡ.

'ಮಿಸ್ ಭಾರತೀ, ಬನ್ನಿ ಕೂತ್ಕೊಳ್ಳಿ, ನಿಮ್ಗೆ ಒಂದಿಷ್ಟು ಹೆಚ್ಚುವರಿ ಕೆಲ್ಸ ಕೊಡ್ತಾ ಇದೀನಿ. ಐದನೇ ತರಗತಿಗೆ ಕನ್ನಡ ತಗೋತಾರಲ್ಲ ಸುರೇಖಾ? ಅವರಿಗೆ ಚಿಕೂನ್‌ಗುನ್ಯಾ ಅಂತೆ. ಹಾಗಾಗಿ ಅವರು ಒಂದು ವಾರದ ರಜೇಲಿದ್ದಾರೆ. ಹೇಗಿದ್ರೂ ನಿಮ್ದು ಎಂ.ಎ. ಇಂಗ್ಲೀಷ್ ತಾನೆ? ಹಾಗಾಗಿ ಒಂದು ವಾರದ ಮಟ್ಟಿಗೆ ಕನ್ನಡ ಪಾಠ ಮಾಡೋದು ನಿಮ್ಗೆ ಕಷ್ಟ ಆಗೋದಿಲ್ಲ ಅನ್ಕೋತೀನಿ. ಈಗ ಮೊದಲು ಒಂದು ಕೆಲ್ಸ ಮಾಡಿ. ಮಂತ್ಲೀ ಟೆಸ್ಟ್‌ದು ಆನ್ಸರ್ ಶೀಟ್‌ಗಳಿವೆ ಇಲ್ಲಿ. ಅದನ್ನು ಚೆಕ್ ಮಾಡಿ. ಮಾರ್ಕ್ಸ್ ಕೊಡಿ. ಈ ವಾರದ ಕೊನೆಯಲ್ಲಿ ಪೇರೆಂಟ್–ಟೀಚರ್ ಮೀಟಿಂಗ್ ಇರೋದ್ರಿಂದ ಈ ಕೆಲಸ ಅರ್ಜೆಂಟಾಗಿ ಆಗಲೇಬೇಕು. ನನಗೆ ನಿಮ್ಮ ಬಗ್ಗೆ ನಿಮ್ಮ ಕೆಲಸದ ಬಗ್ಗೆ ನಂಬಿಕೆಯಿದೆ. ಈ ಉತ್ತರ ಪತ್ರಿಕೆಗಳನ್ನು ಮನೆಗೇ ತಗೊಂಡುಹೋಗಿ ವ್ಯಾಲ್ಯುಯೇಷನ್ ಮಾಡ್ಕೊಂಡು ಬನ್ನಿ ಪರ್ವಾಗಿಲ್ಲ....' ಹೆಡ್‌ಮೇಡಂ ಹೀಗೆ ಹೇಳಿದಾಗ 'ಸರಿ ಮೇಡಂ' ಎಂದಷ್ಟೇ ಹೇಳಿ ಸಮ್ಮತಿಸಿದಳು ಭಾರತಿ.

ಕೆಲಸಕ್ಕೆ ಸೇರಿಕೊಂಡ ನಾಲ್ಕೇ ತಿಂಗಳಲ್ಲಿ ಹೀಗೊಂದು ಹೊಸ ಜವಾಬ್ದಾರಿ ಹೆಗಲೇರಿದ್ದು ಕಂಡು ಭಾರತಿಗೆ ಖುಷಿಯಾಗಿತ್ತು. ಉತ್ತರ ಪತ್ರಿಕೆಗಳನ್ನು ಬಂಡಲ್ ಥರಾ ಕಟ್ಟಿಕೊಂಡು ಬ್ಯಾಗ್‌ನೊಳಗೆ ಇಟ್ಟುಕೊಂಡಳು. ಹೊಸದಾಗಿ ಸೇರಿದ್ದ ಕೆಲಸ ತಾನೆ? ಹಾಗಾಗಿಯೇ, ಪ್ರಶ್ನೆಗಳು ಹೇಗಿವೆ ಎಂಬುದನ್ನು ಇಲ್ಲಿಯೇ ನೋಡಿಬಿಡೋಣ ಎಂಬ ಕುತೂಹಲ ಅವಳದು. ಈ

ಕಾರಣದಿಂದಲೇ ಒಮ್ಮೆ ಪ್ರಶ್ನೆ ಪತ್ರಿಕೆಯತ್ತ ಕಣ್ಣು ಹಾಯಿಸಿದಳು ಭಾರತಿ. ಅಲ್ಲಿದ್ದ ಒಂದು ಪ್ರಶ್ನೆ ಅವಳಿಗೆ ಬಹಳ ಇಷ್ಟವಾಯಿತು :'ದೇವರಲ್ಲಿ ನನ್ನ ಬೇಡಿಕೆ' ಎಂಬ ವಿಷಯವಾಗಿ ಪ್ರಬಂಧ ಬರೆಯಿರಿ ಎಂಬುದೇ ಆ ಪ್ರಶ್ನೆ. ಇದಕ್ಕೆ ಉತ್ತರವಾಗಿ ಮಕ್ಕಳು ಏನೇನು ಬರೆದಿರಬಹುದೋ ನೋಡೋಣ ಎಂದುಕೊಂಡೇ ಮನೆ ತಲುಪಿದಳು ಭಾರತಿ.

ಒಂದೆರಡು ಸೀರಿಯಲ್ ನೋಡಿಕೊಂಡೇ ಅಡುಗೆ ಕೆಲಸ ಮುಗಿಸುವುದರೊಳಗೆ ಒಂಬತ್ತೂವರೆ ಆಗಿಹೋಯಿತು. ಮಗಳು ಆಗಲೇ ತೂಕಡಿಸುತ್ತಿದ್ದಳು. ಅವಳಿಗೆ ಊಟ ಮಾಡಿಸಿ ಮಲಗಿಸಿ ಉತ್ತರ ಪತ್ರಿಕೆಗಳ ಮುಂದೆ ಕೂತಳು ಭಾರತಿ. ಅದೇ ಸಂದರ್ಭಕ್ಕೆ ಹರೀಶನೂ ಬಂದ ಅವನಿಗೆ ಸಂಕ್ಷಿಪ್ತವಾಗಿ ವಿಷಯ ತಿಳಿಸಿದಳು. 'ಸರಿ ಬಿಡು. ನಾನೇ ಹಾಕ್ಕೊಂಡು ಊಟ ಮಾಡ್ತೇನೆ. ನೀನು ಕೆಲ್ಸ ಮಗಿಸು' ಎಂದ ಹರೀಶ.

ಮೊದಲ ಆರು ಉತ್ತರ ಪತ್ರಿಕೆಗಳಲ್ಲಿ ಅಂಥ ವಿಶೇಷವೇನೂ ಕಾಣಿಸಲಿಲ್ಲ. ಆದರೆ, ಏಳನೇ ಉತ್ತರ ಪತ್ರಿಕೆ ತಗೊಂಡಳಲ್ಲ ಆ ನಂತರದಲ್ಲಿ ಅವಳು ಒಂದರ್ಥದಲ್ಲಿ ಮೈಮರೆತಳು. ಒಂದೊಂದೇ ಸಾಲು ಓದುತ್ತಾ ಹೋದಂತೆ ಅವಳ ಮುಖ ಕಳೆಗುಂದಿತು. ಕಂಗಳಲ್ಲಿ ನೀರು ತುಂಬಿಕೊಂಡಿತು. ಒಂದೆರಡು ಹನಿಗಳು ಪೈಪೋಟಿಗೆ ಬಿದ್ದಂತೆ ಕೆನ್ನೆ ಮೇಲಿಂದ ಜಾರಿ ಉತ್ತರ ಪತ್ರಿಕೆಯ ಮೇಲೆ ಬಿದ್ದು ಟಪ್ ಟಪ್ ಎಂದು ಸದ್ದು ಮಾಡಿದವು.

ಹೆಂಡತಿಯ ಈ ವರ್ತನೆಯಿಂದ ಹರೀಶ ಪೆಚ್ಚಾದ. ಸರಸರನೆ ಊಟ ಮುಗಿಸಿ, ಕೈ ತೊಳೆದು ಬಂದವನೇ– 'ಯಾಕೇ ಭಾರ್ತಿ, ಏನಾಯ್ತು? ಯಾಕೆ ಅಳ್ತಾ ಇದೀಯ? ಪೇಪರ್ ನೋಡಿ ನೋಡಿ ಕಣ್ಣು ಉರಿಬಂತಾ?' ಎಂದು ವಿಚಾರಿಸಿದ.

ಆವನ ಮಾತು ಕೇಳಿಸಲೇ ಇಲ್ಲ ಎಂಬಂತೆ– 'ಒಂದು ಮಗು ಬರದಿರೋ ಪ್ರಬಂಧ ಇದು, ಓದಿ' ಎಂದಳು ಭಾರತಿ. ಆ ಪ್ರಬಂಧದಲ್ಲಿ ಮಗುವಿನ ಮಾತು ಹೀಗಿತ್ತು :'ಕಾಣದ ದೇವರೇ, ನಿನಗೆ ನಮಸ್ಕಾರ ನಾನು ನಿನ್ನಲ್ಲೊಂದು ಬೇಡಿಕೆ ಇಡ್ತಾ ಇದೀನಿ. ಏನ್ ಗೊತ್ತಾ? ದಯವಿಟ್ಟು ನನ್ನನ್ನು ಒಂದು ಟಿ,ವಿ.ಯನ್ನಾಗಿ ಮಾಡಿಬಿಡು! ಪ್ಲೀಸ್, ನಮ್ಮ ಮನೇಲಿ ಟಿ.ವಿ. ಇದೆಯಲ್ಲ? ಆ ಜಾಗದಲ್ಲಿ ನಾನಿರಬೇಕು. ನಮ್ಮ ಮನೇಲಿ ಟಿ.ವಿ.ಗೆ ಅಂತ ಒಂದು ಜಾಗ ಇದೆ. ಅದೇ ಥರ ನನಗೂ ಒಂದು ಜಾಗ ಕೊಡು ದೇವ್ರೇ, ಪ್ಲೀಸ್....

...ನಮ್ಮ ಮನೇಲಿರೋದು ಮೂರೇ ಜನ. ನಾನು, ಪಪ್ಪ, ಮಮ್ಮಿ.... ಪಪ್ಪ ಬೆಳಗ್ಗೇನೆ ಕೆಲಸಕ್ಕೆ ಹೋಗಿಬಿಡ್ತಾರೆ. ಅಮ್ಮನೂ ಅಷ್ಟೆ ನಾನು ಸಂಜೆ ಸ್ಕೂಲಿಂದ ಬರ್ತೀನಲ್ಲ? ಬಂದ ತಕ್ಷಣ– 'ಹೋಂವರ್ಕ್ ಎಲ್ಲಾ ಮುಗಿಸೇ' ಅಂತಾರೆ ಅಮ್ಮ. ಎಲ್ಲಾ ಮುಗಿಸಿ, ಆಸೆಯಿಂದ ಓಡಿ ಹೋಗಿ

ಕುತ್ತಿಗೇಗೆ ಜೋತುಬಿದ್ರೆ 'ಅಯ್ಯೋ, ದನ ಬಿದ್ದ ಹಾಗೆ ಮೇಲೆ ಬೀಳ್ತೀಯಲ್ಲೆ? ಅಲ್ಲೇ ನಿಂತ್ಕೊಂಡು ಮಾತಾಡು. ಯಾಕೆ ಹಾಗೆ ಮೈಮೇಲೆ ಬೀಳ್ತೀಯ. ನೀನೇನು ಎಳೇ ಮಗುವಾ?' ಅಂತಾರೆ. ಯಾವತ್ತಾದ್ರೂ ಒಂದು ದಿನ 'ಅಮ್ಮಾ, ಸ್ವಲ್ಪ ತಲೆ ನೋಯ್ತಿದೆ' ಅಂದರೆ– 'ಓದಬೇಕಾಗ್ತದೆ ಅಂತ ನಾಟಕ ಆಡ್ತಾ ಇದೀಯ' ಅಂತ ರೇಗ್ತಾರೆ. 'ಸ್ಕೂಲಲ್ಲಿ ನಿನಗಿಂತ ಚೆನ್ನಗಿ ಓದೋರು ಎಂಟು ಜನ ಇದ್ದಾರಂತೆ. ಅವರನ್ನೆಲ್ಲ ಹಿಂದೆ ಹಾಕ್ತೀಯ ನೋಡು, ಅವತ್ತು ನನ್ನ ಹತ್ರ ಬಂದು ಎಷ್ಟು ಬೇಕೋ ಅಷ್ಟು ಮಾತಾಡು, ಮುದ್ದು ಮಾಡು ಅಂತಾರೆ. ಯಾವಾಗಲಾದ್ರೂ ಒಂದೈದು ದಿನ ಜ್ವರ ಬಂದು ಮಲಗಿಬಿಟ್ರೆ; ಶೀತ ಆಗಿ ಕೆಮ್ಮು ಶುರುವಾದ್ರೆ –'ಆವಗಾವಾಗ ಏನಾದ್ರೂ ಒಂದು ಕಾಯ್ಲೆ ಇದ್ದೇ ಇರ್ತದಲ್ಲ ನಿಂಗೆ? ನಮ್ಗೆ ಒಳ್ಳೇ ಪ್ರಾಣ ಸಂಕಟ. ಇದೆಲ್ಲ ಯಾವ ಜನ್ಮದ ಕರ್ಮಾನೋ...' ಅಂದು ರೇಗಿಬಿಡ್ತಾರೆ....

ಈಗ ಅಪ್ಪನ ವಿಷ್ಯಕೆ ಬರ್ತೀನಿ. ಬೆಳಗ್ಗೆ ನಾನು ಪೇಸ್ಟ್ ಮಾಡಿ ಬೋರ್ನ್‌ವಿಟಾ ಕುಡಿಯೋ ಹೊತ್ತಿಗೆ ಅಪ್ಪ ರೆಡಿಯಾಗಿರ್ತಾರೆ. ಲ್ಯಾಪ್‌ಟಾಪಲ್ಲಿ ಮುಳುಗಿ ಹೋಗಿರ್ತಾರೆ. ಅವರದು ಯಾವಾಗ್ಲೂ ಗಡಿಬಿಡೀನೆ. ಅಪ್ಪನ ಜತೆ ಆಟ ಆಡಬೇಕು, ಕೂಸುಮರಿ ಕಟ್ಕೋಬೇಕು, ವಾಕಿಂಗ್ ಹೋಗಬೇಕು, ಅವರ ಹತ್ರ ಕತೆ ಹೇಳಿಸ್ಕೋಬೇಕು. ಲೆಕ್ಕ ಹೇಳಿಸ್ಕೋಬೇಕು ಅಂತೆಲ್ಲ ತುಂಬಾ ಆಸೆ ನಂಗೆ. ಆದ್ರೆ ಅದಕ್ಕೆಲ್ಲ ಅವಕಾಶಾನೇ ಇಲ್ಲ. ಅಪ್ಪ ಒಂದ್ಸಲಾನೂ ನನ್ನ ನೋಟ್ಸ್ ನೋಡಿಲ್ಲ. ರಾತ್ರಿ ವೇಳೆ, ಹತ್ತಿರ ಹೋದ್ರೆ ಸಾಕು– 'ನಂಗೆ ಸುಸ್ತಾಗಿದೆ. ತಲೆ ಸಿಡೀತಾ ಇದೆ. ನೀನು ಮತ್ತೆ ತಲೆ ಕೆಡಿಸಬೇಡ. ಏನಿದ್ರೂ ಅಮ್ಮಂಗೆ ಹೇಳು. ಈಗ ಮಲ್ಕೋ ಹೋಗು' ಎಂದು ಗದರಿಸಿಬಿಡ್ತಾರೆ ಪಪ್ಪ. ಅದಕ್ಕೇ ನನ್ನನ್ನು ಟಿ.ವಿ.ಯನ್ನಾಗಿ ಮಾಡಿಬಿಡು. ಪ್ಲೀಸ್.

ಯಾಕೆ ಗೊತ್ತ? ಎಷ್ಟೇ ಸುಸ್ತಾಗಿದ್ರೂ ಜ್ವರ ಬಂದಿದ್ರೂ ಕೂಡ ಅಪ್ಪ ಮನೆಗೆ ಬಂದ ತಕ್ಷಣ ಟಿ.ವಿ. ಹಾಕ್ತಾರೆ. ಅನಂತರ ಟಿ.ವಿ. ನೋಡ್ತಾ ನೋಡ್ತಾ ತಮ್ಮಷ್ಟಕ್ಕೆ ತಾವೇ ನಗ್ತಾರೆ. ಮಾತಾಡ್ತಾರೆ. ಹಾಡು ಹೇಳ್ತಾರೆ. ಮಧ್ಯೆ ಮಧ್ಯೆ ನಮ್ಮ ಟೀವಿ ಎಷ್ಟೊಂದು ಚೆನ್ನಾಗಿ ಬರ್ತಿದೆ ಅಲ್ವಾ? ಅನ್ನುತ್ತಾರೆ ಅದನ್ನು ದಿನಕ್ಕೆ ಎರಡು ಬಾರಿ ಒರೆಸ್ತಾರೆ. ಒಂದು ವೇಳೆ ಅದು ಕೆಟ್ಟು ಹೋದ್ರೆ ಐದಾರು ಜನಕ್ಕೆ ಪೋನ್ ಮಾಡಿ ತಕ್ಷಣವೇ ರಿಪೇರಿ ಮಾಡಿಸ್ತಾರೆ. ಅನಂತರ ಮತ್ತೆ ಟಿ.ವಿ. ಹಾಕ್ಕೊಂಡು ತಮ್ಮಷ್ಟಕ್ಕೆ ತಾವೆ ಮಾತಾಡ್ತಾ. ಹಾಡು ಕೇಳ್ತಾ ಉಳಿದುಬಿಡ್ತಾರೆ....

ಅಮ್ಮ ಕೂಡ ಅಷ್ಟೆ ಪಾತ್ರೆ ತೊಳೆಯುವಾಗ, ಅಡುಗೆ ಮಾಡವಾಗ, ಕಸ ಗುಡಿಸುವಾಗ, ಪೋನ್ ಮಾಡುವಾಗ ಕೂಡ ಅವಳ ಕಣ್ಣು ಟಿ.ವಿ. ಕಡೆಗೇ ಇರ್ತದೆ. ಒಂದೇ ಮಾತಲ್ಲಿ ಹೇಳಬೇಕು ಅಂದ್ರೆ–ಟಿ.ವಿ. ಜತೆ ಅಪ್ಪನಿಗಿದೆಯಲ್ಲ? ಅದಕ್ಕಿಂತ ಹೆಚ್ಚಿನ ಅಟ್ಯಾಚ್ ಮೆಂಟ್ ಅಮ್ಮನಿಗಿದೆ.

ಅದಕ್ಕೆ ದೇವ್ರೇ, ಪ್ಲೀಸ್, ನನ್ನನ್ನು ಟಿ.ವಿ.ಯನ್ನಾಗಿ ಮಾಡಿಬಿಡು. ನಮ್ಮ ಅಪ್ಪ-ಅಮ್ಮ, ಇಬ್ರೂ ಸಂತೋಷ-ಬೇಸರದ ಸಂದರ್ಭದಲ್ಲೆಲ್ಲ ನನ್ನ ಮುಂದೇನೇ ಕೂತಿರ್ಬೇಕು. ನನ್ನ ಮಾತನ್ನು ಅವರು ಆಸಕ್ತಿಯಿಂದ ಕೇಳಬೇಕು. ನಾನು ಈ ಮನೆಯ ಆಸಕ್ತಿಯ ಕೇಂದ್ರಬಿಂದು ಆಗಬೇಕು. ನಮ್ಮ ಮನೆಯ ಜನ ಪ್ರಶ್ನೆ ಮಾಡದೆ, ಅಡ್ಡಿ ಮಾಡದೆ, ರೇಗದೆ ನನ್ನ ಮಾತು ಕೇಳಿಸ್ಕೋಬೇಕು. ಟಿ.ವಿ.ಕೆಟ್ಟು ಹೋದಾಗ ಅದನ್ನು ಎಷ್ಟು ಜೋಪಾನ ಮಾಡ್ತಾರೋ ಅಷ್ಟೇ ಕಾಳಜಿಯನ್ನು ನನ್ನ ವಿಷಯದಲ್ಲೂ ತಗೋಬೇಕು. ಅಮ್ಮ, ತನ್ನ ನೋವನ್ನೆಲ್ಲ ಮರೆಯೋದಕ್ಕೆ ನನ್ನನ್ನು ಉಪಯೋಗಿಸಬೇಕು. ನನ್ನ ಜತೇಲಿರೋದಕ್ಕೆಂದೇ ಎಲ್ರೂ ತಮ್ಮ ಕೆಲಸ ಮರೆತು ಬರ್ತಾರೆ ಅಂತ ನಂಗೆ ಅನ್ನಿಸಬೇಕು. ಎಲ್ಲರೂ ನನ್ನ ಮಾತಿಂದ, ಹಾಡಿಂದ, ಆಟದಿಂದ ಖುಷಿಪಡಬೇಕು. ಹೌದು ದೇವ್ರೆ ಇದಿಷ್ಟೂ ನನ್ನ ಪ್ರೀತಿಯ ಕೋರಿಕೆ. ಇದನ್ನು ನಡಸಿಕೊಡು. ಆದಷ್ಟು ಬೇಗನೆ ನನ್ನನ್ನು ಒಂದು ಟಿ.ವಿ.ಯನ್ನಾಗಿ ಮಾಡಿಬಿಡು. ನಾನಿರಬೇಕಾದ ಜಾಗದಲ್ಲಿ ಈಗ ಟಿ.ವಿ.ಇದೆ....

ಇದಿಷ್ಟನ್ನೂ ಓದಿ ಮುಗಿಸಿದ ಹರೀಶ– 'ಥೀ, ಈ ಮಗುವಿನ ಪೇರೆಂಟ್ಸ್ ಎಷ್ಟೊಂದು ಕ್ರೂರಿಗಳು ಅಲ್ವಾ? ಇರೋ ಒಂದು ಮಗೂನ ಸರಿಯಾಗಿ ನೋಡಿಕೊಳ್ದೇ ಇರೋರು....' ಎಂದ ಭಾರತಿ. ಗಂಡನನ್ನೇ ಅನುಕಂಪದಿಂದ ನೋಡುತ್ತ ಸಂಕಟದಿಂದ ಹೇಳಿದಳು :'ಈ ಪ್ರಬಂಧ ಬರೆದಿರೋದು ನಮ್ಮ ಮಗಳು ಕಣ್ರೀ....'

***

ಕೆಲಸ, ಸಂಪಾದನೆ, ಪ್ರೊಮೋಷನ್, ಪಾರ್ಟಿ... ಇತ್ಯಾದಿ ಗದ್ದಲದಲ್ಲಿ ಮುಳುಗಿ ಹೋಗಿ ಮಕ್ಕಳ ಸುಖ-ದುಃಖ ವಿಚಾರಿಸಲು ಮರೆತ ಎಲ್ಲ ಪೋಷಕರಿಗೆ ಪ್ರೀತಿಯಿಂದ– ಈ ಬರಹ.

*****

## ೪. ಕಟ್ಟಡದ ಕೆಲಸಗಾರರು

**– ಎಚ್. ಎಸ್. ಶಿವಪ್ರಕಾಶ್**

ಸ್ಮಶಾನದ ಬೂದಿ ಮಿಶ್ರಿತ ಮಣ್ಣು
ಹೆಜ್ಜೆ ಕಲ್ಲುಗಳ ದಾಟುತ್ತಾ
ಅರೆಬೆಂದ ಕೊರಡುಗಳ ಎಡುವುತ್ತ
ಬಂದೆ ಬಯಲಿಗೆ
ಒಂದು ಸಲವಾದರೂ
ಬೆಚ್ಚನೆಯ ಗಾಳಿ ತುಂಬಿಕೊಳ್ಳಲು ಪುಪ್ಪುಸದೊಳಕ್ಕೆ.
ಮಣ್ಣ ತಿಮಿಂಗಿಲ ಎದ್ದು ನಿಂತಂತೆ ದೂರದಲ್ಲಿನ್ನೂ
ಸುಣ್ಣ ಬಳಿಯದ ಮಹಲು
ಅದರ ಭುಜದ ಮೇಲಿನ ಕೂಲಿಕಾರರ ಬಣ್ಣ ಬಣ್ಣದ ಸಾಲು
ಮಣ್ಣು ಇಟ್ಟಿಗೆಯಾಗಿ ಬಳಿಕ ಕಟ್ಟಡವಾಗಲು
ಇಷ್ಟಿಷ್ಟೆ ಏರಿದ ಎತ್ತರದ ಜೀವಂತ ಸೀಮಾರೇಖೆ
ಕೈಯಿಂದ ಕೈಗೆ ಹಾರುವ ಬಾಣಲಿಗೊಂದು
ರೆಕ್ಕೆ ಮೂಡದ ಮಣ್ಣು ತುಂಬಿದ ಲೋಹದ ಹಕ್ಕಿ.
ತೊನೆಯುವ ತೋಳಗಳ ಹಿಂದೆ
ಬಗಲ ಕಿಂಡಿಗಳಲ್ಲಿ
ನೀಲಿ ಹೊತ್ತಿ ಉರಿದರೆ ಏನು?
ಮೋಡಗಳ ಬೂದಿ ಎಷ್ಟು ಕಟ್ಟಿದರೇನು?
ಬುಡದಿಂದ ಅಡಿ ಅಡಿ ಬೆಳೆದು ಬೆವರುಂಡು ನಿಲ್ಲುವ
ಸುತ್ತ ಹಬ್ಬುವ
ಮಜಲು ಮಹಲು
ಬಾವಿಗಾಲಿಗಳ ಸಿಡಿಮಿಡಿಯ
ಕೂಗುಗಳ ಕೆರೆಗಳ ಮಧ್ಯ

ಸುಡು ಮರಳರಾಶಿಯ ಹರುಹರುಕು ನೆರಳಲ್ಲಿ
ಅರತೆರೆದ ಕಣ್ಣುಗಳ ಕಂದನಿಗೆ
ಹಾಲನೂಡುವ ಅಮ್ಮ
ನಿನ್ನ ಗರ್ಭದ ಗುಪ್ತ ಸಾಮ್ರಾಜ್ಯಗಳಲ್ಲಿ
ನಗರನಾಡುಗಳೆಷ್ಟು ಹೊರಳುತ್ತಿವೆ?

*****

# ರಾಜಕೀಯ

ರಾಜಕಾರಣವೆಂದರೆ ಕೇವಲ ಚುನಾವಣಾ ರಾಜಕೀಯವಲ್ಲ, ಸಂಸ್ಕೃತಿ, ಸಮಾಜ, ಅರ್ಥವ್ಯವಸ್ಥೆ ಮತ್ತು ಗಂಭೀರ ಪರಿಣಾಮ ಬೀರುವ ವ್ಯವಹಾರ ಎನ್ನುವುದು ಒಂದು ವಾಸ್ತವಿಕ ಸಂಗತಿಯಾಗಿದೆ. ಚುನಾವಣಾ ರಾಜಕಾರಣದ ಮೂಲಕ ಅಧಿಕಾರ ವಹಿಸಿಕೊಂಡರೆ ಮಾತ್ರವೇ ಸಾಮಾಜಿಕ ಅಥವಾ ಸಾಂಸ್ಕೃತಿಕ ಬದಲಾವಣೆಗಾಗಿ ಹೋರಾಡಲು ಸಾಧ್ಯವೆಂಬ ಭ್ರಮೆ ರಾಜಕಾರಣಿಗಳಲ್ಲಿ ಸಹಜವಾಗಿ ಬೇರೂರಿದ್ದರೆ ಅನೇಕ ಜನಪರ ಹೋರಾಟಗಳಲ್ಲೂ ಅದು ಮಡುಗಟ್ಟಿದೆ. ಪ್ರಭುತ್ವದ ಕಬಂಧ ಬಾಹುಗಳಲ್ಲಿ ಸಿಲುಕಿದ ನಂತರ ಎಂತಹದೇ ಪ್ರತಿರೋಧದ ದನಿಯೂ ಆಳುವ ವರ್ಗಗಳ ಒಂದು ಭಾಗವಾಗಿ ಪರ್ಯಾವಸಾನ ಹೊಂದುತ್ತದೆ. ಭಾರತದ ಪ್ರಸ್ತುತ ಸಂದರ್ಭದಲ್ಲಿ ಬದಲಾವಣೆ ಏಕಮುಖವಾಗಿ ತೋರುವುದಿಲ್ಲ. ಪ್ರಭುತ್ವ ಮತ್ತು ಆಳುವ ವರ್ಗಗಳು ತಮ್ಮ ಅನುಕೂಲಕ್ಕೆ ತಕ್ಕಹಾಗಿರುವ ಬದಲಾವಣೆಯ ಒಂದು ಆಯಾಮವನ್ನು ಜನರ ಮುಂದಿಡುತ್ತಿರುವ ಸಂದರ್ಭದಲ್ಲಿ ಸಂವಿಧಾನದ ರಕ್ಷಣೆ, ಜನಸಂಸ್ಕೃತಿಯ ರಕ್ಷಣೆ ಹಾಗೂ ಪ್ರಜಾತಂತ್ರ ಮೌಲ್ಯಗಳ ರಕ್ಷಣೆಯನ್ನು ನಾವೇ ಮಾಡಿಕೊಳ್ಳಬೇಕಾದ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗಿದೆ.

ಇಂದು ಇಡೀ ಭಾರತ ಎಲ್ಲಾ ರಾಜ್ಯಗಳಲ್ಲಿ ಜಾತಿನ ಆಧಾರದ ಮೇಲೆ ರಾಜಕಾರಣವನ್ನು ವಿಂಗಡಿಸಿಕೊಳ್ಳುತ್ತಿದೆ. ಅದರೊಳಗೂ ಶ್ರೀಮಂತವರ್ಗ, ಬಡವರ ಮೇಲೆ ಮೋಡಿ ಮಾಡುತ್ತಿದ್ದಾರೆ. ಸ್ವಾತಂತ್ರ್ಯ ಪೂರ್ವದಿಂದಲೂ ಈ ದೇಶದಲ್ಲಿರುವ ಜಾತಿಯ ಸಂಕೋಲೆ ಸ್ವಾಂತ್ರ್ಯೋತ್ತರದಲ್ಲೂ ಯಾಆವ ಬದಲಾವಣೆಯನ್ನು ಪಡೆದುಕೊಂಡಿಲ್ಲ. ಜಾತಿರಾಜಕಾರಣ ರಾಜಕಾರಣಿಗಳ ಅಸ್ತ್ರವಾಗಿದೆ. ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಜನ ಬಹುಪಾಲು ಮುಗ್ಧರಾಗಿದ್ದು, ಅನ್ಯೋನ್ಯವಾಗಿ ಬದುಕುತ್ತಿರುತ್ತಾರೆ. ಆದರೆ ಚುನಾವಣೆ, ಮತದಾನವೆಂದು ಬಂದಾಗ ಮಾತ್ರ ಸಂಘರ್ಷಗಳು ಹಳ್ಳಿಗಳಿಗೂ ವ್ಯಾಪಿಸುತ್ತದೆ. ಚುನಾವಣೆಗಳು ಬಂದಾಗ ಪಕ್ಷಗಳ ಆಧಾರದ ಮೇಲೆ ಮನೆಗಳು ಒಡೆದುಹೋಗುತ್ತವೆ. ಹೀಗೆ ಆಗುವಂತೆ ರಾಜಕಾರಣಿಗಳು ವ್ಯವಸ್ಥಿತವಾಗಿ ಬಲೆಯನ್ನು ಹೆಣೆಯುತ್ತಾರೆ. ಇದರಿಂದಾಅಗಿ ಜಾತಿ, ಧರ್ಮ ಹಾಗೂ ಪ್ರಾದೇಶಿಕವಾದ ಕಂದಕ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ.

ಭಾರತದಲ್ಲಿ ಮನುಷ್ಯ ಕೇವಲ ಪರಿಸತವನ್ನಷ್ಟೇ ಕಲುಷಿತಗೊಳಿಸಿಲ್ಲ ಜೊತೆಜೊತೆಗೆ ಪ್ರತಿಯೊಬ್ಬರ ಮನಸ್ಸಿನಲ್ಲಿ ಸ್ವಾರ್ಥವು ಕಲ್ಮಷದಿಂದ ತುಂಬಿ ತುಳುಕುತ್ತಿದೆ. ಮತ ನೀಡುವಾತ, ಪಡೆಯುವಾತ ಸಂಧಿ ಮಾಡಿಕೊಂಡಿದ್ದಾರೆ. ಮತದಾರನಿಗೆ ತಾನು ಜೀತ ಮಾಡುತ್ತಿದ್ದೇನೆ ಎಂಬ ಸಾಮಾನ್ಯ ಪರಿಜ್ಞಾನವಿಲ್ಲದಂತೆ ಕಾಣುತ್ತದೆ. ಮತ್ತೊಂದು ಆತಂಕಕಾರಿ ವಿಚಾರವೆಂದರೆ ಇತ್ತೀಚೆಗೆ ಶಾಸನಸಭೆಗೆ ಆಯ್ಕೆಯಾಗಿ ಹೋಗುತ್ತಿರುವ ಬಹುಪಾಲು ಮಂದಿಯ ಪೂರ್ವಪರ ಕ್ರಿಮಿನಲ್ ಹಿನ್ನಲೆಯುಳ್ಳದ್ದು. ಭ್ರಷ್ಟರಾಜಕೀಯ

ವ್ಯವಸ್ಥೆಯಲ್ಲಿ ಹಣಚೆಲ್ಲಿ ಪಕ್ಷಪಕ್ಷಗಳಲ್ಲಿ ಅಧಿಕಾರ ಹುಡುಕುತ್ತಾ ಮನುಷ್ಯರ ನೆತ್ತರನ್ನು ಹೀರಿ ಅಧಿಕಾರ ಹಿಡಿಯುವ ನರಭಕ್ಷಕರು; ಪ್ರಜಾಭಕ್ಷಕರು.

ಭಾರತದ ಮತದಾರರು ಅದರಲ್ಲೂ ಯುವಜನತೆ ಈ ವಾಸ್ತವಾಂಶವನ್ನು ಅರ್ಥಮಾಡಿಕೊಳ್ಳಬೇಕು. ಒಂದು ದಿನದ ಆಸೆ ಆಮಿಷಗಳಿಗೆ ಬಲಿಯಾಗದೇ ಭಾರತದ ಭವ್ಯಭವಿಷ್ಯಕ್ಕೆ ಯೋಗ್ಯರಾಜಕಾರಣಿಗಳನ್ನು ಗೆಲ್ಲಿಸುವುದರ ಮೂಲಕ ರಾಜಕಾರಣ ಸ್ವಚ್ಛಗೊಳಿಸಬೇಕು.

*****

## ೧. ನರಗುಂದ ಬಂಡಾಯ

**ಜನಪದ**

ಕೆಂಪ ಕೆಂಪನ್ನವರ ಕೆಂಪ ಡಬಲೀಯ
ಕೆಂಪನ್ನ ಮಾರಿ ಮುಸಲರ ಕೋಲ ॥೧॥

ಕೆಂಪನ್ನ ನೀಮಾರಿ ಮುಸಲರ
ಕೆರಿಯಾಗ ತೋಪ ಇಳದಾವ ಕೋಲ ॥೨॥

ಕರಿಯ ಕರಿಯನ್ನವರ ಕರಿಯನ್ನಮಾರಿ
ಕರ್‍ರನ ಮಾರಿ ಮುಸಲರ ಕೋಲ ॥೩॥

ಕರ್‍ರನ ನೀ ಮಾರಿ ಮುಸುಲರು ನರಗುಂದ
ಕೆರಿಯಾಗ ತೋಪ ಇಳದಾರ ॥೪॥

ಶೆಟ್ಟರ ಊರವರ ಗಟ್ಟದ ಹಳ್ಳಿಯವರ
ಬಟ್ಟೀಲಿ ಗಂಧವ ಸವರವರ ಕೋಲ ॥೫॥

ಬಟ್ಟೀಲಿ ಗಂಧವ ಸವರವರ ನನ್ನ ನರಗುಂದ
ಶೆಟ್ಟರು ಹೊಂಟಾರ ಕದನಕ ಕೋಲ ॥೬॥

ಹಳ್ಳಿಯ ಊರವರ ಕೊಳ್ಳಿ ಬೆಳಕಿನವರ
ಬಳ್ಳೀಲಿ ಗಂಧವ ಸವರವರ ಕೋಲ ॥೭॥

ಬಳ್ಳೀಲಿ ನೀ ಗಂಧವ ಸವರವರ ನನ್ನ ನರಗುಂದ
ಕಳ್ಳರು ಹೊಂಟಾರ ಕದನಕ ಕೋಲ ॥೮॥

ಗಂಜೀಯ ರುಮಾಲ ಹೊಂದಿಸಿ ಸುತ್ತಲಿಲ್ಲ
ಬಂಗಾರದ ಗೋಲ ಇಡಲಿಲ್ಲ ಕೋಲ ॥೯॥

ಬಂಗಾರದ ಗೋಲ ಇಡಲಿಲ್ಲ ಅಪ್ಪಾಸಾಬ
ಬಂದ ನರಗುಂದ ಹೊಗಲಿಲ್ಲ ಕೋಲ ॥೧೦॥

ದಿಕ್ಕ ದಿಕ್ಕಿನಗಾಳಿ ದಿಕ್ಕೆಟ್ಟ ಹೊಡೆದಾಗ
ದಿಕ್ಕೀನ ದಕ್ಕಾತ ನರಗುಂದ ಕೋಲ ॥೧೧॥

ದಿಕ್ಕಾನ ದಿಕ್ಕಾತ ನರಗುಂದ
ದಿಕ್ಕೀಗಿ ಬಾಯಿ ಬಡತಾನ ಕೋಲ ॥೧೨॥

ತಾಸ ತಾಸಿನ ಗಾಳಿ ತಾನೆಟ್ಟ ಹೊಡೆದಾಗ
ಗಾಲ ಮೇಲಾತ ನರಗುಂದ ಕೋಲ ॥೧೩॥

ಗಾಲ ಮೇಲಾತ ನರಗುಂದ ಅಪ್ಪಾಸಾಬ
ಗಾಳಿಗೆ ಬಾಯಿ ಬಿಡತಾನ ಕೋಲ ॥೧೪॥

ಮುತ್ತಿನ ಪಾಲಕಿ ಮುತ್ತ ಗುಡ್ಡೇದ ಸೀರಿ
ಮುತ್ತೆಲ್ಲ ಒಡದ ನುರಿನುರಿಯ ಕೋಲ ॥೧೫॥

ಮುತ್ತೆಲ್ಲ ಒಡದ ನುರಿ ನುರಿಯ ನನ ನರಗುಂದ
ಮುತ್ತೈದಿಯರೆಲ್ಲ ಕೈ ಸೆರಿಯ ಕೋಲ ॥೧೬॥

ಹವಳದ ಪಾಲಕಿ ಹವಳ ಗುಡ್ಡಾನೇರಿ
ಹವಳೆಲ್ಲ ಒಡದ ನುರಿನುರಿಯ ಕೋಲ ॥೧೭॥

ಹವಳೆಲ್ಲ ಒಡದ ನುರಿ ನುರಿಯ ನನ್ನ ನರಗುಂದ
ಹರದೆರೆಲ್ಲಾ ಕೈ ಸೆರಿಯ ಕೋಲ ॥೧೮॥

ಅತ್ತಿ ಸೊಸ್ತೇರು ಕೂಡಿ ಜತ್ತೀಲಿ ಮಾತಾಡಿಕೊಂಡು
ಹೊರಿಳಿಯ ಮುಳಗ್ಯಾರ ಕೋಲ ॥೧೯॥

ಹೊತ್ತೇರಿ ಹೊಳಿಯ ಮುಳಗ್ಯಾರ ನನ ನರಗುಂದ
ಮುತ್ತೀಗಿ ಬಂದದ್ದು ಅರಿಯಾರು ಕೋಲ ॥೨೦॥

ನರಗುಂದ ಹಾಳಾತ ದೇಶಕ ವಾಯನಾತ
ಸುತ್ತೀನ ಹಳ್ಳೀಗೆ ಸುಸರ‍್ಯಾತ ಕೋಲ ॥೨೧॥

ಸುತ್ತೀನ ಹಳ್ಳೀಗೆ ಸುಸರ‍್ಯಾತ ನವಲಗುಂದ
ಅಗಸಿಯ ಬಾಗಿಲಿಗೆ ಕದವಾಡ ಕೋಲ ॥೨೨॥

*****

## ೨. ಅನಾಮಿಕ ಆಂಗ್ಲರು

**– ಕೆ.ಎಸ್. ನಿಸಾರ್ ಅಹಮದ್**

೧

ಇಂದಿನ ಸಜೀವತೆಯಿಂದ
ಮರವಟ್ಟಿ ಲಕ್ಷೋಪಲಕ್ಷ ನೆನ್ನೆ ಮೊನ್ನೆಗಳ
ನಾಲ್ಕು ಮುದಿಗೋಡೆಗಳ ಮುಖೇನ
ಬೇರ್ಪಡಿಸಿಕೊಂಡಿದೆ
–ಶ್ರೀರಂಗಪಟ್ಟಣದ ಭಗ್ನಾವಶೇಷಗಳ
ಅನಾಥ ಮೌನ.
ಹೆದ್ದಾರಿ ಬದಿಗೆ
ಕಾವೇರಿ ನದಿಗೆ
ಕರೆದೊಯ್ವ ಕಾಲುಹಾದಿಯ ತುದಿಗೆ
ಧುತ್ತೆಂದು ಕಂಡಿದೆ ನನಗೆ,
ಇತಿಹಾಸದಪಹಾಸ್ಯದಂತೆ
ಆಂಗ್ಲರ ಶ್ಮಶಾನ;
ಅರೆ ಎಕರೆ ಖುಷ್ಕಿ ನೆಲ ಕವುಚಿ ಹಿಡಿದಿರುವೆರಡು
ಶುಷ್ಕ ಶತಮಾನ.

೨

ಹಾಡು ಹಗಲಿಗೆ ಇಲ್ಲಿ ನಟ್ಟಿರುಳ ಚಹರೆ
ಬಾವಲಿಯ ಜೊತೆ ಹಲ್ಲಿ, ಹಾವು, ಚೇಳಿನ ಪಹರೆ;
ಗೋರಿಗಲ್ಲಿನ ಮಾಸಿದಕ್ಷರದ ಮೇಲೆಲ್ಲ
ಕಾಲರಾಯನ ಕೋರೆಹಲ್ಲು ಒತ್ತಿದ ಮೊಹರೆ.
ಮೈ ಮೇಲೆ ಹೇರಿರಲು ವರ್ತಮಾನದ ವಜನ
ಒಳಗೆ ಒರಗಿದ್ದಾರೆ ತರಾವರಿ ಬಿಳಿಯ ಜನ;
ಪಿಡುಗಿಂದ ಪೌರರನು ಪಾರುಗೊಳಿಸಲು ನುಗ್ಗಿ

ಪಿಡುಗಿಗಾಹುತಿಯಾಗಿ ಕಂತೆಯೊಗೆದವರು;
ಸಾಮ್ರಾಜ್ಞಿ ಸೇವೆಯಲಿ ಸರ್ವತ್ರ ಸವೆಸವೆದು
ತಾಯ್ನೆಲಕೆ ಹಿಂದುರುಗಿ ಭೇಟಿಯಾಗದೆ ಅವಳ,
ಸ್ವರ್ಗದ ಮುಲಾಖಾತಿಗಾಗಿ ಹಾತೊರೆದವರು.

ಪರದೇಶದಲಿ ಜನಿಸಿ ಪರಾಧೀನರಾಗಿಲ್ಲಿ
ಪರದೇಶಿಯಾದಂಥ ವಿದೇಶೀಯರು;
ವೇಲ್ಸ್, ಎಸ್ಸೆಕ್ಸ್,
ಯಾರ್ಕ್‌ಷೈರ್, ಸಸೆಕ್ಸಿನ ಬಡಪಾಯಿಗಳು;
ಸ್ಕಾಟಿಶ್ ಸಿಪಾಯಿಗಳು;
ಸಾಮ್ರಾಜ್ಯ ವಿಸ್ತರಣದಾಟದಲಿ ಅತಿಬಳಸಿ
ಬಿಸುಟಿರುವ ಕಾಯಿಗಳು.
–ಒರಗಿದ್ದಾರೆ ನಾನಾ ನಮೂನೆ ಜನ;
ಹೇರಿರಲು ಮೈ ಮೇಲೆ
ವರ್ತಮಾನದ ವನಜ

೩

ನನ್ನ ಚಪ್ಪಲಿ ತಾಕಿ
ಸರಸರನೆ ಅಲುಗಾಡಿ
ಶತಕಗಳ ನೀರವವ ಕದಲಿಸಿದ ತರಗೆಲೆಯು
ಮೇಲೆ ಮೆಲ್ಲಡಿಯಿಟ್ಟು ಮುಂದುವರಿಯುತ್ತೇನೆ–
ತಡೆ ತಡೆದು
ಜೀವ ಕೈಯಲಿ ಹಿಡಿದು.
ಈ ಅನಾಮಿಕ ಮೃತರ
ಬೇನಾಮಿ ನಾಮಗಳ,
ಕುಲಗೋತ್ರ, ತೇದಿಗಳ

ಪಟ್ಟಿ ಮಾಡುತ್ತೇನೆ;
ಭೂತವನು ಕ್ಷಣಕಾಲ ವರ್ತಮಾನಿಸುವಂತೆ
ಫೋಟೋ ಹಿಡಿಯುತ್ತೇನೆ.
ನನ್ನ ದೇಶದೊಳಿದ್ದೂ ಪರದೇಶಿಯಾದವರ;
ಇಂಡಿಯಾದಲ್ಲೊಂದು ಇಂಗ್ಲೆಂಡು ಸ್ಥಾಪಿಸಲು
ಹೆಣಗಿ, ಹುಟ್ಟು ನೆಲಕ್ಕು ಹೊರತಾಗಿ ಉಳಿದವರ;
ಕಾಲ ದೇಶದುಪೇಕ್ಷೆಗೊಳಗಾದ ಪ್ರೇಕ್ಷಕರ–
ಅವರ ಪಾಲಿಗೆ,
ಹಾವು ಚೇಳಿಗೆ
ಬಿಟ್ಟು, ಗೋಡೆ ದಾಟುತ್ತೇನೆ;
ಕರವಸ್ತ್ರಕಾಗಿ ಕಿಸೆಯ ಹುಡುಕುತ್ತೇನೆ.

*****

# ೩. ಕಲೆ ಮತ್ತು ಪ್ರಭುತ್ವ

**– ಡಾ. ಬಂಜಗೆರೆ ಜಯಪ್ರಕಾಶ್**

ಕಲೆ ಮತ್ತು ಪ್ರಭುತ್ವಕ್ಕೆ ಒಂದು ಹುಟ್ಟಾ ವಿರೋಧವಿದೆ. ಗೂಗಿ ವಾ ಥಿಯಾಂಗೋ ತನ್ನ 'ಪೆನ್ ಪಾಯಿಂಟ್ಸ್, ಗನ್ ಪಾಯಿಂಟ್ಸ್ ಅಂಡ್ ಡ್ರೀಮ್ಸ್' ಕೃತಿಯಲ್ಲಿ ಇದನ್ನು ಎರಡು ಅಂಶಗಳ ಮೂಲಕ ವಿವರಿಸುತ್ತಾನೆ.

ಪ್ರಭುತ್ವವೆಂಬುದು ಯಾವುದೇ ಇರಲಿ ತನ್ನ ಸ್ವಭಾವದಿಂದಲೇ ಅದು ಯಥಾಸ್ಥಿತಿವಾದಿ, ಸಮಾಜದೊಳಗೆ ಪರಸ್ಪರ ಸಂಘರ್ಷದಲ್ಲಿರುವ ಹಿತಾಸಕ್ತಿಗಳ ನಡುವೆ ಅದು ಒಂದು ಸ್ಥಿರತೆಯನ್ನು ಉಂಟುಮಾಡಲು ಪ್ರಯತ್ನಿಸುತ್ತದೆ. ಕಡೆಗೆ ಕ್ರಾಂತಿಕಾರಿ ಪರಿಸ್ಥಿತಿಯಲ್ಲಿ ಏರ್ಪಡುವ ಪ್ರಭುತ್ವವೂ ಕೂಡ ಹಳೆಯ ಆಳ್ವಿಕೆ ಹಾಗೂ ಸಾಂಸ್ಥಿಕ ರಚನೆಗಳೊಂದಿಗೆ ಇರುವ ವೈರುಧ್ಯಗಳನ್ನು ಬಗೆಹರಿಸಿಕೊಂಡ ತಕ್ಷಣ ತನ್ನ ಹೊಸ ಸಾಂಸ್ಥೀಕರಣಗಳನ್ನು ಸದೃಢಗೊಳಿಸಲು ತೊಡಗುತ್ತದೆ.

ಗೂಗಿಯ ಪ್ರಕಾರ ಯಾವುದೇ ಪ್ರಭುತ್ವ ನಿರಂತರವಾಗಿ ಕ್ರಾಂತಿಯಲ್ಲಿರಲು ಸಾಧ್ಯವಿಲ್ಲ. ಕಲೆ ಎಂಬುದು ಅದರ ಸ್ವಭಾವದಿಂದಲೇ ಕ್ರಾಂತಿಕಾರಿ. ತನ್ನನ್ನು ಅದು ಸದಾ ನವೀಕರಿಸಿಕೊಳ್ಳಬಯಸುತ್ತದೆ. ಕಲಾವಿದನೊಬ್ಬ ತನ್ನ ಕೃತಿಗಳಲ್ಲಿಯೂ ಭಿನ್ನ ಬಗೆಯ ಅಭಿವ್ಯಕ್ತಿಯನ್ನು ಕಂಡುಕೊಳ್ಳುವ ಪ್ರಯತ್ನ ನಿರಂತರವಾಗಿರಿಸಿರುತ್ತಾನೆ.

ವಸ್ತುವಿಗೆ ಸಂಬಂಧಪಟ್ಟಂತೆ ಕಲೆ ಕೇವಲ 'ಅದು ಹೇಗಿದೆಯೋ ಹಾಗೆ' ಮಾತ್ರ ಗ್ರಹಿಸಲು ಪ್ರಯತ್ನಿಸುವುದಿಲ್ಲ. ಬದಲಾಗಿ ಅದು ಹೇಗೆಲ್ಲ ಇರಬಲ್ಲದು ಎಂಬುದನ್ನು ಗ್ರಹಿಸಲು ಬಹಳ ಮುಖ್ಯವಾಗಿ ಪ್ರಯತ್ನಿಸುತ್ತದೆ. ಹಾಗಾಗಿಯೇ ಅರಿಸ್ಟಾಟಲ್ ತನ್ನ 'ಪೊಯಟಿಕ್ಸ್' ಕೃತಿಯಲ್ಲಿ ಕಾವ್ಯವೆಂಬುದು ಚರಿತ್ರೆಗಿಂತ ಹೆಚ್ಚು ಸಾರ್ವತ್ರಿಕವಾದುದಾಗಿದೆ. ಚರಿತ್ರೆಯು ವಿದ್ಯಮಾನಗಳನ್ನು ಹೇಗಿವೆಯೋ ಹಾಗೆ ಪರಿಶೀಲಿಸುತ್ತದೆಯಾದರೆ ಕಲೆಯು ವಿದ್ಯಮಾನಗಳನ್ನು ಹೇಗಿರಬಲ್ಲವು ಎಂಬ ನೆಲೆಯಲ್ಲಿ ಪರಿಶೀಲಿಸುತ್ತದೆ ಎನ್ನುತ್ತಾನೆ. ಬೇರೆ ಮಾತುಗಳಲ್ಲಿ ಹೇಳಬೇಕೆಂದರೆ ಕಲೆ ವಸ್ತುಸ್ಥಿತಿಯನ್ನು ಸಾಧ್ಯತೆಗಳ ನೆಲೆಯಲ್ಲಿ ಪರಿಶೀಲಿಸುತ್ತದೆ.

ಕಲೆ ಎಂಬುದು ತನ್ನ ಪರಿಪೂರ್ಣತೆಗಾಗಿ, ವಸ್ತು ಮತ್ತು ವಿನ್ಯಾಸದ ಆದರ್ಶವಾದಿ ಸಮೈಕ್ಯತೆಗಾಗಿ ಪ್ರಯತ್ನಿಸುತ್ತದೆ. ಆದರೆ ವಸ್ತುವನ್ನು ಕುರಿತಂತೆ ಅದು ಯಾವಾಗಲೂ ಸ್ಥಗಿತವಲ್ಲ. ಅದು ನಿರಂತರವಾಗಿ ಬದಲಾಗುತ್ತಿರುತ್ತದೆ. ನಿರಂತರ ಬದಲಾಗುವ ವಸ್ತುಸ್ಥಿತಿಯ ಸಾರಾಂಶವನ್ನು ಪರಿಗ್ರಹಿಸಲು ಕಲೆಯು ಯತ್ನಿಸುತ್ತದೆ. ಚಲನೆಯನ್ನು ಸಂಭ್ರಮಿಸುತ್ತದೆ.

ಕಲೆ ಎಂಬುದು ಚಲನೆಯೊಳಗಿನ ಸ್ಥಗಿತತೆ ಹಾಗೂ ಸ್ಥಗಿತತೆಯೊಳಗಿನ ಚಲನೆ. ಆದರೆ ಪ್ರಜಾಪ್ರಭುತ್ವವೆಂಬುದು ವಸ್ತುಸ್ಥಿತಿಯ ಪರಿಪೂರ್ಣತೆಗಾಗಿ ಪ್ರಯತ್ನಿಸುತ್ತದೆ. ಉದಾಹರಣೆಗೆ ನ್ಯಾಯಾಂಗ ವ್ಯವಸ್ಥೆ. ಬದಲಾಗುತ್ತಿರುವ ವಸ್ತುಸ್ಥಿತಿಯೊಂದಿಗೆ ಅದು ಸಂಘರ್ಷದಲ್ಲಿದ್ದರೂ ಕೂಡ ಅದನ್ನು ನೆಲೆಗೊಳಿಸುವ ದಿಸೆಯಲ್ಲಿ ಪ್ರಭುತ್ವದ ಪ್ರಯತ್ನ ಸಾಗುತ್ತದೆ. ಅದು ಚಲನೆಯನ್ನು ಬಂಧಿಸಿಡಲು ಪ್ರಯತ್ನಿಸುತ್ತದೆ. ವಸ್ತುಸ್ಥಿತಿಯ ಪುನರಾವರ್ತನೆಯನ್ನು ಬಯಸುತ್ತದೆ. ಚಲನೆರಹಿತವಾದ ಸ್ಥಗಿತತೆ ಎಂಬುದು ಪ್ರಭುತ್ವದ ಕಲೆಯ ತಿರುಳು.

ಆದರೆ ಕಲೆ, ಆಲೋಚನೆ, ಪ್ರಕೃತಿ, ಜೀವನ ಮುಂತಾದವುಗಳಿಗೆ ಚಲನೆಯ ಪರಿಕಲ್ಪನೆಯೇ ಕೇಂದ್ರಬಿಂದು. ಹಾಗಾಗಿ ಬದುಕಿನ ಎಲ್ಲಾ ರಂಗಗಳ ಅಂತಿಮ ಪರಿಪೂರ್ಣತೆಯನ್ನು ಪ್ರತಿಪಾದಿಸುವ ಪ್ರಭುತ್ವದೊಂದಿಗೆ ಅದು ಸಂಘರ್ಷದಲ್ಲಿದೆ.

'ಜನ ಇದಕ್ಕಿಂತ ಹೆಚ್ಚಿನದೇನನ್ನು ನಿರೀಕ್ಷಿಸುತ್ತಾರೆ?' ಎಂಬುದು ಬಹಳ ಸಲ ಪ್ರಭುತ್ವದ ನಾಯಕರಿಂದ ನಾವು ಕೇಳಿಸಿಕೊಳ್ಳುವ ಮಾತು. ಈ ಬಗೆಯಲ್ಲಿ ಒಂದು 'ಅಂತಿಮ' ನೆಲೆಯನ್ನು ತಲುಪಿರುವ ಮನೋಸ್ಥಿತಿಯೇ ಬಹಳ ಅಪಾಯಕಾರಿಯಾದದ್ದು. ಯಾಕೆಂದರೆ ಅದು ತನ್ನೊಳಗೆ ಒಂದು ನಿರಂಕುಶಾಧಿಕಾರದ ಹಾಗೂ ಅಸಹಿಷ್ಣುತೆಯ ಮನೋಭಾವದ ಭ್ರೂಣವನ್ನು ಒಳಗೊಂಡಿದೆ.

ಈ ಮನೋಭಾವ ಪ್ಲೇಟೋನ ಆದರ್ಶ ಗಣರಾಜ್ಯದಲ್ಲಿ ಪ್ರತಿಬಿಂಬಿಸಲ್ಪಟ್ಟಿದೆ. ಆತನ ಪ್ರಕಾರ ಕಲಾವಿದರ ಅನಿಯಂತ್ರಿತ ಹುಚ್ಚು ಮನೋಕಲ್ಪನೆಗಳಿಂದ ಅಪಾಯಕ್ಕೊಳಗಾಗುವ ಸ್ಥಿರತೆಯನ್ನು ಕಾಪಾಡುವುದಕ್ಕಾಗಿ ಗಣರಾಜ್ಯದಿಂದ ಅಂತಹವರಿಂದ ಹೊರಗಿಡಬೇಕು.

ಒಂದು ಪ್ರಭುತ್ವವೆಂಬುದು ಹೆಚ್ಚು ಸಾಂಪ್ರದಾಯಿಕ ಹಾಗೂ ನಿರಂಕುಶವಾದಂತೆಲ್ಲಾ ಅದು ಸಾಮಾಜಿಕ ನೈತಿಕತೆಯ ಬಗ್ಗೆ ಹುಟ್ಟುವ ಆಗ್ರಹಗಳ ಬಗ್ಗೆ ಸದಾ ಅಸಹಿಷ್ಣುವಾಗಿರುತ್ತದೆ. ಆದರೆ ಕಲೆ ಎಂಬುದು ಪ್ರಸ್ತುತ ಪರಿಸ್ಥಿತಿಯ ಎಲ್ಲಾ ಮಿತಿಗಳನ್ನೂ ನೆನಪಿಸುವುದಕ್ಕೆ ಹುಟ್ಟಿಕೊಂಡಂತಿರುತ್ತದೆ. ವಸಾಹತುಶಾಹಿ ಹಾಗೂ ನವವಸಾಹತುಶಾಹಿ ಪ್ರಭುತ್ವಗಳು ನಿರಂಕುಶಾದಿಕಾರದ ಬೇರೆ ಬೇರೆ ಪ್ರತಿರೂಪಗಳಾಗಿದ್ದು, ಬದಲಾವಣೆಯನ್ನು ಪ್ರತಿಪಾದಿಸುವ ಯಾವುದೇ ಕಲೆ ಅದರೊಂದಿಗೆ ಅನಿವಾರ್ಯವಾಗಿ ಸಂಘರ್ಷಕ್ಕೆ ಬೀಳುತ್ತದೆ.

ಪರಿಪೂರ್ಣ ಕಲೆ ಎಂಬುದು ಪರಿಪೂರ್ಣ ಸಂಕ್ರಮಣದ ಪರವಾಗಿದ್ದರೆ, ಅಂದರೆ ಜೀವನಪರವಾಗಿದ್ದರೆ ಪರಿಪೂರ್ಣ ಪ್ರಭುತ್ವವೆಂಬುದು ಪರಿಪೂರ್ಣ ಸ್ಥಗಿತತೆಯ ಅಂದರೆ, ಮರಣದ ಪರವಾಗಿರುತ್ತದೆ.

ಕಲೆಗೆ ಇರುವ ಎರಡನೇ ಸ್ವಭಾವವನ್ನು 'ಸಾಕ್ರಟಿಕ್ ಸ್ವಭಾವ' ಎಂದು ಕರೆಯುತ್ತಾನೆ ಗೂಗಿ. ನೀವು ಆ ಕತೆಯನ್ನು ತಿಳಿದಿರಬಹುದು. ಒಮ್ಮೆ ಅವನ ಬಾಲ್ಯ ಸ್ನೇಹಿತನೊಬ್ಬ ಅಶರೀರವಾಣಿಯ ಮುಖಾಂತರ ತಿಳಿದುಕೊಂಡನಂತೆ–ಸಾಕ್ರಟೀಸ್ನಿಗಿಂತ ಬುದ್ಧಿವಂತರಾದವರು ಬೇರೊಬ್ಬರಿಲ್ಲ ಎಂದು. ಇದನ್ನು ಕೇಳಿಸಿಕೊಂಡ ಸಾಕ್ರಟೀಸ್ ಅದನ್ನು ನಂಬಿಕೊಳ್ಳದೆ ಅತ್ಯಂತ ಬುದ್ಧಿವಂತರು ಎನಿಸಿಕೊಂಡವರನ್ನು ಪ್ರಶ್ನಿಸುವುದರಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಾನೆ. ಇದರ ಮುಖಾಂತರ ಆತ ಕಂಡುಕೊಳ್ಳುವುದೇನೆಂದರೆ, ತಾನು ತನಗಿರುವ ಅಜ್ಞಾನದ ಬಗ್ಗೆ ಪ್ರಜ್ಞಾವಂತನಾಗಿದ್ದೇನೆ. ಬುದ್ಧಿವಂತರೆನಿಸಿಕೊಂಡ ಬಹಳಷ್ಟು ಜನ ತಮ್ಮ ಅಜ್ಞಾನದ ಬಗ್ಗೆ ಪ್ರಜ್ಞಾವಂತರಾಗಿಲ್ಲ. ಆದ್ದರಿಂದ ತನ್ನ ಅಜ್ಞಾನವನ್ನು ಗುರುತಿಸಿಕೊಂಡಿರುವ ಸಾಕ್ರಟೀಸ್ ಹೆಚ್ಚೆಚ್ಚು ತಿಳಿದುಕೊಳ್ಳಲು ಪ್ರಯತ್ನಿಸುತ್ತಿರುವುದರಿಂದ ಅವನು ಬೇರೆ ಬುದ್ಧಿವಂತರಿಗಿಂತ ಜಾಣನಾಗಿದ್ದಾನೆ.

ನಿಜವಾಗಲೂ ಬುದ್ಧಿವಂತರು ಯಾರೆಂದರೆ ನಿಜವಾದ ಜ್ಞಾನದ ಎದುರು ತೃಣ ಮಾತ್ರರೆಂದು ಅರಿತುಕೊಂಡವರು. ಸಮಸ್ಯೆ ಏನೆಂದರೆ, ಈ ಬಗೆಯ ಪ್ರಶ್ನೆಗಳಿಂದ ಸಾಕ್ರಟೀಸ್ ಬಹಳಷ್ಟು ವಿರೋಧವನ್ನು ಕಟ್ಟಿಕೊಂಡ. ಆತನ ಮೇಲೆ ಏರ್ಪಟ್ಟ ಆರೋಪವೇನೆಂದರೆ, "ಅವನು ಈ ಭೂಮಿ ಮೇಲಿರುವ ಎಲ್ಲ ವಿಷಯಗಳ ಬಗ್ಗೆ ತನಿಖೆ ಮಾಡುತ್ತಾನೆ ಹಾಗೂ ದುರ್ಬಲ ವಾದಗಳನ್ನು ಮಂಡಿಸಿ ಬಲಿಷ್ಠರನ್ನು ಸೋಲಿಸುತ್ತಾನೆ".

ಅಥೆನ್ಸ್‌ನ ಪ್ರಭುತ್ವದೆದುರು ಅವನ ವಿರೋಧಿಗಳು ಮಂಡಿಸಿದ ಆಪಾದನೆಯ ಮತ್ತೊಂದು ಮುಖವೇನೆಂದರೆ 'ಸಾಕ್ರಟೀಸ್ ಯುವ ಮನಸ್ಸುಗಳನ್ನು ಭ್ರಷ್ಟಗೊಳಿಸುತ್ತಿದ್ದಾನೆ ಹಾಗೂ ಪ್ರಭುತ್ವ ಗುರುತಿಸಿರುವ ದೇವತೆಗಳ ಬದಲು ತಾನೇ ಸೃಷ್ಟಿಸಿರುವ ದೇವರುಗಳಲ್ಲಿ ನಂಬಿಕೆ ಹುಟ್ಟಿಸಲು ಪ್ರಯತ್ನಿಸುತ್ತಿದ್ದಾನೆ ಮತ್ತು ಪ್ರಶ್ನೆಗಳನ್ನು ಕೇಳುವಾಗ ತನ್ನ ಪ್ರಜ್ಞೆಯ ಆದೇಶಗಳನ್ನು ಮಾತ್ರ ಅನುಸರಿಸುತ್ತಾನೆ'.

ಸಾಕ್ರಟೀಸ್ ತನ್ನ ಪ್ರತಿವಾದದಲ್ಲಿ ಹೀಗೆ ಹೇಳಿದ : 'ಈ ಸಮಾಜವೆಂಬುದು ಬೃಹತ್ತಾಗಿ ಬೊಜ್ಜು ಬೆಳೆಸಿಕೊಂಡಿರುವ ಕುದುರೆಯಂತಾಗಿದೆ. ತನ್ನ ಬೊಜ್ಜಿನಿಂದಾಗಿ ಅದು ಸೋಮಾರಿಯಾಗಿದ್ದು ಕಡಜವೊಂದು ಕಚ್ಚಿದಾಗ ಮಾತ್ರ ಕದಲುವುದಕ್ಕೆ ಪ್ರಯತ್ನಿಸುತ್ತದೆ. ದೇವರು ನನಗೆ ಆ ಕಡಜದ ವಹಿಸಿದ್ದಾನೆಂದು ಕಾಣುತ್ತದೆ. ಆದ್ದರಿಂದ ನಿಮ್ಮಲ್ಲಿ ಎಲ್ಲರನ್ನೂ ಎಚ್ಚರಿಸುವವರೆಗೆ, ಪ್ರೇರೇಪಿಸುವವರೆಗೆ ನಾನು ಸುಮ್ಮನಾಗುವುದಿಲ್ಲ.'

ಸಾಕ್ರಟೀಸ್ ತನ್ನ ಪ್ರವೃತ್ತಿಯನುಸಾರ ಪ್ರಶ್ನೆಗಳನ್ನು ಕೇಳುವವನಾಗಿದ್ದ. ಅದಕ್ಕಾಗಿ ಪ್ರಭುತ್ವ ಅವನಿಗೆ ವಿಷ ಕುಡಿಯಲು ಆದೇಶಿಸಿತು. ತನ್ನ ಪ್ರಶ್ನೆ ಕೇಳುವ ಹಕ್ಕಿಗಾಗಿ ಸಾಕ್ರಟೀಸ್ ಹೆಮ್ಲಾಕ್ ವಿಷವನ್ನು ಕುಡಿದ.

ಸಾಕ್ರಟೀಸ್ ಉತ್ತರಗಳ ಮೇಲೆ ತನಗಿದ್ದ ಸ್ವಾಮ್ಯಕ್ಕಾಗಿ ವಿಷ ಕುಡಿಯಲಿಲ್ಲ, ಬದಲಾಗಿ ತನ್ನ ಪ್ರಶ್ನೆ ಕೇಳುವ ಹಕ್ಕಿಗಾಗಿ ವಿಷ ಕುಡಿದ, ಸಾಕ್ರಟೀಸ್ ಒಂದು ವಿಧದಲ್ಲಿ ನಮ್ಮ ಸಮಾಜದ ಕಲಾವಿದರ ಸ್ಥಾನಕ್ಕೆ ಪ್ರತೀಕವಾಗಿದ್ದಾನೆ.

ಕಲೆ ಎಂಬುದು ಪ್ರಶ್ನೆಗಳಿಗೆ ಉತ್ತರ ಕೊಡುವುದಕ್ಕಿಂತ ಹೆಚ್ಚಾಗಿ ಪ್ರಶ್ನೆಗಳನ್ನು ಹುಟ್ಟಿಸುತ್ತದೆ. ಕಲೆ ತನಗೆ ಗೊತ್ತಿಲ್ಲದಿರುವ ಬಿಂದುವಿನಿಂದ ಗೊತ್ತಾಗಬೇಕಿರುವ ನೆಲೆಯ ಕಡೆಗೆ ತನ್ನನ್ನು ನಿರ್ದೇಶಿಸಿಕೊಳ್ಳುತ್ತದೆ. ಆದ್ದರಿಂದ ಅದಕ್ಕೆ ಒಂದು ಪರಿಶೀಲನಾತ್ಮಕ ಸ್ವಭಾವವಿದೆ. ಸರಿಯಾಗಿ ಹೇಳಬೇಕೆಂದರೆ ಕಲೆ ಉತ್ತರಗಳನ್ನು ಹೊಂದಿರುವುದು ಕಡಿಮೆ. ಅದರ ಪ್ರಶ್ನೆಗಳೊಳಗೆ ಕೆಲವು ಸಲ ಉತ್ತರಗಳೆಂಬವು ಅಡಗಿಸಲ್ಪಟ್ಟಿರಬಹುದು. ಹಾಗೆಯೇ ಕೆಲವು ಸಲ ಉತ್ತರಗಳೆಂಬವು ಅಡಗಿಸಲ್ಪಟ್ಟಿರಬಹುದು. ಹಾಗೆಯೇ ಕೆಲವು ಸುಳಿಗಳಿರಬಹುದು, ಹಾಗೆಯೇ ಸಾಧ್ಯತೆಗಳ ಹೊಳಹುಗಳಿರಬಹುದು. ಆದರೆ ಖಂಡಿತವಾಗಿ ನಿಶ್ಚಿತಾರ್ಥಗಳಿಲ್ಲ.

ಆದ್ದರಿಂದ ಸಾಹಿತ್ಯದ ಪ್ರಶ್ನೆಗಳೆಂಬವು ಬಹಳ ಸಲ ನಮ್ಮ ದೈನಿಕದ ಮಾತುಗಳಂತೆ, ನೀವು ಹೇಗಿದ್ದೀರಿ? ಏನು ಮಾಡುತ್ತಿದ್ದೀರಿ? ಎಲ್ಲಿಗೆ ಹೋಗುತ್ತಿದ್ದೀರಿ? ಮುಂತಾಗಿ, ಮುಖ್ಯವಾಗಿ ಈ ಪ್ರಶ್ನೆಗಳಿಗೆ ಉತ್ತರ ಪ್ರಶ್ನೆ ಕೇಳಿಸಿಕೊಳ್ಳುವವನಲ್ಲಿದೆ. ಇದಕ್ಕೆ ತದ್ವಿರುದ್ಧವಾಗಿ ಪ್ರಭುತ್ವದ ಬಳಿ ಹೇರಳವಾದ ಉತ್ತರಗಳಿವೆ, ಆದರೆ ಪ್ರಶ್ನೆಗಳು ಬಹಳ ಕಡಿಮೆ. ಪ್ರಭುತ್ವ ಹೆಚ್ಚು ನಿರಂಕುಶವಾದಂತೆಲ್ಲಾ ತನ್ನನ್ನು ತಾನು ಪ್ರಶ್ನಿಸಿಕೊಳ್ಳುವುದನ್ನು, ಹಾಗೆಯೇ ಇತರರು ಪ್ರಶ್ನಿಸುವುದನ್ನು ನಿಲ್ಲಿಸಬಯಸುತ್ತದೆ.

ಅಥೆನ್ಸ್‌ನ ತಥಾಕಥಿತ ಬುದ್ಧಿವಂತಿಕೆಯ ಬಗ್ಗೆ ಅದು ಬಹಳ ಖಾತ್ರಿ ಹೊಂದಿದ್ದು ಸಾಕ್ರಟೀಸ್‌ನಿಂದ ಏನನ್ನೂ ಕಲಿಯಲು ಸಿದ್ಧವಾಗಿರುವುದಿಲ್ಲ, ತಾನು ಕಂಡುಕೊಂಡ ಸ್ಥಿತಿಯನ್ನು ಅಂತಿಮ ಸತ್ಯವೆಂಬಂತೆ ಪ್ರಭುತ್ವ ನಂಬುತ್ತದೆ, ಹಾಗೆಯೇ ಅದನ್ನು ಪರಿಪೂರ್ಣ ಜ್ಞಾನವನ್ನಾಗಿ ಪರಿಗಣಿಸುತ್ತದೆ, ಜೊತೆಗೆ ಪ್ರಶ್ನೆ ಕೇಳುವವರನ್ನು ದಂಗೆಕೋರರಂತೆ, ವಿದ್ರೋಹಿಗಳಂತೆ ಅಥವಾ ಹುಚ್ಚರಂತೆ ಪರಿಗಣಿಸುತ್ತದೆ.

ಗೂಗಿ 'ಗಿಕುಯು' ಭಾಷೆಯಲ್ಲಿ 'ಮಾಟಗರಿ' ಎಂಬ ಕಾದಂಬರಿಯನ್ನು ೧೯೮೬ರಲ್ಲಿ ಬರೆದ. ಮಾಟಗಿರಿ ಎಂಬ ಪಾತ್ರ ವಿದ್ರೋಹಾತ್ಮಕ ಚಿಂತನೆಗಳನ್ನು ಜನರ ನಡುವೆ ಬಿತ್ತುತ್ತಿದೆ ಎಂದು

ಯಾರೋ ಸರ್ಕಾರಕ್ಕೆ ದೂರು ನೀಡಿದರು. ಹಿಂದೆ ಮುಂದೆ ಆಲೋಚಿಸದೆ ಆ ಸರ್ವಾಧಿಕಾರಿ ಪ್ರಭುತ್ವ 'ಮಾಟಗಿರಿ'ಯನ್ನು ಬಂಧಿಸಲು ಆದೇಶ ಹೊರಡಿಸಿತ್ತು. ಅದು ಬಂಧಿಸಲು ಸಿಗುವ ವ್ಯಕ್ತಿಯಲ್ಲ ಬದಲಿಗೆ ಅದೊಂದು ಕಾದಂಬರಿಯ ಪಾತ್ರ ಎಂಬುದು ಅದಕ್ಕೆ ಆಮೇಲೆ ತಿಳಿದಿರಬಹುದು. ನಿರಂಕುಶ ಪ್ರಭುತ್ವಕ್ಕೆ ಆ ಕಾದಂಬರಿಯ ಮಾಟಗರಿ ಪಾತ್ರ ಸಾಕ್ರಟೀಸ್‌ನನ್ನು ಅವನ ಕಾಲದ ಪ್ರಭುತ್ವ ಪರಿಗಣಿಸಿದ ರೀತಿಯಲ್ಲೇ ಹಾಗೆ ಪರಿಗಣಿಸಿತು. ಹಾಗಾಗಿ ಆ 'ಮಾಟಗರಿ'ಯನ್ನು ಬಂಧಿಸುವ ಆಜ್ಞೆಯನ್ನು ನಿರಂಕುಶಾಧಿಕಾರ ಹೊರಡಿಸಿತ್ತು. ಯಾಕೆಂದರೆ ಅಂದಿಗೂ ಇಂದಿಗೂ ಪ್ರಶ್ನೆಗಳು, ಪ್ರಶ್ನಿಸುವವರನ್ನು ಕಂಡರೆ ಸರ್ಕಾರಗಳಿಗೆ ಸರಿ ಬೀಳುವುದಿಲ್ಲ.

*****

## ೪. ದೊಡ್ಡವರ ನಾಯಿ

**–ಕಲಿಗಣನಾಥ ಗುಡದೂರು**

ವ್ಯಾಪಾರ ಮಳಿಗೆಗಳ ಶಟರ್‌ಗಳನ್ನು ವ್ಯಾಪಾರಸ್ಥರು ಬಂದ್ ಮಾಡಿದ್ದರು. ಶಾಲೆ, ಕಾಲೇಜುಗಳಿಗೆ ಮುಂಜಾಗ್ರತೆಯಿಂದ ರಜೆ ಘೋಷಿಸಿದ್ದರಿಂದ ಪ್ರಮುಖ ಬೀದಿ, ವೃತ್ತ, ರಸ್ತೆಗಳು ಬಿಕೋ ಎನ್ನುತ್ತಿದ್ದವು. ಆದರೂ ಸಚಿವರ ಮನೆಯ ಮುಂದಿನ ರಸ್ತೆಯಲ್ಲಿ ಇರುವೆ ಸಾಲಿನಂತೆ ಒಂದಾದ ಮೇಲೊಂದರಂತೆ ವಾಹನಗಳು ಸಾಗುತ್ತಿದ್ದವು. ನೂರಾರು ಜನರು ತಂಡೋಪತಂಡವಾಗಿ ನಡೆಯುತ್ತಿದ್ದರು. ಸಂತೆ ದಿನವಾದರೂ ನಗರದ ಬಹುತೇಕ ಕಡೆ ಬಂದ್ ವಾತಾವರಣ ಎದ್ದುಕಾಣುತ್ತಿತ್ತು. ರಸ್ತೆಗಳ ಮೇಲೆ ಅಡ್ಡಾಡುತ್ತಿದ್ದವರ ಮುಖದಲ್ಲಿ ಕಳೆಯಿರಲಿಲ್ಲ. ತಮ್ಮ ಮನೆಯಲ್ಲೇ ಯಾರಾದರೊಬ್ಬರು ಸತ್ತಂತೆ ಜೋಲು ಮುಖ ಹೊತ್ತಿದ್ದರು. ನಿನ್ನೆ ರಾತ್ರಿಯಿಂದಲೂ ಬಹುತೇಕರು ಒಂದು ತುತ್ತು ಅನ್ನ ತಿಂದಿರಲಿಲ್ಲ. ಜನರ ಮುಖ ಅಂಬೋವು ರದ್ದಿ ಕಾಗದದಂತೆ ಮುದುಡಿದ್ದವು. ಬೀದಿ ನಾಯಿಗಳನ್ನು ಕಂಡರೆ ಮಾರು ದೂರಹೋಗುವ, ಕೈಯಲ್ಲಿದ್ದ ಪೇಪರ್, ಟವೆಲ್, ಬ್ಯಾಗಿನಿಂದ ಬಡಿಯುವಂತೆ ಎತ್ತಿ ಹೆದರಿಸುವ ಜನರಿಗೆ ಸಚಿವರ ಮನೆಯ ಮುಧೋಳ ನಾಯಿ "ಕಲ್ಯಾಣಿ" ಎಂದರೆ ವಿಶೇಷ ಪ್ರೀತಿ. ಕಲ್ಯಾಣಿ ಬೀದಿಯಲ್ಲಿ ಥೇಟ್ ಮಂತ್ರಿ ಶಿವಬಸಪ್ಪನವರಂತೆಯೇ ಠೀವಿಯಿಂದ ನಡೆಯುತ್ತಿದ್ದಳು. ಸಚಿವರೇ ಎದುರಿಗೆ ಬಂದರೆ ಎಲ್ಲ ಜನ ಅಂಜುತ್ತಾರೊ ಇಲ್ಲೊ? ಆದರೆ ಕಲ್ಯಾಣಿ ಬಂದಳೆಂದರೆ ಸಾಕು. ಜನ ಎಲ್ಲಿಲ್ಲದ ಭಕ್ತಿ ಭಾವದಿಂದ ವರ್ತಿಸುತ್ತಿದ್ದರು. ರಸ್ತೆ ಪಕ್ಕದಲ್ಲಿ ಸ್ವಲ್ಪ ಸರಿದು ನಿಂತು ದಾರಿಮಾಡಿಕೊಡುತ್ತಿದ್ದರು. ಕಲ್ಯಾಣಿಯ ಬೂದು ಬಣ್ಣಕ್ಕೊ, ಆಕೆ ನಡೆಯುವ ಗತ್ತಿಗೊ ಜನ ಮರುಳಾಗಿದ್ದರು. ಇನ್ನೂ ಏನಾದರೂ ಕಾರಣವಿರಬಹುದೊ?

ರಾಜಕೀಯ ಪಕ್ಷವೊಂದರಿಂದ ನಾಲ್ಕು ಬಾರಿ ಎಂ.ಎಲ್.ಎ. ಆಗಿ ಆಯ್ಕೆಯಾಗಿದ್ದ ಶಿವಬಸಪ್ಪ ಈ ಬಾರಿ ಮಂತ್ರಿಯಾದ ಮೇಲೆ ಅವರ ಬಂಗಲೆಯಿರುವ ರಸ್ತೆಗೆ ವಿಶೇಷ ಕಳೆ ಮೂಡಿತ್ತು. ಮಿಗಿಲಾಗಿ ಕಲ್ಯಾಣಿಗೂ ಮಂತ್ರಿಗಳ ಮನೆಯವಳು ತಾನು ಎಂಬ ಎಲ್ಲಿಲ್ಲದ ಗರ್ವ ಬಂದಿತ್ತು. ಶಿವಬಸಪ್ಪನವರಿಗೂ ಅಷ್ಟೆ ಕಲ್ಯಾಣಿ ಎಂದರೆ ತನ್ನ ಮನೆಯಲ್ಲೇ ಹುಟ್ಟಿದ ಮಕ್ಕಳಿಗಿಂತಲೂ ಪಂಚಪ್ರಾಣ. ಕ್ರೀಡಾ ಮತ್ತು ಯುವಜನ ಸೇವಾ ಸಚಿವರಾಗಿದ್ದ ಅವರು ಬಾಗಲಕೋಟೆಯಲ್ಲಿ ರಾಜ್ಯ ಮಟ್ಟದ ಕಬ್ಬಡ್ಡಿ ಪಂದ್ಯಾವಳಿ ಉದ್ಘಾಟನೆಗೆಂದು ಹೋದ ಸಂದರ್ಭದಲ್ಲಿ ಯಾರೊ ಒಬ್ಬರು ಈ ಕಲ್ಯಾಣಿಯನ್ನು ಉಡುಗೊರೆಯಾಗಿ ನೀಡಿದ್ದರು. ಅವರು ಬೀದಿಯಲ್ಲಿ ಗೂಟದ ಕಾರಿನಲ್ಲಿ ಹೊರಟರೆಂದರೆ ಅವರ ಪಕ್ಕದಲ್ಲೇ ಕಲ್ಯಾಣಿ ಕುಳಿತಿರುತ್ತಿದ್ದಳು. ಕಾರಿನ ಕಪ್ಪು ಗಾಜಿನೊಳಗೆ ಮಸುಕು

ಮಸುಕಾಗಿ ಕಾಣುತ್ತಿದ್ದ ಮಂತ್ರಿಗಳನ್ನು ಕಂಡು ಜನ ನಮಸ್ಕರಿಸುತ್ತಿದ್ದರೊ ಇಲ್ಲಾ ಕಲ್ಯಾಣಿಗೆ ನಮಸ್ಕರಿಸುತ್ತಿದ್ದರೊ? ಹಾಗೆ ತಲೆ ಬಗ್ಗಿಸಿ, ನಡು ಬಗ್ಗಿಸಿ, ಕೈಮುಗಿದು ಡೊಗ್ಗು ಸಲಾಮು ಹೊಡೆಯುವುದನ್ನು ಕಂಡ ಕಲ್ಯಾಣಿ ತನ್ನ ತಲೆ, ಬಾಲ ಅಲ್ಲಾಡಿಸುತ್ತಾ ನಮಸ್ಕಾರಕ್ಕೆ ಪ್ರತಿಕ್ರಿಯಿಸುತ್ತಿದ್ದಳು. ಕಲ್ಯಾಣಿಯ ಬಗ್ಗೆ ಅದೆಷ್ಟೋ ಕಥೆಗಳು ಹುಟ್ಟಿಕೊಂಡಿದ್ದವು. ಜನರ ತುದಿ ನಾಲಿಗೆ ಮೇಲೆ ಕಲ್ಯಾಣಿ ಸದಾ ನಲಿಯುತ್ತಿದ್ದಳು. ತಮ್ಮ ಮನೆಯ ಮಕ್ಕಳನ್ನಾದರೂ ಅಷ್ಟು ಚೆಂದಾಗಿ ಬಾಯ್ತುಂಬ ಕರೆಯುತ್ತಿದ್ದರೊ ಇಲ್ಲೊ ಕೆಲವರು ಸಚಿವರ ಪಕ್ಕದಲ್ಲಿ ಪರ್ಸ್ನಲ್ ಸೆಕ್ರೆಟರಿ ಎಂಬಂತೆ ಇರುತ್ತಿದ್ದ ಕಲ್ಯಾಣಿಯನ್ನು ಅಷ್ಟು ಪ್ರೀತಿಯಿಂದ ಮಾತನಾಡಿಸುತ್ತಿದ್ದರು. ಹಾಗೆ ಜನ ತಮಗಿಂತಲೂ ಯಕಃಶ್ಚಿತ ನಾಯಿಗೆ ಅಪಾರ ಗೌರವ ಕೊಡುತ್ತಿದ್ದನ್ನು, ಅದರ ಪ್ರತಿ ಚಟುವಟಿಕೆಯನ್ನು ರಾಮಾಯಣ, ಮಹಾಭಾರತದ ಕಥೆಗಳಂತೆ ವರ್ಣಿಸುತ್ತಿದ್ದನ್ನು ಕೇಳಿ ಶಿವಬಸಪ್ಪನವರಿಗೇ ಹಲವು ಬಾರಿ ಹೊಟ್ಟೆಕಿಚ್ಚು ಆಗಿದ್ದೂ ಉಂಟು.

ಇಂಥಪ್ಪ ಕಲ್ಯಾಣಿ ಎರಡ್ಮೂರು ದಿನಗಳವರೆಗೆ ಮೈಯಲ್ಲಿ ಹುಷಾರಿಲ್ಲದೆ ಒದ್ದಾಡಿ ಸತ್ತ ಸುದ್ದಿ ಬಹಳ ಜನರಿಗೆ ನಂಬಲಿಕ್ಕೆ ಆಗಲಿಲ್ಲ. ತಮ್ಮ ಇಲಾಖೆಯ ಮಾನ ಮರ್ಯಾದೆ ಪಣಕ್ಕಿಟ್ಟವರಂತೆ ಪಶು ಸಂಗೋಪನಾ ಇಲಾಖೆಯ ಜಿಲ್ಲಾ ಮಟ್ಟದ ವೈದ್ಯಾಧಿಕಾರಿಗಳು ಬಂದು ಕಲ್ಯಾಣಿಯನ್ನು ಸ್ವಲ್ಪ ಹೆಚ್ಚಿಗೆಂಬಂತೆ ಉಪಚರಿಸಿದರೂ ಉಳಿಯಲಿಲ್ಲ. ಕಲ್ಯಾಣಿ ಸತ್ತ ಸುದ್ದಿ ಕೇಳಿದ ಶಿವಬಸಪ್ಪ ತಾಸುಗಟ್ಟಲೆ ಸೊನ್ನೆ ಮುಚ್ಚಿ ಬಿದ್ದರೆಂಬ ಸುದ್ದಿ ದೇಶದ ವಿವಿಧ ಪ್ರಮುಖ ಸುದ್ದಿ ಚಾನೆಲ್‌ಗಳು ಫ್ಲಾಶ್ ಸುದ್ದಿಯೆಂಬಂತೆ ಬಿತ್ತರಿಸಿದವು. ನಾಡಿನ ಮೂಲೆ ಮೂಲೆಯಲ್ಲಿದ್ದ ಲಕ್ಷಾಂತರ ಜನ ಕಲ್ಯಾಣಿ ಆತ್ಮಕ್ಕೆ ಶಾಂತಿ ಕೋರಿ ಎಸ್‌ಎಂಎಸ್ ಕಳಿಸಿ ತಮ್ಮ ಮಾನವೀಯ ಕಳಕಳಿ ಮೆರೆದರು. ಎರಡು ದಿನಗಳಿಂದ ನಾಡಿನ ಪ್ರಮುಖ ದೈನಿಕ, ಸುದ್ದಿ ಚಾನೆಲ್‌ಗಳಲ್ಲಿ ಕಲ್ಯಾಣಿಯದೇ ಸುದ್ದಿ. ಅದು ಹಾಗೆ ಇತ್ತೊ ಇಲ್ಲೊ! ಕ್ಷಣಕ್ಕೊಮ್ಮೆ ಸುದ್ದಿ ಚಾನೆಲ್‌ಗಳ ಆಕರ್ಷಕ ಆ್ಯಂಕರ್‌ಗಳ ವಿವರಣೆಯಲ್ಲಿ ಕಲ್ಯಾಣಿ ಹೊಸ ರೂಪ ಪಡೆಯುತ್ತಿದ್ದಳು. ಟಿ.ವಿ. ಮುಂದೆ ಕುಳಿತ ಜನ ಖುದ್ದಾಗಿ ನಾಯಿಯ ಮುಖವನ್ನೊಮ್ಮೆ ನೋಡಿ ತಮ್ಮ ಜನುಮ ಸಾರ್ಥಕ ಮಾಡಿಕೊಳ್ಳಬೇಕು. ತಮಗೆ ಪ್ರಾಣಿಗಳ ಅದರಲ್ಲೂ ನಾಯಿಗಳ ಬಗ್ಗೆ ಅಪಾರ ಪ್ರೀತಿಯಿದೆ ಎಂದು ತೋರಿಸಿಕೊಳ್ಳಲು ಸಚಿವ ಶಿವಬಸಪ್ಪನವರ ಮನೆಯತ್ತ ಸಾಗಿದ್ದರು. ಕಲ್ಯಾಣಿಯನ್ನು ಕಳೆದುಕೊಂಡ ಸಚಿವರಿಗೆ ತಲೆ ಮೇಲೆ ಆಕಾಶನೆ ಕಳಚಿ ಬಿದ್ದ ಹಾಗಾಗಿತ್ತು. ಅವರು ತಮ್ಮ ಮಂತ್ರಿಗಿರಿ ಹೋದರೆ ಅಥವಾ ಚುನಾವಣೆಯಲ್ಲಿ ಸೋತಿದ್ದರೆ ಇಷ್ಟು ದುಃಖ ಪಡುತ್ತಿದ್ದರೊ ಇಲ್ಲೊ? ಕಲ್ಯಾಣಿ ಸಾವಿನಿಂದ ತೀರಾ ಕಂಗೆಟ್ಟಿದ್ದರು. ಕಲ್ಯಾಣಿಯನ್ನು ಏನೆಲ್ಲಾ ಅತ್ಯಾಧುನಿಕ ಶಸ್ತ್ರ ಚಿಕಿತ್ಸಾ ತಂತ್ರಜ್ಞಾನ ಉಪಯೋಗಿಸಿ ಬದುಕಿಸಲು

ವಿಫಲವಾದ ಜಿಲ್ಲಾ ಪಶು ವೈದ್ಯಾಧಿಕಾರಿ, ತಾಲೂಕು ಪಶು ವೈದ್ಯಾಧಿಕಾರಿ ಸೇರಿದಂತೆ ಪಶುಸಂಗೋಪನಾ ಇಲಾಖೆಯ ನಾಲ್ಕಾರು ನೌಕರರನ್ನು ಕೂಡಲೇ ಸೇವೆಯಿಂದ ಅಮಾನತು ಮಾಡುವಂತೆ ಸಂಬಂಧಿಸಿದ ಖಾತೆ ಸಚಿವರಿಗೆ ಶಿವಬಸಪ್ಪ ಅವರು ತಮ್ಮ ತೀವ್ರ ನೊಂದ ದನಿಯಲ್ಲೇ ಶಿಫಾರಸು ಮಾಡಿದ್ದರು. ಪಶು ಸಂಗೋಪನಾ ಸಚಿವರೂ ಶಿವಬಸಪ್ಪನವರ ಮೇಲಿನ ಪ್ರೀತಿಗೆ ಹಿಂದೆ ಮುಂದೆ ನೋಡದೆ ಬೆಂಗಳೂರಿನಲ್ಲಿ ಪ್ರೆಸ್‌ಮೀಟ್ ಮಾಡಿ ಕಲ್ಯಾಣಿ ಬದುಕುಳಿಸಲು ವಿಫಲರಾದ ವೈದ್ಯಾಧಿಕಾರಿಗಳು ಮತ್ತು ನಾಲ್ವರು ನೌಕರರನ್ನು ಸೇವೆಯಿಂದ ಅಮಾನತ್ತಿನಲ್ಲಿಡುವ ಆದೇಶ ಹೊರಡಿಸಿಯೇ ಬಿಟ್ಟರು.

ಕಲ್ಯಾಣಿಯೇ ತಮಗೆ ಸಕಲ ಭಾಗ್ಯ ತಂದ ಭಾಗ್ಯವಂತೆ ಎಂದೇ ಶಿವಬಸಪ್ಪ ನಂಬಿದ್ದರು. ಒಮ್ಮೆ ಕಲ್ಯಾಣಿ ಚಿತ್ತಿ ಮಳೆ ಬೀಳುತ್ತಿದ್ದ ಸಂದರ್ಭದಲ್ಲಿ ಬೀದಿಯ ಗಂಡು ನಾಯಿಯೊಂದಿಗೆ ರತಿಕ್ರೀಡೆಯಲ್ಲಿ ತೊಡಗಿತ್ತು. ಇದನ್ನು ಕಂಡ ಸಚಿವರ ಭಂಟರಿಬ್ಬರು ಗಂಡು ನಾಯಿಯನ್ನು ಹಿಡಿದೆಳೆದು ಕ್ರೀಡೆಗೆ ಭಂಗ ತರುವಲ್ಲಿ ಯಶಸ್ವಿಯಾಗಿದ್ದರು. ತನ್ನ ಮನದಿನಿಯನನ್ನು ಹೀಗೆ ದರದರ ಎಳೆದೊಯ್ಯುತ್ತಿದ್ದುದ್ದನ್ನು ಸಹಿಸದ ಕಲ್ಯಾಣಿ ಭಂಟರ ಮೇಲೆರಗಿ ಎಲ್ಲಿ ಬೇಕಲ್ಲಿ ಕಚ್ಚಿ ಗಾಯಮಾಡಿತ್ತು. ಗಾಯಗೊಂಡ ಭಂಟರು ಕಲ್ಯಾಣಿಯ ಪಾವಿತ್ರ್ಯ ಕಾಪಾಡಿದ್ದಕ್ಕೆ ಶಿವಬಸಪ್ಪ ಶಹಬ್ಬಾಶಗಿರಿ ಕೊಟ್ಟದ್ದಲ್ಲದೆ ಅವರ ಚಿಕಿತ್ಸೆಯ ಎಲ್ಲ ಖರ್ಚನ್ನು ನಿಭಾಯಿಸಿ ಅವರ ಮನೆಯವರ ಪಾಲಿಗೆ ಸಾಕ್ಷಾತ್ ದೈವವೆನಿಸಿದರು. ಕಲ್ಯಾಣಿ ಜೊತೆಗೆ ಅಕ್ರಮ ಸಂಬಂಧವಿಟ್ಟುಕೊಂಡಿದ್ದ ಬೀದಿಯ ಗಂಡು ನಾಯಿಯನ್ನು ನಗರಸಭೆ ಸಿಬ್ಬಂದಿ ಹಾಡಹಗಲೆ ಕುತ್ತಿಗೆಗೆ ಹಗ್ಗಬಿಗಿದು ಬೇವಿನ ಗಿಡದ ಟೊಂಗಿಗೆ ಕಟ್ಟಿ ಉರುಲು ಹಾಕಿ ಕೊಂದರು. ತನ್ನ ಸಂಗಾತಿ ಚೀರಿ ಸತ್ತಿದ್ದನ್ನು ಅದ್ಹೇಗೆ ಕೇಳಿದಳೊ ಕಲ್ಯಾಣಿ ಕಣ್ಣಲ್ಲಿ ನೀರು ತುಂಬಿಕೊಂಡು ಆರ್ತನಾದ ಮಾಡಿದಳು. ಎರಡು ದಿನ ಉಪವಾಸವಿದ್ದು ಶೋಕಾಚರಣೆ ನಡೆಸಿದಳು. ಹಳೆಯ ಸಂಗಾತಿಯನ್ನು ನಿಧಾನವಾಗಿ ಮರೆತಳು. ಕಲ್ಯಾಣಿಯ ವಯಸ್ಸು, ಭಾವನೆ, ಅಂತರಾಳ ಅರ್ಥಮಾಡಿಕೊಂಡ ಶಿವಬಸಪ್ಪ ತಮ್ಮ ಮನೆಯ ಇಬ್ಬರು ಗಟ್ಟಿಮುಟ್ಟಾದ ಆಳುಗಳನ್ನು ಮುಧೋಳಕ್ಕೆ ಕಳಿಸಿ ಗಂಡು ನಾಯಿಯೊಂದನ್ನು ಖರೀದಿಸಿ ತಂದರು.

ಹೊಸ ನಾಯಿ ಆಗಮನದಿಂದ ಕಲ್ಯಾಣಿಗೆ ಕಸಿವಿಸಿಯಾಯಿತು. ಹೊಸ ನಾಯಿಗೆ ಶಿವಬಸಪ್ಪನವರಿಗೆ ತಮ್ಮ ಆರಾಧ್ಯದೈವ ಬೀರಪ್ಪನ ಹೆಸರನ್ನೆ ಹೊಸ ಶೈಲಿಯಲ್ಲಿ ‘‘ಬೀರ’’ ಎಂದು ನಾಮಕರಣ ಮಾಡಿದರು. ಬೀರನ ಹುಡುಗಾಟಿಕೆ, ಚೆಲ್ಲಾಟಕ್ಕೆ ಕಲ್ಯಾಣಿ ಬಹುಬೇಗನೆ ಬೇಸತ್ತಳು. ಅವನು ಅದೆಷ್ಟು ಮೈತ್ರಿ ಮಾಡಿಕೊಳ್ಳಬೇಕೆಂದರೂ, ಏನೆಲ್ಲಾ ನಾಟಕ ಮಾಡಿದರೂ ಅವನತ್ತ ತನ್ನ ಮಾಂತ್ರಿಕ ನೋಟ ಬೀರಲಿಲ್ಲ. ಅವನಿಗೆ ತನ್ನ ಮೈಚರ್ಮದ ಕೂದಲೂ ಸೋಕದಂತೆ ಎಚ್ಚರಿಕೆ

ವಹಿಸಿದಳು. ಬೀರನ ಕುಚೇಷ್ಟೆಗಳಿಂದ ನೊಂದ ಕಲ್ಯಾಣಿ ಒಂದು ದಿನ ಏಕಾಏಕಿ ಸಚಿವರ ಮೂರಂತಸ್ತಿನ ಬಂಗಲೆಯೇರಿ ಮೇಲಿಂದ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳಲು ಮುಂದಾದಳು. ಶಿವಬಸಪ್ಪನವರ ಹಣೆಬರಹ ಗಟ್ಟಿಯಾಗಿತ್ತು ಅಂತ ಕಾಣುತ್ತೆ. ಕಲ್ಯಾಣಿ ಮೇಲಿಂದ ಬಿದ್ದರೂ ಮೂರನೆ ಮಹಡಿಯ ವೆಂಟಿಲೇಶನ್ ಮೇಲೆ ಕುಳಿತುಬಿಟ್ಟಳು. ತನ್ನದು ಖೊಟ್ಟಿ ಹಣೆಬರಹ, ಸಾಯಬೇಕೆಂದರೂ ಸಾಯಲಿಲ್ಲ ಎಂದು ಮುಖ ತಗ್ಗಿಸಿ, ಬಾಲ ಮುದುರಿಕೊಂಡು ವೆಂಟಿಲೇಶನ್ ಮೇಲೆ ಕುಳಿತ ಕಲ್ಯಾಣಿಯನ್ನು ಆಳುಗಳು ಅದೆಷ್ಟೊ ಕಾಳಜಿಯಿಂದ ಮೇಲೆತ್ತಿ ಬಾಣಂತಿಯಂತೆ ಉಪಚರಿಸಿದರು. ಕಲ್ಯಾಣಿ ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾನಸಿಕ ಹಿಂಸೆ ನೀಡಿದ ಬೀರನನ್ನು ಬಂದ ದಾರಿಗೆ ಸುಂಕವಿಲ್ಲವೆಂಬಂತೆ ಮುಧೋಳ ದಾರಿ ಹತ್ತಿಸಿದ್ದರು...

ಶಿವಬಸಪ್ಪನವರ ಮನೆಗೆ ನಿನ್ನೆ ರಾತ್ರಿಯಿಂದಲೂ ಸುತ್ತಲಿನ ವಿವಿಧ ಜಿಲ್ಲೆಗಳ ಶಾಸಕರು, ಸಚಿವರು, ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಬಂದು ಕಲ್ಯಾಣಿಯ ಸಾವಿಗೆ ತಮ್ಮ ತೀವ್ರ ಸಂತಾಪ ಸೂಚಿಸಿದರು. ನಿಮ್ಮ ಕುಟುಂಬದ ಶೋಕದಲ್ಲಿ ತಾವೂ ಭಾಗಿಗಳಾಗಿದ್ದೇವೆ ಎಂದು ಭರವಸೆ ನೀಡಿದರು. ಕಲ್ಯಾಣಿಯ ಸಾವಿನಿಂದ ಇಡೀ ಜಗತ್ತಿಗೇ ತುಂಬಲಾರದ ನಷ್ಟವಾಗಿದೆ ಎಂಬಂತೆ ಪ್ರಮುಖ ಪತ್ರಿಕೆಗಳಲ್ಲಿ ಕಲ್ಯಾಣಿಯ ಚಿಕ್ಕ ಚಿತ್ರದ ಜೊತೆಗೆ ತಮ್ಮ ನಿಂತ ಭಂಗಿಯ ದೊಡ್ಡ ಫೋಟೊ ಹಾಕಿಸಿಕೊಂಡು ಶಿವಬಸಪ್ಪನವರ ಪಕ್ಷದ ಮುಖಂಡರು ಕಲ್ಯಾಣಿಯ ಮೇಲಿಟ್ಟಿದ್ದ ಅಪಾರ ಪ್ರೀತಿಯನ್ನು ಪ್ರದರ್ಶಿಸಿದರು. ಆ ದಿನ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ಜಾಹೀರಾತುಗಳನ್ನು ಎಲ್ಲರಿಗೂ ಕಾಣುವಂತೆ ಹಿಡಿದುಕೊಂಡಿದ್ದ ಮುಖಂಡರು ಶಿವಬಸಪ್ಪನವರ ಮನೆಯಲ್ಲಿ ಅತ್ತಿಂದಿತ್ತ ಓಡಾಡುತ್ತ ತಮ್ಮ ಇರುವಿಕೆಯನ್ನು ಸಾಬೀತುಪಡಿಸುತ್ತಿದ್ದರು. ಶಿವಬಸಪ್ಪನವರು ಮುಖಂಡರ ಜೊತೆಗೆ ಚರ್ಚಿಸಲು ಕೂಡುತ್ತಿದ್ದ ಸಾಗವಾನಿ ಕಟ್ಟಿಗೆಯಿಂದ ಮಜಬೂತಾಗಿ ಮಾಡಿದ್ದ ಅಲಂಕೃತ ಮಂಚದ ಮೇಲೆ ಕಲ್ಯಾಣಿಯನ್ನು ರಾಶಿಗಟ್ಟಲೆ ಹೂವಿನ ದಂಡೆಗಳ ಮೇಲೆ ಮಲಗಿಸಲಾಗಿತ್ತು. ಕಲ್ಯಾಣಿಯ ಸುತ್ತ ಹೂವುಗಳನ್ನು ಇಟ್ಟು ಅಲಂಕರಿಸಲಾಗಿತ್ತು. ಶಿವಬಸಪ್ಪನವರ ಮನೆಯ ಸುತ್ತಲಿನ ಹತ್ತಿಪ್ಪತ್ತು ಮಹಿಳೆಯರು ಬಂದು ನಾಯಿಯ ಸೌಭಾಗ್ಯ ಕಂಡು ತಮ್ಮ ಕೆದರಿದ ಕೂದಲುಗಳಲ್ಲಿ ಕೈಯಾಡಿಸಿಕೊಂಡು ಒತ್ತರಿಸಿ ಬಂದ ದುಃಖ ತಡೆದುಕೊಳ್ಳಲಾಗದೆ ಬೋರಾಡಿ ಅತ್ತು, ಕಪಾಳದ ಮೇಲಿಂದ ಜಾರುತ್ತಿದ್ದ ಕಣ್ಣೀರ ಹನಿಗಳನ್ನು ಸೆರಗಿಗೆ ಒತ್ತಿಕೊಂಡರು. ಬೆಳಿಗಿನಿಂದಲೂ ಶಿವಬಸಪ್ಪನವರು ಯಾರ ಜೊತೆಗೂ ಮಾತನಾಡಿರಲಿಲ್ಲ. ತಮ್ಮ ಹೆಗಲ ಮೇಲೆ ಹಾಕಿಕೊಂಡಿದ್ದ ಕೇಸರಿ ಮತ್ತು ಹಸಿರು ದಡಿಯ ಜರತಾರಿ ಶಲ್ಯೆಯಿಂದ ಮುಖ ಮುಚ್ಚಿಕೊಂಡು ಕಲ್ಯಾಣಿಯ ಸಮೀಪ ಕುಳಿತಿದ್ದರು. ಒಮ್ಮಿಂದೊಮ್ಮೆಲೆ ಹೊರಗಡೆಯಿದ್ದ ಜನ ಪರಸ್ಪರ ನೂಕಾಟದಲ್ಲಿ ತೊಡಗಿದರು.

ಪಕ್ಷದ ರಾಜ್ಯಾಧ್ಯಕ್ಷರು, ಮುಖ್ಯಮಂತ್ರಿ ಬಂದರೆಂಬ ಸುದ್ದಿಯನ್ನು ಶಿವಬಸಪ್ಪನವರ ಕಿವಿಗೆ ಅವರ ಮನೆಯವರು ಮುಟ್ಟಿಸಿದರು. ಕಣ್ಣು, ಮುಖ ಒರೆಸಿಕೊಂಡ ಶಿವಬಸಪ್ಪ ದಿಗ್ಗನೆ ಎದ್ದು ನಿಂತು ಪೊಲೀಸ್ ಅಧಿಕಾರಿಗಳ ಮಧ್ಯೆ ಬರುತ್ತಿದ್ದ ಮುಖ್ಯಮಂತ್ರಿ ಮಲ್ಲಿಕಾರ್ಜುನಗೌಡ ಅವರ ಕೈಕುಲುಕಿ ಸ್ವಾಗತಿಸಿದರು. ಪಕ್ಷದ ರಾಜ್ಯಾಧ್ಯಕ್ಷ ರಾಜುಗೌಡ ಪಾಟೀಲ್ ಮನೆಯ ಮಗನನ್ನೇ ಕಳೆದುಕೊಂಡಷ್ಟೆ ದುಃಖಿತರಾಗಿದ್ದಾರೆನೊ ಎಂಬಂತಿದ್ದ ಶಿವಬಸಪ್ಪನವರ ಹೆಗಲ ಮೇಲೆ ಕೈಹಾಕಿ ಸಂತೈಸಿದರು. ಶಿವಬಸಪ್ಪನವರು ತಮ್ಮ ಹೆಗಲಮೇಲಿದ್ದ ಶಲ್ಯೆಯಿಂದ ಮತ್ತೆ ಕಣ್ಣು ಒರೆಸಿಕೊಂಡು, ‘‘ನನಗ ಕಲ್ಯಾಣಿಯಂದ್ರ ಪಂಚಪ್ರಾಣ ಸರ್... ನನ್ನ ರಕ್ತ, ಮಾಂಸ ಹಂಚಿಕೊಂಡು ಹುಟ್ಟಿದ ಮಕ್ಕಳಂತೆ ಸಾಕಿದ್ದೆ. ಇದ್ದೊಬ್ಬ ಮಗನ ಸರಿಸಮಾನ ಕಲ್ಯಾಣೀನ ಬೆಳೆಸಿದ್ದೆ. ನಮ್ ಮನೆಯ ದೀಪವಾಗಿದ್ಲು ಕಲ್ಯಾಣಿ,,,’’ ಎಂದು ಅನ್ನುತ್ತಾ ಹೂವಿನಲ್ಲಿ ಅಡಗಿದ್ದ ಕಲ್ಯಾಣಿಯ ತಲೆ ಮೇಲೆ ಕೈಯಾಡಿಸಿ ನಾಲ್ಕಾರು ಕಣ್ಣೀರು ಹನಿ ಹಾಕಿದರು. ಮುಖ್ಯಮಂತ್ರಿ ಮಲ್ಲಿಕಾರ್ಜುನಗೌಡ ಶಿವಬಸಪ್ಪನವರ ಕಪಾಳ ಮುಟ್ಟಿ ಕಣ್ಣೀರು ಒರೆಸಿ, ಹೆಗಲಮೇಲೆ ಎರಡು ಮೂರು ಸಲ ತಮ್ಮ ಅಮೃತ ಹಸ್ತದಿಂದ ಬಡಿದು ಸುಮ್ಮನಿರುವಂತೆ ಮೇಲೆ ಕೆಳಗೆ ತಲೆ ಅಲ್ಲಾಡಿಸಿದರು. ಅವರ ಪರ್ಸನಲ್ ಸೆಕ್ರೆಟರಿ ಕೊಟ್ಟ ಹೂಗುಚ್ಛವನ್ನು ಮಹಾನ್ ದೇಶಭಕ್ತರ ಶವದ ಮೇಲೆ ಇರಿಸುವಷ್ಟೆ ಭಕ್ತಿ ಭಾವದಿಂದ ಇಟ್ಟು, ಎರಡೂ ಕೈಜೋಡಿಸಿ ಚುನಾವಣೆ ಸಂದರ್ಭದಲ್ಲಿ ಮತದಾರರ ಮನೆ ಬಾಗಿಲ ಮುಂದೆ ನಿಂತು ನಮಸ್ಕಾರ ಮಾಡುವಂತೆ ಕಲ್ಯಾಣಿಗೆ ನಮಸ್ಕರಿಸಿ, ಶಿವಬಸಪ್ಪನವರ ಕೈಹಿಡಿದು ಕೋಣೆಯಿಂದ ಹೊರಬಂದರು.

ವಿವಿಧ ಸುದ್ದಿ ಮಾಧ್ಯಮಗಳ ವರದಿಗಾರರು ಮುಖ್ಯಮಂತ್ರಿ ಮತ್ತು ಪಕ್ಷದ ರಾಜ್ಯಾಧ್ಯಕ್ಷರ ಸುತ್ತುವರಿದು ತರಾವರಿ ಪ್ರಶ್ನೆಗಳನ್ನು ಕೇಳಿದರು. ‘‘ನಿಮ್ ಸರ್ಕಾರ ಪೂರ್ಣಾವಧಿ ಆಡಳಿತ ನಡೆಸುತ್ತಾ?’’‘‘ನಿಮ್ಮ ಪಕ್ಷದಲ್ಲಿ ಇತ್ತೀಚೆಗೆ ಸೇರ್ಪಡೆಯಾದ ಮುಖಂಡರಿಗೆ ಪಕ್ಷದ ವರಿಷ್ಠರು ಮಣೆ ಹಾಕುತ್ತಿದ್ದಾರೆ?’’ ‘‘ಹಳೆಯ ಮುಖಂಡರನ್ನು ಕಡೆಗಣಿಸಲಾಗುತ್ತಿದೆ ಎಂಬ ಆಪಾದನೆ ಬಗ್ಗೆ ನಿಮ್ಮ ಅನಿಸಿಕೆಯೇನು?’’‘‘ಬೀದಿ ನಾಯಿಗಳನ್ನು ಕೊಂದು ಇಲ್ಲವೇ ಅವುಗಳಿಗೆ ಸಂತಾನ ನಿಯಂತ್ರಣ ಚಿಕಿತ್ಸೆ ಮಾಡಬೇಕೆಂದು ಆದೇಶಿಸಿ, ನಾಯಿ ವಂಶವನ್ನೇ ನಿರ್ವಂಶ ಮಾಡ ಹೊರಟಿರುವ ಸರ್ಕಾರದ ನಿರ್ಧಾರ ಎಷ್ಟು ಸರಿ?’’ ‘‘ಈಗ ಕಲ್ಯಾಣಿಯಂತಾ ನಾಯಿ ಬಗ್ಗೆ ಅಪಾರ ಗೌರವ ಹೊಂದಿರುವ ನೀವು, ಮುಂಬರುವ ದಿನಗಳಲ್ಲಿ ನಾಯಿಗಳ ಬದುಕುವ ಹಕ್ಕನ್ನು ರಕ್ಷಿಸಲು ಯಾವ ಹೊಸ ಕಾನೂನು ಜಾರಿಗೆ ತರಲಿದ್ದೀರಿ?’’ ಎಂದು ಪ್ರಶ್ನೆಯ ಮೇಲೆ ಪ್ರಶ್ನೆ ಕೇಳಿದರು. ‘‘ರಾಜ್ಯ ರಾಜಕಾರಣ ಮತ್ತು ಪಕ್ಷದ ಬಗ್ಗೆ ಪ್ರಶ್ನೆಗಳಿಗೆ ಉತ್ತರಿಸುವ ಸಂದರ್ಭ ಇದಲ್ಲ. ಇಡೀ ನಾಡಿನ ಜನತೆ ಕಲ್ಯಾಣಿ ಸಾವಿನಿಂದ

ತೀವ್ರ ದುಃಖದಲ್ಲಿದೆ. ಕಲ್ಯಾಣಿಯ ಸಾವು ತಮಗೂ ಬಹಳ ದುಃಖ ತಂದಿದೆ. ಶಿವಬಸಪ್ಪನವರ ಪ್ರಾಣ ಿಪ್ರೇಮ ಎಲ್ಲ ಸಚಿವರು ಮತ್ತು ರಾಜಕಾರಣಿಗಳೂ ಮಾದರಿ. ಕಲ್ಯಾಣಿಯ ನೆನಪಲ್ಲಿ ನಾಯಿಗಳ ರಕ್ಷಣೆಗೆ ವಿಶೇಷ ಕಾನೂನನ್ನು ಮುಂದಿನ ಅಧಿವೇಶನದಲ್ಲಿ ಜಾರಿಗೊಳಿಸುತ್ತೇವೆ...'' ಎಂದು ಮಲ್ಲಿಕಾರ್ಜುನಗೌಡ, ಶಿವಬಸಪ್ಪನವರ ಮುಖ ನೋಡಿದರು. ``ಬೆಂಗಳೂರಿನಲ್ಲಿ ಸಾವಿರಾರು ನಾಯಿಗಳನ್ನು ಕೊಂದ ಪಾಪ ಹೊತ್ತಿರುವ ಸರ್ಕಾರ ಈಗ ಈ ಕಾನೂನನ್ನು ಎಷ್ಟರ ಮಟ್ಟಿಗೆ ಪ್ರಾಮಾಣಿಕವಾಗಿ ಜಾರಿಗೊಳಿಸುತ್ತೆ?'' ``ಮನುಷ್ಯರನ್ನು ಕಚ್ಚಿದ್ದೇ ನೆಪಮಾಡಿಕೊಂಡು ಎಲ್ಲ ನಾಯಿಗಳನ್ನು ಕೊಲ್ಲಲು ಯೋಜನೆ ರೂಪಿಸಲಾಯಿತು. ಮುಂದೊಂದು ದಿನ ನಾಲ್ಕಾರು ಜನರು ಪರಸ್ಪರ ಕಚ್ಚಾಡಿದರೆ ಇಡೀ ಮನುಷ್ಯ ಕುಲವನ್ನೇ ನಾಶ ಮಾಡುವ ಕಾನೂನು ರೂಪಿಸಲಿದೆಯೇ ನಿಮ್ಮ ಸರ್ಕಾರ?'' ಎಂಬ ಚಿತ್ರ ವಿಚಿತ್ರ ಪ್ರಶ್ನೆಗಳು ಎದುರಾದಾಗ, ಪಕ್ಷದ ರಾಜ್ಯಾಧ್ಯಕ್ಷ ರಾಜೂಗೌಡ, ``ಪ್ಲೀಸ್...ಪ್ಲೀಸ್... ನೋ ಮೋರ್ ಕ್ವಶ್ಚನ್ಸ್... ನಾವಿನ್ನೂ ಗುಲ್ಬರ್ಗಕ್ಕೆ ಹೋಗಬೇಕು. ಅಲ್ಲಿ ಮುಖ್ಯಮಂತ್ರಿಗಳು ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ'' ಎಂದು ಹೇಳುತ್ತಾ ವರದಿಗಾರರ ಕೈಗಳನ್ನು ಎಳೆದೆಳೆದು ಕುಲುಕುತ್ತಾ, ``ಥ್ಯಾಂಕ್ಯೂ... ಎವರಿಬಡಿ...'' ಎನ್ನುತ್ತಾ ಹಾಗೆ ಮುಖ್ಯಮಂತ್ರಿಗಳನ್ನು ಮುಂದೆ ಮಾಡಿಕೊಂಡು ಹೊರ ನಡೆದರು. ಅವರ ಕಾರು ನಾಲ್ಕಾರು ಹೆಜ್ಜೆ ಸಾಗಿದರೂ ``ಸಾರ್...ಸಾರ್....ಗ್ರಾಮೀಣ ಪ್ರದೇಶದ ಅಭಿವೃದ್ಧಿ ಎಂದರೆ ವಿಶೇಷ ಆರ್ಥಿಕ ವಲಯ ನೀತಿ ಜಾರಿಗೊಳಿಸುವುದು ಅಂತ... ಅರ್ಥವೇನು?'' ಎಂಬ ಪ್ರಶ್ನೆಗಳು ವರದಿಗಾರರಿಂದ ತೂರಿಬಂದವು.

ಶಿವಬಸಪ್ಪನವರ ಮನೆಯಲ್ಲಿ ಕಡಕ್ ಬಿಳಿ ಬಟ್ಟೆ ಉಟ್ಟ ಜನ ರೇಶ್ಮೆ ಹುಳುಗಳಂತೆ ಒಬ್ಬರ ಕಾಲು ತುಳಿಯುತ್ತಾ ಅತ್ತಿಂದಿತ್ತ ಓಡಾಡುತ್ತಿದ್ದರು. ಸಚಿವರ ಹೆಂಡತಿ ಭಾರತಿದೇವಿ ಕಣ್ಣುಗಳಿಂದ ಹಿಂದೆ ಎಂದೂ ಒಂದು ಹನಿ ಉದುರಿದ್ದನ್ನು ಕಣ್ಣಾರೆ ಕಾಣದ ಸುತ್ತ ನಿಂತಿದ್ದ ಒಬ್ಬಾಕೆ, ``ಯವ್ವೊ ನೋಡ್ರವ್ವೊ... ಇದಕ್ಕವ ದೊಡ್ಡವರ ಗುಣ ಅನ್ನದು... ಮನ್ಯಾಗಿನ ನಾಯಿ ಸತ್ತಿದ್ದಕ್ಕ ಮಿನಿಸ್ಟ್ರ ಹೇಣ್ತಿ ಅದೆಷ್ಟು ದುಃಖದಿಂದ ಅಳಾಕ ಹತ್ಯಾಳ...'' ಇನ್ನೊಬ್ಬಾಕೆ, ``ನೋಡಿಲ್ಲೇನು ಈಕಿನ ಹೋದ ದೀಪಾವಳಿ ಹಬ್ಬಕ್ಕ ನಾಲ್ಕು ದಿನ ಇರುವಾಗ ಶಿವಬಸಪ್ಪನವರ ತಾಯಿ ಯಮನಮ್ಮ ಹಣ್ಣು ಹಣ್ಣಾಗಿ ಸತ್ಲಲ್ಲ ಅವತ್ತು ಈ ಪುಣ್ಯಾತ್ತಿಗಿತ್ತಿ ಒಂದು ಹನಿಯನ ಕಣ್ಣೀರು ಹಾಕಿದ್ಲೆನು...'' ಪಿಸಿಪಿಸಿ ದನಿಯಲ್ಲಿ ವಟಗುಟ್ಟಿದಳು. ``ನಮಗ್ಯಾಕ ಬೇಕವ್ವ ದೊಡ್ಡೋರ ಉಸಾಬರಿ... ಅವ್ರು ಹೆಂಗಿದ್ರೂ ನಡಿಯುತ್ತ.... ಅವ್ರು ಬಟ್ಟಿ ಬಿಚ್ಗೆಂಡು ಬಜಾರಕ್ಕ ನಿಂತಗಂಡು ಕುಣದ್ರೂ ಫ್ಯಾಶನ್ ಅಂತ ಹೆಸರು ಇಡ್ತಾರ...'' ಮತ್ತೊಬ್ಬಾಕೆ ಅವರಿಬ್ಬರ ಕಿವಿಯಲ್ಲಿ ಉಸುರಿದಳು. ಶಿವಬಸಪ್ಪ ಕಲ್ಯಾಣಿ ಮಲಗಿದ್ದ ಮಂಚದ

ಸಮೀಪ ಒಂದೆರಡು ನಿಮಿಷ ನಿಂತು ಮತ್ತೆ ಹೊರಗೆ ಬಂದು ಒಂದಿಬ್ಬರಿಗೆ ಕೈಸನ್ನೆ ಮಾಡಿದರು. ಅವರು ಏನು ಅರ್ಥಮಾಡಿಕೊಂಡರೊ, "ಎಲ್ಲ ತಯಾರಾಗೈತಿ ಧಣಿ. ತಾಲೂಕು ಪಂಚಾಯಿತಿ ಜೀಪು ಖಾಲಿ ನಿಂತಿತ್ತು. ಅದನ್ನ ಇಲ್ಲಿಗೆ ತಂದು ಟಾಪ್ ಕಿತ್ತಿ ಹೂವು, ಪರಾರಿ, ಮಿಂಚಿನಿಂದ ಸಿಂಗಾರ ಮಾಡಾಕ ಹತ್ತೀವಿ... ಆದಷ್ಟು ಬೇಗನೆ ಎಲ್ಲಿ ಮಣ್ಣು ಮಾಡ್ಬಕು ಅಂತ ಹೇಳಿಬುಟ್ರೆ ಇಡೀ ನಗರದಾದ್ಯಂತ ಕಲ್ಯಾಣಿ ಮೆರವಣಿಗೆ ಶುರು ಮಾಡಿಬುಡಮ್ರಿ..." ತಮ್ಮ ಪಕ್ಷದ ತಾಲೂಕು ಅಧ್ಯಕ್ಷನೂ ಶಿವಬಸಪ್ಪನವರ ಹತ್ತಿರ ಸಂಬಂಧಿಯೂ ಆದ ಅಮರೇಶ, ಅಗತ್ಯವಿಲ್ಲದಿದ್ದರೂ ಸುತ್ತ ನಿಂತ ಜನರಿಗೆ ಕೇಳುವಂತೆ ಕೂಗಿ ಹೇಳಿ, ಯಾವುದೋ ಪಾಠದ ಪ್ರಶ್ನೆ ಉತ್ತರಗಳನ್ನು ಸಹಿ ಮಾಡಿಸಿಕೊಳ್ಳಲು ನಿಂತ ಕನ್ನಡ ಶಾಲೆ ಮಕ್ಕಳಂತೆ ಶಿವಬಸಪ್ಪನವರ ಮುಖವನ್ನೊಮ್ಮೆ ನೋಡಿದ. ಶಿವಬಸಪ್ಪನವರೂ ತಮ್ಮ ಕೆಂಪಾದ ಕಣ್ಣುಗಳಿಂದಲೇ ಗೋಣು ಅಲ್ಲಾಡಿಸಿ ಸಹಿಹಾಕಿದರು.

ಹೋದ ದೀಪಾವಳಿ ಶಿವಬಸಪ್ಪನವರ ಪಾಲಿಗೆ ಕತ್ತಲ ಹಬ್ಬವಾಗಿತ್ತು. ಪ್ರತಿ ವರ್ಷ ಅದೆಷ್ಟೊಂದು ಸಂಭ್ರಮದಿಂದ ಹಬ್ಬ ಆಚರಿಸುತ್ತಿದ್ದ ಅವರ ಕುಟುಂಬದವರು ಶಿವಬಸಪ್ಪನವರ ತಾಯಿ ಯಮನಮ್ಮ ಸತ್ತಿದ್ದಕ್ಕ ಹಬ್ಬ ಮಾಡಿರಲಿಲ್ಲ. ಇಡೀ ಊರಿಗೆ ಊರು ಶೋಕದಲ್ಲಿ ಮುಳುಗಿತ್ತು. ದೀಪಾವಳಿಗೆಂದು ದೂರದ ಊರುಗಳಿಂದ ತಂದಿದ್ದ ಕಬ್ಬು, ಬಾಳೆ, ಹೂವುಗಳನ್ನು ಖರೀದಿಸುವವರೆ ಗತಿಯಿರಲಿಲ್ಲ. ಶಿವಬಸಪ್ಪನವರೆಂದರೆ ಕೇಳಬೇಕೇನು? ತೀರಾ ಬಡ ಕುಟುಂಬದಲ್ಲಿ ಹುಟ್ಟಿ, ಕೂಲಿನಾಲಿ ಮಾಡಿ ಬೆಳೆದವರು. ಅದೇನು ಲಕ್ಕು ಬಂತೊ ರಾಜಕೀಯಕ್ಕೆ ಕಾಲಿಟ್ಟರು. ಒಂದೊಂದೇ ಹೆಜ್ಜೆ ಮೇಲೆ ಇಡುತ್ತಾ ಹೋದರು. ತಾಯಿ ಕೈತುತ್ತು ತಿಂದು ಬೆಳೆದಿದ್ದಕ್ಕೆ ಅವ್ರು ಮಿನಿಸ್ಟ್ರು ಆದ್ರೂ ತಾಯಿ ಯಮನವ್ವನ್ನ ತಮ್ಮ ದೊಡ್ಡ ಬಂಗಲೆಯಲ್ಲಿ ಪ್ರತ್ಯೇಕ ಕೋಣೆಯಲ್ಲಿ ಇರಿಸಿ ಸಕಲ ಸೌಲಭ್ಯ ಒದಗಿಸಿದ್ದರು. ಕೈಬಾಯಿ ಮಾತು ಕೇಳಲು ನಾಲ್ಕಾರು ಆಳುಗಳು ಯಮನಮ್ಮನ ಸುತ್ತ ಸದಾ ಇರುತ್ತಿದ್ದರು. ಶಿವಬಸಪ್ಪನವರ ಹೆಂಡತಿ ಸಂಡೂರು ರಾಜರ ಮನೆತನದಿಂದ ಬಂದವರಾಗಿದ್ದರಿಂದ ಯಮನಮ್ಮನ್ನು ಮುಟ್ಟಿಸಿಕೊಳ್ಳಾಕೂ ಹೇಸಿಗೆ ಪಡುತ್ತಿದ್ದಳು. ಆಕೆ ಹತ್ತಿರ ತನ್ನ ಮಕ್ಕಳನ್ನಾಗಲಿ, ಮೊಮ್ಮಕ್ಕಳನ್ನಾಗಲಿ ಆಡಲು ಬಿಡುತ್ತಿರಲಿಲ್ಲ. ಎಲ್ಲಿ ಆ ಮಕ್ಕಳ ಮೇಲೆ ಯಮನಮ್ಮನ ನೆರಳು ಬೀಳುತ್ತೇನೊ ಅಂಬ ಆತಂಕದಿಂದ ಆ ಕೋಣೆಗೆ ಅಪ್ಪಿತಪ್ಪಿಯೂ ಕಳಿಸುತ್ತಿರಲಿಲ್ಲ. ದೀಪಾವಳಿ ಪಾಡ್ಯ ಇನ್ನು ನಾಲ್ಕು ದಿನ ಇರುವಾಗ ಯಮನಮ್ಮ ಶಿವನ ಪಾದ ಸೇರಿದ್ದಳು. ಊರ ಜನ ಯಮನಮ್ಮ ಪುಣ್ಯ ಮಾಡ್ಯಾಳ ಅದಕ್ಕೆ ಪಾಡ್ಯದ ಮುಂದ ಸತ್ತಾಳ. ಈ ಸಂದರ್ಭದಲ್ಲಿ ಸತ್ತವರು ಸೀದಾ ಸ್ವರ್ಗಕ್ಕೆ ಹೋಗ್ತಾರೆಂದು ಮಾತನಾಡಿಕೊಳ್ಳುತ್ತಿದ್ದರು. ಆಕಿ ಸತ್ತ ಸುದ್ದಿ ಕೇಳಿ ಊರ ಜನ ಶಿವಬಸಪ್ಪನವರ ಮನೆಗೆ ಧಾವಿಸಿ ಬಂದರು. ಬೋರಾಡಿ ಅತ್ತರು. ಯಮನಮ್ಮ ಸ್ವಲ್ಪ

ಅಡ್ಡಾಡುವಂಗ ಗಟ್ಟಿಯಿದ್ದಾಗ ಮನೆ ಸಮೀಪ ಒಂದು ನಾಯಿನ ಸಮೇತ ಬರದಂಗ ನೋಡಿಕೊಳ್ಳುತ್ತಿದ್ದಳು. ಓಣಿಯ ಸಣ್ಣ ಹುಡಗ್ರು ಏನಾದ್ರೂ ಅವರ ಮನೆ ಮುಂದೆ ಆಟವಾಡುತ್ತಿದ್ದನ್ನು ಕಂಡರೆ ಸಾಕು ಕೆಂಡಮಂಡಲವಾಗುತ್ತಿದ್ದಳು. ಅವರು ಆಡುತ್ತಿದ್ದ ಬುಗರಿ, ಚಿಣ್ಣಿ ದಾಂಡು, ಚೆಂಡುಗಳನ್ನು ಕಸಿದುಕೊಂಡು ಹೋಗಿಬುಡುತ್ತಿದ್ದಳು. ಹುಡಗ್ರು ಕಾಲು ಹಿಡಕಂಡು ಬೇಡಿಕೊಂಡ್ರೂ, ಲಬ್ ಲಬ್ ಹೊಯ್ಕೊಂಡ್ರೂ ಕಸಿದುಕೊಂಡ ವಸ್ತುಗಳನ್ನು ಕೊಡುತ್ತಿರಲಿಲ್ಲ. ಓಣಿಯ ಹುಡಗ್ರು ಮುದುಕಿ ತಮ್ಮತ್ತ ಬರುತ್ತಿದ್ದುದನ್ನೆ ಕಂಡರೆ ಸಾಕು ತಮ್ಮ ಆಟಿಕೆಗಳನ್ನು ಹಿಡಿದುಕೊಂಡು ಸತ್ತೆನೋ, ಬಿದ್ದೆನೋ ಅಂತ ಓಡಿಹೋಗುತ್ತಿದ್ದರು. ಯಮನಮ್ಮ ಓಣಿಯಲ್ಲಿ ಬಂದರೆ ಸಾಕು... ಆಕಿ ಬಡಿಗಿಲಿಂದ ಹೊಡೆಸಿಕೊಂಡ ಹುಡಗರು, “ಕಾಗಿ ಕಾಗಿ ಕವ್ವ... ಯಾರ ಬಂದಾರ ಅವ್ವ... ಮುದುಕಿ ಬಂದಾಳವ್ವ ...” ತಮ್ಮದೇ ಆದ ಧಾಟಿಯಲ್ಲಿ ಹಾಡುತ್ತಿದ್ದರು. ಯಮನಮ್ಮ ಅಂದ್ರ ಅವರ ಪಾಲಿಗೆ ಕಾಗಿಯಾಗಿದ್ದಳು. ಇಂತದ್ದಕ್ಕೆಲ್ಲಾ ಶಿವಬಸಪ್ಪನವರಾಗಲಿ, ಅವರ ಮನೆಯವರಾಗಲಿ ತಲೆಕಡೆಸಿಕೊಂಡವರಲ್ಲ. ಮುದುಕಿ ಕೆಳಗಿನಿಂದ ತನ್ನ ಕೋಣೆಗೆ ಪಾಂಟುಣಗಿ ಹತ್ತಲು ಹೋಗಿ ಕಾಲು ಜಾರಿ ಬಿದ್ದು, ಕಾಲು ಮುರಿದುಕೊಂಡಿದ್ದೇ ನೆವವಾಗಿ ನಾಲ್ಕಾರು ದಿನ ಬೆಂಗಳೂರಿನ ಆಸ್ಪತ್ರೆಗೆ ದಾಖಲಾದಳು. ಇನ್ನೇನು ಆರಾಮ ಆದಳು. ಊರಿಗೆ ಕರೆದುಕೊಂಡು ಬರಬೇಕೆಂದು ಅಂದುಕೊಂಡಾಗಲೇ ಮುದುಕಿ ಇಹಲೋಕ ತ್ಯಜಿಸಿದ್ದಳು.

ದೆಹಲಿಗೆ ಹೊರಟಿದ್ದ ಶಿವಬಸಪ್ಪ, ಮುದುಕಿ ಸತ್ತ ಸುದ್ದಿ ತಿಳಿಯುತ್ತಲೆ ಏಕಾಏಕಿ ಬೆಂಗಳೂರಿಗೆ ವಾಪಸು ಹೋದರು. ಊರಿಗೆ ಸುದ್ದಿ ಮುಟ್ಟಿಸಿದರು. ಯಮನಮ್ಮನ ಶವ ತಂದಾಗ ಊರಲ್ಲಿ ನೋಡಬೇಕು. ಶವವನ್ನು ಸ್ವಾಗತಮಾಡಿಕೊಳ್ಳಲಿಕ್ಕೆ ಅದೆಷ್ಟು ಜನ ಸೇರಿದ್ದರು. ಶವ ನೋಡುವುದಕ್ಕಿಂತ ಮೊದಲು ಅವರು ಶಿವಬಸಪ್ಪನವರನ್ನೇ ಹುಡುಕುತ್ತಿದ್ದರು. ಅವರ ಬಾಡಿದ ಮುಖ ಕಂಡು ತಮ್ಮ ಮುಖಗಳನ್ನೂ ಬಾಡಿಸಿಕೊಂಡರು. ಕಣ್ಣಾಲಿಗಳು ತೇವಗೊಳ್ಳದಿದ್ದರೂ ಕೆಲವರು ತಿಣುಕಾಡಿ ತೇವಮಾಡಿಕೊಂಡರು. ಇನ್ನೂ ಕೆಲವರು ತಮ್ಮ ಕೈಬೆರಳುಗಳನ್ನು ಬಾಯಿಯಲ್ಲಿಟ್ಟು ಜಿಬುಕಿ ಕಣ್ಣುಗಳಿಗೆ ಉಗುಳು ಒರೆಸಿಕೊಂಡು ತಮಗೂ ದುಃಖವಾಗಿದೆ ಎಂಬುದನ್ನು ಪ್ರದರ್ಶಿಸಿದರು. ಇಡೀ ನಗರದ ಪ್ರತಿ ಓಣಿ, ಬೀದಿಯ ಮೂಲಕ ಹಾದು ಹೋದ ಯಮನಮ್ಮನವರ ಶವ ಹೊತ್ತ ಕಾರು ಬಂದ ಕೂಡಲೇ ಎಲ್ಲರೂ ಎದ್ದು ನಿಂತು ಕಣ್ಣರಳಿಸಿ ನೋಡಿದರು. ಪತ್ರಿಕೆಗಳಲ್ಲಿ ದೊಡ್ಡ ಜಾಹಿರಾತು ಹಾಕಿಸಿಕೊಂಡ ಪಕ್ಷದ ಮುಖಂಡರು ಮಿನಿಸ್ಟ್ರು ಶಿವಬಸಪ್ಪ ಮತ್ತು ಅವರ ಕುಟುಂಬದವರಿಗೆ ಯಮನಮ್ಮನವರ ಸಾವಿನಿಂದ ಉಂಟಾದ ದುಃಖ ತಡೆದುಕೊಳ್ಳುವ ಶಕ್ತಿಕೊಡಲೆಂದು ಭಗವಂತನಲ್ಲಿ ಪ್ರಾರ್ಥಿಸಿದರು. “ಕೋಡಿ ಯಮನಮ್ಮ

ಬದುಕಿದ್ದಾಗ ಇಷ್ಟು ಸಂಭ್ರಮ ಕಂಡಿತ್ತೊ... ಇಲ್ಲೊ... ಸತ್ತಾಗ ನೋಡಿದ್ರ ಅದೆಷ್ಟೆಂದು ಜನ ಬಂದು ನೋಡಿ ಹೋಗಿದ್ದು. ಕಣ್ಣೀರು ಹಾಕಿದ್ದು... ಎಲ್ಲ ಶಿವಬಸಪ್ಪನ ಪುಣ್ಯದಿಂದ ಯಮನಮ್ಮಗ ಇಂಥಾ ಭಾಗ್ಯ ಬಂತು...'' ಅಂತ ಸುತ್ತಲಿನ ಜನ ಮಾತನಾಡಿಕೊಂಡರು.

ಯಮನಮ್ಮ ಸತ್ತಾಗ ನಗರದ ವಿವಿಧ ಪ್ರಮುಖ ಬೀದಿಗಳಲ್ಲಿದ್ದ ಶಿವಬಸಪ್ಪನವರ ಒಡೆತನದ ನಾಲ್ಕು ಪೆಟ್ರೋಲ್ ಬಂಕ್‌ಗಳು, ಹತ್ತಾರು ವ್ಯಾಪಾರ ಮಳಿಗೆಗಳಿಗೆ ಬೀಗ ಜಡಿಯಲಾಗಿತ್ತು. ಸರ್ಕಾರಿ ಕಚೇರಿಗಳ ಅಧಿಕಾರಿಗಳು, ಸಿಬ್ಬಂದಿ ಸಮೇತ ಕೆಲಸಕ್ಕೆ ಹೋಗಲಾರ್ದ ಶಿವಬಸಪ್ಪನವರ ಮನೆಯಲ್ಲೇ ಆ ದಿನ ಠಿಕಾಣಿ ಹೂಡಿ ತಮ್ಮ ಇಲಾಖೆಯ ಸೇವೆ ಅಲ್ಲಿ ಮುಂದುವರಿಸಿದ್ದರು. ನಗರಸಭೆ ಪೌರಾಯುಕ್ತರಿಂದ ಹಿಡಿದು ಅಲ್ಲಿನ ಪ್ಯೂನ್‌ವರೆಗಿನ ಸಿಬ್ಬಂದಿ ಮನೆಗೆ ಬರುತ್ತಿದ್ದ ಜನರಿಗೆ ಉಪಾಹಾರ, ನೀರು ಕೊಡುವ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡುತ್ತಿದ್ದರು. ನಗರದ ಬೀದಿಗಳ ಕಸ ಗುಡಿಸಬೇಕಿದ್ದ ನೂರಾರು ಸಿಬ್ಬಂದಿ ಆ ದಿನ ಶಿವಬಸಪ್ಪನವರ ಮನೆಯ ಸುತ್ತ ಕಸ ಕಡ್ಡಿ, ಪೇಪರ್ ಹಾಯುವ ಕೆಲಸವನ್ನು ಬಹು ಶ್ರದ್ಧೆಯಿಂದ ಮಾಡುತ್ತಿದ್ದರು. ಹುಬ್ಬಳ್ಳಿಯಿಂದ ವಿಶೇಷವಾಗಿ ತರಿಸಿದ್ದ ಹೂವಿನ ಮಂಟಪದಲ್ಲಿ ಯಮನಮ್ಮನ್ನ ಕೂಡಿಸಿ ಮೆರವಣಿಗೆ ಮಾಡಿ ಶವ ಸಂಸ್ಕಾರ ಮಾಡಲಾಯಿತು. ತಮ್ಮ ಮೇಲೆ ಜನರಿಟ್ಟ ವಿಶ್ವಾಸ, ಪ್ರೀತಿಗೆ ಶಿವಬಸಪ್ಪ ದಂಗಾಗಿ ಹೋಗಿದ್ದರು. ಹೀಗೆ ಗತಕಾಲದ ನೆನಪು ಮಾಡಿಕೊಳ್ಳುತ್ತಾ ಹೊರಗಿನ ತಮ್ಮ ಜೋಕಾಲಿಯಲ್ಲಿ ಕುಳಿತ ಶಿವಬಸಪ್ಪನವರನ್ನು ಯಾರೊ ಮುಟ್ಟಿ ಮಾತನಾಡಿಸಿದಾಗಲೆ ಎಚ್ಚೆತ್ತುಕೊಂಡಿದ್ದು. ರಾಜ್ಯ ಪಶು ಸಂಗೋಪನಾ ಮತ್ತು ಪಾಲನಾ ಖಾತೆ ಸಚಿವ ಚೆನ್ನಪ್ಪ ಅವರ ಮುಂದೆ ನಿಂತಿದ್ದನ್ನು ಕಂಡ ಶಿವಬಸಪ್ಪ ಜೋಕಾಲಿಯಿಂದ ದಿಗ್ಗನೆ ಎದ್ದುನಿಂತರು. ಅವರು ನಿಂತ ರಭಸಕ್ಕೆ ಜೋಕಾಲಿ ಹಿಂದಕ್ಕೂ ಮುಂದಕ್ಕೂ ಓಲಾಡಿ ಜೋಕಾಲಿಗೆ ಹೊಂದಿಕೊಂಡೆ ನಿಂತಿದ್ದ ಹತ್ತಾರು ಜನರ ಮೊಣಕಾಲಿಗೆ ಬಡಿಯಿತು. ಅವರಿಗೆ ಅದ್ಯಾವುದೂ ಲೆಕ್ಕಕ್ಕಿರಲಿಲ್ಲ. ಪರಸ್ಪರ ಕೈಕುಲುಕಿದ ಚೆನ್ನಪ್ಪ ಮತ್ತು ಶಿವಬಸಪ್ಪ ಕಲ್ಯಾಣಿಯಿದ್ದ ಕೋಣೆಗೆ ಹೋದರು.

ಹೂವಿನಲ್ಲಿ ಅಡಗಿದ್ದರೂ ಕಲ್ಯಾಣಿಯ ಆಕಾರ ಅರ್ಥಮಾಡಿಕೊಂಡ ಚೆನ್ನಿಗಪ್ಪ, ‘‘ಹುಲಿಯಂತಾ ನಾಯಿ ಅದೆಷ್ಟು ಚಲೊ ಐತಿ. ಇದಕ್ಕ ಇಂಥಾ ಸಾವು ಬರಬಾರದಾಗಿತ್ತು. ನಿಮ್ಮ ಕಲ್ಯಾಣಿ ಹೆಸರಿನಲ್ಲಿ ಪ್ರತಿ ವರ್ಷ ರಾಜ್ಯ ಮಟ್ಟದಲ್ಲಿ ನಾಯಿಗಳ ಶೌರ್ಯ ಪ್ರದರ್ಶನ ಏರ್ಪಡಿಸಿ, ಗೆದ್ದ ನಾಯಿಗೆ ಬಂಗಾರದ ಪದಕ, ಒಂದು ಲಕ್ಷ ರೂಪಾಯಿ ನಗದು ಬಹುಮಾನವನ್ನ ಸರ್ಕಾರದಿಂದ ನೀಡಲಾಗುತ್ತದೆ'' ಎಂದು ಘೋಷಿಸಿದರು. ಸಮೀಪದಲ್ಲಿದ್ದ ಪತ್ರಕರ್ತರು, ದೃಶ್ಯ

ಮಾಧ್ಯಮದ ವರದಿಗಾರರು ಹೊಸ ವಿಷಯವೆಂಬಂತೆ ಚೆನ್ನಪ್ಪನವರತ್ತ ತಮ್ಮ ದೃಷ್ಟಿ ಹಾಯಿಸಿದರು. ಹಾಳೆಯಲ್ಲಿ ಅವರು ಉಸುರಿದ ಪ್ರತಿ ಅಕ್ಷರವನ್ನೂ ಗೀಚಿಕೊಂಡರು.

ಶಿವಬಸಪ್ಪನವರ ಕುಟುಂಬದ ಸದಸ್ಯರು ಮತ್ತು ಅವರ ಪಕ್ಷದ ಮುಖಂಡರು ಕಲ್ಯಾಣಿಯ ಮೆರವಣಿಗೆ ಮಾಡಲು ಅಣಿಯಾದರು. ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ ಬಾಣ ಬಿರುಸು ತರಿಸಲಾಗಿತ್ತು. ಶಿವಬಸಪ್ಪನವರ ತಾಯಿ ಯಮನಮ್ಮ ಮುದಕಿ ಸತ್ತಾಗ ತರಿಸಿದ್ದ ಮಂಟಪವನ್ನೇ ತರಿಸಿ, ಅತ್ಯಂತ ಸುಂದರವಾಗಿ ಅಲಂಕಾರ ಮಾಡಲಾಗಿತ್ತು. ನೋಡುಗರ ಕಣ್ಣು ಕುಕ್ಕುವಂತೆ ಮಂಟಪ ಕಾಣುತ್ತಿತ್ತು. ಕಲ್ಯಾಣಿ ಮುಖ ಕಾಣುವಷ್ಟು ಬಿಟ್ಟು ಉಳಿದೆಡೆ ವಿವಿಧ ಹೂಗಳಿಂದ ಸಿಂಗರಿಸಲಾಗಿತ್ತು. ಮಂಟಪ ಹೊತ್ತ ಜನ ಶಿವಬಸಪ್ಪನವರ ಮನೆಯಿಂದ ನಿಧಾನವಾಗಿ ಹೊರಬಂದರು. ಪಕ್ಷದ ಹಿರಿಯ ಮುಖಂಡರಿಬ್ಬರು ಶಿವಬಸಪ್ಪನವರ ತೋಳುಗಳಲ್ಲಿ ಕೈಹಾಕಿ ಗಂಡ ಸತ್ತ ವಿಧವೆಯನ್ನು ಸ್ಮಶಾನಭೂಮಿಗೆ ಕರೆದುಕೊಂಡು ಹೋಗುವಂತೆ ಹಿಡಿದುಕೊಂಡು ನಡೆದಿದ್ದರು. ಪಕ್ಷದ ಚಿಹ್ನೆಯಿದ್ದ ಜರತಾರಿ ಶಲ್ಯೆಯಿಂದಲೇ ಕಣ್ಣು ತಿಕ್ಕಿಕೊಳ್ಳುತ್ತಾ ಮಂಟಪದ ಹಿಂದೆ ಸಾಗಿದ್ದರು. ಬಂಧು ಬಳಗದವರ ದುಃಖದ ಕಟ್ಟೆ ಒಡೆಯಿತು. ಪಕ್ಷದ ಮುಖಂಡರು ಕಾರ್ಯಕರ್ತರು, ಶಿವಬಸಪ್ಪನವರ ಅಪಾರ ಬೆಂಬಲಿಗರು ''ಕಲ್ಯಾಣಿ ಅಮರ್ ರಹೇ...ಮಿನಿಸ್ಟ್ರು ಶಿವಬಸಪ್ಪನವರಿಗೆ ಜೈ....'' ಎಂದು ಮುಗಿಲುಮುಟ್ಟುವಂತೆ ಜಯಘೋಷ ಹಾಕಿದರು.

ಮಂಟಪ ಮಿನಿಸ್ಟ್ರು ಮನೆ ಮುಂದಿನ ದಾರಿಯಿಂದ ಪ್ರಮುಖ ರಸ್ತೆಗೆ ಬಂತು. ಮಂಟಪ ಬರುವ ಮುನ್ಸೂಚನೆ ಹಿನ್ನೆಲೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನೇತೃತ್ವದಲ್ಲಿ ನಗರದ ಎಲ್ಲ ಪ್ರಮುಖ ರಸ್ತೆಗಳ ಮೇಲಿನ ಸಂಚಾರವನ್ನು ಕೆಲ ಕಾಲ ಸ್ಥಗಿತಗೊಳಿಸಲಾಗಿತ್ತು. ಊರ ಹೊರವಲಯದಲ್ಲಿ ನೂರಾರು ವಾಹನಗಳು ಸಾಲುಗಟ್ಟಿ ಕಾಯುತ್ತಿದ್ದವು. ಮಂಟಪದ ಮೆರವಣಿಗೆ ಸಾಗುತ್ತಿದ್ದ ಹಾದಿಯಲ್ಲಿ ಹೆಜ್ಜೆಗೊಮ್ಮೆ ಕಿವಿಪರದೆ ಹೋಗುವ ಶಬ್ದದಲ್ಲಿ ಬಾಣಗಳನ್ನು ಸುಡಲಾಯಿತು. ಸಾವಿರಾರು ಅಭಿಮಾನಿಗಳು ಶೋಕದಲ್ಲೂ ಕುಣಿದು ಕುಪ್ಪಳಿಸಿದರು, ಕೇಕೆ ಹಾಕಿದರು. ಮಂಟಪ ನಗರದ ಎಲ್ಲ ಬೀದಿಗಳಲ್ಲಿ ಸಾಗಿದಾಗ ಕೆಲವೆಡೆ ವೃತ್ತಗಳಲ್ಲಿ ಪಕ್ಷದ ಮುಖಂಡರು ಮತ್ತು ಅಭಿಮಾನಿಗಳು ಕಲ್ಯಾಣಿಗೆ ಹೊಸ ಬಟ್ಟೆ ಹಾಕಿ ವಿಶೇಷ ಪೂಜೆ ಸಲ್ಲಿಸಿದರು. ಶಿವಬಸಪ್ಪನವರ ತಾಯಿ ಸತ್ತಾಗಲೂ ಇಷ್ಟೊಂದು ಜನ ಸೇರಿರಲಿಲ್ಲ. ಎಲ್ಲೆಲ್ಲಿಂದಲೊ ಜನ ಸಾಗರವೇ ಹರಿದುಬಂದಿತ್ತು. ಕಿತ್ತೂರು ಚೆನ್ನಮ್ಮ ಸರ್ಕಲ್‌ನಿಂದ ಮಹಾತ್ಮಗಾಂಧಿ ವೃತ್ತದವರೆಗೆ ಒಂದು ಸೂಜಿ ತೂರಲು ಜಾಗವಿರದಂತೆ ಮಂಟಪದ ಹಿಂದೆ ಜನ ಸಾಗುತ್ತಿದ್ದರು. ನಗರದ ಎಲ್ಲ ಬೀದಿ, ವೃತ್ತ, ರಸ್ತೆಗಳನ್ನು ದಾಟಿದ ಮಂಟಪ ಮತ್ತೆ ಶಿವಬಸಪ್ಪನವರ ಮನೆ ಆವರಣ ಸೇರಿತು.

ಕಂಪೌಂಡಿನ ಒಳಗೆ ತೋಡಿದ್ದ ಕುಣಿಯಲ್ಲಿ ಕಲ್ಯಾಣಿಯನ್ನು ಮಣ್ಣು ಮಾಡಲು ಶಿವಬಸಪ್ಪ ನಿರ್ಧರಿಸಿದ್ದರು. ಕಲ್ಯಾಣಿಯ ಕುಣಿ ಮೇಲೆ ಅಮೃತ ಶಿಲೆಯಲ್ಲಿ ಸ್ಮಾರಕವೊಂದನ್ನು ನಿರ್ಮಿಸಲು ಅವರ ಬೆಂಬಲಿಗರು ಯೋಚಿಸಿದ್ದರು. ಕಲ್ಯಾಣಿಗೆ ಶಿವಬಸಪ್ಪನವರ ನಂಬಿಕೆಯ ಜಾತಿ, ಧರ್ಮದಂತೆಯೇ ಚಾಚೂತಪ್ಪದೇ ಎಲ್ಲ ವಿಧಿ ವಿಧಾನಗಳ ಮೂಲಕ ಅಂತಿಮ ಪೂಜೆ ಸಲ್ಲಿಸಲಾಯಿತು. ಶಿವಬಸಪ್ಪನವರ ಕಣ್ಣುಗಳಿಂದ ಒಂದೇ ಸಮನೆ ಕಣ್ಣೀರು ದಳ ದಳ ಇಳಿಯುತ್ತಿದ್ದವು. ಶಲ್ಯೆಯಿಂದ ಒರೆಸಿಕೊಳ್ಳುತ್ತ ಹೂವಿನಿಂದ ಮುಚ್ಚಲ್ಪಟ್ಟಿದ್ದ ಕಲ್ಯಾಣಿಯ ಮೇಲೆ ಹಿಡಿ ಮಣ್ಣನ್ನು ತಮ್ಮ ತೇವವಾದ ಕಣ್ಣುಗಳಿಗೆ ಒತ್ತಿಕೊಂಡು ಹಾಕಿ, ಕುಣಿಗೆ ಹಣಿ ಹಚ್ಚಿ ನಮಸ್ಕರಿಸಿದರು. ಮತ್ತೆಲ್ಲಿ ಹೆಚ್ಚುಕಮ್ಮಿಯಾಗಿ ಅವರಿಗೆ ಮೂರ್ಛೆಗೀರ್ಛೆ ಬಂದೀತೆಂಬ ಆತಂಕದಲ್ಲಿ ವೈದ್ಯರು ಅವರ ಸಮೀಪದಲ್ಲೆ ನಿಂತಿದ್ದರು. ಜನ ಪರಸ್ಪರ ಕೈ ಕಾಲು ತುಳಿಯುತ್ತ ಕಲ್ಯಾಣಿಯ ಮೇಲೆ ಹಿಡಿ ಮಣ್ಣು ಹಾಕಿ ಧನ್ಯರಾದರು.

ಶಿವಬಸಪ್ಪನವರಿಗೆ ಕಲ್ಯಾಣಿಯನ್ನು ಮಣ್ಣು ಮಾಡಿದ ರಾತ್ರಿ ಅದೆಷ್ಟು ಹೊತ್ತಾದರೂ ಕಣ್ಣಿಗೆ ನಿದ್ದೆ ಹತ್ತಲಿಲ್ಲ. ಪ್ರತಿ ಕ್ಷಣಕ್ಕೊಮ್ಮೆ ಕಲ್ಯಾಣಿ ಕಣ್ಣ ಮುಂದೆ ಬಂದು ಕುಳಿತಂತೆ ಅನ್ನಿಸಿತು. ಹಾಸಿಗೆಯಲ್ಲಿ ಅತ್ತಿಂದಿತ್ತ ಹಲವು ಬಾರಿ ಉರುಳಾಡಿದರೂ ನಿದ್ದೆ ಬಾರದೆ ಎದ್ದು ಕುಂತರು. ಕಲ್ಯಾಣಿಯನ್ನು ಮಣ್ಣು ಮಾಡಿದ್ದ ಜಾಗದ ಸಮೀಪ ನಾಲ್ಕಾರು ನಾಯಿಗಳು ಪರಸ್ಪರ ಕಚ್ಚಾಡಿದ, ಬೊಗಳಿದ ದನಿಯಿಂದ ಕುಂತವರು ಎದ್ದು ನಿಂತು ಕಿಟಕಿ ಮೂಲಕ ಕಲ್ಯಾಣಿಯ ಸಮಾಧಿಯತ್ತ ಕಣ್ಣರಳಿಸಿ ನೋಡಿದರು. ಮಂದ ಬೆಳಕಿನಲ್ಲಿ ನಾಲ್ಕಾರು ನಾಯಿಗಳಿದ್ದುದು ಕಂಡು ಬಂತು. ಶಿವಬಸಪ್ಪ ತಮ್ಮ ಮನೆಯ ಆಳುಗಳನ್ನು ಕೂಗಿ ಎಬ್ಬಿಸಿದರು. "ಏನ್ ಧಣಿ.... ಕರೆದೇನ್ರಿ ಧಣಿ..." ಎಂದು ಕೆಟ್ಟ ಕನಸು ಕಂಡು ಮಿಟಗಿ ಬಿದ್ದಂತೆ ಎದ್ದ ಆಳುಗಳಿಬ್ಬರು ಅವರ ಕೋಣೆಯ ಮುಂದೆ ಬಂದು ನಿಂತರು. ಕಲ್ಯಾಣಿಯ ಸಮಾಧಿಯ ಮೇಲೆ ನಿಂತು ಪರಸ್ಪರ ಕಿತ್ತಾಡುತ್ತಿದ್ದ ಹಾಗೂ ಬೊಗಳುತ್ತಿದ್ದ ನಾಯಿಗಳನ್ನು ಓಡಿಸುವಂತೆ ಶಿವಬಸಪ್ಪ ಆದೇಶಿಸಿದರು. ಕಣ್ಣು ತಿಕ್ಕಿಕೊಳ್ಳುವುದನ್ನೂ ಮರೆತ ಆಳುಗಳು ಕೈಗೆ ಸಿಕ್ಕ ಉದ್ದನೆಯ ಬಂಬುಗಳನ್ನು ಹಿಡಿದು ಬೇಟೆಗೆ ಹೊರಟವರಂತೆ ಓಡಿದರು. ಸಮಾಧಿ ಸಮೀಪ ಬರುತ್ತಿದ್ದ ಆಳುಗಳನ್ನು ಕಂಡೂ ಕಾಣದಂತೆ ತಮ್ಮ ಲೋಕದಲ್ಲಿ ತಾವಿದ್ದ ನಾಯಿಗಳು ಈ ಪುಟುಗೋಸಿ ಆಳುಗಳನ್ನು ತಮ್ಮ ಚೂಪಾದ ಹಲ್ಲುಗಳಿಂದ ಕಚ್ಚಿ ಗಾಯಗೊಳಿಸಿದರಾಯಿತು ಎಂಬ ಉಪೇಕ್ಷೆಯಲ್ಲಿ ಇದ್ದಂತೆ ಕಂಡು ಬಂದವು. ಆಳುಗಳು ಸ್ವಲ್ಪ ದೂರದಿಂದ ನಾಯಿಗಳು ಯಾವುದೊ ಪ್ರಾಣಿಯ ಮಾಂಸವನ್ನು ಎಳೆದಾಡುತ್ತಾ, ಹಲ್ಲಿನಿಂದ ಕಚ್ಚಿ ಹೊರಗೆ ಎಳೆಯುತ್ತಿದ್ದುದನ್ನು ಕಂಡ ಅವರ ಎದೆಗೆ ಯಾರೊ ಜೋರಾಗಿ ದೊಡ್ಡ ಕಲ್ಲು

ಉರುಳಿಸಿದಂತೆ ಅನ್ನಿಸಿತು. ಸಮಾಧಿಯ ಮಣ್ಣು ಮೇಲೆ ಕೆದರಿದಂತೆ ಬಿದ್ದಿತ್ತು. ಹೂವಿನಹಾರಗಳು ಎಲ್ಲೆಂದರಲ್ಲಿ ಎಸೆಯಲ್ಪಟ್ಟಿದ್ದವು. ಸಾಕ್ಷಾತ್ ದೈವಸ್ವರೂಪಿಣಿಯಾದ ಕಲ್ಯಾಣಿಯೇ ಈ ನಾಯಿಗಳ ಆಟಾಟೋಪಕ್ಕೆ ಸಿಲುಕಿದೆ ಎಂಬುದನ್ನು ಆಳುಗಳು ಅರ್ಥಮಾಡಿಕೊಂಡವರೇ ತಮ್ಮ ಬಡಿಗೆಗಳನ್ನು ಮೇಲೆತ್ತಿ ತಮ್ಮ ಇಡೀ ಮೈಯೆಂಬ ಮೈ ಶಕ್ತಿ ರಟ್ಟೆಯೊಳಗೆ ಬರುವಂತೆ ಹೂಂಕರಿಸಿ ಮಾಂಸವನ್ನು ಹಿಡಿದೆಳೆಯುತ್ತಿದ್ದ ನಾಯಿಗಳ ಮೇಲೆ ದೊಪ್ಪನೆ ಹಾಕಿದರು. ಎರಡು ನಾಯಿಗಳು ನಾಲ್ಕಾರು ಏಟುಗಳಿಗೆ ಸತ್ತಂತೆ ಬಿದ್ದವು. ಇನ್ನೆರಡು ನಾಯಿಗಳು ಕಾಲಿಗೆ ಒಂದೆರಡು ಏಟು ಬಿದ್ದು ಗಾಯವಾಗಿದ್ದರೂ ಕುಂಟುತ್ತಾ, ತೆವಳುತ್ತಾ ಓಡಿಹೋದವು.

ಬಲವಾದ ಪೆಟ್ಟಿನಿಂದ ಎರಡು ನಾಯಿಗಳು ಕಲ್ಯಾಣಿಯ ಸಮಾಧಿಯ ಮೇಲೆ ಸತ್ತಂತೆ ಬಿದ್ದಿದ್ದವು. ಕಲ್ಯಾಣಿ ಇಡೀ ದೇಹ ಹರಿದು ಚಿಂದಿಯಾದ ಕೆಂಪು ಬಟ್ಟೆಯಂತೆ ಕಾಣುತ್ತಿತ್ತು. ಜೋರಾಗಿ ಕೂಗಿದ ಆಳುಗಳು ಕುಂಟುತ್ತಾ ಓಡಿಹೋದ ನಾಯಿಗಳ ಬೆನ್ನ ಹಿಂದೆ ಓಟ ಕಿತ್ತರು. ಶಿವಬಸಪ್ಪನವರು ಬಂಗಲೆಯಿಂದ ಕುಣಿಯತ್ತ ನಿಧಾನವಾಗಿ ನಡೆದು ಬಂದರು ತಮ್ಮ ಪ್ರೀತಿಯ ಕಲ್ಯಾಣಿಗೆ ಸಾವಿನ ನಚಿತರವೂ ದುಃಖ ತಪ್ಪದ್ದನ್ನು ನೆನೆದು ಮಮ್ಮಲಮರುಗಿದರು. ಉಮ್ಮಳಿಸಿ ಬಂದ ದುಃಖವನ್ನು ತಡೆದುಕೊಳ್ಳಲಾಗದೆ ಬಿಕ್ಕಿ ಬಿಕ್ಕಿ ಅತ್ತರು. ಸಮಾಧಿಯ ಸಮೀಪವೇ ಕುಸಿದು ಕುಂತರು. ಸತ್ತಂತೆ ಬಿದ್ದಿದ್ದ ನಾಯಿಗಳ ಜೀವ ಟುಕು ಟುಕು ಅನ್ನುತ್ತಿತ್ತು. ಇನ್ನೇನು ಯಾವ ಕ್ಷಣದಲ್ಲಿ ಜೀವ ಹೋಗುತ್ತೇನು ಅಂಬಂತಿದ್ದ ನಾಯಿಗಳನ್ನು ತಮ್ಮ ಅರೆ ಪ್ರಜ್ಞಾಹೀನ ಸ್ಥಿತಿಯಲ್ಲೂ ಗಮನಿಸಿದರು. ನಾಲ್ಕಾರು ಬಾರಿ ಬಿಕ್ಕಿದ ನಾಯಿಗಳು ಗೋಣು ತಿರುವಿಕೊಂಡು ಮಲಗಿದವು. ಶಿವಬಸಪ್ಪ ಸಮಾಧಿಯ ಸಮೀಪ ಕೈಯಾಡಿಸಿದರು. ಕಲ್ಯಾಣಿಯ ಕರುಳಿನ ಎಳೆಗಳು ಅವರ ಕೈಗೆ ಸಿಕ್ಕವು. ಅದನ್ನೆ ಕಲ್ಯಾಣಿಯೆಂಬಂತೆ ಶಿವಬಸಪ್ಪ ಕರುಳಿನ ಎಳೆಯೊಂದನ್ನು ಹಿಡಿದು ತಮ್ಮ ಎದೆಗೆ ಒತ್ತಿಕೊಂಡರು. ‘‘ನಮ್ ಕಲ್ಯಾಣಿಗೆ ಸತ್ತ ಮ್ಯಾಲೂ ಆಕಿ ಹೆಣಾನ ತಿನ್ನಾಕ ನೋಡಿದ ನಾಯಿಗಳನ್ನ ನಾವು ಬುಡ್ತಿವೇನು? ಅವು ಪಾತಾಳದಾಗ ಹೊಕ್ಕೊಂಡಿದ್ರೂ ಬುಡ್ತಿತ್ತಿದ್ದಿಲ್ಲ. ಕುಂಟಿಗೆಂತ ಎಷ್ಟು ದೂರ ಓಡ್ತಿದ್ವು. ಒಚಿದೇ ಏಟಿಗೆ ಸತ್ತು ಹೋದ್ವು_’’ ತಮ್ಮ ಪರಾಕ್ರಮವನ್ನು ಪರಸ್ಪರ ಹೊಗಳಿಕೊಳ್ಳುತ್ತಿದ್ದ ಆಳುಗಳು ಸಮಾಧಿ ಬಳಿ ಶಿವಬಸಪ್ಪನವರೇ ಬಂದು ಕುಂತಿದ್ದನ್ನು ಕಂಡು ಬಾಯಿ ಮುಚ್ಚಿಕೊಂಡರು. ಆಳುಗಳು ಸಮೀಪ ಬರುತ್ತಿದ್ದಂತೆ ಶಿವಬಸಪ್ಪನವರು ಕೈಯಲ್ಲಿದ್ದ ಕರಳನ್ನು ಕಣ್ಣಿಗೆ ಒತ್ತಿಕೊಂಡು ಎದಿಮೇಲೆ ಇಟ್ಟುಕೊಂಡು ಬಂಗಲೆಚಿುತ್ತ ನಡೆದರು. ಸ್ವಲ್ಪ ದೂರದಲ್ಲಿ ನಿಂತಿದ್ದ ಆಳುಗಳಿಗೆ ಶಿವಬಸಪ್ಪನವರು ಕೈಯಲ್ಲಿ ಏನು ಹಿಡಿದುಕೊಂಡು ಹೋದ್ರು, ಯಾಕ ಹಿಡಿದುಕೊಂಡು ಹೋದ್ರು ಅಂಬದು ಅರ್ಥ ಆಗ್ಲಿಲ್ಲ. ಕಂಪೌಚಿಡಿನ ಸಮೀಪ ಒಚಿದೆರಡು

ನಾಯಿಗಳು ಇನ್ನೇನು ಸಾಯುವ ಸ್ಥಿತಿಯಲ್ಲಿದ್ದಂತೆ ಆರ್ತನಾದ ಮಾಡಿದವು. ಒಚಿದೆರಡು ಬಾರಿ ಕೇಳಿದ ದನಿ ಮತ್ತೆ ಕೇಳಲಿಲ್ಲ_ ಕರುಳನ್ನು ಹಿಡಿದೇ ಶಿವಬಸಪ್ಪ ತಮ್ಮ ಮಲಗುವ ಕೋಣೆ ಪ್ರವೇಶಿಸಿದರು..

*****

# ವಿವಾಹ

ವಿವಾಹವೆನ್ನುವುದು ಪ್ರಪಂಚದಾದ್ಯಂತ ಒಂದಲ್ಲ ಒಂದು ರೀತಿಯಲ್ಲಿ ಕಂಡುಬರುವ ಸಾಮಾಜಿಕ ವ್ಯವಸ್ಥೆ. ವಿವಾಹ ವ್ಯವಸ್ಥೆ ಕುಟುಂಬವನ್ನು ಸುವ್ಯವಸ್ಥಿತವಾಗಿರುವಂತೆ ಮಾಡುತ್ತದೆ. ವಿವಾಹ ವಿಭಿನ್ನ ಲಿಂಗಗಳ ವ್ಯಕ್ತಿಗಳು ಗಂಡ–ಹೆಂಡತಿ (ದಂಪತಿ)ಗಳಾಗಿ ಕುಟುಂಬ ಜೀವನಕ್ಕೆ ಒಗ್ಗಿಕೊಳ್ಳುವ ಸ್ಥಿತಿ. ಇದು ಸಮಾಜಮಾನ್ಯ ಸುವ್ಯವಸ್ಥಿತ ಗಂಡು ಹೆಣ್ಣುಗಳ ಲೈಂಗಿಕ ಸಂಯೋಗಕ್ಕೆ ಅವಕಾಶ ಒದಗಿಸಿಕೊಡುತ್ತದೆ. ಇದರಿಂದ ಹದಿಹರೆಯದಲ್ಲಿರುವವರ ಲೈಂಗಿಕಾಸಕ್ತಿಗೆ ಒಂದು ಚೌಕಟ್ಟನ್ನು ನಿರ್ಮಿಸಿಕೊಡುವುದರ ಜೊತೆಗೆ ದಾಂಪತ್ಯ ಜೀವನದ ಸಂಬಂಧವನ್ನು ಕಲಿಸಿಕೊಡುತ್ತದೆ. ವಿವಾಹವಾದ ಪ್ರತಿಯೊಂದು ಸಮಾಜದ ಸ್ತ್ರೀಪುರುಷರ ಕಾರ್ಯವಿಂಗಡಣೆ ಶ್ರಮವಿಭಜನೆ ಇರುತ್ತದೆ. ಸಾಮಾನ್ಯವಾಗಿ ಭಾರತದಲ್ಲಿ ಜಾತಿಪದ್ಧತಿಯಿರುವುದರಿಂದ ಸ್ವಗೋತ್ರ ವಿವಾಹ ರೂಢಿಗತವಾಗಿದೆ. ಸಂಪ್ರದಾಯದ ಪ್ರಕಾರ ಒಬ್ಬ ಪುರುಷ ಬೇರೊಂದು ಜಾತಿಗೆ ಸೇರಿದ ಸ್ತ್ರೀಯನ್ನು ವಿವಾಹವಾಗಬಾರದು. ಆದರೆ ಯೂರೋಪ್ ಮತ್ತು ಅಮೇರಿಕಾದ ಸಮಾಜಗಳಲ್ಲಿ ಗುಂಪುಗಳ ಆಧಾರದ ಮೇಲೆ ವಿವಾಹ ನಿಷೇಧಗಳಿವೆ. ಅನೇಕ ಸಮಾಜಗಳಲ್ಲಿ ಕೆಲವು ಸಂಬಂಧಿಗಳ ವಿವಾಹ ಹೆಚ್ಚು ರೂಢಿಯಲ್ಲಿದೆ. ಆದರೆ ಇಂತಹ ಮದುವೆಗಳಿಂದ ಹುಟ್ಟುವ ಮಕ್ಕಳು ದೈಹಿಕ ನ್ಯೂನತೆಗಳನ್ನು ಪಡೆದುಕೊಳ್ಳುವ ಸಾಧ್ಯತೆಗಳು ಹೆಚ್ಚಿವೆ ಎಂದು ವೈಜ್ಞಾನಿಕ ಸಂಶೋಧನೆಗಳ ಮೂಲಕ ದೃಢಪಟ್ಟಿದೆ. ವಿವಾಹಗಳಲ್ಲಿ ಏಕಪತ್ನಿತ್ವ, ಬಹುಪತ್ನಿತ್ವ, ಹಾಗೂ ಬಹುಪತಿತ್ವಗಳೆಂಬ ಮೂರು ಬಗೆಗಳಿವೆ. ಈ ಮೂರು ಬಗೆಯ ವಿವಾಹಗಳಲ್ಲಿ ಯಾವುದು ಮೊದಲು ಆಚರಣೆಯಲ್ಲಿತ್ತೆಂಬ ವಿಷಯ ಚರ್ಚಾಸ್ಪದವಾಗಿದೆ. ಬಹುಪತ್ನಿತ್ವ ಮತ್ತು ಬಹುಪತಿತ್ವ ಪದ್ಧತಿಗಳು ಬಹುವಿವಾಹದ ಎರಡು ರೂಪಗಳು. ಪ್ರಪಂಚದ ಬಹುಸಂಖ್ಯಾತ ವಿವಾಹಗಳು ಏಕಪತ್ನಿ ವಿವಾಹಗಳಾಗಿವೆ. ಭಾರತದಲ್ಲಿ 1955ರ ವಿವಾಹ ಮಸೂದೆ ಜಾರಿಗೆ ಬರುವ ಮೊದಲು ಹಿಂದೂ ಸಮಾಜದಲ್ಲಿ ಬಹುಪತ್ನಿತ್ವಕ್ಕೆ ಅನುಮತಿ ಇತ್ತು. ಸಮಕಾಲೀನ ಸಂದರ್ಭದ ಮದುವೆಗಳಲ್ಲಿ ಅನೇಕ ಬದಲಾವಣೆಗಳನ್ನು ಕಾಣಬಹುದು. ಸಾಂಪ್ರದಾಯಿಕವಾಗಿ ತಂದೆ– ತಾಯಿ– ಹಿರಿಯರು ನಿಶ್ಚಯಿಸುತ್ತಿದ್ದ ಮದುವೆಗಳು ನಿಧಾನವಾಗಿ ಕಣ್ಮರೆಯಾಗಿ ಪ್ರೇಮ ವಿವಾಹಗಳು ಸಮಾಜದಲ್ಲಿ ಹೆಚ್ಚಾಗಿ ಕಂಡುಬರುತ್ತಿವೆ. ಇದಕ್ಕೆ ಕಾರಣಗಳು ಹಲವಾರಿವೆ. ಇದರ ಒಳಿತು–ಕೆಡುಕುಗಳ ಕುರಿತಾದಂತೆ ಚರ್ಚೆ ಮಾಡಿದಾಗ ವಿದ್ಯಾಭ್ಯಾಸದ ಮುನ್ನಡೆ, ಆರ್ಥಿಕ ಜೀವನದ ಪ್ರಗತಿ ಜನರ ಪರಸ್ಪರ ಸಮ್ಮಿಲನ ಮೊದಲಾದ ಆಧುನಿಕ ಸಮಾಜದ ಲಕ್ಷಣಗಳು ವಿವಾಹ ಪದ್ಧತಿಗಳ ಮೇಲೆ ಪ್ರಭಾವವನ್ನು ಬೀರಿವೆ. ಯುವಕ– ಯುವತಿಯರ ವಿವಾಹದ ವಯಸ್ಸು

ಹೆಚ್ಚಾಗಿದೆ. ವಿವಾಹ ವಿಚ್ಛೇದನಗಳು ಕಾನೂನಿನಲ್ಲಿ ಸ್ಥಾನಗಳಿಸಿವೆ. ವರದಕ್ಷಿಣೆಯಂತಹ ಪದ್ಧತಿಯನ್ನು ನಿಷೇಧಿಸಲಾಗಿದೆ. ವಿವಾಹದ ಕಾನೂನುಬದ್ಧ ನೊಂದಣಿಯನ್ನು ಜಾರಿಗೊಳಿಸಲಾಗಿದೆ.

ಹೀಗೆಸಾಂಪ್ರದಾಯಿಕ ವಿವಾಹಕ್ಕೆ ಸಂಬಂಧಿಸಿದಂತೆ ಅನೇಕ ಬದಲಾವಣೆಗಳು ಸ್ಥಾನ ಪಡೆದುಕೊಂಡಿರುವುದನ್ನು ಕಾಣಬಹುದಾಗಿದೆ.

*****

## ೧. ಇಂದು ಹೆಂಗಸಿನ ಬದುಕು

**ಸಿಮೋನ್ ದಿ ಬೋವಾ**
**(ಕನ್ನಡಕ್ಕೆ ಡಾ.ಹೆಚ್.ಎಸ್.ಶ್ರೀಮತಿ)**

ಹೆಂಗಸರಿಗೆ ಸಮಾಜವು ಪರಂಪರೆಯಿಂದ ನೀಡಿರುವ ಜವಬ್ದಾರಿಯೆಂದರೆ ವಿವಾಹ. ಈಗಲೂ ಹೆಂಗಸರು ಮದುವೆಯಾಗುತ್ತಾರೆ. ಹಿಂದೆಯೂ ಆಗಿದ್ದರು, ಮುಂದೆಯೂ ಆಗಲಿದ್ದಾರೆ, ಇಲ್ಲವೇ ಆಗದಿದ್ದರೆ ಪರಿತಪಿಸುತ್ತಾರೆ. ಮದುವೆಯಾಗದ ಹೆಂಗಸು ವಿವರಣೆ ನೀಡಬೇಕಾಗುತ್ತದೆ. ಅವಳು ತಪ್ಪಳೋ, ಬಂಡಾಯಗಾರ್ತಿಯೋ ಅಥವಾ ವಿವಾಹವೆಂಬ ವ್ಯವಸ್ಥೆಯ ಬಗ್ಗೆ ನಿರಾಸಕ್ತಳೋ ಎಂಬೆಲ್ಲ ಪ್ರಶ್ನೆಗಳು ಏಳುತ್ತವೆ. ಅದಕ್ಕಾಗಿ ನಾವು ಮೊದಲು ವಿವಾಹ ಮೀಮಾಂಸೆ ಮಾಡಬೇಕು.

ಹೆಂಗಸಿನ ಸನ್ನಿವೇಶದಲ್ಲಿ ಸಂಭವಿಸುತ್ತಿರುವ ಆರ್ಥಿಕ ವಿಕಾಸವು ವಿವಾಹ ಸಂಸ್ಥೆಗೆ ಧಕ್ಕೆ ತರುತ್ತಿದೆ. ಇದೀಗ ವಿವಾಹ ಎಂಬುದು ಇಬ್ಬರು ಸ್ವತಂತ್ರ ವ್ಯಕ್ತಿಗಳು ಒಬ್ಬರಿಗೊಬ್ಬರು ಒಪ್ಪಿಗೆ ನೀಡಿ ಒಟ್ಟಾಗಿ ಬದುಕಲು ಮಾಡಿಕೊಂಡ ಒಪ್ಪಂದವಾಗಿರುತ್ತದೆ. ಈ ಇಬ್ಬರೂ ವ್ಯಕ್ತಿಗಳು ಪರಸ್ಪರ ಜವಬ್ದಾರರು. ಈ ಒಪ್ಪಂದ ಸ್ವಂತ ನೆಲೆಯದು. ಹಾದರ ಮಾಡಿದರೆ ಒಪ್ಪಂದ ಮುರಿದಂತೆ. ಇಬ್ಬರೂ ಬೇಕೆಂದಾಗ ಒಂದೇ ಬಗೆಯ ಕಾರಣ ನೀಡಿ ವಿಚ್ಛೇದನ ಪಡೆಯಬಹುದು. ಹೆರುವುದಷ್ಟೇ ಹೆಂಗಸಿನ ಕೆಲಸವಲ್ಲ. ಹೆರುವಿಕೆಗೆ ಈಗ ಹಿಂದಿನ ಅಧೀನತೆಯ, ಸೇವೆಯ ಲಕ್ಷಣಗಳಿಲ್ಲ. ಇದೀಗ ತನ್ನ ಇಚ್ಛೆಯಿಂದ ಹೊತ್ತ ಈ ಹೊಣೆ ಉತ್ಪಾದನಾ ಚಟುವಟಿಕೆಗೆ ಸಮಾನವಾದುದು. ತಾಯಿ ಬಸಿರಾದಾಗ ಕಳೆಯುವ ಅವಧಿಯ ಹೊಣೆಯನ್ನು ರಾಜ್ಯ ಇಲ್ಲವೇ ಆಡಳಿತ ವ್ಯವಸ್ಥೆ ಹೊರುತ್ತದೆ. ಸೋವಿಯತ್ ಒಕ್ಕೂಟದಲ್ಲಿ ಗಂಡಹೆಂಡರಿಗೆ ಪೂರ್ಣ ಸ್ವಾತಂತ್ರ್ಯ ನೀಡುವ ಶರತ್ತಿನ ಒಪ್ಪಂದವಾಗಿ ವಿವಾಹವನ್ನು ವ್ಯಾಖ್ಯಾನಿಸಲಾಗಿದೆ. ಆದರೆ, ಈಗ ರಾಜ್ಯಶಕ್ತಿ ಅವರಿಬ್ಬರ ಮೇಲೆ ಈ ಹೊಣೆಯನ್ನು ಹೊರಿಸುತ್ತಿದೆ. ಈ ಸನ್ನಿವೇಶಗಳಲ್ಲಿ ಯಾವುದು ನಾಳಿನ ಲೋಕದಲ್ಲಿ ಉಳಿದುಕೊಳ್ಳುತ್ತದೆ ಎಂಬುದು ಸಮಾಜ ರಚನೆಯನ್ನು ಅವಲಂಬಿಸುತ್ತದೆ. ಏನೇ ಆಗಲಿ ಹೆಣ್ಣಿಗೆ ಗಂಡು ಆಸರೆ ಎಂಬ ಸನ್ನಿವೇಶ ಮಾಯವಾಗುತ್ತಿದೆ. ಸ್ತ್ರೀವಾದಿ ದೃಷ್ಟಿಯಿಂದ ಈ ಸಂದರ್ಭ ಒಂದು ಮಧ್ಯಂತರ ಸ್ಥಿತಿ. ಸ್ತ್ರೀ ಜನಸಂಖ್ಯೆಯ ಕೊಂಚಭಾಗ ಮಾತ್ರ ಉತ್ಪಾದನೆಯಲ್ಲಿ ತೊಡಗಿದೆ. ಹಳೆಯ ಸ್ವರೂಪವನ್ನೂ, ಮೌಲ್ಯವ್ಯವಸ್ಥೆಯನ್ನೂ ಉಳಿಸಿಕೊಂಡ ಸಮಾಜದಲ್ಲಿ ಆ ಹೆಂಗಸು ಬದುಕುತ್ತಿದ್ದಾರೆ. ಆಧುನಿಕ ವಿವಾಹವನ್ನು ಅರಿಯಬೇಕಾದರೆ ಅದರ ಹಿಂದಿನ ಲಕ್ಷಣಗಳನ್ನು, ಇಂದೂ ಉಳಿದುಕೊಂಡಿರುವ ಅಂಶಗಳನ್ನೂ ಪರಿಗಣಿಸಬೇಕಾಗುತ್ತದೆ.

ವಿವಾಹವು ಗಂಡು ಮತ್ತು ಹೆಣ್ಣುಗಳಿಗೆ ಬೇರೆಬೇರೆಯಾಗಿ ಅನುಭವಕ್ಕೆ ಬರುತ್ತದೆ. ಇವರಿಬ್ಬರೂ ಒಬ್ಬರಿಗೊಬ್ಬರು ಬೇಕು. ಆದರೆ, ಅವರಿಬ್ಬರ ನಡುವೆ ಸಮಾನತೆಯ ನೆಲೆಗಳು ಮೂಡಿ

ಅನಂತರ ಈ ಅವಸ್ಥೆ ತಲೆದೋರಿಲ್ಲ. ಹೆಂಗಸರು ಯಾವತ್ತೂ ಗಂಡಸರಿಗೆ ಶರತ್ತು ವಿಧಿಸುವ ಸ್ಥಿತಿಯಲ್ಲಿ ಇರಲೇ ಇಲ್ಲ. ಗಂಡಸು ಸಾಮಾಜಿಕವಾಗಿ ಸ್ವತಂತ್ರ ಮತ್ತು ಸಂಪೂರ್ಣ ವ್ಯಕ್ತಿ. ಆತ ಉತ್ಪಾದಕನೆಂಬ ಸ್ಥಾನ ಪಡೆದಿದ್ದಾನೆ. ಸಮುದಾಯಕ್ಕಾಗಿ ದುಡಿಯುವನೆಂಬ ಮನ್ನಣೆ ಇದೆ. ಅದೇ ಹೆಂಗಸಿನ ಹೆರುವಿಕೆ, ಮನೆಗೆಲಸಗಳಿಗೆ ಇಷ್ಟೇ ಘನತೆಯ ಸ್ಥಾನ ಏಕೆ ದೊರೆತಿಲ್ಲ ಎನ್ನುವುದನ್ನು ಹಿಂದೆ ಗಮನಿಸಿದ್ದೇವೆ. ನಿಜ. ಪುರುಷನಿಗೆ ಅವಳು ಬೇಕು, ಕೆಲವು ಆದಿಮ ಸಮುದಾಯಗಳಲ್ಲಿ ಒಂಟಿ ಗಂಡಸು ಒಬ್ಬಂಟಿಯಾಗಿ ಜೀವನ ಸಾಗಿಸಲಾಗದೆ ಗುಂಪಿನಿಂದ ಹೊರಗುಳಿಯಬೇಕಾಗುತ್ತದೆ. ಕೃಷಿ ಸಮಾಜಗಳಲ್ಲಿ ರೈತನ ಕೈ ನೆರವಿಗೆ ಹೆಂಗಸು ಬೇಕೇ ಬೇಕು. ಗಂಡಸರು ತಮಗೆ ಬೇಸರ ತರುವ ಕೆಲಸಗಳನ್ನೆಲ್ಲ ಯಾರ ಮೇಲಾದರೂ ಹೊರಿಸಲು ಹೆಂಗಸರು ಬೇಕಾಗುತ್ತದೆ. ಗಂಡಸಿಗೆ ನಿಯಮಿತವಾದ ಲೈಂಗಿಕ ಜೀವನ, ಮಕ್ಕಳು ಮರಿ ಇವೆಲ್ಲಾ ಬೇಕು. ಅವನು ಸಂತಾನವೃದ್ಧಿ ಮಾಡಬೇಕೆಂದು ರಾಜ್ಯಶಕ್ತಿ ನಿರೀಕ್ಷಿಸುತ್ತದೆ. ಆದರೆ, ಇದೆಲ್ಲವನ್ನೂ ಗಂಡಸು ಹೆಂಗಸಿನ ಮುಂದೆ ತಾನೇ ನಿವೇದಿಸಿಕೊಳ್ಳುವುದಿಲ್ಲ. ಗಂಡಸರ ಇಡೀ ಗುಂಪು, ತಮ್ಮ ಸದಸ್ಯರು ಗಂಡಂದಿರಾಗಿ, ತಂದೆಯರಾಗಿ ತೃಪ್ತರಾಗುವ ಅವಕಾಶ ಕಲ್ಪಿಸುತ್ತದೆ. ಹೆಂಗಸು ಗುಲಾಮಳಾಗಿ, ಅಡಿಯಾಳಾಗಿ, ತಂದೆಯರು ಮತ್ತು ಸೋದರರು ಇರುವ ಕುಟುಂಬದಲ್ಲಿ ಸೇರ್ಪಡೆಯಾಗುತ್ತಾಳೆ. ಗಂಡಸರು ಅವಳನ್ನು ವಿವಾಹದ ಮೂಲಕ ಬೇರೆ ಗಂಡಸರಿಗೆ ನೀಡುತ್ತಾರೆ. ಆದಿಮ ಸಮಾಜಗಳಲ್ಲಿ ಹೆಂಗಸರನ್ನು ವಸ್ತುಗಳಂತೆ ಮಾರುತ್ತಿದ್ದರು. ಎರಡು ಗುಂಪುಗಳು ಅವಳ ಬೆಲೆಯನ್ನು ಕುದುರಿಸುತ್ತಿದ್ದವು. ವಿವಾಹವು ಒಂದು ಒಪ್ಪಂದದ ಹಂತಕ್ಕೆ ಬಂದಾಗಲೂ ಸನ್ನಿವೇಶದಲ್ಲಿ ಬದಲಾವಣೆಯಾಗಿಲ್ಲ. ಅವಳಿಗೆ ವಿವಾಹದ ಮೂಲಕ ಆಸ್ತಿ ಸಂಪತ್ತು ದೊರಕುವಂತಿದ್ದರೆ. ಮಾತ್ರ ಆಕೆಗೆ ಒಂದು ಬೆಲೆ. ಹಾಗಾಗಿ, ಈ ಆಸ್ತಿ ಸಂಬಂಧಗಳಿಂದ ಅವಳಿನ್ನೂ ಕುಟುಂಬದ ಅಡಿಯಾಳಾಗಿಯೇ ಇದ್ದಾಳೆ. ಎಷ್ಟೋ ಕಾಲ ಮಾವಂದಿರು, ಅಳಿಯಂದಿರೊಡನೆ ಒಪ್ಪಂದ ಮಾಡಿಕೊಳ್ಳುತ್ತಿದ್ದರೇ ಹೊರತು ಗಂಡ ಹೆಂಡತಿಯರಲ್ಲ. ವಿಧವೆಯರಿಗೆ ಮಾತ್ರ ಆರ್ಥಿಕ ಸ್ವಾತಂತ್ರ್ಯವಿತ್ತು. ಹುಡುಗಿಗೆ ಸೀಮಿತ ಆಯ್ಕೆಯ ಸ್ವಾತಂತ್ರ್ಯವಿತ್ತು. ಧಾರ್ಮಿಕ ಪರಿವೇಶವಿದ್ದ ಸಂದರ್ಭ ಬಿಟ್ಟರೆ, ಹೆಂಗಸು ಬ್ರಹ್ಮಚಾರಿಣಿ ಆಗಿ ಉಳಿದಳೆಂದರೆ, ಆಕೆ ಆಶ್ರಯ ಜೀವಿ ಆಗುತ್ತಿದ್ದಳು. ಇಲ್ಲವೇ ಯಾರಿಗೂ ಬೇಡವಾಗುತ್ತಿದ್ದಳು. ಅವಳು ಬದುಕಬೇಕೆಂದಿದ್ದರೆ, ನೆಲೆ ಕಾಣಬೇಕೆಂದಿದ್ದರೆ, ವಿವಾಹವೊಂದೇ ಅವಳಿಗೆ ಇದ್ದ ದಾರಿ. ಅವಳನ್ನು ಈ ಸನ್ನಿವೇಶಕ್ಕೆ ಕಟ್ಟು ಬೀಳುವಂತೆ ಮಾಡಿದ ಕಾರಣಗಳು ಎರಡು.

ಮೊದಲ ಕಾರಣವೆಂದರೆ, ಆಕೆ ಸಮಾಜಕ್ಕೆ ಮಕ್ಕಳನ್ನು ಒದಗಿಸಬೇಕು. ಸ್ಪಾರ್ಟಾದಲ್ಲಿ ಮತ್ತು ಸ್ವಲ್ಪ ಮಟ್ಟಿಗೆ ನಾಜಿ ಆಳ್ವಿಕೆಯಲ್ಲಿ ರಾಜ್ಯಶಕ್ತಿ ಹೆಂಗಸರನ್ನು ನೇರವಾಗಿ ತನ್ನ ಅಧೀನಕ್ಕೆ ತೆಗೆದುಕೊಳ್ಳುತ್ತಿತ್ತು. ಅಲ್ಲಿ ಅವರು ತಾಯಿಯಾಗುವ ಕೆಲಸವನ್ನಷ್ಟೇ ಮಾಡಬೇಕಿತ್ತು. ಆದಿಮ ಸಮಾಜಗಳಲ್ಲಿ ಮಕ್ಕಳ ಹುಟ್ಟಿಗೆ ತಂದೆ ಎಷ್ಟು ಕಾರಣ ಎಂಬುದು ತಿಳಿದಿರಲಿಲ್ಲ. ಆದರೂ ಅವರು ಪ್ರತಿ ಹೆಂಗಸೂ ಗಂಡನನ್ನು ಪಡೆಯಲೇಬೇಕೆಂದು ನಿರ್ಬಂಧಿಸುತ್ತಿದ್ದರು. ಗಂಡಸಿನ ಲೈಂಗಿಕ ಅಗತ್ಯಗಳನ್ನು ಪೂರೈಸುವ ಹೊಣೆ ಅವಳ ಮೇಲೆ ಬಿದ್ದುದು ಎರಡನೆಯ ಕಾರಣ. ಜೊತೆಗೆ ಅವನ ಮನೆಗೆಲಸವನ್ನೂ ಆಕೆ ಮಾಡಬೇಕಿತ್ತು. ಗಂಡನಿಗೆ ಈ ಸೇವೆ ಮಾಡಬೇಕೆಂದು ಅವಳ ಮೇಲೆ ಶರತ್ತು ವಿಧಿಸಿತ್ತು. ಇದಕ್ಕೆ ಪ್ರತಿಯಾಗಿ ಆತ ಅವಳಿಗೆ ಉಡುಗೊರೆ ನೋಡಬೇಕಿತ್ತು. ಇಲ್ಲವೇ ಮದುವೆಯ ಒಪ್ಪಂದ ಮಾಡಿಕೊಳ್ಳಬೇಕಿತ್ತು. ಅವಳನ್ನು ಪೋಷಿಸಬೇಕಿತ್ತು. ಅವನನ್ನು ಮಧ್ಯವರ್ತಿಯನ್ನಾಗಿ ಮಾಡಿಕೊಂಡು ಸಮಾಜವು ಹೆಂಗಸಿನ ಬಗ್ಗೆ ತನಗಿರುವ ಜವಾಬ್ದಾರಿಯನ್ನು ನಿಭಾಯಿಸಲೆಂದು ಆಕೆಯನ್ನು ಅವನಿಗೆ ಒಪ್ಪಿಸಿಬಿಡುತ್ತಿತ್ತು. ಗಂಡನಿಗೆ ಮಾಡುವ ಕರ್ತವ್ಯಗಳನ್ನು ಪೂರೈಸುವುದಕ್ಕಾಗಿ ಅವಳಿಗೆ ಕೆಲವು ಸವಲತ್ತುಗಳನ್ನು ಒದಗಿಸುವ ಹೊಣೆ ಪುರುಷನದು. ತನ್ನ ಮನಸೋ ಇಚ್ಛೆ ಈ ಸಂಬಂಧವನ್ನು ಆತ ಮುರಿಯುವಂತಿರಲಿಲ್ಲ. ಸಾಮಾಜಿಕ ಆರ್ಥಿಕ ಕೇಂದ್ರಗಳು ಒಪ್ಪಿದಾಗ ಮಾತ್ರ ಆತ ಹೆಂಡತಿಯನ್ನು ತೊರೆಯಬಹುದಿತ್ತು. ಹಾಗೆ ಮಾಡಿದಾಗಲೂ ಅವಳಿಗೆ ರೂಪದಲ್ಲಿ ಹಣ ನೀಡಬೇಕಿತ್ತು. ಬೊಕಾರಿಸ್ ಆಳ್ವಿಕೆಯಲ್ಲಿ ಈಜಿಪ್ಟ್‌ನಲ್ಲಿ ಈ ವ್ಯವಸ್ಥೆ ಕೂಡಾ ದುರುಪಯೋಗಕ್ಕೆ ಒಳಗಾಯಿತು. ಸಂಯುಕ್ತ ಸಂಸ್ಥಾನಗಳಲ್ಲೂ ಇದೊಂದು ಕೆಟ್ಟ ಪ್ರವೃತ್ತಿಯಾಗಿದೆ. ಬಹುಪತ್ನಿತ್ವಕ್ಕೆ ಸಾಮಾನ್ಯವಾಗಿ ಸಮ್ಮತಿ ಇತ್ತು. ಸೇವಕಿ, ಸೂಳೆ, ಉಪಪತ್ನಿ – ಹೀಗೆ ಯಾರೊಡನೆ ಬೇಕಾದರೂ ಗಂಡಸು ಮಲಗಬಹುದಿತ್ತು. ಆದರೆ ತನ್ನ ವಿವಾಹಿತ ಪತ್ನಿಗೆ ಕೆಲವು ಗೊತ್ತಾದ ಸವಲತ್ತುಗಳನ್ನು ಒದಗಿಸಲೇಬೇಕಿತ್ತು. ಅವಳನ್ನು ಕೆಟ್ಟದಾಗಿ ನಡೆಸಿಕೊಂಡರೆ, ಇಲ್ಲವೇ ಅವಳಿಗೆ ಅನ್ಯಾಯ ಮಾಡಿದರೆ, ಆಕೆ ತನ್ನ ತವರು ಕುಟುಂಬಕ್ಕೆ ಮರಳಿ ಹೋಗಿ ನೆಲೆಸಿ, ಅವನಿಂದ ಬಿಡುಗಡೆಯನ್ನು ಪಡೆಯುವುದು ಸಾಧ್ಯವಿತ್ತು. ಈ ಹಕ್ಕು ಹೆಂಗಸಿಗೆ ಲಭ್ಯವಿದ್ದದ್ದು ಬಹುಮಟ್ಟಿಗೆ ಖಚಿತ.

ಗಂಡು ಹೆಣ್ಣು ಇಬ್ಬರಿಗೂ ವಿವಾಹ ಒಂದು ಹೊರೆಯಾಗಿರುವಂತೆಯೇ ಒಂದು ಸವಲತ್ತೂ ಹೌದು. ಆದರೆ, ಇಬ್ಬರೂ ಅದನ್ನು ಅನುಭವಿಸುವ ಸನ್ನಿವೇಶ ಬೇರೆ ಬೇರೆಯಾಗಿದೆ. ಹೆಂಗಸಿಗೆ ಸಮಾಜದಲ್ಲಿ ಸೇರ್ಪಡೆಯಾಗಲು ವಿವಾಹವೊಂದೇ ದಾರಿ. ಒಂದು ವೇಳೆ ಅಲ್ಲಿ ನಿರಾಕರಣೆಗೊಂಡರೆ, ಸಾಮಾಜಿಕವಾಗಿ ಅವಳನ್ನು ನಿರುಪಯುಕ್ತವಾಗಿ ತಿಳಿಯಲಾಗುತ್ತದೆ. ತಾಯಂದಿರು ಈ

ಕಾರಣದಿಂದಾಗಿ, ಹೆಣ್ಣು ಮಕ್ಕಳಿಗೆ ಮದುವೆ ಮಾಡಿಸಲು ಸದಾ ಪ್ರಯತ್ನಿಸುತ್ತಾರೆ. ಕಳೆದ ಶತಮಾನದವರೆಗೂ ಮಧ್ಯಮವರ್ಗದ ಹೆಣ್ಣು ಮಕ್ಕಳನ್ನು ಮದುವೆಯ ವಿಷಯದಲ್ಲಿ ಅಭಿಪ್ರಾಯ ಕೇಳುತ್ತಿರಲಿಲ್ಲ. ಗಂಡುಗಳಿಗೆ "ತೋರಿಸಿ" ಒಪ್ಪಂದ ಮಾಡುತ್ತಿದ್ದರು. 'ಪಾಟ್ ಚಾಲ್' ಕೃತಿಯಲ್ಲಿ ಜೋಲಾ ಬಣ್ಣಿಸುವ ಪ್ರಸಂಗ ಹೀಗಿದೆ.

'ಮೇಡಂ ಜೆಸೊರಾಂಡ್" ಎಲ್ಲ ಮುಗಿಯಿತು. ಆಗಿ ಹೋಯಿತು" ಎಂದು ಹೇಳುತ್ತಾ ಕುರ್ಚಿಯಲ್ಲಿ ಕುಸಿದು ಕುಳಿತಳು. ಮಿಸ್ಟರ್ ಜೆಸೊರಾಂಟ್ ಸುಮ್ಮನೆ "ಹೌದಾ!" ಎಂದರು.

ಮೇಡಂ ಜೆಸೊರಾಂಡ್ ಕೀರಲು ಧ್ವನಿಯಲ್ಲಿ "ನಿಮಗೆ ಗೊತ್ತಾಗುವುದಿಲ್ಲ. ಇದು ಏಳನೆಯ ಮದುವೆಯ ಪ್ರಸ್ತಾಪ. ಇದೂ ಮುರಿದು ಬಿತ್ತು" ಅಂದಳು.

ಮಗಳತ್ತ ನಡೆಯುತ್ತಾ ಆಕೆ "ಯಾಕೇ, ಇದನ್ನು ಹಾಳು ಮಾಡಿಕೊಂಡೆ?" ಎಂದಳು.

ಬೆರ್ತಾ ತಾನು ಮಾತಾಡಬೇಕೆಂದು ತಿಳಿದು "ನನಗೆ ಗೊತ್ತಿಲ್ಲ ಅಮ್ಮ" ಎಂದು ಗೊಣಗಿದಳು. ತಾಯಿ, "ಇಲಾಖೆಗೆ ಎರಡನೇ ಮುಖ್ಯಸ್ಥ. ಇನ್ನೂ ಮೂವತ್ತಾಗಿಲ್ಲ. ಎಲ್ಲ ಮುರಿದು ಬಿತ್ತು. ತಿಂಗಳು ತಿಂಗಳಿಗೆ ಕೈತುಂಬಾ ಸಂಬಳ ತರುವ ಹುದ್ದೆ. ಇನ್ನೇನು ಬೇಕು?.....ಯಾವಾಗಲೂ ಮಾಡುವ ಹಾಗೆ ಈ ಬಾರಿಯೂ ನೀನು ದಡ್ಡಳ ಥರ ಮಾಡಿಬಿಟ್ಟೆ" ಎಂದಳು.

"ಇಲ್ಲಾಮ್ಮ ಹಾಗೇನಿಲ್ಲ"

"ಅವನ ಜೊತೆ ಡಾನ್ಸ್ ಮಾಡುವಾಗ ಚಿಕ್ಕ ಕೋಣೆಯೊಳಗೆ ಹೋಗಿಬೆಟ್ಟೆ"

ಗೊಂದಲದಿಂದ ಬೆರ್ತಾ ಹೇಳಿದಳು "ಹೌದು ಅಮ್ಮ. ನಾವಿಬ್ಬರೂ ಒಟ್ಟಿಗೇ ಅವನು ಅಸಭ್ಯವಾಗಿ ನಡೆದುಕೊಳ್ಳಲು ಯತ್ನಿಸಿದ. ಅಪ್ಪಿಕೊಂಡು ಹೀಗೆ ಹಿಡಿದುಕೊಂಡ. ನನಗೆ ಭಯವಾಯಿತು. ಅವನನ್ನು ಕುರ್ಚಿಯ ಮೇಲೆ ತಳ್ಳಿಬಿಟ್ಟೆ".

ತಾಯಿ ಕೋಪದಿಂದ ಅವಳನ್ನು ತಡೆದು "ತಳ್ಳಿದಳಂತೆ, ಕತ್ತೆ ನೀನು ಅವಳನ್ನು ತಳ್ಳಿದೆಯಾ?"

"ಅಮ್ಮಾ.... ಅವನು ನನ್ನನ್ನು ಹಿಡಿದುಕೊಂಡಿದ್ದ"

"ಏನೀಗ? ಅವನು ನಿನ್ನನ್ನು ಹಿಡಿದುಕೊಂಡಿದ್ದ. ಇದಕ್ಕೇನು ನಿನ್ನನ್ನು ಬೋರ್ಡಿಂಗ್ ಸ್ಕೂಲಿಗೆ ಕಳುಹಿಸಿದ್ದು? ಅಲ್ಲಿ ಏನು ಹೇಳಿಕೊಟ್ಟರು ನಿನಗೆ? ಇದನ್ನೆಲ್ಲಾ ನಮಗೆ ಬಂದು ಹೇಳಬೇಕೇನು? ಗಂಡುಗಳನ್ನು ತಳ್ಳುತ್ತೀಯಾ? ಮದುವೆ ಅವಕಾಶ ಮುರಿದು ಹಾಕುತ್ತೀಯಾ?"

ಪಾಠ ಮಾಡುವ ದನಿಯಲ್ಲಿ ಮುಂದುವರೆಸಿದಳು.

"ಆಯ್ತು. ನಾನು ಇನ್ನೇನೂ ಮಾಡುವುದಿಲ್ಲ. ನೀನು ಕೆಲಸಕ್ಕೆ ಬಾರದವಳು. ಇದೇ ನಿನ್ನ ಹಣೆ ಬರಹ. ಗಂಡಸರನ್ನು ನೀನು ಬೇರೆ ರೀತಿಯಲ್ಲಿ ಬಲೆಗೆ ಹಾಕಿಕೊಳ್ಳಬೇಕು. ಒಟ್ಟಾರೆ ಅವರಿಗೆ ಮೆಚ್ಚುಗೆ ಆಗುವ ಹಾಗೆ ನಡೆದುಕೊಳ್ಳಬೇಕು. ಕಣ್ಣಲ್ಲಿ ಕಣ್ಣಿಟ್ಟು ನೋಡಬೇಕು. ಅಲ್ಪಸ್ವಲ್ಪ ಹತ್ತಿರ ಬಂದರೆ ಗೊತ್ತಾಗದವಳಂತೆ ಸುಮ್ಮನಿರಬೇಕು. ನೀನು ನಿನ್ನ ಗಂಡನನ್ನು ಹೀಗೆ ಹುಡುಕಿಕೊಳ್ಳಬೇಕು.... ಇವಳೇನೂ ಕೆಲಸಕ್ಕೆ ಬಾರದವಳಲ್ಲ. ಸುಮ್ಮನೆ ಅಳಬೇಡ. ಇಲ್ಲಿ ನೋಡು. ನಾನೆ ಈಗ ಒಬ್ಬ ಗಂಡಸು ಎಂದು ತಿಳಿದು ನನ್ನ ಕಡೆ ನೋಡು. ನಿನ್ನ ಕೈಯಲ್ಲಿರುವ ಬೀಸಣಿಗೆ ಕೆಳಗೆ ಹಾಕು. ಅವನು ಎತ್ತಿಕೊಡುವಾಗ ನಿನ್ನ ಬೆರಳು ಮುಟ್ಟುತ್ತಾನೆ.... ಹಾಗೆ ಸೆಟೆದುಕೊಳ್ಳಬೇಡ. ಸೊಂಟ ಸ್ವಲ್ಪ ಬಾಗಲಿ, ಗಂಡಸರಿಗೆ ಚಪ್ಪಟೆ ಎದೆ ಕಂಡರೆ ಆಗುವುದಿಲ್ಲ. ಒಂದಿಷ್ಟು ಅವರು ಮುಂದುವರೆದರೆ ಸುಮ್ಮನೆ ತಲೆ ಕೆಡಿಸಿಕೊಳ್ಳಬೇಡ. ಹಾಗೆ ಸಾಕಷ್ಟು ಮುಂದುವರೆದವನು ಬಲೆಗೆ ಬಿದ್ದೇ ಬೀಳುತ್ತಾನೆ."

ಇಡೀ ಸಂಜೆ ಇಂಥಾ ಬೋಧನೆ ಕೇಳಿ ಕೇಳಿ ಹುಡುಗಿ ಸುಮ್ಮನೆ ಇದ್ದುಬಿಟ್ಟಳು. ಅವಳ ಹೃದಯ ಭಯ ನಾಚಿಕೆಗಳಿಂದ ಭಾರವಾಯಿತು...'

ಇಂಥಾ ಸನ್ನಿವೇಶದಲ್ಲಿ ಹುಡುಗಿಯರು ಸುಮ್ಮನೆ ಇದ್ದುಬಿಡುತ್ತಾರೆ. ಅವಳನ್ನು ಮದುವೆ ಮಾಡಿ 'ಕೊಡಲಾಗುತ್ತದೆ.' ಅವಳನ್ನು ಮದುವೆ 'ಆಗುತ್ತಾರೆ'. ಹುಡುಗರು ಮದುವೆ 'ಆಗುತ್ತಾರೆ'. ಹೆಂಡತಿಯನ್ನು 'ಪಡೆಯುತ್ತಾರೆ'. ಹುಡುಗರಿಗೆ ವಿವಾಹ ಒಂದು ವಿಸ್ತರಣೆಯ ಅವಕಾಶ. ಅವರ ಅಸ್ತಿತ್ವದ ಪುರಾವೆ. ಹುಡುಗಿಯರಿಗಾದರೆ ಅದು ಒಂದು ಅಸ್ತಿತ್ವದ ಪ್ರಶ್ನೆ. ಹುಡುಗರು ಮದುವೆಯಾಗುವುದು ಅವರ ಇಚ್ಛೆ. ಬೇಕು ಬೇಡಗಳನ್ನು ಅವರೆ ನಿರ್ಧರಿಸಬಲ್ಲರು. ಗ್ರೀಕ್ ಮತ್ತು ಮಧ್ಯಯುಗದ ಹಾಸ್ಯನಾಟಕಕಾರರು ಈ ಬಗ್ಗೆ ಬರೆದಿದ್ದಾರೆ. ವಿವಾಹ ಹುಡುಗರಿಗೆ ಹಲವು ದಾರಿಗಳಲ್ಲಿ ಒಂದು, ಅದೊಂದೇ ಗುರಿಯಲ್ಲ. ಬೇಕೆಂದರೆ ಬ್ರಹ್ಮಚಾರಿಗಳಾಗಿ ಇದ್ದುಬಿಡಬಹುದು. ಕೆಲವರು ತಡವಾಗಿ ಮದುವೆಯಾಗುತ್ತಾರೆ. ಮತ್ತೆ ಕೆಲವರು ಆಗುವುದೇ ಇಲ್ಲ.

ಮದುವೆಯಾಗುವ ಹೆಂಗಸಿಗೆ ಮಾತ್ರ ಲೋಕದಲ್ಲಿ ಅವಳದೆನ್ನುವ ಕೊಂಚ ಜಾಗ ಸಿಗುತ್ತದೆ. ಒಂದಿಷ್ಟು ನ್ಯಾಯಿಕ ಹಕ್ಕುಗಳು ದೊರಕಿ ಇತರ ಗಂಡಸರ ಚಂಚಲತೆಯಿಂದ ಒದಗುತ್ತದೆ. ಆದರೆ ಅವಳು ಗಂಡನ ಅಡಿಯಾಳಾಗುತ್ತಾಳೆ. ಹಣಕಾಸಿನ ವಿಚಾರದಲ್ಲಿ ಅವನೇ ತಲೆಯಾಳು. ಸಮಾಜದ ಬಗ್ಗೆ ಅವನ ಮಾತುಗಳಿಗೇ ಬೆಲೆ. ಅವಳು ಅವನ ಅಡ್ಡ ಹೆಸರು ಪಡೆದುಕೊಳ್ಳುತ್ತಾಳೆ. ಅವನ ಧರ್ಮ, ಅವನ ವರ್ಗ, ಅವನ ಬಂಧು ಸಂಕುಲ, ಅವನ ಕುಟುಂಬ –ಇವೆಲ್ಲಕ್ಕೂ ಅವಳು ಸೇರಿಕೊಳ್ಳುತ್ತಾಳೆ. ಅವನ 'ಅರ್ಧಾಂಗಿ'ಯಾಗುತ್ತಾಳೆ. ಅವನು ದುಡಿಯಲು ಬೇರೆ ಕಡೆಗೆ ಹೋದರೆ

ಅವಳೂ ಅಲ್ಲಿಗೆ ಹೋಗಬೇಕು. ಅವನು ಬಯಸುವ ಜಾಗದಲ್ಲಿ ವಾಸಮಾಡಬೇಕು. ತನ್ನ ನಿನ್ನೆಗಳಿಂದ ಬೇರುಸಹಿತ ಕಿತ್ತು ಹೊರಬರಬೇಕು. ಗಂಡನ ಜಗತ್ತಿಗೆ ಸೇರಿ ಹೋಗಬೇಕು. ತನ್ನ ದೇಹ, ಕನ್ಯತ್ವ, ನಿಷ್ಠೆ ಎಲ್ಲವನ್ನೂ ಅವನಿಗೆ ಒಪ್ಪಿಸಬೇಕು. ಮದುವೆಯಾಗದೆ ಉಳಿದ ಹೆಂಗಸಿನ ನ್ಯಾಯಿಕ ಹಕ್ಕುಗಳು ಮೊಟಕಾಗುತ್ತದೆ. ರೋಮನ್ ಕಾನೂನು ಹೆಂಡತಿಯನ್ನು ಗಂಡನ ಕೈಯಲ್ಲಿ ಇರಿಸಿದವು. ಮಗಳಿಗೆ ಇರುವ ಸ್ಥಾನವೇ ಆಕೆಗೂ ದೊರಕುತ್ತಿತ್ತು. ಹತ್ತೊಂಬತ್ತನೆಯ ಶತಮಾನದ ಸಂಪ್ರದಾಯವಾದೀ ಬರಹಗಾರ ಬೋನಾಲ್ಡ್ 'ತಾಯಿಗೆ ಮಗು ಹೇಗೋ, ಗಂಡನಿಗೆ ಹೆಂಡತಿ ಹಾಗೆ' ಎಂದು ಬರೆದನು. ೧೯೪೨ಕ್ಕೆ ಮೊದಲಿನ ಫ್ರೆಂಚ್ ಕಾನೂನಿನಂತೆ ಹೆಂಡತಿ ವಿಧೇಯಳಾಗಿರಬೇಕು. ದಾಂಪತ್ಯದ ಜೀವನದಲ್ಲಿ ಅವನಿಗಿರುವ ಹೆಚ್ಚಿನ ಹಕ್ಕುಗಳನ್ನು ಇಂದಿಗೂ ಕಾನೂನು ಕಟ್ಟಳೆಗಳು ಇನ್ನಷ್ಟು ಬಲಪಡಿಸುವಂತಿವೆ.

ಗಂಡ ದುಡಿಯುವಾತ, ಕುಟುಂಬದಾಚೆಗೆ ಸಮಾಜದ ಬಗೆಯೂ ಚಿಂತಿಸಬೇಕಾದವನು. ಇತರರೊಡನೆ ಸೇರಿಕೊಂಡು ಉತ್ತಮ ಭವಿಷ್ಯಕ್ಕಾಗಿ ಯೋಜನೆ ರೂಪಿಸುತ್ತಾನೆ. ಮಿತಿಗಳನ್ನು ದಾಟುವುದು ಅವನ ಸ್ವಭಾವ. ಹೆಂಗಸು ಜೀವಿವರ್ಗ ಬೆಳೆಸುತ್ತಾ, ಮನೆವಾರ್ತೆ ನೋಡಿಕೊಂಡು ಇರಬೇಕು. ಅಂದರೆ ಚೌಕಟ್ಟಿಗೆ ಮಿತಗೊಳ್ಳಬೇಕು. ಮಾನವ ಅಸ್ತಿತ್ವದಲ್ಲಿ ಹೀಗೆ ಮೀರುವ ಮತ್ತು ನೆಲೆಗೊಳ್ಳುವ ಎರಡು ಸ್ಥಿತಿಗಳು ಬೆರೆತುಹೋಗಿವೆ. ಮುಂದುವರೆಯಬೇಕೆಂದರೆ ಅಸ್ತಿತ್ವವನ್ನು ಕಾಯ್ದುಕೊಳ್ಳಬೇಕು. ನಾಳೆಗಳಿಗೆ ಚಾಚುವ ಹೊತ್ತಿನಲ್ಲೇ ನಿನ್ನೆಗಳನ್ನು ಅರಗಿಸಿಕೊಳ್ಳಬೇಕು. ಇತರರೊಡನೆ ಸಂವಾದ ಬೆಳೆಸುವಾಗ ತಾನು ಕರಗಿ ಹೋಗದಂತೆ ಕಾಯ್ದುಕೊಳ್ಳಬೇಕು. ನಿರ್ವಹಣೆ ಮತ್ತು ಪ್ರಗತಿ ಇವೆರಡೂ ಜೀವಂತ ಕ್ರಿಯೆಗಳಲ್ಲಿ ಅಂತಸ್ಥವಾಗಿರುತ್ತವೆ. ವಿವಾಹ ಗಂಡಸಿಗೆ ಈ ಎರಡೂ ಸಾಧ್ಯತೆಗಳನ್ನು ಜೀವನದಲ್ಲಿ ರೂಢಿಸಿಕೊಳ್ಳಲು ಅವಕಾಶ ನೀಡುತ್ತದೆ. ತನ್ನ ವೃತ್ತಿಯಲ್ಲಿ, ರಾಜಕೀಯ ಜೀವನದಲ್ಲಿ ಆತ ಬದಲಾವಣೆ ಮತ್ತು ಪ್ರಗತಿಗಳನ್ನು ಕಾಣುತ್ತಾನೆ. ಕಾಲ ಮತ್ತು ದೇಶಗಳಲ್ಲಿ ತನ್ನನ್ನು ತಾನು ವಿಸ್ತರಿಸಿಕೊಳ್ಳಬಲ್ಲ. ಅದು ಆಯಾಸವೆನಿಸಿದಾಗ ಮನೆಗೆ ಹಿಂತಿರುಗಿ ಬರುತ್ತಾನೆ. ಮನೆ ಅವನಿಗೆ ಗೊತ್ತಾದ ನೆಲೆ. ಅವನ ಲೋಕದ ಲಂಗರು. ಸಂಜೆಯಲ್ಲಿ ಮನೆಯಲ್ಲಿ ಕುಳಿತು ವಿಶ್ರಾಂತಿ ಪಡೆಯುತ್ತಾನೆ. ಹೆಂಡತಿ ಅವನ ಆಸ್ತಿಪಾಸ್ತಿ ಮಕ್ಕಳು ಮರಿಗಳು ನೋಡಿಕೊಳ್ಳುತ್ತಾಳೆ. ಹೀಗಿಲ್ಲದೆ, ಬೇರೆ ಬಗೆಯ ವೈವಿಧ್ಯದ ಬದುಕು ಅವಳಿಗಿಲ್ಲ. ಮಕ್ಕಳನ್ನು ಹೆರುತ್ತಾಳೆ. ದಿನದಿನವೂ ಅದೇ ಲಯದ ಕೆಲಸಗಳಲ್ಲಿ ಮನೆಯ ಗತಿಶೀಲತೆ ತಪ್ಪದಂತೆ ಕಾಯ್ದುಕೊಳ್ಳುತ್ತಾಳೆ. ಅದಕ್ಕೆ ಕಾವಲು ಇರುತ್ತಾಳೆ. ನಾಳೆಗಳ ಬಗ್ಗೆ ಅವಳಿಗೆ ಏನೂ ಹಕ್ಕಿಲ್ಲ.

ಲೋಕವನ್ನು ಪ್ರಭಾವಿಸಲಾರಳು. ಗಂಡನ ಮೂಲಕ ಮಾತ್ರವೇ ಸಾಮಾಜಿಕ ಗುಂಪುಗಳ ಸಂಪರ್ಕ ಪಡೆಯಬಲ್ಲಳು.

ಇಂದಿಗೂ ವಿವಾಹವು ಪಾರಂಪರಿಕ ಲಕ್ಷಣಗಳನ್ನು ಉಳಿಸಿಕೊಂಡಿದೆ. ಹುಡುಗರಿಗಿಂತ ಹುಡುಗಿಯರ ಮೇಲೆ ಅದನ್ನು ಹಿಂಸೆಯಿಂದ ಹೇರಲಾಗುತ್ತದೆ. ಆಕೆಗೆ ಇದೊಂದನ್ನು ಬಿಟ್ಟರೆ ಸಾಮಾಜಿಕ ನೆಲೆಗೆ ತೆರೆದುಕೊಳ್ಳಲು ಬೇರೆ ಹೊರ ದಾರಿಗಳೇ ಇಲ್ಲ. ಜನರಿಗೆ ಮದುವೆಯಾಗದ ಹೆಣ್ಣು ಬೇಡದ ವಸ್ತು. ತಂದೆ, ಸೋದರರು, ಭಾವಂದಿರು, ಇವರಿಗೆಲ್ಲ ಹೊರೆಯಾಗಿ ಆಳಾಗಿ ದುಡಿಯುತ್ತಾಳೆ. ನಗರಗಳತ್ತ ವಲಸೆ ಬರಲಾರಳು. ಗಂಡಿಗೆ ಕಟ್ಟು ಬೀಳಬೇಕು. ಮನಗೇನೋ ಹೆಸರಿಗೆ ಯಜಮಾನಿ. ಎಷ್ಟೋ ಮಧ್ಯಮ ವರ್ಗದ ಕುಟುಂಬಗಳಲ್ಲಿ ಹುಡುಗಿ ತನ್ನ ಬದುಕನ್ನು ತಾನೇ ನಿರ್ವಹಿಸಲಾರದ ಸ್ಥಿತಿ ಇದೆ. ತಂದೆಯ ಮನೆಯಲ್ಲಿ ಆಶ್ರಯ ಪಡೆದು ಬದುಕಬೇಕು, ಇಲ್ಲವೇ ಗೊತ್ತಿಲ್ಲದ ಗಂಡಸೊಬ್ಬನ ಮನೆಯಲ್ಲಿ ಹೀನಾಯವಾಗಿ ದುಡಿಯಬೇಕು. ಅವಳು ಬಿಡುಗಡೆ ಪಡೆದರೂ, ವೃತ್ತಿಗಿಂತ ಮದುವೆಯೇ ಮುಖ್ಯವಾಗುತ್ತದೆ. ಏಕೆಂದರೆ, ಗಂಡಸಿಗೆ ಹಣಕಾಸಿನ ವಿಚಾರದಲ್ಲಿ ಅಧಿಕಾರ ಜಾಸ್ತಿ. ಹಾಗಾಗಿ, ಅವಳು ತನಗಿಂತ ಹೆಚ್ಚಿನ ಅಂತಸ್ತಿನವನನ್ನೇ ಮದುವೆಯಾಗಬೇಕು. ಇಲ್ಲವೇ, ತನಗಿಂತ ಬೇಗ ಬೇಗ ಗೆಲುವನ್ನು ಗಳಿಸಬಲ್ಲ ಗಂಡನನ್ನು ಆಯ್ದುಕೊಳ್ಳಬೇಕು.

ಇಂದಿಗೂ ಹೆಣ್ಣು ಲೈಂಗಿಕಕ್ರಿಯೆಯ ಮೂಲಕ ಗಂಡನಿಗೆ ಸೇವೆ ನೀಡುತ್ತಾಳೆಂದೇ ತಿಳಿಯಲಾಗಿದೆ. ಆ ಸೇವೆಗಾಗಿ ಆತ ಅವಳಿಗೆ ಏನನ್ನಾದರೂ ನೀಡಬೇಕು. ಆ ಸೇವೆಯಿಂದ ಆತ ಸುಖ ಪಡೆಯುತ್ತಾನೆ. ಹೆಣ್ಣಿನ ದೇಹ ಆತ ಕೊಂಡ ವಸ್ತು. ಆಕೆಯ ಪಾಲಿಗೆ ಅವಳೆಂದರೆ ಆತ ಬಳಸಬಲ್ಲ ಬಂಡವಾಳ, ಕೆಲವೊಮ್ಮೆ ಅವಳು ಸಂಪತ್ತನ್ನೂ ತಂದಾಳು. ಇಲ್ಲವೇ ಮನೆಗೆಲಸ ಮಕ್ಕಳು ಪಾಲನೆ –ಇಂತಹ ಹೊಣೆಯನ್ನು ಹೊರುತ್ತಾಳೆ. ಅಂದರೆ, ತನ್ನನ್ನು ಪೋಷಿಸಬೇಕೆಂದು ಕೇಳುವ ಹಕ್ಕು ಅವಳಿಗಿದೆ. ಸಾಂಪ್ರದಾಯಿಕ ನೀತಿಯಂತೆ ಹಾಗೆ ಮಾಡಲು ಅವಳನ್ನು ಪ್ರೇರೇಪಿಸಲಾಗುತ್ತದೆ. ಅವಳಿಗೆ ದೊರೆಯುವ ಇತರ ಕೆಲಸಗಳಲ್ಲಿ ಸಂಪಾದನೆ ಕಡಿಮೆ. ಇಷ್ಟವೂ ಆಗುವುದಿಲ್ಲ. ಆದ್ದರಿಂದ, ಈ ಸ್ಥಿತಿಯೇ ಅವಳಿಗೆ ಸುಲಭದ ಆಯ್ಕೆ. ವಿವಾಹ ಎಂಬುದು ಇತರ ವೃತ್ತಿಗಳಿಗಿಂತ ಹೆಚ್ಚಿನ 'ಸೌಲಭ್ಯ'ವನ್ನು ಅವಳಿಗೆ ನೀಡುತ್ತದೆ.

ವಿವಾಹ ಆಗದ ಹೆಂಗಸು ಲೈಂಗಿಕ ಸ್ವಾತಂತ್ರ್ಯ ಪಡೆದಂತೆ ಕಟ್ಟುಕಟ್ಟಳೆಗಳನ್ನು ರೂಪಿಸಲಾಗಿದೆ. ಹೆಂಡತಿ ಹಾದರ ಮಾಡಿದರೆ, ಅದನ್ನು ತೀರಾ ಈಚಿನವರೆಗೂ ಫ್ರಾನ್ಸ್‌ನಲ್ಲಿ ಅಪರಾಧವೆಂದೇ ಪರಿಗಣಿಸಲಾಗುತ್ತಿತ್ತು. ಆದರೆ, ಒಬ್ಬ ಅವಿವಾಹಿತ ಹೆಂಗಸು ಮುಕ್ತ ಪ್ರೇಮದಲ್ಲಿ

ತೊಡಗಲು ಈಗ ಕಾನೂನಿನ ಅಡ್ಡಿಗಳೇನಿಲ್ಲ, ಆದರೆ, ಅವಳು ಹಾಗೆ ಮಾಡಲು ತಾನು ಆಯ್ಕೆ ಮಾಡಿದ ಗಂಡಸನ್ನು ಮದುವೆಯಾಗಬೇಕು. ಈಗಲೂ ಮಧ್ಯಮ ವರ್ಗದ ಹುಡುಗಿಯರು "ಮುಕ್ತವಾಗಿರಲೆಂದೆ" ಮದುವೆಯಾಗುತ್ತಾರೆ. ಎಷ್ಟೋ ಅಮೆರಿಕನ್ ಹೆಣ್ಣುಗಳು ಲೈಂಗಿಕ ಸ್ವಾತಂತ್ರ್ಯ ಪಡೆದಿದ್ದಾರೆ. ಆದರೆ, ಅವರ ಅನುಭವಗಳು ಬೇರೆಯಾಗಿವೆ. "ದ ಸೆಕ್ಷುಯಲ್ ಲೈಫ್ ಸ್ಯಾವೇಜಸ್" ಕೃತಿಯಲ್ಲಿ ಮಲಿನವ್‌ಸ್ಕಿ ಬಣ್ಣಿಸುವ ಹುಡುಗಿಯರ ಅನುಭವವನ್ನು ಹೋಲುವಂತಿವೆ. ಆ ಹುಡುಗಿಯರು "ಅವಿವಾಹಿತರ ಮನೆ"ಯಲ್ಲಿ ಯಾವ ಪರಿಣಾಮವೂ ಇಲ್ಲದ ಲೈಂಗಿಕ ಕ್ರಿಯೆಗಳಲ್ಲಿ ತೊಡಗುತ್ತಾರೆ. ವಯಸ್ಕರಾದ ಮೇಲೆ ಮದುವೆಯಾಗುತ್ತಾರೆ. ಫ್ರಾನ್ಸ್‌ಗಿಂತ ಅಮೆರಿಕದ ಏಕಾಂಗಿ ಹೆಣ್ಣು ತನ್ನ ಜೀವನವನ್ನು ತಾನೇ ನಿರ್ವಹಿಸುತ್ತಿದ್ದರೂ, ಅವಳು ಪೂರ್ಣಳಲ್ಲ ಎಂದೇ ತಿಳಿಯಲಾಗುತ್ತಿದೆ. ಅವಳು ಪೂರ್ಣಳಲ್ಲ ಎಂದೇ ತಿಳಿಯಲಾಗುತ್ತಿದೆ. ಅವಳು ವ್ಯಕ್ತಿಯ ಘನತೆಯನ್ನು, ಹಕ್ಕುಗಳನ್ನು ಪಡೆಯಬೇಕಾದರೆ, ಬೆರಳಲ್ಲಿ ಮದುವೆಯುಂಗುರ ಇರಲೇಬೇಕು. ಮದುವೆಯಾದರೆ ಮಾತ್ರ ತಾಯ್ತನಕ್ಕೆ ಗೌರವ. ಅವಿವಾಹಿತ ತಾಯಿ ಸಾಮಾಜಿಕ ನೆಲೆಯಲ್ಲಿ ಅಪರಾಧಿಯೇ. ಅವಳ ಬದುಕಿಗೆ ಅವಳ ಮಗುವೊಂದು ಹೊರೆ.

ಈ ಎಲ್ಲ ಕಾರಣಗಳಿಂದ, ಎಲ್ಲ ಕಾಲದ ಕೌಮಾರ್ಯಾವಸ್ಥೆಯ ಹುಡುಗಿಯರನ್ನೂ ನಾಳೆ ಏನು ಮಾಡುತ್ತೀರಿ ಎಂದು ಕೇಳಿದಾಗ, ಎಲ್ಲರೂ ಸ್ವಾಭಾವಿಕವಾಗಿ ಹೇಳುವುದಿಷ್ಟೇ. 'ನಾನು ಮದುವೆಯಾಗುತ್ತೇನೆ', ಆದರೆ, ಯುವಕನಿಗೆ ಮದುವೆ ಮೊದಲ ಗುರಿಯಲ್ಲ. ಆತ ಹಣಕಾಸಿನ ನೆಲೆಯಲ್ಲಿ ನಿಂತು ವಯಸ್ಕನಾಗಬೇಕು. ರೈತಾಪಿ ಜನರಲ್ಲಂತೂ ಹೀಗೆ ಗೆದ್ದವನು ಮಾತ್ರವೇ ಮದುವೆಯಾದಾನು. ಉಳಿದವರಲ್ಲಿ ಹಾಗಾಗದೆಯೂ ಇರಬಹುದು. ಹಿಂದಿಗಿಂತ ಈಗ ಜೀವನದ ನೆಲೆಗಟ್ಟು ಹೆಚ್ಚು ಸಡಿಲವಾಗಿದೆ. ಹಾಗಾಗಿ ಮದುವೆಯು ತರುವ ಹೊಣೆ ಹೆಚ್ಚಾಗಿದೆ. ಅದರಿಂದ ಯುವಕರಿಗೆ ಸಿಗುವ ಸವಲತ್ತುಗಳು ಕಡಿಮೆಯಾಗಿವೆ. ಆತ ಬೇಕೆಂದಲ್ಲಿ ನೆಲಸಿ ಬೇಕಾದಾಗ ಲೈಂಗಿಕ ತೃಪ್ತಿ ಪಡೆಯಬಲ್ಲ ನಿಜ. ಮದುವೆಯಿಂದ ಕೆಲವು ಲೈಂಗಿಕ ಸವಲತ್ತುಗಳು, ಜೀವನ ಸೌಕರ್ಯಗಳು ಸಿಗುತ್ತವೆ. ವ್ಯಕ್ತಿ ಒಂಟಿಯಾಗಿರಬೇಕಿಲ್ಲ. ಮನೆ ಮಕ್ಕಳೊಡನೆ ಒಂದೆಡೆ ನೆಲಸುವಂತೆ ಮಾಡುತ್ತದೆ. ಅದರಿಂದ ಜೀವನದಲ್ಲಿ ತೃಪ್ತಿ ಸಿಕ್ಕೀತು. ಆದರೆ, ಇಡೀ ಸನ್ನಿವೇಶದಲ್ಲಿ ಗಂಡು ಬಯಸುವುದು ಹೆಣ್ಣು ಕೊಡಲು ಆಗುವುದಕ್ಕಿಂತ ಹೆಚ್ಚಾಗಿದೆ. ತಂದೆಯೊಬ್ಬ ಮಗಳನ್ನು ಮದುವೆ ಮಾಡಿ ಕೈ ತೊಳೆದುಕೊಳ್ಳುತ್ತಾನೆ. ಗಂಡನನ್ನು ಬಯಸುವ ಹುಡುಗಿಯೊಬ್ಬಳು ಪುರುಷರ ಬೇಡಿಕೆಯನ್ನು ಪೂರೈಸುತ್ತಿರುವುದಿಲ್ಲ. ತನಗೊಂದು ಅವಕಾಶವನ್ನು ಕಲ್ಪಿಸಿಕೊಳ್ಳುತ್ತಿರುತ್ತಾಳೆ.

ತಂದೆ ತಾಯಿಗಳು ಒಪ್ಪಿ ಮಾಡುವ ಮದುವೆಗಳ ಕಾಲ ಮುಗಿದು ಹೋಗಿಲ್ಲ. ಇಂದಿಗೂ ಆ ಪದ್ಧತಿಯನ್ನು ಗಟ್ಟಿಯಾಗಿ ಪಾಲಿಸುವ ಮಧ್ಯಮ ವರ್ಗ ಇದ್ದೇ ಇದೆ. ನೆಪೋಲಿಯನ್ ಸಮಾದಿ ಬಳಿ, ನಾಟಕ ಗೃಹಗಳಲ್ಲಿ ನರ್ತನ ಶಾಲೆಗಳಲ್ಲಿ ಸಮುದ್ರ ದಂಡೆಗಳಲ್ಲಿ, ಟೀ ಪಾರ್ಟಿಗಳಲ್ಲಿ ಸಿಂಗರಿಸಿದ ಹುಡುಗಿಯೊಬ್ಬಳು ಉತ್ತಮ ಉಡುಗೊರೆತೊಟ್ಟು ತನ್ನ ದೇಹದ ಚೆಲುವನ್ನು ಎಲ್ಲರ ಎದುರು ಇರಿಸಿ ವಿನಯಶೀಲಳಾಗಿ ಮಾತುಕತೆಯಾಡುತ್ತಾಳೆ. ಅವಳ ತಂದೆ ತಾಯಿಗಳಂತೂ "ಈಗಾಗಲೇ ಇಂಥ ಭೇಟಿಗಳಿಗಾಗಿ ನಿನ್ನಿಂದ ನಮಗೆ ಸಾಕಷ್ಟು ಹಣ ಕೈ ಬಿಟ್ಟಿದೆ. ಈಗಲೇ ನಿರ್ಧಾರ ಮಾಡು, ನಾಳೆ ನಿನ್ನ ತಂಗಿಯ ಸರದಿ" ಎನ್ನುತ್ತಾರೆ. ಸೋತ ಹುಡುಗಿಯು ತನ್ನ ಅವಕಾಶಗಳು ದಿನೇ ದಿನೇ ಕಡಿಮೆಯಾಗುತ್ತಿದೆ. ವಯಸ್ಸಾದಷ್ಟೂ ಇನ್ನಷ್ಟು ಕುಗ್ಗುತ್ತವೆ ಎಂದು ಬಲ್ಲಳು. ಅವಳ ಕೈ ಹಿಡಿಯಬಯಸುವವರು ಕಡಿಮೆ. ಹಿಂದೆ ಕುರಿಮಂದೆಯೊಂದಕ್ಕೆ ಸಾಟಿಯಾಗಿ ಹುಡುಗಿಯನ್ನು ಬೆದೊವಿನ್ ಸಮುದಾಯ ನೀಡುತ್ತಿತ್ತು. ಇವಳ ಕತೆ ಬೇರೆಯಲ್ಲ. ಕೊಲೆಟೆ ಹೇಳುವಂತೆ "ಸಂಪತ್ತು, ಉದ್ಯೋಗವಿಲ್ಲದ ಹುಡುಗಿ ನಾಲಿಗೆ ಬಿಗಿಹಿಡಿಯಬೇಕು. ಅವಕಾಶ ಸಿಕ್ಕಾಗ 'ಸದ್ಯ ಸಿಕ್ಕಿತಲ್ಲ' ಎಂದು ಬಾಚಿ ಹಿಡಿದುಕೊಳ್ಳಬೇಕು."

ಮೇಲುಸ್ತರದವರಲ್ಲಿ ಇದು ಇಷ್ಟು ಒರಟಲ್ಲ, ಅಲ್ಲಿ ತಾಯಂದಿರ ಕಣ್ಣಳತೆಯಲ್ಲಿ ಹುಡುಗ ಹುಡುಗಿಯರು ಭೇಟಿಯಾಗುತ್ತಾರೆ. ಸ್ವಲ್ಪ ಉನ್ನತಸ್ತರದ ಹುಡುಗಿಯರಿಗೆ ಸವಲತ್ತುಗಳಿವೆ. ಶಿಕ್ಷಣ ಪಡೆಯುತ್ತಾರೆ. ಗಂಡಸರನ್ನು ಭೇಟಿಯಾಗಲು ಅವಕಾಶವಿರುವ ವೃತ್ತಿಗಳನ್ನು ಸೇರುತ್ತಾರೆ. ಬೆಲ್ಜಿಯಂನ ಮಧ್ಯಮವರ್ಗವು ವೈವಾಹಿಕ ಸಂಬಧಗಳನ್ನು ಹೇಗೆ ಆಯ್ಕೆ ಮಾಡಿಕೊಳ್ಳುತ್ತದೆ ಎಂಬ ಬಗ್ಗೆ ೧೯೪೫–೪೭ರ ಅವಧಿಯಲ್ಲಿ ಕ್ಲೋರ್ ಲ್ಯಾಪ್ಲೆ ಒಂದು ಅಧ್ಯಯನ ನಡೆಸಿದ್ದಾಳೆ. ಆಕೆ ಪಡೆದ ಫಲಿತಾಂಶಗಳಲ್ಲಿ ಕೆಲವು ಹೀಗಿವೆ – ತಂದೆ ತಾಯಿಗಳು ಒಪ್ಪಿ ಮದುವೆ ಮಾಡುವ ಪದ್ಧತಿ ೧೯೪೫ರ ನಂತರ ಮಾಯವಾಗಿದೆ. ಕೆಲವರು ಪತ್ರ ವ್ಯವಹಾರ ಅಥವಾ ಪ್ರೀಸ್ಟ್‌ಗಳ ಮೂಲಕ ವ್ಯವಹರಿಸುತ್ತಿದ್ದರು. ಶೇಕಡಾ ೪೮ರಷ್ಟು ಒಪ್ಪಂದಗಳು ಸಾಮಾಜಿಕ ಸಂಪರ್ಕಗಳಿಂದ ಸಾಧ್ಯವಾಗುತ್ತಿದ್ದವು. ಒಟ್ಟಿಗೆ ಓದಿ ದುಡಿಯುವ ಪರಿಸರಗಳಲ್ಲಿ ಶೇಕಡಾ ೨೨ ಸಂಬಂಧಗಳು ಕುದುರುತ್ತಿದ್ದವು. ಶೇಕಡಾ ೩೦ ಭಾಗ ವೈಯಕ್ತಿಕ ಭೇಟಿ ಪರಿಚಯಗಳಿಂದ ಸಾಧ್ಯವಾಗುತ್ತಿತ್ತು. ಶೇಕಡಾ ೩೦ ರಿಂದ ೭ ಭಾಗ ಮದುವೆಗಳಲ್ಲಿ ಹಣಕ್ಕೆ ಮನ್ನಣೆ ಇತ್ತು. ಭೇಟಿಯಾದ ಪಾಲಕರಲ್ಲಿ ಶೇಕಡಾ ೪೮ ಮಂದಿ ಆದಷ್ಟು ಬೇಗ ತಮ್ಮ ಮಗಳಂದಿರನ್ನು ಮದುವೆ ಮಾಡಿ ಕಳಿಸಲು ತುದಿಗಾಲಲ್ಲಿ ನಿಂತಿದ್ದರು. ಶೇಕಡಾ ೧೭ ಭಾಗ ಜನರು ಅವರನ್ನು ತಾವೇ ಸಾಕುತ್ತೇವೆ ಎಂದರು. ಶೇಕಡಾ ೩೬ ಭಾಗ ಹುಡುಗಿಯರು ಮದುವೆಗೆ ಉತ್ಸುಕರಾಗಿದ್ದರು. ಶೇಕಡಾ ೩೮ ಭಾಗ

ಹುಡುಗಿಯರಿಗೆ ಮದುವೆ ಆಸೆ ಇತ್ತು. ಆದರೆ ಕೆಟ್ಟ ಸಂಬಂಧಕ್ಕಿಂತ ಮದುವೆಯಾಗದೆ ಇರುವುದೇ ಲೇಸು ಎಂದರು. ಮದುವೆಯಿಂದ ತಮಗೆ ಬಿಡುಗಡೆ ದೊರಕುವುದೆಂದೇ ಬಹುಪಾಲು ಹುಡುಗಿಯರು ಒಪ್ಪಿದ ಮಾತಾಗಿತ್ತು. ಹುಡುಗರಿಗಿಂತ ಹುಡುಗಿಯರೇ ಮದುವೆಗೆ ಮುಂದಾಗಿ ಆ ಚಟುವಟಿಕೆಗಳಲ್ಲಿ ತೊಡಗಿದ್ದರೆಂಬುದು ಎಲ್ಲರ ಅಭಿಪ್ರಾಯವಾಗಿತ್ತು.

ಫ್ರಾನ್ಸ್ ಬಗ್ಗೆ ತಿಳಿಯಲು ಇಂಥ ದಾಖಲೆಗಳಿಲ್ಲ. ಆದರೆ ಇಲ್ಲಿನ ಮಧ್ಯಮ ವರ್ಗವೂ ಇದೇ ಬಗೆಯದು. ಇಂಥದೇ ಫಲಿತಾಂಶ ಇಲ್ಲೂ ದೊರಕುತ್ತದೆ. ಎಲ್ಲಿಗಿಂತಲೂ ಫ್ರಾನ್ಸ್‌ನಲ್ಲಿ, ತಂದೆತಾಯಿಗಳು ಒಪ್ಪಿ ಮಾಡುವ ಮದುವೆಗಳು ಹೆಚ್ಚು. ಈ ಉದ್ದೇಶಕ್ಕಾಗಿ ಕಟ್ಟಿದ ಸಂಘಗಳಿವೆ. ಪತ್ರಿಕೆಗಳಲ್ಲಿ ವೈವಾಹಿಕ ವಿಚಾರದ ಜಾಹಿರಾತುಗಳಿವೆ. ಅಮೆರಿಕದಲ್ಲಿ ಇರುವಂತೆ ಫ್ರಾಸ್ಸ್‌ನಲ್ಲೂ ತಾಯಂದಿರೂ, ಹಿರಿಯ ಗೆಳತಿಯರೂ, ಹೆಂಗಸರ ಪತ್ರಿಕೆಗಳೂ, ಹುಡುಗಿಯರಿಗೆ ಗಂಡಂದಿರನ್ನು 'ಹಿಡಿಯುವ' ಕಲೆಯನ್ನು ಹೇಳಿಕೊಡುತ್ತಾರೆ. ಅವರು ಎಣ್ಣೆ ಹಚ್ಚಿದ ಕಾಗದ ನೊಣಗಳನ್ನು ಹಿಡಿಯುವಂತೆ ಹಿಡಿಯಬೇಕೆಂದು ಹೇಳಿಕೊಡುತ್ತಾರೆ. ಇದೊಂದು ಬಗೆಯ 'ಮೀನು ಹಿಡಿಯುವಿಕೆ' 'ಬೇಟೆ' ಎಂದೂ ಹೇಳುವುದುಂಟು. ಮದುವೆಯಾಗಲು 'ಬಯಸುವ' ಹುಡುಗಿಯರನ್ನು ಹುಡುಗರು ಅಪನಂಬಿಕೆಯಿಂದ ನೋಡುತ್ತಾರೆ. ಮೇಡಂ ಲ್ಯಾಪ್ಲೆ ವರದಿಯಲ್ಲಿ ಒಬ್ಬ ಬೆಲ್ಜಿಯಂನ ಹುಡುಗನ ಮಾತು ಉಲ್ಲೇಖಿತವಾಗಿದೆ. "ತನ್ನ ಬೆನ್ನು ಹತ್ತಿದ ಹುಡುಗಿಯ ಬಗ್ಗೆ ಯಾರಿಗೂ ಇಚ್ಛೆಬರದು. ಅವಳು ಬುಟ್ಟಿಗೆ ಹಾಕಿಕೊಳ್ಳಲು ಯತ್ನಿಸುತ್ತಿದ್ದಾಳೆ ಎಂದು ತಿಳಿದ ಮೇಲಂತೂ ಇನ್ನಷ್ಟು ದೂರ ಸರಿಯಬೇಕಾಗುತ್ತದೆ. "ತಾವು ಸುರಕ್ಷಿತವಾಗಿರಲು ಇಂಥಾ ಯತ್ನಗಳಿಂದ ಹುಡುಗರು ದೂರ ಉಳಿಯುತ್ತಾರೆ. ಹುಡುಗಿಯರ ಆಯ್ಕೆಗೆ ಮಿತಿಗಳಿವೆ. ಅವಳು ಲೆಕ್ಕಾಚಾರ ಹಾಕಿ, ಬೇಸರಪಟ್ಟು, ಇನ್ನೇನೂ ಸಾಧ್ಯವಿಲ್ಲ ಎಂದು ತಿಳಿದು ಆಯ್ದುಕೊಳ್ಳುತ್ತಾಳೆಯೇ ಹೊರತು ಉತ್ಸಾಹದಿಂದಲ್ಲ. ಗಂಡಸು ಆರೋಗ್ಯ ಸ್ಥಾನಮಾನಗಳ ದೃಷ್ಟಿಯಿಂದ ಕೊಂಚ ತೃಪ್ತಿಕರ ಎಂದು ತಿಳಿದರೆ ಸಾಕು. ಒಪ್ಪಿಬಿಡುತ್ತಾಳೆ. ಪ್ರೀತಿಗೀತಿ ದೂರದ ಮಾತು.

ಮದುವೆಗೆ ಆಸೆ ಪಟ್ಟರೂ ಹುಡುಗಿ ಅದಕ್ಕೆ ಹೆದರುತ್ತಾಳೆ. ಗಂಡಿಗಿಂತ ಅವಳಿಗೆ ಅದರಿಂದ ಸೌಕರ್ಯ ಹೆಚ್ಚು. ಅದಕ್ಕಾಗಿ ಅವನಿಗಿಂತ ಉತ್ಸುಕಳಾಗಿ ತೋರುತ್ತಾಳೆ. ಆದರೆ. ಅವಳು ತೆರಬೇಕಾದ್ದೇ ಹೆಚ್ಚು. ಅದರಲ್ಲೂ ತನ್ನ ಕಳೆದ ದಿನಗಳನ್ನು ಪೂರ್ಣವಾಗಿ ಕತ್ತರಿಸಿಕೊಳ್ಳಬೇಕು. ತವರನ್ನು ತೊರೆಯಲು ಹುಡುಗಿಯರು ಇಚ್ಛಿಸುವುದಿಲ್ಲ. ಅಂಥ ಯೋಚನೆಯೇ ಕಳವಳಕಾರಿ. ತೊರೆಯುವ ವೇಳೆ ಹತ್ತಿರ ಬಂದಷ್ಟೂ ಉದ್ವಿಗ್ನತೆ ಹೆಚ್ಚುತ್ತದೆ. ಆಗಲೇ ಮಾನಸಿಕ ಏರುಪೇರು ಆಗಬಹುದು. ಹುಡುಗರಲ್ಲೂ ಹೊಸಹೊಣೆಯ ಭಯ ಇರುತ್ತದೆ. ಆದರೆ ಹುಡುಗಿಯರಲ್ಲಿ ಇದರ

ಒತ್ತಡ ಹೆಚ್ಚು. ಅದರಲ್ಲೂ ಇಂಥಾ ಹೊತ್ತಿನಲ್ಲಿ ಅದು ತೀವ್ರವಾಗುತ್ತದೆ. ಸ್ಟೇಕಲ್ ಹೇಳುವ ಒಂದು ಪ್ರಸಂಗವನ್ನಿಲ್ಲಿ ಉಲ್ಲೇಖಿಸುತ್ತೇನೆ. ಈ ಹುಡುಗಿ ಒಳ್ಳೆಯ ಕುಟುಂಬದಿಂದ ಬಂದವಳು. ಮಾನಸಿಕ ಅವಸ್ಥೆಗಾಗಿ ಕೆಲಕಾಲದಿಂದ ಚಿಕಿತ್ಸೆ ಪಡೆಯುತ್ತಿದ್ದಳು.

"ವಾಂತಿ ಬರುತ್ತಿತ್ತು, ರಾತ್ರಿ ನಿದ್ರೆಗೆ ಮಾರ್ಫೈನ್ ತೆಗೆದುಕೊಳ್ಳುತ್ತಿದ್ದಳು. ರಂಪ ಮಾಡುತ್ತಿದ್ದಳು. ಸ್ನಾನಕ್ಕೆ ದೂರ. ಕೊಠಡಿಯಲ್ಲೇ ಇರುತ್ತಿದ್ದಳು. ಮದುವೆ ನಿಶ್ಚಯವಾಗಿತ್ತು. ನಿಶ್ಚಿತ ಹುಡುಗನನ್ನು ಪ್ರೀತಿಸುತ್ತೇನೆ, ಅವನಿಗೆ ತನ್ನನ್ನು ಕೊಟ್ಟುಕೊಂಡಿದ್ದೇನೆ ಎನ್ನುತ್ತಿದ್ದಳು. ಆದರೆ ಅದರಿಂದ ತನಗೇನು ಸುಖ ದೊರೆಯಲಿಲ್ಲವೆಂದೂ ಕೊಟ್ಟ ಮಾತುಗಳನ್ನು ಮರಳಿಸು ಎಂದು ಅಸಹ್ಯಪಟ್ಟು ಕೇಳಿದ್ದಾಗಿ ಹೇಳುತ್ತಿದ್ದಳು. ತಾಯಿ ಎಂದರೆ ತುಂಬಾ ಗೌರವ. ತನ್ನನ್ನು ಸಾಕಷ್ಟು ಪ್ರೀತಿಸುವುದಿಲ್ಲ ಎಂದುಕೊಂಡಿದ್ದಳು. ಮದುವೆಯಾಗಿ ಮನೆಬಿಟ್ಟು ಹೋಗುವುದೆಂದರೆ ಭಯ ಪಡುತ್ತಿದ್ದಳು. ಆರೋಗ್ಯ ತಪ್ಪಿ ನಿಶ್ಚಿತ ವರನ ಮನಸ್ಸಿಗೆ ಆಘಾತ ತಂದಳು. ಮದುವೆಯೇ ಬೇಡವೆಂದು ಮನೆಯಲ್ಲೇ ಇದ್ದುಬಿಟ್ಟಳು ಮಗುವಿನಂತೆ. ಆದರೆ, ತಾಯಿ ಒತ್ತಾಯ ಮಾಡಿದ್ದಾಗ ಮದುವೆಯ ದಿನದ ಒಂದು ವರ ಆತ್ಮಹತ್ಯೆ ಮಾಡಿಕೊಂಡಳು."

ಇನ್ನೂ ಕೆಲವು ಬೇರೆ ಪ್ರಸಂಗಗಳಲ್ಲಿ ಹುಡುಗಿಯ ಆರೋಗ್ಯ ತಪ್ಪುತ್ತದೆ. ತಾನು 'ಪ್ರೀತಿಸುವ' ಹುಡುಗನನ್ನು ಮದುವೆಯಾಗಲು ಆಗುತ್ತಿಲ್ಲವೆಂಬ ನಿರಾಶೆ ತೋರಿಸಿಕೊಳ್ಳುತ್ತಾಳೆ. ನಿಜವಾಗಿ ಅವನು ಮದುವೆಯಾಗುವುದನ್ನು ತಪ್ಪಿಸಿಕೊಳ್ಳಲೆಂದೇ ಹೀಗೆ ಕಾಯಿಲೆ ಬೀಳುತ್ತಾಳೆ. ಮದುವೆ ಮುರಿದು ಬಿದ್ದಾಗ ಚೇತರಿಸಿಕೊಳ್ಳುತ್ತಾಳೆ. ಯಾವುದೋ ಹಿಂದಿನ ಲೈಂಗಿಕ ಅನುಭವಗಳ ನೆನಪಿನಿಂದ ಮದುವೆಯ ಬಗ್ಗೆ ಭಯ ಹುಟ್ಟುತ್ತದೆ. ತನ್ನ ಕನ್ಯತ್ವ ಕಳೆದು ಹೋದದ್ದು ಹೊತ್ತಾಗುವ ಭಯ ಅವಳಲ್ಲಿ ಇರುತ್ತದೆ. ಅಲ್ಲದೆ, ಗೊತ್ತಿಲ್ಲದ ಗಂಡಸಿಗೆ ತನ್ನನ್ನು ಒಪ್ಪಿಸಿಕೊಳ್ಳುವುದನ್ನು ಸಹಿಸುವುದು ಅವಳಿಗೆ ಆಗದು. ಏಕೆಂದರೆ ಮನೆಗೆ, ತನ್ನ ಕುಟುಂಬಕ್ಕೆ ಅಂಟಿಕೊಂಡಿರುತ್ತಾಳೆ. ಎಷ್ಟೋ ಜನ ಮದುವೆಯಾಗುವುದೇಕೆಂದರೆ ಹಾಗೆ ಮಾಡಲು ಅವರನ್ನು ಒತ್ತಾಯಿಸಲಾಗುತ್ತದೆ. ಅದು ಅವರು ಮಾಡಬೇಕಾದ ಕೆಲಸವೆಂದು ಹೇಳಲಾಗುತ್ತದೆ. ಇದಲ್ಲದೆ ಬೇರೆ ದಾರಿ ಇಲ್ಲವೆಂದು ತೋರಿಸಲಾಗುತ್ತದೆ. ಹೆಂಡತಿಯಾಗಿ ತಾಯಿಯಾಗಿ ಎಲ್ಲರಂತೆ ಬದುಕಲು ಬಯಸುತ್ತಾಳೆ, ಆದರೂ ಒಳಗೊಳಗೇ ಭಯ ಇದ್ದೇ ಇರುತ್ತದೆ. ಮದುವೆಯ ಮೊದಲ ದಿನಗಳು ಇದರಿಂದಾಗಿ ಕಷ್ಟಕರವಾಗುತ್ತದೆ. ಎಷ್ಟೋ ವೇಳೆ ಮನಸ್ಸಿನ ಸಮತೋಲನವನ್ನು ಎಂದೂ ಪಡೆದುಕೊಳ್ಳುವುದು ಸಾಧ್ಯವಾಗದೆಯೇ ಹೋಗಬಹುದು.

ಹಾಗಾಗಿ ಮದುವೆಗಳಿಗೆ ಸಾಮಾನ್ಯವಾಗಿ ಪ್ರೇಮದ ಬುನಾದಿ ಇರುವುದಿಲ್ಲ. "ಗಂಡನೆಂಬಾತ ಪ್ರೀತಿ ಪಾತ್ರನಾದ ಗಂಡಸಿನ ಬದಲಿಗೆ ಬಂದ ವ್ಯಕ್ತಿಯೇ ಹೊರತು ಆ ಪ್ರೀತಿ ಪಾತ್ರ ವ್ಯಕ್ತಿಯೇ

ಆಗಿರುವುದಿಲ್ಲ." ಎನ್ನುತ್ತಾನೆ ಫ್ರಾಯ್ಡ್, ಹೀಗೆ ತಾಳ ತಪ್ಪುವುದು ಆಕಸ್ಮಿಕವಲ್ಲ. ಮದುವೆಯ ವ್ಯವಸ್ಥೆಯಲ್ಲೇ ಅದು ಅಡಕವಾಗಿದೆ. ಸಮಾಜದ ಹಿತ ಕಾಯಲು ಗಂಡು ಹೆಣ್ಣುಗಳು ಆರ್ಥಿಕವಾಗಿ ಮತ್ತು ಲೈಂಗಿಕವಾಗಿ ಒಂದಾಗಬೇಕು ಎಂಬುದು ಮೂಲ ಉದ್ದೇಶವೇ ಹೊರತು, ಅವರಿಬ್ಬರ ಸ್ವಂತ ಸುಖಸಂತೋಷಗಳಲ್ಲ. ಇಂದಿನ ಮಹಮದೀಯರಲ್ಲಿ ಇರುವಂತೆ ಕೆಲವು ಪಿತೃಪ್ರಧಾನ ವ್ಯವಸ್ಥೆಗಳಲ್ಲಿ, ತಂದೆ ತಾಯಿಗಳು ಆಯ್ಕೆ ಮಾಡಿದ ಗಂಡುಹೆಣ್ಣುಗಳು ಮದುವೆಯ ದಿನಕ್ಕೆ ಮೊದಲು ಒಬ್ಬರ ಮುಖವನ್ನು ಇನ್ನೊಬ್ಬರು ನೋಡಿರುವುದಿಲ್ಲ. ಈ ನಿಟ್ಟಿನಿಂದ ನೋಡಿದಾಗ ಇಡೀ ಜೀವನ ವ್ಯಾಪಿಸುವ ಈ ಸಂಬಂಧವು ಭಾವುಕ ಇಲ್ಲವೇ ಲೈಂಗಿಕ ಕಲ್ಪನೆಗಳ ನೆಲೆಗಟ್ಟಿನ ಮೇಲೆ ರೂಪುಗೊಳ್ಳುವ ಅವಕಾಶಗಳು ಇಲ್ಲ.

(ಮಾಂಟೆನ್ ಹೇಳುವಂತೆ) ಈ ಖಚಿತ ವ್ಯವಸ್ಥೆಯಲ್ಲಿ ಬಯಕೆಗಳಿಗೆ ಅವಕಾಶ ಇಲ್ಲವೆಂದಲ್ಲ. ಅವುಗಳು ಕೆಳಸ್ತರದಲ್ಲಿ ಇಲ್ಲವೇ ಮೊಂಡಾಗಿ ಕಾಣುತ್ತವೆ. ವ್ಯಕ್ತಿಗಳು ಪ್ರೇಮದ ನೆಲೆಯಲ್ಲಿ ಒಂದಾಗದೆ ಬೇರೆನೇ ಯಾವುದೋ ಕಾರಣದಿಂದ ಬೆರೆಯುವುದು ಅಷ್ಟು, ಅಪೇಕ್ಷಣೀಯವಲ್ಲ. ಆದರೂ ಮದುವೆ ಎಂಬ ಈ ವ್ಯವಸ್ಥೆಯಲ್ಲಿ ಇಂಥಾ ಒಂದುಗೂಡುವಿಕೆಯೆ ನಡೆದು ಹೋಗುತ್ತದೆ. ಇಲ್ಲಿ ಚೆಲುವು, ಆಕರ್ಷಣೆಗಳಿಗಿಂತ, ಸಾಮಾಜಿಕ ಸಂಬಂಧಗಳು ಮುಖ್ಯವಾಗುತ್ತವೆ. ಗಂಡಸರು ಏನೇ ಹೇಳಲಿ, ಅವರು ತಮ್ಮ ಕುಟುಂಬಕ್ಕಾಗಿ ಮಕ್ಕಳು ಮರಿಗಳಾಗಿ ಮದುವೆಯಾಗುತ್ತಾರೆಯೇ ಹೊರತು ತಮಗಾಗಿ ಅಲ್ಲ.

ಹೆಂಗಸರನ್ನು 'ಪಡೆಯುವವನು' ಗಂಡಸು. ಅದ್ದರಿಂದ ಅವನಿಗೆ ಆ ಆಯ್ಕೆಯ ಅವಕಾಶ ಹೆಚ್ಚು. ಅದರಲ್ಲೂ ಆಯ್ಕೆ ಮಾಡಲು ಹೆಂಗಸರು ಹೆಚ್ಚು ಸಂಖ್ಯೆಯಲ್ಲಿ ಇದ್ದರಂತೂ ಈ ಸಾಧ್ಯತೆ ಇನ್ನಷ್ಟು ಹೆಚ್ಚುತ್ತದೆ. ಹೆಂಗಸು ಲೈಂಗಿಕ ಕ್ರಿಯೆಯಲ್ಲಿ ತೊಡಗುವುದು ಆಕೆ ಸಲ್ಲಿಸುವ ಸೇವೆ ಎಂದು ಪರಿಗಣಿತವಾಗುವುದರಿಂದ, ಅವಳಿಗೆ ಕೆಲವು ಸವಲತ್ತುಗಳನ್ನು ನೀಡಲಾಗುತ್ತದೆ. ಆದ್ದರಿಂದ, ಅವಳಿಗೆ ಆಯ್ಕೆಯ ಅವಕಾಶ ಇಲ್ಲದಿರುವುದರಿಂದ ತರ್ಕಬದ್ಧವಾಗಿದೆ. ಮದುವೆಯಿಂದಾಗಿ ಪುರುಷನ ಸ್ವಾತಂತ್ರ್ಯಕ್ಕೆ ಕುಂದು ಬರುವುದಿಲ್ಲ. ಆದರೆ ಹೆಣ್ಣು ಮದುವೆಯಿಂದಾಗಿ ಎಲ್ಲಾ ಸ್ವಾತಂತ್ರ್ಯವನ್ನೂ ಕಳೆದುಕೊಳ್ಳುತ್ತಾಳೆ. ಆದರೆ, ಸ್ವಾತಂತ್ರ್ಯವಿಲ್ಲದೆ, ಪ್ರೀತಿಯೂ ಇಲ್ಲ, ಸ್ವಂತಿಕೆಯೂ ಇಲ್ಲ, ಆದ್ದರಿಂದ ಅವಳು ಒಬ್ಬ ನಿರ್ದಿಷ್ಟ ವ್ಯಕ್ತಿಯನ್ನು ಪ್ರೀತಿಸುವುದನ್ನು ಬಿಟ್ಟುಕೊಟ್ಟು ಜೀವನದುದ್ದಕ್ಕೂ ಪುರುಷನ ರಕ್ಷಣೆಯಲ್ಲಿ ಉಳಿಯುವುದನ್ನು ಆಯ್ಕೆ ಮಾಡಿಕೊಳ್ಳಬೇಕು. ಸಭ್ಯ ತಾಯಿಯೊಬ್ಬಳು ತನ್ನ ಮಕ್ಕಳಿಗೆ "ಪ್ರೇಮ ಎಂಬುದು ಗಂಡಸರಿಗೆ ಮಿತವಾದ ಒರಟು ಭಾವನೆ. ಅದು ಹೆಂಗಸರಿಗೆ ತಕ್ಕುದಲ್ಲ" ಎಂದು ಹೇಳುವುದನ್ನು ಕೇಳಿದ್ದೇನೆ. ಹೆಗೆಲ್ ಇದನ್ನೇ ಇನ್ನೂ ಸರಳಗೊಳಿಸಿ ಹೇಳುತ್ತಾನೆ. ಹೆಂಗಸು ತಾಯಿ ಇಲ್ಲವೇ ಹೆಂಡತಿಯಾಗಿ

ರೂಪಿಸಿಕೊಳ್ಳುವ ಸಂಬಂಧಗಳು ವ್ಯಕ್ತಿಗತ ನೆಲೆಯಲ್ಲಿ ಇರುವುದಿಲ್ಲ. ಅವು ಸಾಮಾನ್ಯ ನೆಲೆಗೆ ಸೇರಿದವು. ಇದು ಹೆಗೆಲ್‌ನ ಚಿಂತನೆ. ಆಕೆ 'ಆ ಗಂಡನೋ' 'ಈ ಗಂಡನೋ' ಎಂದು ಚಿಂತಿಸುವಂತಿಲ್ಲ. 'ಒಬ್ಬ ಗಂಡ' ಇರಬೇಕು ಅಷ್ಟೇ. ಆತ ಅವಳ ಮಕ್ಕಳ ತಂದೆ. ಅದು ಅವಳ ಸ್ವಂತ ಭಾವನೆಗಳ ನೆಲೆಯ ಆಯ್ಕೆಯಲ್ಲ. ಒಂದು ಸಾಮಾನ್ಯ ನಿಯಮ. ಗಂಡಸಿನಲ್ಲಿ ಇರಬಹುದಾದ ಬಯಕೆಗಳು ಹೆಂಗಸಿನಲ್ಲಿ ಇದ್ದರೆ, ಅವು ಅವಳ 'ಅನೀತಿಯುತ' ನೆಲೆಯಲ್ಲಿ ಬಿಡುತ್ತದೆ.

ಆದ್ದರಿಂದ, ಹೆಂಗಸು ತನಗೆ ದೊರೆತ ಸಹಚರನೊಡನೆ ವ್ಯಕ್ತಿಗತ ನೆಲೆಯ ಸಂಬಂಧಗಳನ್ನು ರೂಪಿಸಿಕೊಳ್ಳಬೇಕಿಲ್ಲ. ಆತನೊಡನೆ 'ಹೆಂಗಸಿನಂತೆ' ನಡೆದುಕೊಂಡರೆ ಸಾಕು. ಗೊತ್ತಾದ ಮಾದರಿಯಲ್ಲಿ ಲೈಂಗಿಕ ಅನುಭವ ಪಡೆಯಬೇಕೇ ಹೊರತು ತನಗೆ ಬೇಕೆನಿಸಿದ ರೀತಿಯಲ್ಲಲ್ಲ. ಈಗ ಅವಳ ಲೈಂಗಿಕ ಬದುಕಿಗೆ ಎರಡು ಗುರಿಗಳಿವೆ. ಒಂದು, ಮದುವೆಯಾಚೆಗೆ ಅವಳಿಗೆ ಲೈಂಗಿಕ ಚಟುವಟಿಕೆಗಳಿಲ್ಲ. ಆದ್ದರಿಂದ ಲೈಂಗಿಕ ಸಂಬಂಧಗಳು ಒಂದು ವ್ಯವಸ್ಥೆಯ ರೂಪ ತಾಳುತ್ತವೆ. ಸಮಾಜದ ಹಿತಕ್ಕಾಗಿ ಇಬ್ಬರೂ ತಮ್ಮ ಆಸೆ, ಸಂತೃಪ್ತಿಗಳನ್ನು ಹತ್ತಿಕ್ಕಬೇಕು. ಆದರೆ, ಗಂಡಸು ದುಡಿಮೆಗಾರ ಮತ್ತು ಪೌರನಾಗಿ ಕೆಲವು ವಿಶೇಷ ಸವಲತ್ತುಗಳನ್ನು ಪಡೆಯುತ್ತಾನೆ. ಮದುವೆಯಲ್ಲದೆ, ಅದರಾಚೆಗಿನ ಸಂಬಂಧಗಳಿಂದ ಕೂಡಾ ಆತ ಸುಖ ಪಡೆಯಬಲ್ಲ. ಇದೂ ಅಲ್ಲದೆ, ಗಂಡಸು ಬೇರೆ ರೀತಿಯಲ್ಲೂ ತನಗೆ ಬೇಕಾದ್ದನ್ನು ಪಡೆಯಬಲ್ಲ, ಆದರೆ, ಇವಳು ಮಾತ್ರ ಹೆಂಗಸಿಗೆಂದು ನಿಗದಿಯಾದ ದಾರಿಯಲ್ಲಷ್ಟೇ ನಡೆಯಬೇಕು. ಎರಡನೆಯ ಗುರಿಯೆಂದರೆ, ಸ್ತ್ರೀ ಪುರುಷರಲ್ಲಿ ಸಾಮಾನ್ಯ ಮತ್ತು ವ್ಯಕ್ತಿಗತ ವ್ಯತ್ಯಾಸಗಳು ಜೈವಿಕವಾಗಿ ಬೇರೆ ಬೇರೆಯಾಗಿರುತ್ತವೆ, ಗಂಡಸು ಗಂಡನಾಗಿ ಮತ್ತು ವಂಶೋತ್ಪತ್ತಿ ಮಾಡುವವನಾಗಿ ಕರ್ತವ್ಯ ನಿರ್ವಹಿಸುತ್ತಲೇ ಸಂತೃಪ್ತಿ ಪಡೆಯುತ್ತಾನೆ. ಆದರೆ, ಹೆಣ್ಣಿನಲ್ಲಿ ಲೈಂಗಿಕ ತೃಪ್ತಿಗೂ ವಂಶೋತ್ಪತ್ತಿಗೂ ಸಂಬಂಧವಿಲ್ಲ. ಮದುವೆಯು ಹೆಣ್ಣಿನ ಲೈಂಗಿಕ ಜೀವನಕ್ಕೆ ನೈತಿಕ ಬೆಂಬಲವನ್ನು ನೀಡುವುದೆಂದು ತಿಳಿಯಲಾಗಿದೆಯಾದರೂ, ನಿಜವಾಗಿ ಅದರಿಂದಲೇ ಅವಳ ಲೈಂಗಿಕತೆಯನ್ನು ಹತ್ತಿಕ್ಕಲಾಗುತ್ತದೆ.

ಹೆಂಗಸಿನ ಲೈಂಗಿಕ ಅತೃಪ್ತಿಯನ್ನು ಗೊತ್ತಿದ್ದೂ ಒಪ್ಪಿಕೊಳ್ಳುತ್ತಾನೆ. ನಿಸರ್ಗ ತನಗೆ ಬೇಕಾದ್ದನ್ನು ಕಂಡುಕೊಳ್ಳುತ್ತದೆ ಎಂಬ ತತ್ವವನ್ನು ನೋಡಿದರೆ, ಗಂಡಸರು ಹೆಂಗಸರ ಈ ಕಳವಳಕಾರಿ ಸ್ಥಿತಿಯನ್ನು ಅದು ಯಾವಾಗಲೂ ಇದ್ದದ್ದೇ ಎಂಬಂತೆ ಒಪ್ಪಿಕೊಂಡಂತೆ ನೋಡುತ್ತದೆ. ಇದು ಎಲ್ಲ ಹೆಂಗಸರ ಕತೆ. ಬೈಬಲ್ ಪ್ರಣೀತ ಶಾಪವೊಂದು ಅವರನ್ನು ಕಟ್ಟಿಹಾಕಿದೆ. ಹೆಂಗಸು ಒಂದು ಗಳಿಗೆಯ ಅಸ್ಪಷ್ಟ ಸುಖದ ಪರಿಣಾಮವಾಗಿ ಬಸಿರಿನ ಹೊರೆಯನ್ನು, ನೋವನ್ನು ಹೊರುತ್ತಾಳೆ, ಈ ಬಗ್ಗೆ ಸಾಕಷ್ಟು ಮಾತುಕತೆಯಾಗಿದೆ. "ಐದು ನಿಮಿಷದ ಸುಖ ಒಂಬತ್ತು ತಿಂಗಳ ನೋವು", "ಒಳಗೆ ಹೋದಷ್ಟು ಸುಲಭವಲ್ಲ, ಹೊರಗೆ ಬರುವುದು" – ಈ ಎರಡೂ ಹೇಳಿಕೆಗಳಲ್ಲಿ

ಸೋಜಿಗ ತರುವ ನೆಲೆಗಳಿವೆ. ಈ ಹೇಳಿಕೆಗಳಲ್ಲಿ ಅನ್ಯರ ನೋವಿನಲ್ಲಿ ಸುಖ ಪಡುವ ಮನೋಭಾವವಿದೆ. ಗಂಡಸರು ಹೆಂಗಸರ ದುಃಖ ಕಂಡು ಆನಂದಿಸುತ್ತಾರೆ. ಅದಕ್ಕೆ ಪರಿಹಾರ ಹುಡುಕಬೇಕೆಂಬ ಚಿಂತನೆಯಿಂದ ದೂರ ಸರಿಯುತ್ತಾರೆ. ಪುರುಷರು ತಮ್ಮ ಹೆಣ್ಣು ಸಹಚರರಿಗೆ ಲೈಂಗಿಕ ಸಂತೋಷ ಲಭಿಸುವುದಿಲ್ಲ ಎಂಬ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಹೆಂಗಸರಿಗೆ ಅದನ್ನು ಬಯಸುವ ಸ್ವಾತಂತ್ರ್ಯವೂ ಇಲ್ಲ. ಸುಖಿಸುವ ಸ್ವಾತಂತ್ರ್ಯವೂ ಇಲ್ಲ. ಹೀಗೆ ಇರುವುದೇ ಪುರುಷರಿಗೆ ಅನುಕೂಲಕರವೆಂದು ತಿಳಿಯಲಾಗಿದೆ.

ಮಾಂಟೇನ್ ನಿಲುವು ಇಂಥದೇ. "ತಂದೆ ತಾಯಿಗಳಾಗುವ ಪವಿತ್ರ ಮತ್ತು ಗೌರವಾನ್ವಿತ ಸಂಬಂಧದಲ್ಲಿ ಶೃಂಗಾರ ಕೇಳಿಯ ಪ್ರವೇಶವೆಂದರೆ, ಅದೊಂದು ಬಗೆಯ ಅಗಮ್ಯ ಗಮನವೇ. ಮದುವೆಗಳು ಮುರಿದು ಬೀಳುವುದು ಚೆಲುವು ಮತ್ತು ಶೃಂಗಾರ ಬಯಕೆಗಳಿಂದಾಗಿಯೇ ಹೊರತು ಬೇರೆ ಕಾರಣಗಳಿಂದಲ್ಲ" ಎನ್ನುತ್ತಾನೆ. ಅವನ ಪ್ರಕಾರ "ಮದುವೆ ಎಂಬುದು ಪವಿತ್ರ ಕೂಟ, ಅಲ್ಲಿ ಯಾವುದೇ ಸುಖವನ್ನಾದರೂ ಸಂಯಮದಿಂದ, ಗೌರವಪೂರ್ವಕವಾಗಿ ಮತ್ತು ಗಾಂಭೀರ್ಯದಿಂದ ಪಡೆಯಬೇಕೇ ಹೊರತು ಅನ್ಯಥಾ ಅಲ್ಲ."

ಗಂಡಂದಿರು ಸ್ತ್ರೀ ಸಂವೇದನೆಗಳನ್ನು ಜಾಗೃತಗೊಳಿಸುತ್ತಾರೆ ಎನ್ನುವುದೇನೋ ನಿಜ. ಆದರೆ ಅದು ಒಂದು ಸಾಮಾನ್ಯ ನೆಲೆಯಲ್ಲಿ ಮಾತ್ರ, ಹಾಗೆ ಮಾಡುವ ಆತ ಒಬ್ಬ ಗಂಡಸಾಗಿ ಕಾರ್ಯ ನಿರ್ವಹಿಸುತ್ತಾನೆಯೇ ಹೊರತು, ಅದಕ್ಕಾಗಿ ಆಯ್ಕೆಯಾದ ವ್ಯಕ್ತಿಯಾಗಿ ಅಲ್ಲ, ತನ್ನ ಹೆಂಡತಿ ಇನ್ನೊಬ್ಬರ ತೋಳಿನಲ್ಲಿ ಸುಖ ಪಡೆಯಲು ಆಕೆಯನ್ನು ಸನ್ನದ್ಧಗೊಳಿಸುತ್ತಿದ್ದಾನೆ. ಮಾಂಟೇನ್ ಇದನ್ನು ಒಪ್ಪುತ್ತಾನೆ. ಗಂಡಸಿನ ಒಣಜಂಭದಿಂದಾಗಿ ಹೆಂಗಸು ಕಟ್ಟುಪಾಡಿಗೆ ಸಿಲುಕುತ್ತಾಳೆ ಎಂಬುದನ್ನು ಒಪ್ಪುವಷ್ಟು ಪ್ರಾಮಾಣಿಕನಾಗಿದ್ದಾನೆ ಮಾಂಟೆನ್. "ಅವರು ಆರೋಗ್ಯದಿಂದ, ಚೈತನ್ಯದಿಂದ ಮೈತುಂಬಿಸಿಕೊಂಡಿರಬೇಕು. ಶೀಲವಂತರಾಗಬೇಕು, ಉದ್ದೀಪ್ತರಾಗಿರುವಂತೆ ಸಂಯಮಿಗಳೂ ಆಗಿರಬೇಕು." ಪ್ರೌದೋನ್ ಇಷ್ಟು ನೇರವಾಗಿ ಹೇಳುವುದಿಲ್ಲ. ಅವನು ಮದುವೆ ಎಂಬ ವ್ಯವಸ್ಥೆಯಿಂದ ಪ್ರೇಮವನ್ನು ಹೊರಗಿಡುವುದು 'ನ್ಯಾಯಬದ್ಧ'ವಾಗಿಯೇ ಇದೆ. "ಮದುವೆ ನಿಶ್ಚಿತವಾದ, ಇಲ್ಲವೆ, ಮದುವೆಯಾದ ಗಂಡು ಹೆಣ್ಣುಗಳು ಪ್ರೇಮದ ಮಾತುಗಳಲ್ಲಿ ತೊಡಗಿಕೊಂಡರೆ ಅದರಿಂದ ಮನೆಯ ಗೌರವ ಹಾಳಾಗುತ್ತದೆ. ಕೆಲಸಗೇಡಿಗಳಾಗುತ್ತಾರೆ. ಸಾಮಾಜಿಕ ಕರ್ತವ್ಯ ಚ್ಯುತರಾಗುತ್ತಾರೆ" ಎನ್ನುತ್ತಾರೆ.

೧೯ನೇ ಶತಮಾನದಲ್ಲಿ ಮದುವೆ ಕುರಿತಂತೆ ಮಧ್ಯಮವರ್ಗದ ಚಿಂತನೆಗಳು ಕೊಂಚ ಬದಲಾದವು. ಒಂದೆಡೆ ಮದುವೆ ಎಂಬ ವ್ಯವಸ್ಥೆಯನ್ನು ಸಮರ್ಥಿಸುವ, ಸಂರಕ್ಷಿಸುವ ಯತ್ನಗಳು ನಡೆಯುತ್ತಿದ್ದವು. ಇನ್ನೊಂದೆಡೆ ವ್ಯಕ್ತಿವಾದದ ಪ್ರಗತಿಯಿಂದಾಗಿ ಸ್ತ್ರೀತ್ವದ ಹಕ್ಕುಗಳನ್ನು

ಹತ್ತಿಕ್ಕುವುದು ಸಾಧ್ಯವಿಲ್ಲದಂತಾಗಿತ್ತು. ಪ್ರೇಮಿಸುವ ಹಕ್ಕನ್ನು ಸೇಂಟ್ ಸಿಮೋನ್, ಪೌರಿಯರ, ಜಾರ್ಜ್ ಸ್ಯಾಂಡ್ ಮತ್ತು ಎಲ್ಲ ರೊಮಾಂಟಿಕರು ಎತ್ತಿ ಹಿಡಿದಿದ್ದರು. ಮದುವೆಯಲ್ಲಿ ಇದುವರೆಗೂ ಹೊರಗಿಡಲಾಗಿದ್ದ ವ್ಯಕ್ತಿಗತ ಭಾವನೆಗಳನ್ನು ಇನ್ನು ಮುಂದೆ ತರುವುದು ಒಳಗೆ ತರುವುದು ಹೇಗೆ ಎಂಬುದು ಸಮಸ್ಯೆಯಾಯಿತು. ಈಗ ಪರಸ್ಪರ ಪ್ರೇಮ ಎಂಬ ಹೊಸ ಪರಿಕಲ್ಪನೆಯೊಂದು ಮೈತಳೆಯಿತು. ಇಂದು ಈ ಹಿಂದೆ ಸೌಕರ್ಯಕ್ಕಾಗಿ ಮಾಡಿಕೊಳ್ಳುತ್ತಿದ್ದ ಮದುವೆಯ ಇನ್ನೊಂದು ರೂಪ. ಸಂಪ್ರದಾಯವಾದಿ ಮಧ್ಯಮ ವಿಚಾರಗಳು ಎಷ್ಟು ತರ್ಕಹೀನ ಎಂಬುದನ್ನು ಬಾಲ್ಜಾಕ್ ಬಣ್ಣಿಸಿದ್ದಾನೆ. ಆತ ಮದುವೆ ಮತ್ತು ಪ್ರೀತಿ ಇವುಗಳ ನಡುವೆ ಸಮಾನಾಂಶ ಇಲ್ಲವೆಂದೇ ಗುರುತಿಸಬಹುದು. ಮದುವೆ ಎಂಬ ಗೌರವಾನ್ವಿತ ವ್ಯವಸ್ಥೆಯನ್ನು, ಹೆಣ್ಣನ್ನು ಒಂದು ವಸ್ತುವೆಂದರೆ ಪರಿಗಣಿಸುವ ವ್ಯಾವಹಾರಿಕ ನೆಲೆಗೆ ತರುವುದನ್ನು ವಿರೋಧಿಸಿದ. ಹೀಗೆ ಯೋಚಿಸಿದ್ದದರಿಂದಾಗಿ ತನ್ನ 'ಫಿಯೊಲಜಿ ದ ಮ್ಯಾರಿಯೇಜ್' ಕೃತಿಯಲ್ಲಿ ಅಸಮ್ಮತವಾದ ನಿಲುವೊಂದನ್ನು ತಲುಪುತ್ತಾನೆ. ಮದುವೆ ಒಂದು ಒಪ್ಪಂದವೆಂದೂ, ಗಂಡಸರು ಆ ಮೂಲಕ ವಂಶೋತ್ಪಾದನೆಗೆ ಕಾನೂನಿನ ಚೌಕಟ್ಟನ್ನು ಪೆರದುಕೊಳ್ಳುತ್ತಾರೆಂದೂ, ಅಲ್ಲಿ ಪ್ರೇಮವೆಂಬುದು ಮುಂದುವರೆದು ಗಂಡಸರು "ಗೌರವ ಮತ್ತು ಸೂಕ್ಷ್ಮತೆಗಳನ್ನು "ಪಡೆದುಕೊಂಡರೆ ಆಗ "ಎರಡು ಆತ್ಮಗಳ ಅಪೂರ್ವ ಮಿಲನ" ಆಗುವುದೆಂದೂ ಮತ್ತು "ಸಂತಸ" ಲಭಿಸುವುದೆಂದೂ ವಾದಿಸುತ್ತಾನೆ. "ನಿಸರ್ಗದ ರಹಸ್ಯ ನಿಯಮಗಳು ಭಾವನೆಗಳು ಉದ್ದೀಪನಗೊಳಿಸುವಂತೆ" ಮಡುತ್ತವೆಂದೂ, ಇದಕ್ಕೆ ವಿಧೇಯರಾಗಿ "ಪ್ರಾಮಾಣಿಕ ಪ್ರೇಮ"ದಲ್ಲಿ ಮಗ್ನರಾಗಬೇಕೆಂದೂ ಹೇಳುತ್ತಾನೆ. ಆಗ ಗಂಡಸು ತನ್ನ ಪತ್ನಿಯನ್ನು ಅತೀವ ಪ್ರೇಮದಿಂದ ನೋಡುತ್ತಾನಾದ್ದರಿಂದ. ಮದುವೆಯಲ್ಲಿ ನಿರಂತರವಾಗಿ ಗಟ್ಟಿಯಾಗುತ್ತದೆ.

ಅಲ್ಲಿಂದ ಮುಂದುವರೆದು ವಿವಾಹ ಮೀಮಾಂಸೆಯನ್ನು ಮಂಡಿಸುತ್ತಾನೆ. ಬಾಲ್ಜಾಕ್ ಚಿಂತನೆಯಂತೆ, ಗಂಡಸಿನ ಸಮಸ್ಯೆ ಇರುವುದು ಆತ ಹೆಂಡತಿಯ ಪ್ರೀತಿಯನ್ನು ಪಡೆಯುತ್ತಾನೋ ಇಲ್ಲವೋ ಎಬುದಕ್ಕಿಂತ, ತನಗೆ ಮೋಸವಾಗದಂತೆ ಹೇಗೆ ಕಾಯ್ದುಕೊಳ್ಳಬೇಕು ಎಂಬುದೇ ಆಗಿದೆ. ತನ್ನ ಗೌರವ ರಕ್ಷಣೆಗಾಗಿ ಹೆಂಡತಿಯನ್ನು ಒರಟಳನ್ನಾಗಿ, ದುರ್ಬಲಳನ್ನಾಗಿ, ದಡ್ಡಿಯಾಗಿ ಇರಿಸಿದರೂ ಚಿಂತೆಯಿಲ್ಲ. ಇಂಥಾ ನಿಲುವುಗಳಿಗೆ ಏನಾದರೂ ಅರ್ಥವಿದ್ದಿದ್ದರೆ, ಗಂಡಸು ತನ್ನ ಸೌಕರ್ಯಕ್ಕಾಗಿ ಮದುವೆಯಾಗುತ್ತಾನೆ ಎನ್ನುವುದೂ, ತನ್ನ ಸುಖವನ್ನು ನಿರ್ಕಾಮ ಭಾವದಿಂದ ಅನುಭವಿಸುತ್ತಾನೆ ಎನ್ನುವುದೂ, ಅನಂತರ ಕೆಲವು ನಿಯಮಗಳಿಗೆ ಅನುಸಾರವಾಗಿ ಹೆಂಡತಿಯನ್ನು ಉದ್ದೀಪಿಸುತ್ತಾನೆ ಎನ್ನುವುದೂ ನಿಜವಾಗಿ ಬಿಡುತ್ತದೆ. ಪ್ರೀತಿ ಎಂಬುದು ಪರಸ್ಪರರಲ್ಲಿ ಒಮ್ಮೆಗೆ ಮೂಡದಿದ್ದಲ್ಲಿ ಪ್ರೀತಿಯ ಲೆಕ್ಕಾಚಾರಗಳು ಅಸಹ್ಯಕ್ಕೆ ಕಾರಣವಾಗುತ್ತವೆಯೇ ಹೊರತು ನಿಜ ಪ್ರೀತಿಯಾಗದು ಎಂಬುದನ್ನು ಬಾಲ್ಜಾಕ್ ಪ್ರಾಮಾಣಿಕವಾಗಿ ಒಪ್ಪುತ್ತಾನೇನು? ತನ್ನ ಚರ್ಚೆಗಳಲ್ಲಿ ಈ ಸಮಸ್ಯೆಯನ್ನು

ದೂರವಿಡುತ್ತಾನೆ. ತಟಸ್ಥ ಭಾವ ಎನ್ನುವುದು ಇಲ್ಲ. ಪ್ರೇಮ ರಹಿತತೆ, ಸಂಯಮ, ಖಿನ್ನತೆ ಇಂಥವುಗಳು ಮಾರ್ದವ ಸಂವೇದನೆಗಳಿಗೆ ಕಾರಣವಾಗುವುದಿಲ್ಲ. ಬದಲಿಗೆ ನಿರಾಶೆ, ಅಸಹನೆ, ವೈರುತ್ವಗಳನ್ನು ಉಂಟು ಮಾಡುತ್ತವೆ. ಈ ಅಂಶ ಬಾಲ್ಜಾಕ್ ಗ್ರಹಿಕೆಗೆ ದಕ್ಕಲಿಲ್ಲ.

ಮದುವೆ ಮತ್ತು ಪ್ರೇಮಗಳು ಪರಸ್ಪರ ಸಂಬಂಧವಿಲ್ಲದ ಸಂಗತಿಗಳು ಎಂದುಬಿಟ್ಟರೆ, ಆಗ ಮದುವೆಯ ಯಶಸ್ಸಿಗೆ ದೈವದ ನೆರವನ್ನಷ್ಟೇ ಕೋರುತ್ತಾ ಕೂರಬೇಕು. ಕಿರ್ಕೆಗಾರ್ಡ್ ಬಳಸು ಹಾದಿಯಿಂದ ಇದೇ ಉತ್ತರವನ್ನು ನೀಡುತ್ತಾನೆ. ಅವನು ಹೇಳುವಂತೆ ಪ್ರೇಮ ಸ್ವಯಂ ಸ್ಫೂರ್ತ. ಮದುವೆ ಒಂದು ನಿರ್ಧಾರ. ಮದುವೆಯಿಂದ ಪ್ರೇಮದ ಬಯಕೆ ಹುಟ್ಟಬೇಕು. ಅಥವಾ ಪ್ರೇಮದ ಬಯಕೆಯಿಂದ ಮದುವೆಯ ನಿರ್ಧಾರ ಸಾಧ್ಯವಾಗಬೇಕು. ಪರಿಭಾವನೆ ಮತ್ತು ಸಂಬಂಧದಲ್ಲಿ ದೈವಿಕ ನೆಲೆಯ ಪ್ರವೇಶ ಇರುತ್ತದೆನ್ನುವುದು ಒಂದು ವಿರೋಧಾಭಾಸದ ಗ್ರಹಿಕೆಯಂತೆ ತೋರುತ್ತದೆ. ಅಲ್ಲದೆ ಇವೆಲ್ಲವೂ ಒಮ್ಮೆಗೇ ಸಾಧಿತವಾಗಬೇಕು. ಅಂದರೆ ಪ್ರೇಮಿಸುವುದು ಮದುವೆಯಾಗಲೆಂದಲ್ಲ, ಪ್ರೇಮವೆಂಬುದು ಒಂದು ಕರ್ತವ್ಯವಲ್ಲ ಎಂಬ ಹೇಳಿಕೆಗಳನ್ನು ಗ್ರಹಿಸುವುದೇ ಕಷ್ಟವಾಗಿದೆ. ಆದರೆ, ಈ ವಿರೋಧಾಭಾಸ ಕಿರ್ಕೆಗಾರ್ಡ್‌ಗೆ ನಿರಾಶೆಯನ್ನು ತರುವುದಿಲ್ಲ. "ಪರಿಭಾವಿಸುವುದೆಂದರೆ ಸ್ವಯಂ ಸ್ಫೂರ್ತಿಯನ್ನು ನಾಶಮಾಡಿದಂತೆ" ಎನ್ನುತ್ತಾನೆ. ಆದರೆ ನಿರ್ಧಾರವೆಂಬುದು ಕೂಡಾ ನೈತಿಕ ತತ್ವಗಳಿಗೆ ಬದ್ಧವಾದ ಹೊಸ ಬಗೆಯ ಸ್ವಯಂ ಸ್ಫೂರ್ತಿ ಎನ್ನುತ್ತಾನೆ. "ಇದೊಂದು ಧಾರ್ಮಿಕ ಪರಿಕಲ್ಪನೆ. ಇದರಿಂದ ಪ್ರಿತೀಯ ಭಾವಗಳು ಉದ್ದೀಪನಗೊಳ್ಳುತ್ತವೆ" ಮತ್ತು ಉಳಿದ ಎಲ್ಲ ಅಪಾಯಗಳಿಂದ ಸಂರಕ್ಷಿತವಾಗುತ್ತದೆ. ನಿಜವಾದ ಗಂಡ ಎಂಬಾತ 'ಒಂದು ಪವಾಡ". ಹೆಂಡತಿಯಂತೂ ತಾರ್ಕಿಕವಾಗಿ ಚಿಂತಿಸುವಂತಿಲ್ಲ. ಅವಳಲ್ಲಿ ಪರಿಭಾವನೆ ಎಂಬುದಿಲ್ಲ. "ಆಕೆ ಪ್ರೇಮದ ನೆಲೆಯಿಂದ ಧಾರ್ಮಿಕ ನೆಲೆಗೆ ದಾಟುತ್ತಾಳೆ". ಸರಳವಾದ ಮಾತಿನಲ್ಲಿ ಹೇಳುವುದಾದರೆ ಪ್ರೇಮಿಸುವ ಗಂಡಸು ದೈವಶ್ರದ್ಧೆಯಿಂದ ಮದುವೆಯ ನಿರ್ಧಾರ ಕೈಗೊಳ್ಳುತ್ತಾನೆ. ಅಲ್ಲಿ ಭಾವನೆಗಳು ಮತ್ತು ಕರ್ತವ್ಯಗಳು ಬೆರೆತುಕೊಂಡಿರುತ್ತವೆ. ಹೆಂಗಸು ಪ್ರೇಮಿಸಿದಾಗ ಮದುವೆಯಾಗಲು ಬಯಸುತ್ತಾಳೆ. ಕ್ಯಾಥೊಲಿಕ್ ಶ್ರದ್ಧೆಯ ಪ್ರೌಢ ಸ್ತ್ರೀಯೊಬ್ಬಳಿದ್ದಳು. ಮದುವೆಯ 'ಪವಿತ್ರ' ಬಂಧದ ನಂಬಿಕೆಯವಳು. ಆಕೆಯೊಡನೆ ಮಾತನಾಡುತ್ತಿದ್ದಾಗ, ವಿವಾಹ ಸಂದರ್ಭದಲ್ಲಿ ಪೀಠದೆದುರು ನಿಂತು ಜೋಡಿಗಳು "ನಾನು ಒಪ್ಪಿದ್ದೇನೆ" ಎಂದು ಹೇಳಿದಾಗ ಅವರ ಹೃದಯಗಳಲ್ಲಿ ಪರಸ್ಪರ ಪ್ರೇಮವೆಂಬ ಜ್ವಾಲೆ ಹತ್ತಿಕೊಳ್ಳುತ್ತದೆ ಎಂದಳು. ಕಿರ್ಕೆಗಾರ್ಡ್ ಮದುವೆಗೆ ಮೊದಲು "ಒಲುವೆ" ಇರಬೇಕೆಂದು ಒಪ್ಪುತ್ತಾನೆ. ಆದರೆ, ಇಡೀ ಜೀವನದುದ್ದಕ್ಕೂ ಈ ಒಲುವೆಯೇ ಉಳಿದುಕೊಳ್ಳುತ್ತದೆ ಎನ್ನುವುದು ಒಂದು ಪವಾಡ ಸದೃಶ ಸಂಗತಿಯೇ ಸರಿ.

*****

## 2. ಅಭಿಮನ್ಯು ವಿವಾಹ ಪ್ರಸಂಗ

**– ಜನಪದ**

ಬತ್ತಲಗುದರಿ ಹತ್ಯಾಳ ಸುಭದ್ರಿ
ಹೋದಾಳ ತನ್ನ ತವರ್ಮನಿಗೆ ಕೋಲು ಕೋಲ ॥೧॥
ಎಂದಿಲ್ಲ ಸುಭದ್ರಿ ಇಂದ್ಯಾಕ ಬಂದೆವ್ವ
ಕುಂದರಗೊಳ್ಳ ಮಣಿ ಚೌಕಿ ಕೋಲು ಕೋಲ ॥೨॥
ಕುಂಡ್ರಲಿ ಬಂದಿಲಿ ನಿಂದ್ರಲಿ ಬಂದಿಲ್ಲ
ಹೆಣ್ಣ ಕೊಡಣ್ಣ ಕುವ್ರಗಂ ಕೋಲು ಕೋಲ ॥೩॥
ಹೆಣ್ಣನ್ನು ಬೇಡಾಕಿ ನಿನ್ನೆ ಮನ್ನೆ ಬರಬೇಕ
ಹೆಣ್ಣೀನ ಕಡಗಿ ಕೌರವರ ಕೊಲು ಕೋಲ ॥೪॥
ಹೆಣ್ಣೀನ ಕಡಿಗಿ ಕೌರವ ಸೋದರಮಾವ
ಹೊನ್ನಿನ ಬಳಿಯ ಇಡಸ್ಯಾನ ಕೋಲು ಕೋಲ ॥೫॥
ಹೊನ್ನಿನ ಬಳಿಯ ತೆಗೆಸಣ್ಣ
ಚಿನ್ನದ ಬಳಿಯ ಇಡಸಣ್ಣ ಕೋಲು ಕೋಲ ॥೬॥
ಬತ್ತಲಗುದರಿ ಹತ್ಯಾಳ ಸುಭದ್ರಿ
ಬಂದಾಳ ತನ್ನರಮನಿಗೆ ಕೋಲು ಕೋಲ ॥೭॥
ನಿನಗಣ್ಣಾಗಬೇಕ ನನಗ ಮಾವಾಗಬೇಕ
ಏನೆಂದರ ತಾಯಿ ನಿಮ್ಮವರ ಕೋಲು ಕೋಲ ॥೮॥
ಏನು ಅಂದಿಲ್ಲ ಮಗನೆ ಎಂತು ಅಂದಿಲ್ಲ ಮಗನೆ
ಮಾದೇವಿ ದುಕ್ಕವೊಂದ ವಿಪರೀತ ಕೋಲು ಕೋಲ ॥೯॥
ಬತ್ತಲಗುದರಿ ಹತ್ಯಾನ ಅಭಿಮನ್ಯು
ಹೋದಾನ ಮಾವನರಮನಿಗೆ ಕೋಲು ಕೋಲ ॥೧೦॥
ಎಂದಿಲ್ಲದಭಿಮನ್ಯು ಇಂದ್ಯಾಕ ಬಂದೆಪ್ಪ
ಕುಂಡರಗೊಳ್ಳ ಕುಚೇವ ಕೋಲು ಕೋಲ ॥೧೧॥

ಕುಂಡ್ರಲಿ ಬಂದಿಲ್ಲ ನಿಂದ್ರಲಿ ಬಂದಿಲ್ಲ
ಹೆಣ್ಣು ಕೊಡು ಮಾವ ಕೋಲು ಕೋಲ ॥೧೨॥
ಹೆಣ್ಣನ್ನ ಬೇಡಾವ ನಿನ್ನೆ ಮನ್ನೆ ಬರಬೇಕ
ಹೆಣ್ಣೀನ ಕಡಿಗಿ ಕೌರವರ ಕೋಲು ಕೋಲ ॥೧೩॥
ಹೆಣ್ಣಿನ ಕಡಿಗಿ ಕೌರವ ಸೋದರಮಾವ
ಹೊನ್ನಿನ ಬಳಿಯ ಇಡಿಸಣ್ಣ ಕೋಲು ಕೋಲ ॥೧೪॥
ಹೊನ್ನಿನ ಬಳಿಯ ತೆಗಸ ಚಿನ್ನದ ಬಳಿಯಿಡಸ
ಹೆಣ್ಣ ಕೊಡ ಮಾವ ನನಗ ಕೋಲು ಕೋಲ ॥೧೫॥
ಬತ್ತಲಗುದರಿ ಹತ್ತ್ಯಾನ ಅಭಿಮನ್ಯು
ಬಳಿ ಬಳಿ ಅಂಬುತ ನಡೆದಾರ ಕೋಲು ಕೋಲ ॥೧೬॥
ಮುಂದ ಮುಂದ ಸುಭದಾ ಹಿಂದಿನಿಂದ ಅಭಿಮನ್ಯು
ಬಳಿ ಬಳಿ ಅಂಬುತ ನಡೆದಾರ ಕೋಲು ಕೋಲ ॥೧೭॥
ಬಳಿ ಬಳಿ ಅನ್ನುವ ಸುದ್ದಿ ಮಾದೇವಿ ಕೇಳ್ಯಾಳ
ಓಡೋಡಿ ಹೊರ ಬಂದಾಳ ಕೋಲು ಕೋಲ ॥೧೮॥
ಅತ್ತಿಯ ತೊಡಿ ಮ್ಯಾಲ ಕುಂತಾಳ
ಅಸರಂ ಬಳಿಯನಿಡಿಸಿ ಎಣ್ಣಿ ಪತ್ತಲ೨ವನುಡಿಸಿ
ಕಟ್ಟ್ಯಾರವ್ವಾ ತಾಳಿ ಕರಿಮಣಿ ಕೋಲು ಕೋಲ ॥೧೯॥
ಕುಂತಿರು ಮಾದೇವಿ ಚಟಕ್ಕನ ಎದ್ದಾಳ
ಬಂದಾಳ ತನ್ನ ಅರಮನಿಗೆ ಕೋಲು ಕೋಲ ॥೨೦॥
ಇದಯಾರ ಅಸರಬಳಿ ಇದಯಾರ ಎಣ್ಣಪತ್ತಲ
ಇದಯುರಾದವ್ವಾ ತಾಳಿ ಕರಿಮಣಿ ಕೋಲು ಕೋಲ ॥೨೧॥
ಇದಯಾರದಲ್ಲಪ್ಪಾ ಇದೂ ಯಾದರೂ ಅಲ್ಲಪ್ಪಾ
ನಿಮ ತಂಗಿ ಮಗ ಅಭಿಮನ್ಯು ಕೋಲು ಕೋಲ ॥೨೨॥
ನಿಮ ತಂಗಿ ಮಗ ಅಭಿಮನ್ಯು ಸೋದರಮಾವ

ಕಟ್ಟ್ಯಾರ ತಾಳಿ ಕರಿಮಣಿ ಕೋಲು ಕೋಲ ॥೨೩॥

ಯಾಕ ಯಮಕದ ೧ಮುಂಡಿ ಎಷ್ಟ ಮಾಡತೀದಿ

ಆಗ ಕ ಬಾರನ ಕರಿಸ್ಯಾರ ಕೋಲು ಕೋಲ ॥೨೪॥

ಆಗ ಕಂಬಾರನ ಕರಸಿ ಕೊಯ್ಯಸ್ಯಾರ

ಬಿಟ್ಟ ಸಂಕೋಲಿ ಕೈಯ ಕೋಯಿಸಿ ಕೋಲು ಕೋಲ ॥೨೫॥

ತಂದ ಕಟ್ಯಾರ ಹುಲಿಕರಡಿ

ತಂದ ಕಟ್ಯಾರ ಹುಲಿಕರಡಿ ಕೋಲು ಕೋಲ ॥೨೬॥

ಸತುವುಳ್ಳ೨ ದೇವರ ಸತುವುಳ ಪಾಂಡವರ

ಹಾಕೀದ ಕೀಲಿ ಬಿಚ್ಚಿ ಕೋಲು ಕೋಲ ॥೨೭॥

ಹಾಕೀದ ನೀ ಕೀಲಿ ಬಿಚ್ಚಿ ಬೀಳ

ಕಟ್ಟೀದ ಹುಲಿ ಕರಡಿ ಬಯಲಾಗ ಕೋಲು ಕೋಲ ॥೨೮॥

*****

# 3 .ವಿವಾಹ ಪದ್ಧತಿಗಳು

**ಎಸ್.ಕೆ.ರಾಮಚಂದ್ರರಾವ್**

## ವಿವಾಹ ಭೂಮಿಕೆ

ಉಪನಿಷತ್ತಿನ ಆದೇಶಗಳಲ್ಲೊಂದು, ಉಪದೇಶಗಳಲ್ಲೊಂದು 'ಸಂತಾನದ ಎಳೆಯನ್ನು ಕಡಿಯಬಾರದು' (ಪ್ರಜಾತಂತಂ ಮಾನ್ಯನಚ್ಛೆ(ತ್ಸೀ) ಎಂಬುದು. ಇದು ನಿಸರ್ಗಸಿದ್ಧವಾದ ನಿಯಮವ್ಊ ಹೌದು. ಜೀವದ ಪ್ರಮುಖ ಲಕ್ಷಣಗಳಲ್ಲಿ ಸಂತಾನಕ್ರಿಯೆಯೂ ಒಂದು. ನೈಸರ್ಗಿಕ ಲೈಂಗಿಕ ವ್ಯಾಪಾರವನ್ನು ಸಂಘಜೀವನದ ಪ್ರಯೋಜನಗಳಿಗೆ ಅಳವಡಿಸಿಕೊಳ್ಳುವ ಅಗತ್ಯ ಮೇಲು ಮಟ್ಟದ ಪ್ರಾಣಿಗಳಲ್ಲಿ ಕಂಡುಬರುತ್ತದೆ. ಒಂದು ದೃಷ್ಟಿಯಿಂದ ಸಂಭೋಗವೇ ದಾಂಪತ್ಯ ಜೀವನದ ಜೀವಸ್ವರೂಪವಾದರೂ ಪ್ರೇಮ, ಕೌಟುಂಬಿಕ ಧರ್ಮ, ಭಾರನಿರ್ವಹಣೆ, ಶಿಶುರಕ್ಷಣೆ ಮುಂತಾಗಿ ಹಲವಾರು ವಿವರಗಳು ಇಲ್ಲಿ ಸೇರಿಕೊಳ್ಳುತ್ತವೆ. ಮನುಷ್ಯನ ಮಟ್ಟದಲ್ಲಿ ಈ ಎಲ್ಲ ವಿಹಿತ ಅಗತ್ಯ ವಿವರಗಳೂ ಪರಿಷ್ಕೃತವಾಗಿ "ಕುಟುಂಬ"ವೆಂಬ ಪ್ರಸಂಗವು ವ್ಯಕ್ತಿಯ ಅಸ್ತಿತ್ವವನ್ನು ಮೀರಿ ನಿಲ್ಲುತ್ತದೆ.

## ನಾಂದಿ

ಕುಟುಂಬಕ್ಕೇ ವಿಶಿಷ್ಟವಾದ ಧರ್ಮಗಳುಂಟು: ವಿಧಿ ನಿಷೇಧಗಳುಂಟು; ಮರ್ಯಾದೆಯ ಪ್ರಕಾರಗಳುಂಟು. ವ್ಯಕ್ತಿಯ ಪ್ರವೃತ್ತಿಗಳ ಅಭಿವ್ಯಕ್ತಿಗೆ ನೆರವಾಗುವುದು ಕುಟುಂಬ ಜೀವನದ ಉದ್ದೇಶ. ಹಾಗೆಯೇ ಸಂಘವು ನಿರಾತಂಕವಾಗಿ ಬೆಳೆಯಲೂ ಅದು ಎಡೆಮಾಡಿಕೊಡುತ್ತೆದೆ. ಇದಕ್ಕಾಗಿ ಸಂಘದ ಅನುಮೋದನೆಯಿಂದ ಕುಟುಂಬ ಜೀವನ ಮನುಷ್ಯನ ಪ್ರಮುಖ ಪ್ರಯೋಜನಗಳಲ್ಲಿ ಒಂದೆಂದು ಪರಿಗಣಿತವಾಗಿದೆ. ಪ್ರಪಂಚದ ಎಲ್ಲೆಡೆಗಳಲ್ಲೂ ಕುಟುಂಬ ವಲಯದಲ್ಲಿ; ಮನುಷ್ಯರು ಮೂಡಿಬಂದಿದ್ದಾರೆ. ಕುಟುಂಬವನ್ನು ಬಿಟ್ಟು ಮನುಷ್ಯ ಹುಟ್ಟುವ ಹಾಗಿಲ್ಲ, ಬೆಳೆಯುವ ಹಾಗಿಲ್ಲ, ಬಾಳುವ ಹಾಗಿಲ್ಲ, ಆರ್ಥಿಕವಾಗಿ, ಸಾಮಾಜಿಕವಾಗಿ ಶೈಕ್ಷಣಿಕವಾಗಿ, ಕುಟುಂಬ ಅಗತ್ಯವಾದುದು.

ಕುಟುಂಬದ ವ್ಯವಸ್ಥೆಯಲ್ಲಿ ವಿವಾಹವೇ ಭೂಮಿಕೆ, ಕುಟುಂಬ ನಾಟಕಕ್ಕೆ ಇದೇ ನಾಂದಿ, ಪ್ರಪಂಚದ ಎಲ್ಲ ಜನಾಂಗಗಳೂ ಎಲ್ಲ ಕಾಲಗಳಲ್ಲೂ ವಿವಾಹ ಸಂದರ್ಭವನ್ನು ಅಗತ್ಯವೆಂದು ಕಂಡುಕೊಂಡಿದ್ದಾರೆ. ವಿವಾಹವು ಬಳಕೆಯಲ್ಲಿ ಇಲ್ಲದೆ ಜನರೇ ಎಲ್ಲೂ ಇಲ್ಲ, ಯಾವ ಕಾಲದಲ್ಲೂ ಇರಲಿಲ್ಲ. ವಿವಾಹ ಇಲ್ಲದೆ ಕುಟುಂಬ ಮೈದಳೆಯಲಾರದು; ಕುಟುಂಬದ ಅವ್ಯಾಹತ ಪ್ರವಾಹಕ್ಕೆ ವಿವಾಹವೇ ಮೂಲ ಕಾರಣ, ಮೂಲಾಧಾರ. ವಿವಾಹದ ವಿಧಿಗಳಲ್ಲಿ, ಪದ್ಧತಿಗಳಲ್ಲಿ ವೈವಿಧ್ಯವಿದ್ದರೂ ಅದರ ಆಶಯಗಳಲ್ಲಿ ಮತ್ತು ಇಂಗಿತಗಳಲ್ಲಿ ಏಕತಾನವಿದೆ. ವಿಶ್ವದ ಎಲ್ಲ ಧರ್ಮಗಳೂ ವಿವಾಹ ಸಂಬಂಧವನ್ನು ಸುಭದ್ರಗೊಳಿಸುವ ಕಾತರತೆಯನ್ನು ಕಾಣಿಸುತ್ತವೆ. ವ್ಯಕ್ತಿಗಳಲ್ಲಿ ಔಚಿತ್ಯ

ದೃಷ್ಟಿಯನ್ನು ಮೂಡಿಸಲು ಯತ್ನಿಸುತ್ತದೆ. ಪ್ರತಿಯೊಂದು ಜನಾಂಗದ ಮನೋಧರ್ಮವನ್ನು ಅನುಸರಿಸಿ, ಆಯಾ ಸಂಸ್ಕೃತಿಯ ನೆಲೆಯನ್ನು ಅವಲಂಬಿಸಿ ವೈವಾಹಿಕ ಪದ್ಧತಿಗಳು ಮೂಡಿಬರುತ್ತವೆ. ಮೂಲಭೂತವಾದ ಅಗತ್ಯಗಳ ಬಗ್ಗೆ ವೈವಿಧ್ಯವಿರದು, ಅಸ್ಪಷ್ಟತೆಯಿರದು.

ಜಗತ್ತಿನ ಜನರಲ್ಲಿ ಮದುವೆಯ ಸಂಪ್ರದಾಯಗಳು ತಂಬ ಸ್ವಾರಸ್ಯವಾಗಿರುವುದುಂಟು. ನಮ್ಮ ದೇಶದಲ್ಲೇ ಆದಿವಾಸಿ ಜನಾಂಗಗಳಲ್ಲಿ ಸೋಜಿಗದ ಸಂಪ್ರದಾಯಗಳಿವೆ. ಅದ್ಭುತವೆನಿಸುವ ವಿವರಗಳೂ ಇವೆ. ಸಂಸ್ಕೃತಿಯ ವ್ಯಾಪಕತ್ವದಿಂದಾಗಿ ದೇಶದಲ್ಲೆಲ್ಲ ಹೆಚ್ಚು ಕಡಿಮೆ ಒಂದೇ ಬಗೆಯ ಮುಖ್ಯವಾದ ಸಂಪ್ರದಾಯಗಳು ಮೂಡಿಬಂದಿದ್ದರೂ ಗೌಣವಾದ ಪದ್ಧತಿಗಳಲ್ಲಿ ವಿಪುಲವಾದ ಮತ್ತು ಸ್ವಾರಸ್ಯಕರವಾದ ವೈವಿಧ್ಯಗಳಿವೆ. ದೇಶಾಚಾರ, ಕುಲಾಚಾರ, ವರ್ಣವ್ಯವಸ್ಥೆ, ವೃತ್ತಿ ವೈವಿಧ್ಯ ಇವೆಲ್ಲವೂ ಮದುವೆಯ ಪದ್ಧತಿಗಳಲ್ಲಿ ಸೇರಿ ಬರುತ್ತವೆ. ಸರ್ವ ಸಾಧಾರಣವಾದ ಒಂದೇ ವಿವರವೆಂದರೆ ವಿವಾಹದ ಧಾರ್ಮಿಕ ಸ್ವರೂಪ, ಇದರಿಂದಾಗಿ ಮದುವೆಯ ಪದ್ಧತಿಗಳೆಲ್ಲ ಸಂಕೇತ ಪ್ರಮುಖವಾಗಿ ಇರುತ್ತವೆ.

**ವಿವಿಧ ಪದ್ಧತಿ**

ನಮ್ಮ ದೇಶದಲ್ಲಿ ಹಿಂದೆ ಹಲವಾರು ಬಗೆಯ ವಿವಾಹಗಳು ಪ್ರಚುರವಾಗಿದ್ದುವು. ಮಾನವ ಧರ್ಮಶಾಸ್ತ್ರದಲ್ಲಿ ಹೇಳಿರುವ ಎಂಟು ಬಗೆಯ ಮದುವೆಗಳು ಇವುಗಳಲ್ಲಿ ಪ್ರಸಿದ್ಧವಾದುದಷ್ಟೆ, ಈ ಎಂಟನ್ನು ಆರ್ಯರು ಒಪ್ಪಿದರು; ಆದರೆ ಬಳಕೆಯಲ್ಲಿದ್ದ ಬಗೆಗಳು ಎಷ್ಟೋ! ದ್ರಾವಿಡರಲ್ಲಿ, ಅಂಬಷ್ಟರಲ್ಲಿ, ಮಾಹಿಷ್ಯರಲ್ಲಿ, ಕಿರಾತರಲ್ಲಿ, ಪಹ್ಲವರಲ್ಲಿ, ಪುಂಡ್ರಕರಲ್ಲಿ, ಶಕ ಜನರಲ್ಲಿ ಬಗೆಬಗೆಯ ಪದ್ಧತಿಗಳಿದ್ದುವು. ಧರ್ಮಶಾಸ್ತ್ರಕಾರರು ಹೇಳುವ ಎಂಟೂ ಸ್ವಾರಸ್ಯವಾದುವೇ. ಹುಡುಗಿಯ ತಂದೆತಾಯಿಯರು ವರನನ್ನು ಹುಡುಕಿ, ಅವನನ್ನು ಕರೆತಂದು ಸಾಲಂಕೃತ ಕನ್ಯಾದಾನ ಮಾಡಿ ಕೃತಾರ್ಥರಾಗುವುದು ಬ್ರಾಹ್ಮ ವಿವಾಹದ ಮುಖ್ಯಲಕ್ಷಣ. ಇದು ತುಂಬ ಪ್ರಾಚೀನವಾದ ಆರ್ಯ ಪದ್ಧತಿ; ವೈದಿಕ ಯುಗದಲ್ಲಿ ಕೂಡ ಇದು ಬಳಕೆಯಲ್ಲಿತು. ಇಂದಿಗೂ ಸುಸಂಸ್ಕೃತ ಜನಾಂಗಗಳಲ್ಲಿ ದೇಶದಾದ್ಯಂತವೂ ಇದೇ ಪದ್ಧತಿ ಬಳಕೆಯಲ್ಲಿದೆ. ಸಂಸ್ಕೃತಿಯ ದೃಷ್ಟಿಯಿಂದ ಅಷ್ಟು ಸಂಪನ್ನರಲ್ಲದ ಜನರ ನಡುವೆ ಇರುವ ಸಂಪ್ರದಾಯವು ಅಸುರವೆನಿಸಿಕೊಳ್ಳುತ್ತಿದೆ. ಇಲ್ಲಿ ಹುಡುಗಿಯ ಕಡೆಯವರು ಹುಡುಗನಿಂದ ಅಥವಾ ಅವನ ನೆಂಟರಿಂದ ಶುಲ್ಕವನ್ನು ಸ್ವೀಕರಿಸಿದ ನಂತರ ಮದುವೆಯ ನಿಶ್ಚಯ ಮಾಡುತ್ತಾರೆ. ಎರಡೂ ಕಡೆಯವರು ಕಲೆತು ಈ ಶುಲ್ಕವನ್ನು ಸಮರ್ಪಕವಾದಷ್ಟು ನಿರ್ಧರಿಸುತ್ತಾರೆ. ಈ ಪದ್ಧತಿಯೂ ಇಂದಿಗೆ ನಮ್ಮ ದೇಶದಲ್ಲಿ ಹಲವಾರು ಜನಾಂಗಗಳಲ್ಲಿ, ಆದಿವಾಸಿಗಳಲ್ಲಿ ರೂಢಿಯಲ್ಲಿದೆ.

ಮನು ಹೇಳುವ ಉಳಿದ ಆರು ಇಂದು ಬಹುಮಟ್ಟಿಗೆ ಮರೆಯಾಗಿವೆ. ಹುಡುಗಿಯ ತಂದೆ ಯಜ್ಞವನ್ನು ಮಾಡಿ, ಆ ಯಜ್ಞವನ್ನು ನಡೆಸಿಕೊಟ್ಟ ಪುರೋಹಿತನಿಗೆ ದಕ್ಷಿಣೆಯ ಬದಲು ಹುಡುಗಿಯನ್ನೇ ಸಿಂಗರಿಸಿ ದಾನ ಮಾಡುವುದು ದೈವ ವಿವಾಹ. ಹುಡುಗಿಯ ತಂದೆಗೆ ವರನು ಹಣವನ್ನು (ಅಥವಾ ಒಂದೆರಡು ಹಸುಗಳನ್ನು) ಕೊಟ್ಟು ಹುಡುಗಿಯನ್ನು ಪಡೆಯುವುದು ಆರ್ಷ ಪದ್ಧತಿ; ಇಲ್ಲಿ ನಡಯುವುದು ಕನ್ಯಾ ವಿಕ್ರಯ. ಇದೂ ಆದಿವಾಸಿಗಳಲ್ಲಿ ಇಂದಿಗೂ ಅಲ್ಲಲ್ಲಿ ಬಳಕೆಯಲ್ಲಿದೆ. ಮೇಲೆ ಹೇಳಿದ ನಾಲ್ಕೂ ಪದ್ಧತಿಗಳಲ್ಲಿ ಸಂಸ್ಕಾರಗಳುಂಟು, ವಿಧಿವತ್ತಾದ ಧಾರ್ಮಿಕ ಪ್ರತಿಕ್ರಿಯೆಗಳುಂಟು, ವೈದಿಕ ಮಂತ್ರಗಳ ಪ್ರಯೋಗ ಉಂಟು. ಆದರೆ ಉಳಿದ ನಾಲ್ಕು ಬಗೆಗಳಲ್ಲಿ ಈ ವಿಧವಾದ ನಿಯಂತ್ರಣ ಅಷ್ಟಾಗಿ ಇರದು; ಇಲ್ಲಿ ಸ್ವಚ್ಛಂದ ವ್ಯವಹಾರಕ್ಕೆ ಅವಕಾಶ ಹೆಚ್ಚು ಎಂದರೂ ರೂಢಿಯ ಬಲ ಇದ್ದೇ ಇರುತ್ತದೆ. 'ಆಚಾರ: ಪರಮೋ ಧರ್ಮಃ' ಎಂಬ ಸೂತ್ರವನ್ನು ಸಂಘ ಜೀವನದ ಅಡಿಗಲ್ಲೆಂದು ನಂಬಿದ್ದ ಶಾಸ್ತ್ರಕಾರರು ಈ ನಾಲ್ಕನ್ನೂ ವಿಹಿತ ಪ್ರಕಾರಗಳೆಂದೇ ಗ್ರಹಿಸಿದ್ದರು.

ಯಾವ ಸಂಸ್ಕಾರವನ್ನೂ ನಡೆಸದೆ, ವಿಧ್ಯುಕ್ತ ಕರ್ಮಗಳನ್ನು ಮಾಡದೆ ಹುಡುಗಿಯನ್ನು ಆಕೆ ಒಪ್ಪಿದ ವರನಿಗೆ ಕೊಟ್ಟು ಚೆನ್ನಾಗಿ ಬಾಳಿರೆಂದು ಹರಸಿ ಕಳುಹಿಸುವುದು ಪ್ರಾಜಾಪಾತ್ಯ ವಿವಾಹ ಪದ್ಧತಿ. ಸಂಸ್ಕಾರವಿಲ್ಲವೆಂದ ಮಾತ್ರಕ್ಕೆ ಈ ವಿವಾಹಬಂಧನವು ಅಸ್ಪಷ್ಟವೆನ್ನಲಾಗದು; ವೈವಾಹಿಕ ಜೀವನದ ವಿಧಿನಿಷೇಧಗಳನ್ನು ವಧೂ ವರರಿಗೆ ಮನದಟ್ಟು ಮಾಡಿಸುವುದು ಹುಡುಗಿಯ ತಂದೆಯ ಕರ್ತವ್ಯವಾಗಿದ್ದಿತು. ಈ ವಿವಾಹದ ವಿಚ್ಛೇದವೂ ಸುಲಭವಾಗಿರಲಿಲ್ಲ. ಮೇಲಿನ ಐದೂ ಪದ್ಧತಿಗಳಲ್ಲಿ 'ವರಣ'(ಎಂದರೆ ವರನನ್ನು ಆರಿಸುವುದು) ಮುಖ್ಯ ವಿವರ; ವಿವಾಹಕ್ಕೆ ಎದೇ ಪೂರ್ವಭಾವಿಯಾಗಿದ್ದು, ಅಗತ್ಯವಾದದ್ದು ಎಂಬ ಕಲ್ಪನೆ ಸ್ಪಷ್ಟವಾಗುತ್ತದೆ.

**ಗಾಂಧರ್ವ**

ಗಾಂಧರ್ವ ವಿವಾಹ ಸ್ವಾರಸ್ಯವಾದುದು. ಇದೂ ತುಂಬ ಪ್ರಾಚೀನವಾದ ಪದ್ಧತಿ. ಹುಡುಗಿ ಮತ್ತು ಹುಡುಗ ಇಬ್ಬರೂ ಅನುರಾಗದಲ್ಲಿ ಕಲೆತು, ಒಟ್ಟಿಗೆ ಬಾಳಲು ನಿರ್ಧರಿಸಿ, ತಂದೆ ತಾಯಿಯರಿಂದ ಅಡ್ಡ ಬಂದೀತೆಂದು ಬಗೆದಾಗ, ಅವರಿಬ್ಬರೂ ಕೆಲವು ನೆಚ್ಚಿನ ಸ್ನೇಹಿತರೊಂದಿಗೆ ಊರ ಹೊರಗಿನ ವನದಲ್ಲೋ, ಉದ್ಯಾನದಲ್ಲೋ ಸೇರಿ, ಶ್ರೋತ್ರಿಯನಾದವನೊಬ್ಬನ ಮನೆಯಿಂದ ಅಗ್ನಿಯನ್ನು ತಂದು, ಸ್ಮೃತಿಯು ಹೇಳುವ ವಿಧಿಗಳನ್ನು ನಡಸಿ, ಅಗ್ನಿಯ ಸುತ್ತ ಮೂರು ಬಾರಿ ವಧೂವರರು ಕೈ ಹಿಡಿದು ನಡೆದು ಗಂಡ ಹೆಂಡಿರಾಗುವುದು ಗಾಂಧರ್ವ ಪದ್ಧತಿ. ಇದು ಗುಪ್ತವಾಗಿ ನಡೆದ ವಿವಾಹವಾದರೂ ಅಗ್ನಿ ಸಾಕ್ಷಿಯಾಗಿ ನಡೆದದ್ದರಿಂದ ವಿಹಿತವೇ, ಅನುಲ್ಲಂಘ್ಯವೇ ಎಂಬುದು ಆಚಾರ್ಯ ಸಮಯ. ಇದಾದ ನಂತರ ಹುಡುಗಿಯ ಕಡೆಯವರಿಗೆ ಸುದ್ದಿ ಮುಟ್ಟಿಸುವ ಭಾರ ಹುಡುಗನದು. ಗುಪ್ತವಾಗಿ ಒದಗಿದ ಸಂಬಂಧವನ್ನು ಬಹಿರಂಗವಾಗಿ, ವಿಧ್ಯುಕ್ತವಾಗಿ ವಿವಾಹದಿಂದ ಸಿದ್ಧ ಮಾಡುವ ಹೊಣೆ ಹುಡುಗಿಯ ಕಡೆಯವರದ್ದು. ಅವರು ಇದನ್ನು ನಿಲ್ಲಿಸುವ ಹಾಗೂ ಇಲ್ಲ. ಆದ ಕೆಲಸಕ್ಕೆ ಅನುಮೋದನೆ ನೀಡುವ

ಔಚಿತ್ಯ ಅವರಿಗಿರಬೇಕಷ್ಟೆ; ಇಲ್ಲವಾದರೆ ಧರ್ಮಶಾಸ್ತ್ರಕಾರರು ರಾಜದಂಡನೆಯನ್ನೂ ವಿಧಿಸಿದ್ದಾರೆ.

**ರಾಕ್ಷಸ ವಿವಾಹ**

ವೀರರು ನೆರೆ ಊರುಗಳ ಮೇಲೆ ದಾಳಿ ಮಾಡಿ ಅಲ್ಲಿನ ಮದುವೆಯಾಗದ ಹುಡುಗಿಯರನ್ನು ಎತ್ತಿಕೊಂಡು ಬರುವುದು ಹಳೆಯ ಪದ್ಧತಿ; ಜಗತ್ತಿನ ಎಲ್ಲ ಜನಾಂಗಗಳಲ್ಲೂ ಇದ್ದದ್ದೇ. ಯುದ್ಧದಂಥ ವಿಷಮ ಸಂದರ್ಭಗಳಲ್ಲಂತೂ ಇದೊಂದು ನಿಯಮದಂತೆಯೇ. ಹುಡುಗಿಯರನ್ನು ಬಲಾತ್ಕಾರದಿಂದ ಅಪಹರಿಸಿಕೊಂಡು ಹೋಗುವಾಗ ಅವರ ಕಡೆಯವರಿಗೆ ಹೆಚ್ಚಿನ ಉಪದ್ರವ ಕೊಡುವುದೂ ಬಳಕೆಯಲ್ಲಿದ್ದ ವಿವರವೇ. ಹೀಗೆ ಗಟ್ಟಿ ಗುಂಡಿಗೆಯವನೊಬ್ಬನು ಹುಡುಗಿಯನ್ನು ಬಲವಂತವಾಗಿ ವಶ ಮಾಡಿಕೊಂಡ ಮೇಲೆ ಅವಳನ್ನು ಅವನ ಹೆಂಡತಿಯೆಂದೇ ಪರಿಗಣಿಸುವುದು ಉಚಿತ, ಅನಿವಾರ್ಯವೆಂದು ಹಳೆಯ ಕಾಲದ ಹಿರಿಯರ ಎಣಿಕೆಯಾಗಿದ್ದಿತು. ಇಂಥ ವ್ಯವಸ್ಥೆಯನ್ನು ರಾಕ್ಷಸ ವಿವಾಹ ಎಂದು ಕರೆದಿದ್ದಾರೆ. ಹುಡುಗಿ ಮಲಗಿ ನಿದ್ದೆ ಮಾಡುತ್ತಿದ್ದಾಗ, ಅಥವಾ ಬಂಧಿತಳಾಗಿ ನಿಶ್ಚೇಷ್ಟಳಾಗಿದ್ದಾಗ ಅವಳನ್ನು ಅತ್ಯಾಚಾರದಿಂದ ಸಂಭೋಗಿಸಿದ ಪುರುಷನೇ ಅವಳ ಗಂಡನೆಂದು ನಿರ್ಧರಿಸಿದ ಪದ್ಧತಿ ಪೈಶಾಚವೆನಿಸಿಕೊಂಡಿತು. ಈ ರಾಕ್ಷಸ–ಪೈಶಾಚ ಪದ್ಧತಿಗಳಲ್ಲಿ ವರಣದ ಪ್ರಸಂಗವೇ ಇಲ್ಲ. ಕ್ಷಾತ್ರ ಭೂಯಿಷ್ಠವಾದ ಜನಾಂಗಗಳಲ್ಲಿ ಈ ಕ್ರೂರ ಪದ್ಧತಿಗಳನ್ನು ವಿವಾಹದ ಬಗೆಗಳೆಂದು ಅಂಗೀಕರಿಸಿಕೊಳ್ಳದೆ ವಿಧಿಯಿರಲಿಲ್ಲ. ಪ್ರಾಚೀನ ನ್ಯಾಯದ ದೃಷ್ಟಿಯಿಂದ, ಸಮಾಜದ ಆಡಳಿತದ ದೃಷ್ಟಿಯಿಂದ ಇವನ್ನು ವಿವಾಹಗಳೆಂದು ಪರಿಗಣಿಸಿದರೂ ಮಾನಸಿಕ, ಸಾಂಸ್ಕೃತಿಕ ಪ್ರವೃತ್ತಿಯ ದೃಷ್ಟಿಯಿಂದ ಇವು ವಿವಾಹಗಳಲ್ಲ. ಸಂಸ್ಕೃತಿ ಬೆಳೆದಂತೆ ಈ ಪದ್ಧತಿಗಳು ನಷ್ಟವಾಗಿದೆ.

**ಏಕಪತ್ನಿ–ಬಹುಪತ್ನಿತ್ವ**

ವಿವಾಹದ ವಿಧಾನದಲ್ಲಿ ಒದಗಿಬಂದ ವೈವಿಧ್ಯದಿಂದ ಈ ಎಂಟು ಬಗೆಗಳನ್ನು ಹೇಳಿದ್ದಾರೆ. ವಿವಾಹದಲ್ಲಿ ಪಾಲುಗೊಳ್ಳುವ ವಧೂವರರ ಸಂಖ್ಯೆಯು ಮತ್ತಷ್ಟು ಬಗೆಗಳನ್ನು ನಿರ್ಧರಿಸುತ್ತದೆ. ಒಬ್ಬ ಗಂಡ ಒಬ್ಬಳೇ ಹೆಂಡತಿ ಇವರ ಕುಟುಂಬಕ್ಕೆ ಎಡೆಮಾಡುವುದು ಏಕ ಪತ್ನೀಗಮನ (Monogamy). ಇದು ಪ್ರಾಚೀನವಾದ ಪದ್ಧತಿ; ಇಂದಿಗೆ ಜಗತ್ತಿನಲ್ಲೆಲ್ಲ ಹೆಚ್ಚು ಬಳಕೆಯಲ್ಲಿರುವ ಪದ್ಧತಿಯೂ ಇದೇ. ಒಬ್ಬ ಗಂಡನಿಗೆ ಹಲವಾರು ಹೆಂಗಳೆಯರು ವಿವಾಹದಲ್ಲಿ ಬದ್ಧರಾಗಿರುವುದು ಬಹುಪತ್ನೀಗಮನ (Polygamy). ಹಲವಾರು ಅಪ್ರಬುದ್ಧ ಜನಾಂಗಗಳಲ್ಲಿ ಇದು ಇಂದಿಗೂ ಬಳಕೆಯಲ್ಲಿದೆ. ಪೌರ್ವಾತ್ಯ ದೇಶಗಳಲ್ಲಿ ಒಂದು ಕಾಲಕ್ಕೆ ಇದು ತಂಬ ಪ್ರಚಲಿತವಾಗಿದ್ದಿತು. ಬಂಗಾಳದ ಕಡೆ ಕುಲೀನ ಸಂಪ್ರದಾಯ ಪ್ರಬಲವಾಗಿದ್ದಾಗ ಒಬ್ಬನಿಗೆ ಐವತ್ತು, ಅರವತ್ತು ಮಂದಿ ಹೆಂಡತಿಯರು ಇರುತ್ತಿದ್ದರು. ಕನ್ಯಾಸೆರೆಯನ್ನು ಬಿಡಿಸಲೆಂದು ಮದುವೆಯಾದ ನಂತರ ಈ ಹೆಂಡಂದಿರಲ್ಲಿ ಬಹು ಮಂದಿ ತಮ್ಮ ತೌರು ಮನೆಯಲ್ಲೇ ಇರತ್ತಿದ್ದರು; ಕುಲೀನನು ಒಬ್ಬೊಬ್ಬರ ಮನೆಯಲ್ಲಿ ಸ್ವಲ್ಪಕಾಲ ಉಳಿಯುವ ಪದ್ಧತಿಯೂ ಇದ್ದಿತು. ರಾಜಾರಾಮ ಮೋಹನರಾಯ ಮುಂತಾದವರ ನಾಯಕತ್ವದಲ್ಲಿ ಈ ಸಂಪ್ರದಾಯದ ವಿನಾಶವಾಯಿತು. ಮುಸ್ಲಿಂ

ಜನಾಂಗಗಳಲ್ಲಿ ಅನೇಕ ಪತ್ನೀಗಮನವು ಅವರ ಧರ್ಮ ಶಾಸ್ತ್ರಗಳಿಂದಲೇ ಅಂಗೀಕೃತವಾದ ಪದ್ಧತಿ. ಈ ದೇಶಗಳಲ್ಲಿ ಇಂದಿಗೂ ಇದು ಪ್ರಚುರವಾಗಿದೆ. ಒಬ್ಬಳೇ ಹೆಂಡತಿಗೆ ಹಲವಾರು ಗಂಡಂದಿರಿರುವ ವಿಚಿತ್ರ ಪದ್ಧತಿಯು ವಿಶ್ವದ ಹಲವು ದೇಶಗಳಲ್ಲಿ ಬಳಕೆಯಲ್ಲಿದ್ದಿತು. ಈ ಅನೇಕ ಪತಿ ಪದ್ಧತಿಯು (Polyandry) ನಮ್ಮ ದೇಶದಲ್ಲಿ ಮಲಬಾರಿನ ನಾಯರ್ ಜನರಲ್ಲಿಯೂ, ಟಿಬೇಟ್ ದೇಶದಲ್ಲಿಯೂ ಡೆಹ್ರಾಡೂನಿನ ಜಉನ್‌ಸಾರ–ಬವಾರ್ ಜನರಲ್ಲಿಯೂ ವಿಶೇಷವಾಗಿ ಪ್ರಚಲಿತವಾಗಿದ್ದಿತು. ಇದರ ಅಂಗವಾಗಿ ಸೋದರರೆಲ್ಲರೂ ಒಬ್ಬಳೇ ಹೆಂಡತಿಯನ್ನು ಪಡೆಯುವ ವಾಡಿಕೆಯೂ ಇದ್ದಿತು.

ಪ್ರಾಚ್ಯ ದೇಶಗಳಲ್ಲಿ ಮದುವೆಯಾಗುವ ಮುಖ್ಯ ಉದ್ದೇಶ ಮಕ್ಕಳನ್ನು ಪಡೆಯುವುದು; ಅದೂ ಗಂಡುಮಕ್ಕಳೆಂದರೆ ತುಂಬ ಬಯಕೆ. ನಮ್ಮ ದೇಶದಲ್ಲಿ ಋಣತ್ರಯಗಳ ಕಲ್ಪನೆಯಿದೆಯಷ್ಟೆ. ಬ್ರಹ್ಮಚರ್ಯದಿಂದ ಋಷಿ ಋಣವನ್ನೂ, ಯಜ್ಞ ಯುಗಾದಿ ವಿಧ್ಯುಕ್ತ ಕರ್ಮಗಳಿಂದ ದೇವ ಋಣವನ್ನೂ, ಮದುವೆಯಾಗಿ ಮಕ್ಕಳನ್ನು ಪಡೆಯುವುದರಿಂದ ಪಿತೃ ಋಣವನ್ನೂ(ಪ್ರಜಯಾ ಪಿತೃಭ್ಯ:) ತೀರಿಸಬೇಕೆಂದು ತೈತ್ತರೀಯ ಸಂಹಿತೆ ಹೇಳುತ್ತದೆ. ತೈತ್ತರೀಯ ಉಪನಿಷತ್ತಿನಲ್ಲಿ ಹೇಳಿರುವ ಪ್ರಜಾತಂತುವನ್ನು ಮರಿಯಬಾರದೆಂಬ ಆದೇಶದ ಉಲ್ಲೇಖ ಆಗಲೇ ಬಂದಿದೆ.

**ಅಪುತ್ರಸ್ಯ ಗತಿರ್ನಾಸ್ತಿ**

"ಅಪುತ್ರಸ್ಯ ಗತರ್ನಾಸ್ತಿ" ಎನ್ನುವ ನಾಣ್ನುಡಿ ಪ್ರಚಲಿತವಾಗಿ ಪ್ರಸಿದ್ಧವಾಗಿದೆ. ಇದು ವಿವಾಹದ ಪ್ರಮುಖ ಆಶಯವಾದರೂ ಗಾರ್ಹಸ್ಥ್ಯ ಜೀವನವು ಸುಖವನ್ನು ಅನುಭವಿಸುವ ಆಶ್ರಮವೆಂದೇ ವ್ಯವಹಾರ, ಧರ್ಮ, ಅರ್ಥ, ಕಾಮಗಳೆಂಬ ತ್ರಿವರ್ಗ ಪುರುಷಾರ್ಥಗಳಿಗೂ ಗಾರ್ಹಸ್ಥ್ಯವೇ ಆಧಾರ. ಆಪಸ್ತಂಬ ಧರ್ಮಸೂತ್ರವು "ಧರ್ಮಕ್ಕೆ ಭಂಗಬಾರದಂತೆ ಭೋಗಗಳನ್ನು ಅನುಭೋಗಿಸಬೇಕು. ಹೀಗೆ ಮಾಡಿದರೆ ಎರಡೂ ಲೋಕಗಳು (ಇಹ–ಪರ) ವಶವಾಗುತ್ತವೆ" ಎಂದು ನಿರೂಪಿಸಿದೆ. ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ಸ್ಪಷ್ಟವಾಗಿ, ‘‘ಮನುಷ್ಯನು ಸುಖವಿಲ್ಲದೆ ಇರಬಾರದು,’’ (ಸ ನಿಃ ಸುಖ: ಸ್ಯಾತ್) ಎಂದು ಘೋಷಿಸಿದ್ದಾನೆ. ಆಶ್ರಮ ವ್ಯವಸ್ಥೆಯಲ್ಲಿ ಬ್ರಹ್ಮಚರ್ಯವು ಗಾರ್ಹಸ್ಥ್ಯಕ್ಕೆ ಸಿದ್ಧತೆಯೆಂದೂ, ವಾಸಪ್ರಸ್ಥ ಸನ್ಯಾಸಗಳು ಆಶ್ರಮವನ್ನು ಅತಿಕ್ರಮಿಸುವ ಸಂವಿಧಾನಗಳೆಂದೂ, ಮೂರೂ ಆಶ್ರಮಗಳಿಗೆ ಆಧಾರಭೂತವಾಗಿರುವ ಗೃಹಸ್ಥಾಶ್ರಮಮೊಂದೇ ಆಶ್ರಮವೆಂದೂ ಹೇಳುತ್ತಾರೆ. ಈ ಆಶ್ರಮವು ವಿವಾಹಕ್ಕೆ ಈ ಪ್ರಾಶಸ್ತ್ಯವಿದೆ. ಇದರ ಸುತ್ತ ಉಳಿದ ಪ್ರಯೋಜನಗಳನ್ನು ಮೂಡಿಸಿದ್ದಾರೆ.

ಅವಿವಾಹಿತನಿಗೆ ಸಮಾಜದಲ್ಲಿ ಸನ್ಮಾನ್ಯವಾದ ಸ್ಥಾನವಿಲ್ಲ. ಹಿಂದಿನ ಕಾಲದಲ್ಲಿ ಅವನನ್ನು ಹೀನಾಯವಾಗಿ ಕಾಣುತ್ತಿದ್ದುದೂ ಉಂಟು. ಗೃಹಸ್ಥಾಶ್ರಮಿಯಾದವನೂ ಹೆಂಡತಿಯ ಅನುಮೋದನೆಯಿಲ್ಲದೆ ಕೊಟ್ಟ ದಾನವು

ಗ್ರಾಹ್ಯವಲ್ಲ; ಆಕೆಯಿಲ್ಲದೆ ಅವನು ಯಾವ ಶುಭಕಾರ್ಯದಲ್ಲಿಯೂ ಭಾಗವಹಿಸುವಂತಿಲ್ಲ, ಸ್ಮೃತಿಗಳು ಗಂಡಸನ್ನು ಅರ್ಧವೆಂದೇ ಪರಿಗಣಿಸುತ್ತದೆ; ಮದುವೆಯಾದ ಮೇಲೆ ಹೆಂಡತಿಯನ್ನು ಕೂಡಿಕೊಂಡೇ ಅವನು ಪೂರ್ಣನಾಗುವುದು. ಹೀಗೆ ವಿವಾಹವು ಅತ್ಯಗತ್ಯವಾದ ಸಂಸ್ಕಾರ.

*****

## ೪. ಉತ್ತರೆ ಕಲ್ಯಾಣ

**ಎ.ಆರ್.ಕೃಷ್ಣಶಾಸ್ತ್ರಿ (ವಚನಭಾರತ)**

ಇದೆಲ್ಲಾ ನಡೆದ ಮೂರನೆಯ ದಿನ ಪಂಚಪಾಂಡವರು ಸ್ನಾನಮಾಡಿ, ಬೆಳ್ಳಗಿರುವ ಮಡಿಯುಟ್ಟು, ಅಲಂಕೃತರಾಗಿ, ಯುಧಿಷ್ಠಿರನನ್ನು ಮುಂದುಮಾಡಿಕೊಂಡು ವಿರಾಟನ ಸಭೆಗೆ ಹೋಗಿ ರಾಜರು ಮಂಡಿಸುವ ಆಸನಗಳಲ್ಲಿ ಕುಳಿತರು. ವಿರಾಟನು ಎಂದಿನಂತೆ ರಾಜಕಾರ್ಯಗಳನ್ನು ನಡೆಸಲು ಸಭೆಗೆ ಬಂದು ನೋಡುತ್ತಾನೆ – ಉರಿಯುವ ಬೆಂಕಿಯಂತೆ ತೇಜಶ್ಯಾಲಿಗಳಾದ ಈ ಐವರೂ ಕುಳಿತಿದ್ದಾರೆ! ಅವರಲ್ಲಿ, ದೇವತೆಗಳೊಡನೆ ಕುಳಿತಿರುವ ದೇವೇಂದ್ರನಂತಿದ್ದ ಯುಧಿಷ್ಠಿರನನ್ನು ನೋಡಿ "ನಿನ್ನೊಡನೆ ನಾನು ಪಗಡೆಯಾಡುತ್ತರಲಿಲ್ಲವೆ? ನಿನ್ನನ್ನು ನನ್ನ ಸಭಾಸ್ತಾರನಾಗಿ ಮಾಡಿಕೊಂಡಿರಲಿಲ್ಲವೆ? ಹೀಗಿದ್ದೂ, ಅಲಂಕಾರಮಾಡಿಕೊಂಡು ಬಂದು ರಾಜಯೋಗ್ಯವಾದ ಆಸನದಲ್ಲಿ ಕುಳಿತುಬಿಟ್ಟದ್ದೀಯಲ್ಲಾ ! ಏನಿದು?" ಎಂದು ಲಘುವಾಗಿ ಮಾತನಾಡಿಸಲು, ಅರ್ಜುನನು ಮಂದಹಾಸದಿಂದ ಹೀಗೆಂದನು –"ಮಹಾರಾಜ ! ಈತನು ಆ ಇಂದ್ರನ ಆಸನದಲ್ಲಿ ಬೇಕಾದರೂ ಕುಳಿತುಕೊಳ್ಳಲು ಅರ್ಹತೆಯುಳ್ಳವನು.

ಈತನೇ ಕುಂತೀಪುತ್ರನಾದ ಯುಧಿಷ್ಠಿರ : ಅವನ ಕೀರ್ತಿಯು ಸೂರ್ಯಪ್ರಭೆಯಂತೆ ಲೋಕದಲ್ಲೆಲ್ಲಾ ಹರಡಿದೆ. ಕುರುದೇಶದಲ್ಲಿದ್ದಾಗ ಅವನು ಹೊರಟರೆ ಅವನ ಹಿಂದೆ ಹತ್ತು ಸಹಸ್ರ ಆನೆಗಳು ಹೋಗುತ್ತಿದ್ದುವು: ದಿವ್ಯಾಶ್ವಗಳನ್ನು ಹೂಡಿದ ಮುವತ್ತು ಸಾವಿರ ಬಂಗಾರದ ರಥಗಳು ಹೋಗುತ್ತಿದ್ದವು. ಎಂಟುನೂರು ಸೂತರು ಮಣಿಕುಂಡಲಗಳನ್ನು ಧರಿಸಿ ಮಾಗಧರೊಡನೆ ಹೊಗಳುತ್ತಿದ್ದರು. ಕೌರವರು ಕಿಂಕರರಂತೆ ಆತನನ್ನು ನಿತ್ಯವೂ ಸೇವಿಸುತ್ತಿದ್ದರು: ಎಲ್ಲ ರಾಜರೂ ಕಪ್ಪಕಾಣಿಕೆಗಳನ್ನು ಒಪ್ಪಿಸುತ್ತಿದ್ದರು : ಅವನು ಧರ್ಮಿಷ್ಠ, ದಾನಿತ, ಕೋಪರಹಿತ, ಸತ್ಯವಾದಿ, ಬ್ರಹ್ಮನಿಷ್ಠ, ಅವನ ಐಶ್ವರ್ಯ ಪ್ರತಾಪಗಳನ್ನು ಕಂಡು ದುರ್ಯೋಧನ, ಕರ್ಣ, ಶಕುನಿಗಳು ಕುದಿಯುತ್ತಿದ್ದರು. ಅವನ ಗುಣಗಳನ್ನೆಲ್ಲಾ ಲೆಕ್ಕಮಾಡಿ ಹೇಳಲು ಸಾಧ್ಯವಿಲ್ಲ. ಇಂಥ ಪಾಂಡವ ಮಹಾರಾಜನು ರಾಜಯೋಗ್ಯವಾದ ಆಸನದಲ್ಲಿ ಮಂಡಿಸಲು ಹೇಗೆ ತಕ್ಕವನಲ್ಲ?" ವಿರಾಟನು "ಈತನು ಪಾಂಡವ ಮಹಾರಾಜನೂ ಕುಂತೀಪುತ್ರನೂ ಆದ ಯುಧಿಷ್ಠಿರನಾದರೆ, ಇವನ ತಮ್ಮಂದಿರಾದ ಭೀಮಾರ್ಜುನನ ಕುಲಸಹದೇವರು ಯಾರು? ದ್ರೌಪದಿ ಯಾರು? ಜೂಜಿನಲ್ಲಿ ಸೋತಮೇಲೆ ಪಾಂಡವರು ಇರುವುದು ಎಲ್ಲಿಯೂ ತಿಳಿದು ಬಂದಿಲ್ಲವಲ್ಲಾ?" ಎಂದು ಕೇಳಿದನು. ಅರ್ಜುನನು "ನಿನ್ನ ಅಡಿಗೆಯವನೆಂದು ಹೇಳಿಕೊಳ್ಳುತ್ತಿರುವ ಈ ಬಲ್ಲವನೇ ಭೀಮ

ಪರಾಕ್ರಮಿಯಾದ ಭೀಮಸೇನ. ಈತನೇ ಗಂಧಮಾದನದಲ್ಲಿ ಮೇಲೆ ಬಿದ್ದವರನ್ನೆಲ್ಲಾ ಕೊಂದು ದ್ರೌಪದಿಗೆ ಸೌಗಂದಿಕಾ ಪುಷ್ಪಗಳನ್ನು ತಂದುಕೊಟ್ಟವನು: ದುರಾತ್ಮರಾದ ಕೀಚಕರನ್ನು ಕೊಂದ ಗಂಧರ್ವನು ಇವನೇ : ನಿನ್ನ ಅಂತಃಪುರದಲ್ಲಿ ಹುಲಿಗಳನ್ನೂ, ಕರಡಿಗಳನ್ನೂ, ಹಂದಿಗಳನ್ನೂ ಕೊಂದವನು ಇವನೇ: ನಿನ್ನಲ್ಲಿ ಅಶ್ವರಕ್ಷಕನಾಗಿದ್ದವನೇ ನಕುಲ; ಗೋಪಾಲಕನಾಗಿದ್ದವನೇ ಸಹದೇವ ; ಈ ಪದ್ಮ ಪತ್ರಾಕ್ಷಿಯೂ ಚಾರುಹಾಸಿನಿಯೂ ಆದ ಸೈರಂದ್ರಿಯೇ ದ್ರೌಪದಿ : ಅವಳ ಸಂದರ್ಭದಲ್ಲಿಯೇ ಕೀಚಕರು ಹತರಾದದ್ದು. ನಾನೇ ಅರ್ಜುನ, ನನ್ನ ವಿಚಾರ ಮಹಾರಾಜನ ಕಿವಿಗೆ ಬಿದ್ದಿರಬೇಕು ; ನಾನು ಭೀಮನ ತಮ್ಮನಾದ ಪಾರ್ಥ ; ಈ ಯಮಳರ ಅಣ್ಣ, ಮಹಾರಾಜ ! ಇಷ್ಟೂ ದಿನವೂ ನಾವೆಲ್ಲರೂ ನಿನ್ನ ಮನೆಯಲ್ಲಿ, ಗರ್ಭವಾಸದಲ್ಲಿದ್ದ ಮಕ್ಕಳ ಹಾಗೆ ಸುಖವಾಗಿ ಇದ್ದು ಅಜ್ಞಾತವಾಸವನ್ನು ಕಳೆದವು" ಎಂದನು. ಅರ್ಜುನನು ಹೀಗೆ ಪರಿಚಯಗಳನ್ನೆಲ್ಲಾ ಹೇಳಿದ ಮೇಲೆ ಉತ್ತರನು ಅವನ ವಿಕ್ರಮವನ್ನು ವರ್ಣಿಸುತ್ತಾ " ಮಹಾರಾಜ, ಈತನೇ ಜಿಂಕೆಗಳ ಮಧ್ಯದಲ್ಲಿ ಸಿಂಹ ಹೇಗೋ ಹಾಗೆ ಶತ್ರುರಥಗಳ ಮಧ್ಯದಲ್ಲಿ ನುಗ್ಗಿ ಸಂಚರಿಸುತ್ತ ಅವರನ್ನು ನುಗ್ಗಿ ಸಂಚರಿಸುತ್ತ ಅವರನ್ನು ನಿಗ್ರಹಿಸುತ್ತಿದ್ದವನು; ಈತನೇ ಕೌರವರನ್ನು ಸೋಲಿಸಿ ಗೋವುಗಳನ್ನು ಗೆದ್ದುಕೊಟ್ಟವನು; ಈತನ ಶಂಖಧ್ವನಿಯನ್ನು ಕೇಳಿಯೇ ನನ್ನ ಕಿವಿಗಳು ಕಿವುಡಾಗಿ ಹೋದುವು" ಎಂದು ಹೊಗಳಿ "ತಂದೆಯೇ, ಈ ಪಾಂಡವರು ಮಹಾತ್ಮರು; ಪೂಜಾಯೋಗ್ಯರು ; ಇವರನ್ನು ಸತ್ಕರಿಸಿ ಸನ್ಮಾನ ಮಾಡಬೇಕು !" ಎಂದನು ವಿರಾಟನು "ನಾನೂ ಶತ್ರುಗಳ ಕೈಗೆ ಸಿಕ್ಕಿಬಿದ್ದದ್ದೆ ; ಭೀಮಸೇನನು ನನ್ನನ್ನು ಬಿಡಿಸಿ ತಂದು, ಗೋವುಗಳನ್ನು ಗೆದ್ದುಕೊಟ್ಟನು. ಇವರ ಬಾಹು ವೀರ್ಯದಿಂದ ನಮಗೆ ಜಯವು ದೊರಕಿತು. ಯುಧಿಷ್ಠಿರ! ನಾವೂ ನಮ್ಮ ಮಂತ್ರಿಗಳೂ ನಿಮ್ಮೆಲ್ಲರ ಕ್ಷಮೆ ಬೇಡುತ್ತೇವೆ. ನಿಮಗೆ ಶುಭವಾಗಲಿ, ನಾವು ಅರಿದೇ ಏನಾದರೂ ಹೆಚ್ಚು ಕಡಿಮೆಯ ಮಾತನ್ನಾಡಿದ್ದರೆ ಅದನ್ನು ಕ್ಷಮಿಸಿಬಿಡಿ! ಇಗೋ ಈ ರಾಜ್ಯ ಕೋಶಗಳೆಲ್ಲವೂ ನಿಮ್ಮವು!" ಎಂದು ಅವರನ್ನು ಸಂತೋಷದಿಂದ ಆಲಿಂಗಿಸಿಕೊಂಡನು. ಅವರನ್ನು ಎಷ್ಟು ನೋಡಿದರೂ ಅವನಿಗೆ ತೃಪ್ತಿಯಾಗದು, ಹೀಗೆ ತುಂಬ ಪ್ರೀತಿಗೊಂಡು ಮತ್ತೆ ಯುಧಿಷ್ಠಿರನನ್ನು ಕುರಿತು "ಭಾಗ್ಯವಶದಿಂದ ನೀವೆಲ್ಲರೂ ಕ್ಷೇಮವಾಗಿ ಕಾಡನ್ನು ಬಿಟ್ಟುಬಂದಿರಿ: ಕಷ್ಟಕರವಾದ ಅಜ್ಞಾತವಾಸವನ್ನು ಕಳೆದಿರಿ. ಈ ನನ್ನ ರಾಜ್ಯವನ್ನೂ ನನ್ನದಾಗಿ ಇನ್ನೇನು ವಸ್ತುಗಳಿವೆಯೋ ಅವೆಲ್ಲವನ್ನೂ ಯಾವ ವಿಧವಾದ ಶಕೆಯೂ ಇಲ್ಲದೆ ತೆಗೆದುಕೊಳ್ಳಿ. ಸವ್ಯಸಾಚಿಯಾದ ಧನಂಜಯನು ಉತ್ತರೆಯ ಪಾಣಿಗ್ರಹಣ ಮಾಡಲಿ ; ಆತನೇ ಅವಳಿಗೆ ಅನುರೂಪನಾದ ಪತಿ ! ಎಂದು ಕೇಳಿಕೊಂಡನು. ಧರ್ಮರಾಜನು ಅರ್ಜುನನ ಮುಖವನ್ನು ನೋಡಲು, ಅರ್ಜುನನು ಅಣ್ಣನ ಸಂಜ್ಞೆಯನ್ನು ಗ್ರಹಿಸಿ ವಿರಾಟನನ್ನು ಕುರಿತು "ರಾಜನೇ ! ನಿನ್ನ

ಮಗಳನ್ನು ನಾನು ನನ್ನ ಸೊಸೆಯಾಗಿ ಪರಿಗ್ರಹಿಸುತ್ತೇನೆ. ಮತ್ಸ್ಯ–ಭಾರತ ಕುಲಗಳ ಸಂಬಂಧವು ಯುಕ್ತವಾದದ್ದಾಗಿದೆ" ಎಂದನು. ಅದೇಕೆ ನೀನೇ ಪರಿಗ್ರಹಿಸಲೊಲ್ಲೆ?" ಎಂದು ವಿರಾಟನು ಕೇಳಲು ಅರ್ಜುನನು "ಮಹಾರಾಜ, ನಾನು ಅಂತಃಪುರದಲ್ಲಿದ್ದು ಸದಾ ನಿನ್ನ ಮಗಳನ್ನು ನೋಡುತ್ತಿದ್ದೆ: ಅವಳು ನನ್ನನ್ನು ಏಕಾಂತವಾಗಿಯಾಗಲಿ ಪ್ರಕಾಶವಾಗಿಯಾಗಲಿ, ಯಾವಾಗಲೂ ತಂದೆಯಂತೆ ವಿಶ್ವಾಸದಿಂದ ಕಾಣುತ್ತಿದ್ದಳು. ಅಲ್ಲದೆ ಗಾಯನ ನರ್ತನಗಳಲ್ಲಿ ನಾನು ಆಕೆಗೆ ಗುರುವಿನಂತೆ ಪೂಜ್ಯನೂ ಪ್ರೀತಿಪಾತ್ರನೂ ಆಗಿದ್ದೆ. ಒಂದು ವರ್ಷದಿಂದ ನಾನು ಅವಳ ಜೊತೆಯಲ್ಲಿ ಇದ್ದು ಈಗ ಮದುವೆ ಮಾಡಿಕೊಂಡರೆ ಜನರು ಇಲ್ಲದ್ದನ್ನು ಏನಾದರೂ ಶಂಕಿಸಿಯಾರು. ನಾನು ಶುದ್ಧನೂ ಜಿತೇಂದ್ರಿಯನೂ ದಾಮತನೂ ಆಗಿದ್ದೇನೆ : ಅವಳೂ ಶುದ್ಧಳಾಗಿರುವಂತೆ ನೋಡಿಕೊಂಡಿದ್ದೇನೆ, ನಾನು ಹೇಳಿದಂತೆ ನಡೆಸಿದರೆ, ಸೊಸೆಗಾಗಲಿ ಮಗಳಿಗಾಗಲಿ, ಮಗನಿಗಾಗಲಿ, ತಂದೆಗಾಗಲಿ, ಯಾರಿಗೂ ಯಾವ ವಿಧವಾದ ಸಂದೇಹಕ್ಕೂ ಅವಕಾಶವಿರುವುದಿಲ್ಲ; ಎಲ್ಲವೂ ನಿರ್ಮಲವಾಗಿರುತ್ತದೆ. ಆದ್ದರಿಂದ ನಿನ್ನ ಮಗಳನ್ನು ನನ್ನ ಸೊಸೆಯಾಗಿ ಮಾಡಿಕೊಳ್ಳಬೇಕೆನ್ನುತ್ತೇನೆ. ನನ್ನ ಮಗನಾದ ಅಭಿಮನ್ಯುವೂ ವಾಸುದೇವನ ಸೋದರಳಿಯ; ಸಾಕ್ಷಾತ್ ದೇವಕುಮಾರನಂಥವನು; ಶ್ರೀಕೃಷ್ಣನಿಗೆ ಅಚ್ಚುಮೆಚ್ಚು; ಬಾಲ್ಯದಲ್ಲಿಯೇ ಅಸ್ತ್ರಕೋವಿದನಾದವನು; ಅವನು ತಕ್ಕ ಅಳಿಯ; ನಿನ್ನ ಮಗಳಿಗೆ ತಕ್ಕ ಗಂಡ" ಎಂದನು. ವಿರಾಟನು "ಈ ಮಾತು ಧರ್ಮವಂತನೂ ಜ್ಞಾನವಂತನೂ ಕುರುಶ್ರೇಷ್ಠನೂ ಆದ ಧನಂಜಯನಿಗೆ ಸದೃಶವಾದದ್ದೇ ಪಾರ್ಥ! ಯಾವುದು ನಡೆಸುವುದಕ್ಕೆ ಯೋಗ್ಯವೆಂದು ನೀನು ತಿಳಿಯುತ್ತೀಯೋ ಆದನ್ನು ಶೀಘ್ರವಾಗಿ ನಡೆಸು. ಅರ್ಜುನನು ನನ್ನ ಬೀಗನಾದರೆ ನನ್ನ ಇಷ್ಟಾರ್ಥಗಳೆಲ್ಲಾ ಸಮೃದ್ಧಿಯಾಗಿ ನೆರವೇರಿದಂತಾಯಿತು !" ಎಂದನು. ಹೀಗೆ ಅವರಿಬ್ಬರೂ ಒಮ್ಮತಕ್ಕೆ ಬಂದರು. ಈ ವೃತ್ತಾಂತವನ್ನೆಲ್ಲಾ ವಿರಾಟನೂ ಯುಧಿಷ್ಠಿರನೂ ತಮ್ಮ ಇಷ್ಟಮಿತ್ರರಿಗೂ ವಾಸುದೇವನಿಗೂ ಹೇಳಿಕಳುಹಿಸಿದರು.

ಹೀಗೆ ಹದಿಮೂರನೆಯ ವರ್ಷ ಮುಗಿದ ಮೇಲೆ ಪಂಚಪಾಂಡವರು ವಿರಾಟನಿಗೆ ಸೇರಿದ್ದ ಉಪಪ್ಲವ್ಯ ನಗರದಲ್ಲಿ ಹೋಗಿ ವಾಸಮಾಡುತ್ತಿದ್ದರು. ಅವರನ್ನು ನೋಡಲು ಅಲ್ಲಿಗೆ ಕಾಶಿರಾಜ ಶೈಬ್ಯ ದ್ರುಪದ ಮುಂತಾದ ಶಸ್ತ್ರಾಸ್ತ್ರಸಂಪನ್ನರಾದ ಅಕ್ಷೌಹಿಣೀ ರಾಜರೆಲ್ಲರೂ ಬಂದರು. ವಿರಾಟನು ಅವರೆಲ್ಲರನ್ನೂ ಆದರಿಸಿ, ಕಳುಹಿಸಿಕೊಟ್ಟನು. ಆನಂತರ, ವಾಸುದೇವ, ಬಲರಾಮ, ಕೃತವರ್ಮ, ಸಾತ್ಯಕಿ, ಅಕ್ರೂರ, ಸಾಂಬ ಮುಂತಾದವರು ಅಭಿಮನ್ಯುವನ್ನೂ ಸುಭದ್ರೆಯನ್ನೂ ಕರೆದುಕೊಂಡು ಬಂದರು. ಅವರ ಹಿಂದೆ ಹತ್ತು ಸಾವಿರ ಆನೆ, ಒಂದು ಲಕ್ಷ ಕುದುರೆ, ಒಂದು ಅರ್ಬುದ ರಥಗಳು, ಒಂದು ನಿಖರ್ವ ಪದಾತಿಗಳು ಬಂದುವು. ಅನೇಕ ವೃಷ್ಣಂಧಕರೂ ಭೋಜರೂ ಬಂದರು. ಶ್ರೀಕೃಷ್ಣನು

ಪಾಂಡವರೊಬ್ಬೊಬ್ಬರಿಗೂ ಸ್ತ್ರೀವಸ್ತ್ರ ರಕ್ಷಾದಿಗಳನ್ನು ಉಡುಗೊರೆ ಕೊಟ್ಟನು. ಅನಂತರ ವಿಧಿಗನುಸಾರವಾಗಿ ವಿವಾಹ ನಡೆಯಿತು. ಮತ್ಸ್ಯರಾಜನ ಮನೆಯಲ್ಲಿ ಶಂಖಗಳು, ಬೇರಿಗಳು ಗೋಮುಖಗಳು ಮೊಳಗಿದ್ದೂ ಮೊಳಗಿದ್ದೇ! ಮೃಗಗಳನ್ನು ಯಥೇಚ್ಛವಾಗಿ ಕೊಂದು ಮಾಸಾಂಹಾರವನ್ನು ಸಿದ್ಧಮಾಡಿದ್ದರು. ಸುರೆ ಮೈರೇಯ ಮುಂತಾದ ಪಾನಗಳು, ಬೇಕಾದಷ್ಟಿದ್ದವು. ಸಂಗೀತಗಾರರು, ಗಾಯನ ಮಾಡುತ್ತಾ ಆಖ್ಯಾನಕಾರರು ಕಥೆ ಮಾಡುತ್ತ ನಟರು ನಾಟ್ಯಮಾಡುತ್ತ ವಂದಿಮಾಗದರು ಸ್ತುತಿಸುತ್ತಾ ಬಂದವರೆಲ್ಲರನ್ನೂ ಸಂತೋಷಪಡಿಸುತ್ತಿದ್ದರು. ಮತ್ಸರಾಜನ ಅಂತಃಪುರಕ್ಕೆ ಸೇರಿದ್ದ ಸುಂದರವಾದ ಸ್ತ್ರೀಯರು ರತ್ನಾಭರಣ ಭೂಷಿತೆಯರಾಗಿ ಸುದೇಷ್ಣೆಯನ್ನು ಮುಂದುಮಾಡಿಕೊಂಡು ಬಂದರು. ದ್ರೌಪದಿಯು ರೂಪ ಲಾವಣ್ಯಗಳಲ್ಲಿ ಅವರೆಲ್ಲರನ್ನೂ ಮೀರಿಸಿದ್ದಳು. ಅವರು ರಾಜಪಪುತ್ರಿಯಾದ ಉತ್ತರೆಯನ್ನು ಅಲಂಕರಿಸಿ ವೈಭವದಿಂದ ಕರೆದುಕೊಂಡು ಬರಲು ಅರ್ಜುನನು ಅವಳನ್ನು ತನ್ನ ಮಗನಿಗಾಗಿ ಸ್ವೀಕರಿಸಿದನು. ಮಹಾ ರಾಜನಾದ ಯುಧಿಷ್ಠರನು ದೇವೇಂದ್ರನಂತೆ ಶೋಭಿಸುತ್ತ ಹೆಣ್ಣನ್ನು ಒಪ್ಪಿಸಿಕೊಂಡನು ಶ್ರೀಕೃಷ್ಣನನ್ನು ಮುಂದಿಟ್ಟುಕೊಂಡು ಅಭಿಮನ್ಯುವಿಗೆ ಮದುವೆಮಾಡಿಸಿ, ಅವನಿಗೆ ವಾಯುವೇಗವುಳ್ಳ ಏಳುಸಾವಿರ ಕುದುರೆಗಳನ್ನೂ, ಇನ್ನೂರು ಆನೆಗಳನ್ನೂ ಬಹುಧನವಾಗಿ ಕೊಟ್ಟನು. ಮದುವೆಯೆಲ್ಲಾ ಮುಗಿದ ಮೇಲೆ, ಶ್ರೀಕೃಷ್ಣನು ಉಡುಗೊರೆಯಾಗಿ ತಂದುಕೊಟ್ಟಿದ್ದನ್ನೂ ಜೊತೆಗೆ ಸಾವಿರಾರು ಗೋವುಗಳನ್ನೂ ರತ್ನಗಳನ್ನೂ ಹಲವು ಬಗೆಯ ಬಟ್ಟೆಬರೆಗಳನ್ನೂ ಒಡವೆವಸ್ತುಗಳನ್ನೂ ವಾಹನ ಶಯನಾದಿಗಳನ್ನೂ ದಾನಮಾಡಿದನು. ಮತ್ಸ್ಯರಾಜನ ಆ ನಗರವು ಮಹೋತ್ಸವದಿಂದ ತುಂಬಿ, ಹೃಷ್ಟಪುಷ್ಟರಾದ ಜನರಿಂದ ಕಿಕ್ಕಿರಿದು ಶೋಭಿಸುತ್ತಿತ್ತು.

*****

## ಕೃಷಿ

ನಮ್ಮ ಜೀವನಕ್ಕೆ ಬೇಕಾದ ಬಹು ಅಗತ್ಯವಾದ ಆಹಾರ ಪದಾರ್ಥಗಳೆಲ್ಲವೂ ಕೃಷಿ ಮೂಲದಿಂದಲೇ ಬರಬೇಕು.

ನಮ್ಮ ಸಂಸ್ಕೃತಿ ಬೆಳೆದು ಬಂದಿರುವುದೇ ಕೃಷಿ ಅವಲಂಬಿತ ಬದುಕಿನೊಡನೆ, ನಮ್ಮ ಪಾರಂಪಾರಿಕ ಕೃಷಿ ಪದ್ದತಿ ಸಾವಿರಾರು ವರ್ಷಗಳಷ್ಟು ಹಳೆಯದು. ರೈತ ಈ ದೇಶದ ಬೆನ್ನೆಲುಬು. ಅವನು ಬೆಳೆದ ಬೆಳೆಗಳೆ ನಮ್ಮ ಜೀವನಾಡಿ. ಆಧುನಿಕತೆಯ ಆತುರಕ್ಕೆ ಸಿಲುಕಿ ರೈತ ತನ್ನ ಕೃಷಿಪದ್ಧತಿ ಬದಲಾಯಿಸಿಕೊಂಡಿದ್ದಾನೆ. ಆಧುನಿಕತೆಯಿಂದ ಹಲವು ಬದಲಾವಣೆಯಾಗಿದೆ. ಕೃಷಿ ಪದ್ಧತಿ ಸುಧಾರಣೆ ಕಂಡಿದೆ. ಆದರೂ ಹಲವಾರು ರೈತರು ಕೃಷಿಯಿಂದ ವಿಮುಖರಾಗಿದ್ದಾರೆ. ಕೆಲವು ರೈತರು ಆತ್ಮಹತ್ಯೆಯ ದಾರಿ ಹಿಡಿದಿದ್ದಾರೆ. ಕೃಷಿ ನಂಬಿದ ರೈತನ ಬದುಕು ಬಹಳ ಶೋಚನೀಯ ಸ್ಥಿತಿಯಲ್ಲಿದೆ. ರೈತ ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದಿರುವುದೆ ಪ್ರಮುಖ ಕಾರಣವಾಗಿದೆ.

ಕೆಲವು ರೈತರು ಪರ್ಯಾಯ ಕಸುಬುಗಳೆಡೆಗೆ ಆಕರ್ಷಿತರಾಗುತ್ತಿದ್ದಾರೆ. ಕಲಿತಿಲ್ಲದವರು ಬೇರೆ ಉದ್ಯೋಗ ಹುಡುಕುತ್ತಾ ನಗರದ ಕಡೆಗೆ ಮುಖ ಮಾಡುತ್ತಿದ್ದಾರೆ. ಕಾಲಕಾಲಕ್ಕೆ ಮಳೆ ಬಾರದಿರುವುದು–ಬಿದ್ದಮಳೆ ನೀರನ್ನು ಭೂಮಿಗೆ ಇಂಗಿಸದಿರುವುದರಿಂದ ಕೃಷಿಗೆ ನೀರಿನ ಮೂಲವೇ ಬತ್ತಿ ಹೋಗುವ ಸಮಸ್ಯೆ ತಂದಿದೆ. 'ಹಸಿರು ಕ್ರಾಂತಿ'ಯಿಂದ ಯಾವ ಬದಲಾವಣೆ ಕೃಷಿವಲಯದಲ್ಲಿ ಕಂಡುಬಂದಿಲ್ಲ. ಕೃಷಿಕನ ಬದುಕು ಹಸನಾಗಿಲ್ಲ. ಬಹುರಾಷ್ಟ್ರೀಯ ಕಂಪನಿಗಳ ಒಡೆತಕ್ಕೆ ಸಿಲುಕಿ ರೈತ ಕೃಷಿಭೂಮಿ ಕಳೆದುಕೊಳ್ಳದಂತೆ ನಾವು ರೈತನಿಗೆ ಸಹಕರಿಸುವತ್ತ ಗಮನಹರಿಸಿ ಕೃಷಿವಲಯದ ಅಭಿವೃದ್ಧಿಗೆ ನವಚೈತನ್ಯದ ಪರ್ಯಾಯ ಮಾರ್ಗಗಳನ್ನು ರೂಪಿಸಬೇಕಿದೆ. ಕೆ.ವಿ.ಸುಬ್ಬಣ್ಣನವರ ಮಾತಿನಲ್ಲಿ ಹೇಳುವುದಾದರೆ ಈಚೀನ ದಿನಗಳಲ್ಲಿ ಜಗತ್ತಿನಲ್ಲಿ ಮಾತ್ರವಲ್ಲ ನಮ್ಮದೇಶದಲ್ಲೂ ಜಾಗತೀಕರಣ, ಉದಾರೀಕರಣ ಸ್ಪರ್ಧೆ, ಪ್ರಗತಿ ಇತ್ಯಾದಿ ಹೆಸರುಗಳಲ್ಲಿ ವಿನಾಶಕಾರಿ ನಾಗರೀಕತೆಯು ಹಬ್ಬಿಕೊಳ್ಳುತ್ತಿದೆ. ಈ ಸಂದರ್ಭದಲ್ಲಿ ನಾವು ಗ್ರಾಮೀಣರು, ಕೃಷಿಕರು ಜೀವಪೋಷಕವಾದ ನಮ್ಮ ಜನ ಸಾಮಾನ್ಯ ಸಂಸ್ಕೃತಿಯನ್ನು ಮೇಲೆತ್ತಿ ರಕ್ಷಿಸಿಕೊಳ್ಳಬೇಕು. ಹಾಗೆ ರಕ್ಷಿಸಿಕೊಳ್ಳುವುದಕ್ಕೆ ನಾವೆಲ್ಲ ಟೊಂಕಕಟ್ಟಿ ಕತ್ತಿ ಹಿಡಿದು ರಣಾಂಗಣಕ್ಕೆ ಧಾವಿಸಿ ಮಹಾಸಮರವನ್ನು ಹೂಡಬೇಕಾಗಿಲ್ಲ. ನಾವು ಸಾಮಾನ್ಯ ಜನರು ನಮ್ಮ ಕುಟುಂಬ ಸಮುದಾಯ ಪ್ರಜ್ಞೆ ಸಂಬಂಧಗಳನ್ನು ಮರೆಯದೆ ಅಥವಾ ಕೈಬಿಡದೆ, ವಾಣಿಜ್ಯ ಲಾಭ ಸ್ವಾರ್ಥಗಳ ಅರಿವಳಿಕೆಗೆ ಬಲಿಬಿದ್ದು ಜಡವಾಗದೆ, ಕೊಂಚ ಎಚ್ಚರದಿಂದ ಸದಾಜೀವಂತ ಸ್ಪಂದಿಸುತ್ತ ಬದುಕಿಕೊಂಡರೆ ಸಾಕು. ನಮ್ಮ ಕುಟುಂಬಗಳೂ, ಸಮುದಾಯಗಳೂ ಬದುಕುತ್ತವೆ.

*****

## ೧. ನೀರು ಮತ್ತು ಜನಪದ ಪರಂಪರೆ

**ಡಾ|| ಕೆ,ವೈ.ನಾರಾಯಣಸ್ವಾಮಿ**

ಇಪ್ಪತ್ತೊಂದನೆಯ ಶತಮಾನದಲ್ಲಿ ನೀರಿಗಾಗಿ ಅಲ್ಲೋಲ ಕಲ್ಲೋಲಗವಾಗುವ ಎಲ್ಲಾ ಶಕುನಗಳು ಈಗಾಗಲೇ ಪ್ರಕಟವಾಗುತ್ತಿವೆ. ಆಧುನಿಕ ಜೀವನ ಶೈಲಿ ಮತ್ತು ಉಪಭೀಗ ವಿಕಾರಗಳು ಪಂಚಭೂತಗಳ ಸಹಜ ಲಯಗಳನ್ನು ತಪ್ಪಿಸಿರುವಂತೆ ಕಾಣುತ್ತಿವೆ. ನೀರನ್ನು ಕಾಳಜಿಯಿಂದ ಉಪಯೋಗಿಸದ ಯಾವುದೇ ದೇಶ ಇನ್ನು ಮುಂದೆ ಪ್ರಗತಿ ಹೊಂದುವುದಿರಲಿ, ಅಸ್ತಿತ್ವಕ್ಕಾಗಿ ಹೋರಾಟದ ಪರಿಸ್ಥಿತಿ ನಿರ್ಮಾಣವಾಗಿದೆ. ಕಳೆದ ಮೂರು ವರ್ಷಗಳಿಂದ ತಾಳ ತಪ್ಪಿರುವ ಮಳೆಯ ಪಾದದಿಂದ ಕರ್ನಾಟಕ ತತ್ತರಿಸಿ ಹೋಗಿದೆ. ಜೀವಭಯದ ಅನುಭವ ನಿಧಾನವಾಗಿ ದಟ್ಟವಾಗುತ್ತಿದೆ.

ಯಾತಕ್ಕೆ ಮಳೆ ಹೋದವ್ವೋ ಶಿವ ಶಿವ!
ಲೋಕ ತಲ್ಲಣನಿಸತಾವ್ರೊ !
ಬೇಕಿಲ್ಲದಿದ್ದರೆ ಬೆಂಕಿಯ ಮಳೆ ಸುರಿದು,
ಉರಿಸಿ ಕೊಲ್ಲಲು ಬಾರದೇ||

ಅನಾವೃಷ್ಟಿಯಿಂದ ಉಂಟಾಗಿರುವ ಪರಿಸ್ಥಿತಿಯನ್ನು ನಿಭಾಯಿಸಲು ದಿಕ್ಕು ತೋಚದ ಜೀವ ಸಾವಿಗಾಗಿ ಮೊರೆಯಿಡುವ ಆರ್ತತೆ ಈ ಹಾಡಿನಲ್ಲಿ ಅಭಿವ್ಯಕ್ತಿಗೊಂಡಿದೆ. ಆಕಾಶಗಂಗೆ ಭೂಮಿಗೆ ಬಾರದ ಸನ್ನಿವೇಶವನ್ನು ಜನಪದ ಸಂವೇದನೆ ಗ್ರಹಿಸುತ್ತಿರುವ ಕ್ರಮದಲ್ಲಿ ಒಂದು ವಿಶಿಷ್ಟ ವಿನ್ಯಾಸವಿದೆ. ಜೀವ ಉಳಿಸುವ ಜಲಕ್ಕಾಗಿ ಕಾಯ್ದು ಭರವಸೆ ನಷ್ಟಗೊಂಡಾಗ ಕೊಲ್ಲುವ ಬೆಂಕಿಗಾಗಿ ಮತ್ತೆ ಪ್ರಾರ್ಥಿಸುವ ಚಿತ್ರವು ಮಳೆಯ ಎರಡು ವಿರುದ್ಧ ಗುಣಗಳನ್ನು ಸಂಕೇತಿಸುವಂತೆ ತೋರುತ್ತದೆ. ಇಂದು ನಮ್ಮ ನಡುವೆಯೂ ಇಂಥದ್ದೇ ಪರಿಸ್ಥಿತಿ ಉದ್ಭವಿಸಿದೆ. ಹಸುಗೂಸುಗಳಿಗೆ ಸಾಕು ಪ್ರಾಣಿಗಳಿಗೆ ಒಂದು ಗುಟುಕು ನೀರು, ಒಂದ್ಹಿಡಿ ಆಹಾರ ಕೊಡಲಾರದ ಅಸಹಾಯಕತೆಗಿಂತ ಸಾವು ಮೇಲು ಎನ್ನುವ ನಿಲುವು ಕಾರ್ಯರೂಪ ಪಡೆದಂತೆ ನಾಡಿನ ಎಲ್ಲಾ ಕಡೆಯಿಂದ ಸಾವಿಗೆ ತಲೆದಂಡ ನೀಡುತ್ತಿರುವ ಸುದ್ದಿಗಳು ನಿಯತವಾಗುತ್ತಿರುವುದು ಘೋರ ದುರಂತವೊಂದರ ಮುನ್ಸೂಚನೆಯಾಗಿದೆ.

ಇಂದಿನ ನೀರಿನ ಜನಪದೀಯ ನೆಲೆಗಳನ್ನು ಕುರಿತ ಚಿಂತನೆಯನ್ನು ಒಂದು ವಿಲಕ್ಷಣವಾದ ಕತೆಯ ಮೂಲಕ ಆರಂಭಿಸಬಹುದು. ಇದು ಕತೆ ಅನ್ನಿಸಿದರೆ ಕತೆ, ವಾಸ್ತವ ಅನ್ನಿಸಿದರೆ ವಾಸ್ತವ! ಹಾಗೆ ನಿರೂಪಿತವಾಗಿದೆ. ಈ ರಚನೆ, ರಾಡಿಕೆ. ಹಳ್ಳಕ್ಕೆ ರಾಣಿಬೆನ್ನೂರಿನ ಹತ್ತಿರ ಅಂತರವಳ್ಳಿ ಎಂಬೊಂದು ಊರು. ನೀರಿನ ಯೋಜನೆಗಾಗಿ ಅಧ್ಯಯನ ಸಂದರ್ಭದಲ್ಲಿ ನಾನು ಆ ಊರಿಗೆ

ಹೋಗಿದ್ದೆ. ಆ ಊರಿನ ಸಮೀಪ ತುಂಗಭದ್ರಾ ನದಿಗೆ ಒಂದು ಕಾಲದಲ್ಲಿ ಉಪನದಿಯಾಗಿದ್ದ ಹಳ್ಳವೊಂದು ಅವಶೇಷದ ಹಾಗೆ ಒಣಗಿ ಬಿದ್ದಿದೆ. ಅದನ್ನು ಚರಿಗೆ ಹಳ್ಳ ಎಂದು ಕರೆಯುವುದು ವಾಡಿಕೆ. ಹಳ್ಳಕ್ಕೆ ಚರಿಗೆಹಳ್ಳ ಎಂಬ ಹೆಸರು ಏಕೆ ಬಂತು? ಆ ಊರಿನ ಜನ ಅನೇಕರನ್ನು ಪ್ರಶ್ನಿಸುತ್ತಾ ಹೋದೆ. ಕೆಲವರಿಗೆ ಹೆಸರಷ್ಟೇ ಗೊತ್ತಿತ್ತು. ಕೇಳಿ ಬಾಯಿ ಒಣಗಿದರೂ ಪ್ರಶ್ನೆಗೆ ಉತ್ತರ ಸಿಗಲಿಲ್ಲ. ಆದರೆ ದಲಿತರ ಹಟ್ಟಿಯಲ್ಲಿದ್ದ ಹಣ್ಣಾದ ಮುದುಕಿಯೊಬ್ಬಳು ಆ ಚರಿಗೆ ಹಳ್ಳದ ಕತೆಯನ್ನು ಹೇಳಿದಳು, ಒಂದಾನೊಂದು ಕಾಲದಲ್ಲಿ ದೇಶಕ್ಕೆಲ್ಲಾ ದೂಕ್ಕಲ ಬರ ಬಿದ್ದಿತ್ತಂತೆ. ಅನ್ನ ನೀರು ಹಿಡಿ ಇಲ್ಲದೆ ಅಲ್ಲೋಲ ಕಲ್ಲೋಲ ಆಗಿದ್ದಂತೆ. ದೇಶಾಂತರ ಹೋದವರು ಹೋದ್ರಂತೆ, ಮೂಕಜೀವಿಗಳನ್ನು ಕಾಡಿನಲ್ಲಿ ಬಿಟ್ಟು ಬಂದ್ರಂತೆ. ಅಲ್ಲೂ ಏನಿತ್ತು ಕಡಯಾಕೆ ಒಂದು ಕಡ್ಡಿಲ್ಲ. ಕುಡಿಯಾಕೆ ಒಂದು ಗುಟುಕು ನೀರಿಲ್ಲವಂತೆ. ಹಸಿವಿನಿಂದ್ಲೇ ಎಷ್ಟೋ ಜನ ಸತ್ರಂತೆ. ಇಷ್ಟಾದ್ರೂ ನಮ್ಮೂರ ದೇವರು ತ್ರಿಲೋಕೇಶ್ವರನಿಗೆ ಈ ಕಷ್ಟಗಳಾವುದು ಅರಿವಾಗಲಿಲ್ಲವಂತೆ. ಒಂದು ದಿನ ಶಿವನಿಗೆ ಬಯಲು ಕಡೆಗೆ ಅವಸರವಾಗಿ ಒಂದು ಚರಿಗೆ ತುಂಬ ನೀರು ತಕ್ಕೊಂಡು ಗುಡಿಯಿಂದ ಸ್ವಲ್ಪ ದೂರವಾಗಿರೊ ಮರೆಯಲ್ಲಿ ಕಕ್ಕಸಿಗೆ ಕುಂತಿದ್ದನಂತೆ. ಮುಂದುಗಡೆ ಚರಿಗೆ ಇಟ್ಟಿದ್ನಂತೆ. ಆಗ ಎಲ್ಲೋ ಜೀವ ಇನ್ನೇನು ಹೊಂಟೆ ಹೋದಂಗಿದ್ದ ಬಸವಣ್ಣನಿಗೆ ನೀರ ವಾಸ್ನೆ ಬಡ್ದು ತಟ್ಟಾಡಿಕೊಂಡು ಬಂತಂತೆ. ಚರಿಗೆ ತುಂಬಿದ್ದ ನೀರನ್ನು ನೋಡಿ ಆಸೆಯಿಂದ ನಾಲಗೆ ಚಾಚ್ತಲೆ ಕಂಠ ಕಿರಿದಾಗಿದ್ದ ಚರಿಗೆ ಉರುಳಿ ಬಿತ್ತಂತೆ. ನೀರು ಒಣಭೂಮಿ ಮ್ಯಾಲೆ ಜಲ್ಲನೆ ಚಲ್ಲಿ ಹೋದ್ವಂತೆ. ಆಗ ಬಸವಣ್ಣ ಅಲ್ಲೇ ಶಿವನ ಪಾದದ ಮ್ಯಾಲೆ ಬಿದ್ದು ಶಿವ ಶಿವ ಅಂತಂತೆ. ಶಿವನಿಗೆ ಆಗ ಲೋಕದಲ್ಲಿ ನೀರಿಲ್ಲದ ಬಾಧೆ ಅರ್ಥವಾಗಿ ಚರಿಗೆ ಉರುಳಿದಾಗ ಸುರಿದ ನೀರು ಹೊಳೆಯಾಗಿ ಎಂದಿಗೂ ಬತ್ತದೆ ಹರಿಯಲಿ ಎಂದು ಆಶೀರ್ವಾದ ಮಾಡದ್ನಂತೆ. ಅವೊತ್ತಿಂದ ಮೊನ್ನೆ ಮೊನ್ನೆಯವರೆಗೆ ಚರಿಗೆಹಳ್ಳ ತಾಯಂಗೆ ಎಂಥೆಂಥ ಬೇಸಿಗೆ ಬರಗಾಲ್ದಾಗೂ ಊರ್ನ ಕಾಡಾಡ್ತ ಬರ್ತಿದ್ಲು. ಹಳ್ಳ ಒಣಗಿದ್ದು ನಾವು ನೋಡಿರ್ಲಿಲ್ಲ. ಆದರೆ ಯಾವಾಗ ಊರಾಗ್ನೋರು ಭೂಮಿತಾಯ ಎದೆ ಮ್ಯಾಲೆ ಪೈಪೋಟಿಯಿಂದ ಬೋರು ಕೊರ್ದು ಗಂಗಮ್ಮನ್ನ ಭಿನ್ನ ಮಾಡಿಬಿಟ್ರೊ, ಆವಾಗಿನಿಂದ ನೀರು ನೋಡ್ನೋಡ್ತಾ ಕಡಿಮೆಯಾಗಿ ಈಗ ಒಣಗಿ ಹೋಗಿದೆ. ಪಾಪ ಮಾಡಿ ಪಾತಾಳಕ್ಕೆ ಹೋದ್ರೆ ಬೆನ್ನು ಬಿಟ್ಟಾತ ಅದು. ನಮ್ಮಾಗೆ ತಪ್ಪಿಟ್ಟುಕೊಂಡು ಗಂಗಮ್ಮನ ದೂರಿದ್ರೆ ಹೆಂಗಪ್ಪ ಅಂತ ಅಂದು ನಿಸೂರಾದ್ಲು. ಈ ನಿರೂಪಣೆಯನ್ನ ಕೇವಲ ಕತೆಯಂತ ಅಥವಾ ಕಲ್ಪಕತೆಯಂತ ಕರೆಯಲು ನನ್ನ ನಾಲಗೆ ಏಳುತ್ತಿಲ್ಲ. ಭೂತದ ಅನುಭವಗಳನ್ನು ವರ್ತಮಾನದ ವಾಸ್ತವವನ್ನು ಏಕತ್ವಾಗಿ ಹಿಡಿದಂತೆ ಭಾಸವಾಗುತ್ತಿದೆ. ಭೂತಕ್ಕೆ ಸಂಬಂಧಪಟ್ಟ ಬರ ಮತ್ತು ಅದರ ಭೀಕರತೆಯನ್ನು ನಿರುದ್ವಿಗ್ನವಾಗಿ ಮಂಡಿಸುವ ಕತೆ. ಚರಿಗೆಹಳ್ಳದ ವಿಷಯದಲ್ಲಿ

ಉದ್ವಿಗ್ನಕ್ಕೆ ಒಳಗಾಗುತ್ತದೆ. ದೇವರನ್ನು ಕಕ್ಕಸಿಗಾಗಿ ಬಯಲಿಗೆ ಬರುವಂತೆ ಕಲ್ಪಿಸುವಲ್ಲೇ ಈ ಕಥನದ ಯಶಸ್ಸು ಅಡಗಿದೆ. ಮುಂದೆ ತ್ರಿಲೋಕೇಶ್ವರನಾದ ದೇವರಿಗೆ ಈ ಲೋಕದ ಕಷ್ಟ ಅರಿವಾಗುವ ನಾಟಕ ನಡೆಯುತ್ತದೆ. ಮುಖ್ಯವಾಗಿ ದೈವವು ಮಾನವೀಕರಣಗೊಂಡ ಮೇಲೆಯೇ ಈ ನೆಲದ ಉರಿ ಅರ್ಥವಾಗುತ್ತದೆ. ಮುಂದುವರಿದು ಆಧುನಿಕ ಮನುಷ್ಯ ನೀರಿನ ಪಾವಿತ್ರ್ಯವನ್ನು ಭಗ್ನಗೊಳಿಸಿದ ಕತೆಯನ್ನು ವಿವರಿಸುತ್ತದೆ. ಚರಿಗೆಹಳ್ಳ ತನಗೆ ತಾನೇ ಬತ್ತಿ ಹೋಗಿಲ್ಲ. ಅದು ನೀರು–ನೆಲದ ಮೇಲೆ ನಡೆದಿರುವ ಆಕ್ರಮಣಗಳ ಪರಿಣಾಮವಾಗಿ ಬತ್ತಿಹೋಯ್ತು ಎನ್ನುವ ಗ್ರಹಿಕೆ ಕಾಲಧರ್ಮದ ಅತ್ಯಂತ ಸೂಕ್ಷ್ಮವೂ ಆಧುನಿಕವೂ ಆದ ಸಂವೇದನೆಯಾಗಿ ಕಂಡು ಬರುತ್ತದೆ. ಇಂದು ನೀರು ವ್ಯಾಪಾರದ ಉಪಭೋಗದ ವಸ್ತುವಾಗಿ ಪರಿಗಣಿತವಾಗಿರುವ ನೆಲೆಯಲ್ಲಿ ಮನುಷ್ಯ ಮತ್ತು ನೀರಿನ ಸಂಬಂಧದ ಸ್ವರೂಪದಲ್ಲಾದ ಬದಲಾವಣೆಯನ್ನು ಈ ಕಥನ ಅನಾವರಣಗೊಳಿಸಿರುವಂತೆ ಕಾಣುತ್ತದೆ. ಆಧುನಿಕ ಬೇಸಾಯ ಪದ್ಧತಿಗಳಿಗೆ ಮಾರುಹೋದ ರೈತವರ್ಗ ಪೈಪೋಟಿಯಿಂದ ಕೊಳವೆ ಬಾವಿಗಳನ್ನು ಕೊರೆದು ನೆಲದ ಜೀವ ಸೆಲೆಯಾದ ಅಂತರ್ಜಲವನ್ನು ದಿನೇ ದಿನೇ ಬರಿದು ಮಾಡುತ್ತಿರುವುದರಿಂದ ಬಂದು ಎರಗಿರುವ ದುರಂತವನ್ನು ಸೂಚಿಸುತ್ತದೆ. ಬರಿದಾದದ್ದು ಬರಿ ಚರಿಗೆಹಳ್ಳ ಮಾತ್ರವಲ್ಲ ಎಂಬ ಸತ್ಯವನ್ನು ಈ ಕತೆ ಕಟ್ಟುವ ಮುಪ್ಪಾಗಿ ಮುದುಕಿ ಗ್ರಹಿಸುತ್ತಿರುವ ಕ್ರಮವೂ ಆಧುನಿಕರಾದ ನಮಗೆ ಅರ್ಥವಾಗದಿರುವುದು ಅಚ್ಚರಿಯ ಸಂಗತಿಯಾಗಿದೆ.

ಈ ಹಿನ್ನೆಲೆಯಲ್ಲಿ ಜಾನಪದ ಮನಸ್ಸು ಆದಿಯಿಂದ ಇಂದಿನವರೆಗೂ ನೀರನ್ನು, ಅದರ ವಿವಿಧ ರೂಪಗಳನ್ನು ಹೇಗೆ ಗ್ರಹಿಸಿದೆ ಮತ್ತು ಪ್ರತಿಕ್ರಿಯಿಸಿದೆ ಎಂಬುದನ್ನು ವಿವರಿಸಿಕೊಳ್ಳಲು ಪ್ರಯತ್ನಿಸಲಾಗಿದೆ. ಜನಪದರನ್ನು ನೀರು ಕಾಡಿರುವಂತೆ ಮತ್ತ್ಯಾವ ವಸ್ತುವೂ ಕಾಡಿದ ಹಾಗೆ ಕಾಣುವುದಿಲ್ಲ. ನೀರಿನ ಪ್ರಾಕೃತಿಕ ರೂಪವಾಗಿ ಮಳೆ, ನೀರಿನ ವಿರಾಟ್ ಶಕ್ತಿಯಾಗಿ ನರಿ, ಬಲಿಬೇಡುವ ದೇವತೆಯಾಗಿ [ಕೆರೆಗೆಹಾರ], ಪರಿಶುದ್ಧಗೊಳಿಸುವ ಪವಿತ್ರ ತೀರ್ಥವಾಗಿ, ಪ್ರಾಣ ಪ್ರತಿಷ್ಠಗೊಳಿಸುವ ವೀರ್ಯವಾಗಿಯೂ, ಆಕಾಶ ಭೂಮಿಗಳನ್ನು ಒಂದು ಮಾಡುವ ಮಧ್ಯಮವಾಗಿಯೂ ನೀರು ತನ್ನ ಹರಿವ ಸುರಿವ ರೂಪಗಳಿಂದ ಜನಪದರ ಬದುಕನ್ನ ಪ್ರಭಾವಿಸುತ್ತಾ ಬಂದಿದೆ. ನೀರಿನೊಂದಿಗೆ ಮನುಷ್ಯನ ಅತ್ಯಂತ ವಿಶ್ವಾಸದ ಒಡನಾಟವಿದ್ದರೂ ಆ ಸಲಿಗೆಯಲ್ಲಿ ನಿರಂತರವಾದ ಎಚ್ಚರವನ್ನು ಕಾಯ್ದುಕೊಂಡಿರುವುದಕ್ಕೆ ನಂಬಿಕೆ, ಆಚರಣೆ ಕಥನಗಳಲ್ಲಿ ಪುರಾವೆಗಳು ಸಿಕ್ಕುತ್ತವೆ. ಪ್ರತಿಯೊಂದು ಮೂಲಭೀತ ಪದಾರ್ಥಕ್ಕೂ ಸೃಷ್ಟಿ ಮತ್ತು ನಾಶದ ಗುಣಗಳು ಸಹಜವಾಗಿದ್ದರೂ, ನೀರಿನ ಮೂಲಕ ಅವು ಪ್ರಕಟಗೊಂಡ ಹಾಗೆ ಬೇರಾವ ವಸ್ತುವಿನಲ್ಲೂ ಅವು ಅಭಿವ್ಯಕ್ತಿಗೊಂಡಿಲ್ಲ.

ಹಾಗೆ ನೋಡಿದರೆ ಮನುಷ್ಯ ಮುಖಾಮುಖಿಯಾದ ಪ್ರಪ್ರಥಮ ನಿಸರ್ಗ ಶಕ್ತಿ ನೀರೇ ಆಗಿರುವುದನ್ನ ಜನಪದ ಪರಂಪರೆ ಜ್ಞಾಪ್ತಿಯಲ್ಲಿಟ್ಟುಕೊಂಡಿದೆ. ಜನಪದ ಲೋಕದೃಷ್ಟಿಯಲ್ಲಿ ನೀರು ಪೂರ್ಣ ತತ್ವದ ಪ್ರತೀಕವಾಗಿದೆ. ದೈವತ್ವದ, ತಾಯ್ತನದ, ನಿಸರ್ಗದ, ಮುಖ್ಯವಾಗಿ ಫಲವಂತಿಕೆಯ ಮೂಲಮಾತೃಕೆಯಾಗಿ ಸ್ವೀಕಾರವಾಗಿದೆ. ಜನಪದರ ಜೀವನಾ ವರ್ತಗಳಾದ ಹುಟ್ಟು, ಸಾವು, ಮದುವೆಗಳಲ್ಲಿ ದೇವರ ಹಾಜರಿಯಾಗಿ ಪ್ರಾಣವನ್ನು ಪಂಚಭೂತಗಳೊಂದಿಗೆ ಬೆಸೆಯುವ ಮಾಧ್ಯಮವಾಗಿ ಚಿತ್ರಿತವಾಗಿದೆ. ಇನ್ನೂ ಸ್ಪಷ್ಟಪಡಿಸುವುದಾರೆ ವೈದಿಕ ಜೀವನಾವರ್ತಗಳಲ್ಲಿ ಅಗ್ನಿ ನಿರ್ವಹಿಸುವ ಕಾರ್ಯಗಳನ್ನು ಜನಪದರಲ್ಲಿ ನೀರು ನಿರ್ವಹಿಸುತ್ತದೆ.

**ಹುಟ್ಟು**

ಹುಟ್ಟಿನ ಮೈಲಿಗೆಯನ್ನು ತೊಳೆಯುವುದರಿಂದ ನೀರು ಮನುಷ್ಯನ ಪ್ರಜ್ಞಾವಲಯಕ್ಕೆ ಅಧಿಕೃತ ಪ್ರವೇಶ ಮಾಡುತ್ತದೆ. ಬಾಣಂತಿಯನ್ನು ಮೂರು ತಿಂಗಳ ನಂತರ ನೀರ ಮೂಲವೊಂದರ ಬಳಿ ಕರೆತಂದು ನೀರು ಮುಟ್ಟಿಸುವ ಆಚರಣೆಯೊಂದನ್ನು ನಡೆಸುತ್ತಾರೆ. ಈ ಆಚರಣೆಯಲ್ಲಿ ಆಕೆಯ ಫಲಪಾತ್ರೆಯನ್ನು ಪರಿಶುದ್ಧಗೊಳಿಸುವ ಆಶಯ ಕೆಲಸ ಮಾಡುತ್ತಿರುವುದನ್ನು ಗುರುತಿಸಬಹುದು. ಹುಟ್ಟಿನ ಐದನೆಯ ದಿನ ಮಗು ಮತ್ತು ಬಾಣಂತಿಗೆ ನೀರೆರೆಯುವ ಶಾಸ್ತ್ರನಡೆಯುತ್ತದೆ. ಅಲ್ಲಿಗೆ ಹುಟ್ಟಿನ ನಂಟು ಮುಗಿದ ಹಾಗೆ ಎಂದು ಭಾವಿಸಲಾಗುತ್ತದೆ. ಇನ್ನು ಹೆಸರಿಡುವ ಆಚರಣೆಯಲ್ಲಿ ಮುತ್ತೈದೆಯರು ನೀರಬಾವಿಗೆ ಹೋಗಿ ಗಂಗೆ ಪೂಜೆ ಮಾಡಿ ನೀರು ತುಂಬಿದ ಕೊಡವೊಂದನ್ನು ತಂದು ತೊಟ್ಟಿಲ ಕೆಳಗೆ ಇಡುತ್ತಾರೆ. ಅನಂತರ ಮಗುವಿನ ಕಿವಿಯಲ್ಲಿ ಹೆಸರನ್ನು ಉಚ್ಚರಿಸುತ್ತಾರೆ, ತುಂಬಿದ ಕೊಡ ದೈವದ ಸಂಕೇತವಾಗಿಯೂ, ತುಂಬು ಆಯಸ್ಸಿನ ಸೂಚಕವಾಗಿಯೂ ಬಳಕೆಯಾಗುತ್ತದೆ. ಈ ನೀರಿನಲ್ಲಿ ಮೇಲಿನ ಮತ್ತು ಕೆಳಗಿನ ಲೋಕಗಳು ಅಸ್ತಿತ್ವ ಪಡೆದಿವೆಯಾದ್ದರಿಂದ ಆ ಎಲ್ಲಾ ದೇವತೆಗಳ ಕೃಪೆ ಮಗುವಿಗೆ ದಕ್ಕುತ್ತದೆ ಎಂದು ನಂಬುತ್ತಾರೆ. ಹೀಗೆ ಮಗುವಿನ ಹುಟ್ಟು ಮತ್ತು ಹೆಸರಿಡುವ ಮುಖ್ಯ ಆಚರಣೆಗಳಲ್ಲಿ ನೀರು ಪ್ರಧಾನವಾದ ಮಹತ್ವವನ್ನು ಪಡೆದುಕೊಂಡಿದೆ.

**ಮದುವೆ**

ಮದುವೆಯಲ್ಲಿ ಇಂದಿಗೂ ನೀರು ತುಂಬಿದ ಕಳಶ ಪ್ರಧಾನ ವಸ್ತುವಾದರೆ ಧಾರೆ ಪಾಣಿಗ್ರಹಣಕ್ಕಿಂತ ಬಹುಮುಖ್ಯ ಘಟನೆಯಾಗಿದೆ. ಕಳಶ ಮೂಲತಃ ಫಲವಂತಿಕೆ ಪರಂಪರೆಯ ಆದಿಮ ರೂಪ (ಫರ್ಟಿಲಿಟಿ ಕಲ್ಟ್)ವಾಗಿದ್ದು ಜೀವೋತ್ಪತ್ತಿಯನ್ನು ಸೂಚಿಸುವುದಾಗಿತ್ತು. ಫಲವಂತಿಕೆಯ ಮಾತೃದೇವತೆಯಾಗಿತ್ತು. ಕಾಲ ಬದಲಾದಂತೆ ಕಳಶವು ಆರ್ಯೀಕರಣಗೊಂಡು

ಫಲವಂತಿಕೆಯ ಗುಣಗಳು ಮರೆಯಾಗಿ, ಇಂದು ಕೇವಲ ಅಸ್ತಿತ್ವವನ್ನು ಉಳಿಸಿಕೊಂಡಿವೆ. ಧಾರೆ ಕೂಡ ಅವೈದಿಕ ಆಚರಣೆಯಾಗಿದ್ದು ಗಂಡು–ಹೆಣ್ಣುಗಳ ನಡುವಿನ ಸಂಬಂಧವನ್ನು ಅಭೇದ್ಯಗೊಳಿಸುವಂತೆ ಕೂಡಿದ ನಂಟನ್ನು ಬಿಡಿಸಲಾಗದಂತೆ ನೀರಿನ ಮೂಲಕ ಬೆಸೆಯುತ್ತಾರೆ. ಈ ಕ್ರಿಯೆಗೆ ಮತ್ತೊಂದು ಉದ್ದೇಶವೂ ಇದೆ. ಈ ಹೊಸ ನಂಟನ್ನು ಸಮಾಜ ಸಮ್ಮತಿಯಾಗಿಸುವುದು. ಮದುವೆಯ ನಂತರ ಹೆಣ್ಣು ಅತ್ತೆಯ ಮನೆಯ ಹೊಸಲು ಮೆಟ್ಟುವ ಮುನ್ನ ಬಾವಿಗೆ ಹೋಗಿ ಗಂಗೆಯನ್ನು ಪೂಜಿಸಿ ನವಧಾನ್ಯಗಳನ್ನು ಅಲ್ಲಿ ಬಿತ್ತನೆ ಮಾಡಿ, ಹೊಸ ಗಡಿಗೆಯಲ್ಲಿ ನೀರೊತ್ತು ಹೊಸಲು ದಾಟಬೇಕೆಂಬ ನಿಯಮವಿದೆ. ನವಧಾನ್ಯಗಳು ಮೊಳಕೆಯೊಡೆಯುವುದು ವಂಶವಾಹಿನಿಯ ನಿರಂತತೆಯನ್ನು ಸೂಚಿಸುವ ಶಕುನವಾದರೆ, ನೀರು ತುಂಬು ಜೀವನದ ಭರವಸೆಯನ್ನು ನೀಡುವ ಚಟುವಟಿಕೆಯಾಗಿ ನೋಡಲು ಸಾಧ್ಯವಿದೆ. ಅಲ್ಲದೆ ಮದುವೆಯ ಮಾತುಕತೆ, ಸಂಬಂಧ ಪ್ರಸ್ತಾಪ, ಮನೆನೋಡುವ ಹಂತಗಳಲ್ಲಿ ನಿರ್ಣಯ ಕೈಗೊಳ್ಳಲು ನೀರಿನ ಶಕುನವನ್ನು ನಿರೀಕ್ಷಿಸುವುದುಂಟು. ತುಂಬಿದ ಕೊಡ ಎದುರಾದರೆ ಶುಭವೆಂತಲೂ, ಮಳೆ ಬಂದರೆ ಸಮೃದ್ಧಿಯೆಂತಲೂ ನಂಬುತ್ತಾರೆ. ಆದರೆ ಶಕುನ ವಿಚಾರದಲ್ಲಿ ಅಗ್ನಿಯನ್ನು ಕೆಡುಕಿನ ಸಂಕೇತವಾಗಿ ಅಶುಭದ ಚಿಹ್ನೆಯಾಗಿ ಜನಪದ ಪರಂಪರೆ ಭಾವಿಸುತ್ತದೆ. ಅಗ್ನಿ ಹಾಜರಿಯಲ್ಲಿ ಮದುವೆ ನಡೆವ ಸಂದರ್ಭದಲ್ಲೂ ಬಟ್ಟೆ ಸುಟ್ಟರೆ, ಚಪ್ಪರಕ್ಕೆ ಬೆಂಕಿ ಬಿದ್ದರೆ ಅಪಶಕುನ ಮತ್ತು ಕೇಡಿನ ಸೂಚನೆ ಎನ್ನುವ ಮನೋಭಾವ ಜನಪದರಲ್ಲಿದೆ.

ಹೀಗೆ ಅಗ್ನಿ ಮತ್ತು ನೀರಿನ ಹಾಜರಿಯಲ್ಲಿ ಮದುವೆ ನಡೆದರೂ ಅವುಗಳನ್ನು ಪರಸ್ಪರ ವಿರುದ್ಧ ಗುಣಗಳಲ್ಲಿಯೇ ಜನಪದರು ಪರಿಭಾವಿಸಿರುವುದರ ಹಿಂದೆ ಬಹುಮುಖ್ಯವಾದ ಸಾಂಸ್ಕೃತಿಕ ಕಾರಣವಿರಬೇಕೆಂದು ಅನ್ನಿಸುತ್ತದೆ.

**ಸಾವು**

ಸಾವಿನ ಸಮ್ಮುಖದಲ್ಲೂ ಜೀವ ನೀರಿನೊಂದಿಗೇನೆ ಈ ಲೋಕ ವ್ಯಾಪಾರ ಮುಗಿಸಿರುವ ರೂಢಿ ಇನ್ನೂ ಅಸ್ತಿತ್ವದಲ್ಲಿದೆ. ಸಾವಿನ ಆಚರಣೆಯಲ್ಲಿ ನೀರು ಜೀವನವನ್ನು ಪರಿಶುದ್ಧ ಮಾಡಿ ಮತ್ತೆ ತಾಯಿಗರ್ಭಕ್ಕೆ ಹಿಂತಿರುಗಿಸುವ ಆಶಯ ಕೆಲಸ ಮಾಡುತ್ತರುವಂತೆ ಕಾಣುತ್ತದೆ. ಜನಪದ ಸಂಪ್ರದಾಯಗಳಲ್ಲಿ ಹೆಣವನ್ನು ಮಣ್ಣಿನಲ್ಲಿ ಹೂಳುವ ಪದ್ಧತಿಯಿದೆ. ಶರೀರವನ್ನು ಹೂಳುವುದೆಂದರೆ ತಾಯ ಗರ್ಭದಲ್ಲಿ ಇಡುವುದೇ ಆಗಿದೆ. ಸತ್ತ ಜೀವ ಭೂತಾಯ ಹೊಟ್ಟೆಯಲ್ಲಿ ಮತ್ತೊಂದು ಜನ್ಮದವರೆಗೆ ಇರುತ್ತಾನೆ ಎಂದು ಈ ಸ್ಮೃತಿ ನಂಬುತ್ತದೆ.

ಸಾವಿನ ಆಚರಣೆಯಲ್ಲಿ ಬಹುಮುಖ್ಯವಾಗಿ ತಲೆಗೊರವೆ ಎಂಬ ಆಚರಣೆಯಿದೆ. ತೀರಿಕೊಂಡವನ ಹಿರಿ ಮಗ ಅಥವಾ ರಕ್ತ ಸಂಬಂಧಿ ಈ ಕ್ರಿಯೆಯನ್ನು ನೆರವೇರಿಸಬೇಕು. ಸತ್ತವನಿಗೆ ಮಣ್ಣು ಕೊಟ್ಟ ಮೇಲೆ ನಡೆಯುವ ಕ್ರಿಯೆ ಇದು. ತುಂಬಿದ ಕೊಡವನ್ನು ಭುಜದ ಮೇಲೆ ಹೊತ್ತು ಹುಳಿಯ ಸುತ್ತ ಮೂರು ಸುತ್ತು ತಿರುಗಬೇಕು. ಹಾಗೆ ತಿರುಗುವಾಗ ನೀರಗಂಟಿ ಮೊಚ್ಚಿನ ಮೊನೆಯಿಂದ ಗಡಿಗೆಯನ್ನು ತೂತು ಮಾಡುತ್ತಾ ಹೋಗುತ್ತಾನೆ. ಮೂರನೇ ಸುತ್ತಿನ ಹೊತ್ತಿಗೆ ಗಡಿಗೆ ಬರಿದಾಗಿರುತ್ತದೆ. ಬರಿದಾದ ಆ ಗಡಿಗೆಯನ್ನು ಬೆನ್ನ ಹಿಂದಿನಿಂದಲೇ ನೆಲಕ್ಕೆ ಬಿಡುತ್ತಾನೆ. ಅದು ಹೊಡೆದು ಹೋಳಾಗಿ ಹೋಗುತ್ತದೆ. ಈ ಕ್ರಿಯೆ ಜೀವಯಾನದ ಅಣಕು ನಾಟಕದ ಹಾಗೆ ತೋರುತ್ತದೆ. ತುಂಬಿದ ಗಡಿಗೆ ಆಯಸ್ಸನ್ನು, (ಹೆಸರಿಡುವಾಗ ತುಂಬಿದ ಗಡಿಗೆ ತೊಟ್ಟಿಲ ಕೆಳಗೆ ಇಟ್ಟಿದ್ದನ್ನ ನೆನಪಿಸುತ್ತದೆ) ಸುರಿದು ಹೋಗುವ ನೀರು ಕಾಲವನ್ನು, ಕೊಡ ಒಡೆಯುವುದು ಸಾವನ್ನು ಪುನರ್ ಅಭಿನಯಿಸಿ ತೋರುತ್ತದೆ. ಎಂದೂ ಬಾರದ ಜವರಾಯ, ಇಂದೇಕೆ ಬಂದಿರ/ಕೊಳ್ಳಯ್ಯ ನೀರ/ಕುಡಿನೀರ. ಈ ಹಾಡಿನಲ್ಲಿ ಜೀವ ಬೇಟೆಗೆ ಬಂದ ಜವರಾಯನನ್ನು ನೆಂಟನಂತೆ ಆಹ್ವಾನಿಸಿ ಕೊಳ್ಳಯ್ಯ ನೀರ ಕುಡಿನೀರ ಎನ್ನುವಲ್ಲಿ ನೀರು ಮತ್ತು ಜೀವ ಸಮೀಕರಣಗೊಳ್ಳುವುದು ಧ್ವನಿತವಾಗುತ್ತದೆ. ಇತ್ತ ವ್ಯಕ್ತಿಯು ಸತ್ತ ಜಾಗದಲ್ಲಿ ದವಸದ ಶಾಸ್ತ್ರಗಳು ಮುಗಿಯುವವರೆಗೂ ನೀರು ತುಂಬಿದ ಚೆಂಬನ್ನು ಇಡುವುದು ವಾಡಿಕೆಯಲ್ಲಿದೆ. ಸಾವಿನ ಸೂತಕದ ಕಾಲದಲ್ಲಿ ಮಧ್ಯಂತರ ಜಗತ್ತಿನಲ್ಲಿರುವ ಜೀವ ಬಂದು ನೀರು ಕುಡಿಯುತ್ತದೆ ಎಂಬ ನಂಬಿಕೆ ಕೆಲಸ ಮಾಡುವುದನ್ನು ಕಾಣಬಹುದು. ಮೂರು ದಿನ ಹಾಲು ದಿವಸದ ದಿನ ನೀರು ತುಂಬಿದ ಕೊಡಕ್ಕೆ ಪೂಜೆ ಸಲ್ಲಿಸುವ ಮೂಲಕ ಅಗಲಿದ ಜೀವವನ್ನು ಪೂರ್ವಿಕರ ಜಗತ್ತಿಗೆ ಪ್ರವೇಶಗೊಳಿಸುವ ಕ್ರಿಯೆ ನಡೆಯುತ್ತದೆ. ಪಂಚಭೂತಗಳಿಂದ ಮಾಡಲ್ಪಟ್ಟ ಶರೀರವನ್ನು ಮತ್ತೆ ಪಂಚಭೂತಗಳಿಗೆ ಒಪ್ಪಿಸುವ ಕ್ರಿಯೆ ನಡೆಯುತ್ತದೆ. ಹೀಗೆ ನೀರು ಮನುಷ್ಯನ ಜೀವನದ ಆದಿ ಮತ್ತು ಅಂತ್ಯದವರೆಗೂ ಪ್ರಭಾವಿಸುವ ಪ್ರಕಿಯೆಯನ್ನು ಗುರುತಿಸಬಹುದು. ಇಲ್ಲಿಂದ ಜನಪದ ಲೋಕದೃಷ್ಟಿ ನೀರಿನ ವಿವಿಧ ರೂಪಗಳನ್ನು ಹೇಗೆ ಗ್ರಹಿಸಿದೆ ಮತ್ತು ಅನುಸಂಧಾನ ನಡೆಸಿದೆ ಎಂಬುದನ್ನು ಗಮನಿಸಲಾಗುವುದು.

**ನೀರು ದೇವತೆಯಾಗಿ (ಗಂಗಮ್ಮ)**

ಜನಪದರ ಸ್ಮೃತಿಯಲ್ಲಿ ನೀರು ಕೇವಲ ಜಲ ದೇವತೆಯಲ್ಲ, ಆಕೆ ಇಡೀ ನಿಸರ್ಗದ ಪ್ರತೀಕ, ವೈದಿಕ ಆಲೋಚನಾ ಕ್ರಮಗಳು ಭಾರತೀಯ ಜೀವನ ಕ್ರಮಗಳನ್ನು ಪ್ರಭಾವಿಸುವ ಮುನ್ನ ಮಾತೃಮೂಲ ಸಮಾಜಗಳಲ್ಲಿ ಗಂಗೆ ಆದಿಶಕ್ತಿಯಾಗಿ, ಸೃಷ್ಟಿ ಮತ್ತು ನಾಶದ ಸ್ವರೂಪಿಯಾಗಿ

ಸ್ವೀಕಾರವಾಗಿದ್ದಳು. ಆಕೆ ಲೋಕ ನಿಯಂತ್ರಕಳೂ ಆಗಿದ್ದಳು. ಫರ್ಟಿಲಿಟಿ ಕಲ್ಟಿನ ಅನೇಕ ಕುರುಹುಗಳು ಈ ವಿಷಯವನ್ನು ಸಾಬೀತು ಪಡಿಸಿವೆ. ಆರ್ಯರು ರಾಜ್ಯ, ಅಧಿಕಾರ ಮತ್ತು ಪುರೋಹಿತಶಾಹಿ ವಿಧಿಗಳ ಮೂಲಕ ಸ್ಥಳೀಯ ಜನಸಂಸ್ಕೃತಿಯ ಗುರುತುಗಳನ್ನು ನಾಶಪಡಿಸುತ್ತಾ ಬಂದ ಮೇಲೆ ಗಂಗೆ ಶಿವನ ಹೆಂಡತಿಯಾಗಿ (ಅದೂ ಎರಡನೆಯವಳು) ಪರಾಧೀನೆಯಾಗಿದ್ದೂ, ಸ್ವತಂತ್ರ ಕ್ರಿಯಾವರ್ತಗಳನ್ನು ಕಳೆದುಕೊಂಡು ಇಂದು ಒಂದು ಗ್ರಾಮದೇವತೆಯ ಸ್ಥಾನಕ್ಕೆ ಒತ್ತಲ್ಪಟ್ಟಿದ್ದಾಳೆ. ಆದರೆ ಇಂದಿಗೂ ಎಲ್ಲಾ ಶಿಷ್ಟ ದೇವತೆಗಳ ಪೂಜೆಗಳು ಗಂಗೆ ಪೂಜೆಯಿಂದಲೇ ಆರಂಭವಾಗುವ ಪದ್ಧತಿ ರೂಢಿಯಲ್ಲಿರುವುದು ಗಂಗೆಯ ಪಾರಮ್ಯವನ್ನು ನೆನಪಿಸುವ ಹಾಗೆ ಭಾರತದ ಸಾಂಸ್ಕೃತಿಕ ರಾಜಕಾರಣವನ್ನು ವಿವರಿಸುವ ಬಹುಮುಖ್ಯ ಪಠ್ಯವಾಗಿಯೂ ಉಳಿದಿದೆ. ಕರ್ನಾಟಕದಲ್ಲಿ ಕೆರೆ, ಜಲಾಶಯಗಳು ತುಂಬಿದಾಗ ಬಾಗಿನವಿತ್ತು ಪೂಜೆ ಮಾಡುವ ಆಚರಣೆಗಳನ್ನ ಸರ್ಕಾರವೇ ಇಂದಿಗೂ ನಡೆಸುವ ಪದ್ಧತಿಯಿದೆ. ಇನ್ನು ಜಾನಪದ ವರ್ಷಾಚರಣೆಗಳಾದ ಹೊನ್ನೇರು–ಅತ್ತೆಮನೆ, ಹೊಂಗಲು–ಸುಗ್ಗಿ ಮುಂತಾದವು ಗಂಗೆಯನ್ನು ಓಲೈಸುವ ವಿಧಿಗಳೇ ಆಗಿವೆ. ಗಂಗೆ ಪೂಜೆಗೆ ಸಂಬಂಧಪಟ್ಟ "ಬಲಿ" ಕೇಂದ್ರವಾದ ಕೆರೆಗೆ ಹಾರದಂತಹ ನೂರಾರು ಕಥನಗಳು ಜನಪದರು ನೀರನ್ನು ದೇವತೆಯಾಗಿಸಿ ಗ್ರಹಿಸಿರುವ ವಿನ್ಯಾಸಗಳನ್ನು ಒಳಗೊಂಡಿವೆ. ಈ ಕಥನಗಳು ಅಕ್ಷರ ಚರಿತ್ರೆ ದಾಖಲಿಸದ, ಚರಿತ್ರೆಯು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸಿದ ಅನೇಕ ಗುಟ್ಟುಗಳನ್ನು ಒಡಲೊಳಗೆ ಪೋಷಿಸಿಕೊಂಡಿವೆ.

ಜನಪದರ ಜೀವನ ಹಾಗೂ ಕನಸುಗಳು ನೀರಿನ ಪ್ರಾಕೃತಿಕ ರೂಪವಾದ ಮಳೆಯೊಳಗೆ ತಳಕು ಹಾಕಿಕೊಂಡಿವೆ. ಮಳೆಯಿಲ್ಲದೆ ಮನುಷ್ಯ ಪಟ್ಟಿರುವ ಪಾಡುಗಳನ್ನು ಜನಪದರು ಹಾಡಾಗಿಸಿದ್ದಾರೆ. ಆಚರಣೆಗಳಲ್ಲಿ ವಿಧಿಯಾಗಿಸಿದ್ದಾರೆ. ಜನಪದರ ಜೀವನಾಧಾರವಾದ ಕೃಷಿಯು ನಿಂತಿರುವುದೇ ಮಳೆಯ ಕಾರುಣ್ಯದಲ್ಲಿ. ಮಳೆಯ ಕುರಿತು ಜನಪದರು ಎರಡು ಬಗೆಯ ನಂಬಿಕೆಗಳನ್ನು ಅನುಭವದ ಆಧಾರದ ಮೇಲೆ ರಚಿಸಿಕೊಂಡಿದ್ದಾರೆ. ಒಂದು ಅನಾವೃಷ್ಟಿ ಮತ್ತೊಂದು ಅತಿವೃಷ್ಟಿ. ಈ ಎರಡೂ ಪರಸ್ಪರ ವಿರುದ್ಧ ಸ್ಥಿತಿಗಳಂತೆ ಕಂಡರೂ ಈ ಎರಡೂ ನಾಶದ ನೆಲೆಗಳೇ ಎನ್ನುವುದನ್ನು ಗಮನಿಸಬೇಕು.

ಬಣ್ಣಾದ ಗುಬ್ಯಾರು ಮಳಿರಾಜ ಅವರು
ಮಣ್ಣಾಗಿ ಹೋದಾರು ಮಳಿರಾಜ
ಒಕ್ಕಲಗೇರ್ಯಾಗ ಮಳಿರಾಜ ಅವರು
ಮಕ್ಕಾಳ ಮರ್‍ಯಾರಯ ಮಳಿರಾಜ (ಅನಾವೃಷ್ಟಿ)

ಸ್ವಾತೀಯ ಮಳಿಬಂದು ಮಳಿರಾಜ
ಸತ್ತ ದೇಶಕ ಆಗ್ಯಾದ ಮಳಿರಾಜ
ಹಳ್ಳಕೊಳ್ಳ ಹೆಣ ಹರಿದಾಡಿ ಹೋದಾವ್ರೋ
ಮಳಿರಾಜ (ಅತಿವೃಷ್ಟಿ)

ಮಳೆಬಾರದ ಸ್ಥಿತಿ ಮತ್ತು ಹೆಚ್ಚು ಮಳೆ ಸುರಿದೂ ಜೀವ ಸಂಭ್ರಮಗಳನ್ನು ನಾಶಪಡಿಸುವ ನೆಲೆಗಳನ್ನು ಮೇಲಿನ ಎರಡೂ ಚರಣಗಳು ಕಟ್ಟಿಕೊಡುತ್ತವೆ. ಈ ಬಗೆಯ ಅನುಭವಗಳನ್ನು ಅರ್ತವಾಗಿ ಕಟ್ಟಿಕೊಡುವ ನೂರಾರು ನಂಬಿಕೆ, ಕಥನ, ಗಾದೆಗಳು ಸಿಗುತ್ತವೆ. ತೆಲುಗು ಗಾದೆಯೊಂದು ಎಂಡೀ ಕರುವೆ ಪಂಡೀ ಕರುವೆ (ಒಣಗಿಯು ಬರ ಬೆಳೆದೂ ಬರ) ಎಂದು ಇಂತಹ ಪರಿಣಾಮವನ್ನು ವರ್ಣಿಸಿದೆ. ಮಳೆಗಾಗಿ ಪ್ರಾರ್ಥಿಸುವ ಮಳೆರಾಯನ ಪರವು–ಬಲಿಗಳು ಜನಪದ ಬದುಕನು ಇನ್ನೂ ಆಶಾವಾದಿಯಾಗಿಟ್ಟಿವೆ. ಮಳೆಗೆ ವೈದಿಕ ಪುರಾಣಗಳು ವಿವರಿಸುವಂತೆ ಗಂಡು ದೇವತೆಯಾದ ಇಂದ್ರ/ವರುಣ ಅಧಿಪತಿ. ಆದ್ದರಿಂದ ಪರ್ಜನ್ಯವ್ರತದ ಮೂಲಕ ಅವನನ್ನು ಸಂತುಷ್ಟಗೊಳಿಸುವ ಆಚರಣೆಗಳನ್ನು ಶಿಷ್ಟ ಪರಂಪರೆ ಹುಟ್ಟು ಹಾಕಿದೆ. ಆದರೆ ಪರಂಪರೆಯು ಮಳೆಯನ್ನು ಸ್ತ್ರೀ ದೇವತೆಯನ್ನಾಗಿ ಪರಭಾವಿಸಿದೆ. ಮಳೆಯ ಅನೇಕ ಹಾಡುಗಳಲ್ಲಿ ಗಂಡಿನ ಸ್ತುತಿ ಇರುವ ಹಾಗೆ ಮಳೆ ಹೆಣ್ಣು ಎಂಬ ವಿಚಾರವು ಸಮರ್ಥಿಸಲ್ಪಟ್ಟಿವೆ. ಮಾಯದಂಥ ಮಳೆ ಬಂತಣ್ಣ ಮದುಗಾದ ಕೆರೆಗೆ ಕಥನದಲ್ಲಿ ಮಳೆಯೇ ನಾನಿಲ್ಲುವಳಲ್ಲ ಎಂದು ತನ್ನನ್ನು ಸಂಬೋಧಿಸಿಕೊಳ್ಳುವುದನ್ನು ಗಮನಿಸಿದರೆ ಈ ಸೂಕ್ಷ್ಮ ಹೊಳೆಯುತ್ತದೆ. ಭಾರತದಲ್ಲಿ ಮಳೆಯ ಸ್ತ್ರೀ ರೂಪವನ್ನು ಗಂಡಾಗಿಸಿರುವುದರ ಹಿಂದೆ ಆರ್ಯೀಕರಣದ ಕೈವಾಡವಿದೆ. ಹೆಣ್ಣು ದೇವತೆಗಳನ್ನು ಗಂಡಾಗಿಸಿದ್ದು ಸಂಕರಗಳ ಅನಿವಾರ್ಯ ಲಕ್ಷಣವಾಗಿರುವುದನ್ನು ಸಂಶೋಧಕರು ಗುರುತಿಸಿದ್ದಾರೆ. ಈ ವಿವರಗಳು ಸಮಾಜ ವಿಕಾಸದ ಬೆಳವಣಿಗೆಯ ಮೇಲೆ ಬೆಳಕು ಚಲ್ಲುವಂತಿವೆ.

**ನದಿ**

ಹಾಂವ ಅಂದರೆ ಜೀವ ಹರಣವ ಹಾರ್ಯಾವ
ಹಾಂವಲ್ಲ ಹಂಪಿ ವಿರೂಪಾಕ್ಷ / ನಿನ ಮುಂದ
ಹಾಂವಾಗಿ ಗಂಗಿ ಹರಿದಾಳ!

ಜನಪದ ಪ್ರಜ್ಞೆ ನದಿಯನ್ನು ಗ್ರಹಿಸುತ್ತಿರುವ ಮುಖ್ಯವಾದ ಮಾದರಿಯೊಂದನ್ನು ಈ ಚರಣ ವಿವರಿಸುತ್ತದೆ. ನದಿ ಮತ್ತು ಹಾವು ಸಮೀಕರಣಗೊಳ್ಳುವ ರೂಪಕ ವಿಶಿಷ್ಟವಾಗಿದೆ. ಈ ರಚನೆಯಲ್ಲಿ

ಹಾವು ಸಾವನ್ನ ಮತ್ತು ಆಕರ್ಷಣೆಯನ್ನು ಏಕಕಾಲಕ್ಕೆ ನೆನಪಿಗೆ ತರುವ ಅರ್ಥದ ಸಹಯೋಗಗಳು ನದಿಯ ವಿಲಾಸವನ್ನು, ಪ್ರವಾಹದಂತಹ ನಿಗೂಢ ನೆಲೆಯನ್ನು ಹಾವಿನ ನಡೆ ಚಲನೆ ವಿಷದ ಅಪಾಯದ ಜೊತೆಗೆ ಸಮೀಕರಿಸುವಂತೆ ಕಾಣುತ್ತದೆ. ಆದ್ದರಿಂದಲೇ ಹಾವಾಗಿ ಗಂಗೆ ಹರಿದಾಳ ಎನ್ನುವುದು ಅದ್ಭುತ ಪರಿಣಾಮವನ್ನು ಉಂಟು ಮಾಡುತ್ತದೆ. ಆದಿಮ ಕಾಲದಿಂದಲೂ ನದಿಗಳ ದಡದಲ್ಲಿದ್ದ ನಾಗರೀಕತೆಗಳನ್ನು ನೀರು ತನ್ನ ಪ್ರವಾಹಗಳಿಂದ ನಾಶಪಡಿಸುತ್ತಾ ಬಂದಿದ್ದರೂ ಮತ್ತೆ ಮತ್ತೆ ಅಲ್ಲೇ ನಾಗರಿಕತೆಗಳನ್ನ ಕಟ್ಟುತ್ತಾ ಬಂದ ಕತೆಯೇ ಮಾನವ ಚರಿತ್ರೆಯಾಗಿದೆ. ಜನಪದರಿಗೆ ಮತ್ತು ಶಿಷ್ಟರಿಗೆ ಪಾಪ ಪರಿಹಾರದ ಪುಣ್ಯಕ್ಷೇತ್ರಗಳಾಗಿ ದೇವತಾ ಪ್ರತಿನಿಧಿಯಾಗಿ ನದಿಗಳು ಕಂಡಿವೆ.

ಹರಿಯೋ ನೀರಿಗೆ ಮೈಲಿಗೆ ಇಲ್ಲ ಎಂಬ ನಂಬಿಕೆ ಇಂದು ಛಿದ್ರವಾಗುತ್ತಿದೆ. ನಮ್ಮ ನಾಡಿನ ನದಿಗಳು ಕೈಗಾರಿಕೆ, ಗಣಿಗಾರಿಕೆ ಮತ್ತು ನಗರೀಕರಣಗಳಿಂದಾಗಿ ಒಂದೆಡೆ ವಿಷದ ಹೊಳೆಗಳಾಗಿ ಪರಿವರ್ತನೆಯಾಗುತ್ತಿದ್ದರೂ ಸ್ಮೃತಿಗಳಲ್ಲಿ ಮಾತ್ರ ಪರಿತ್ರವಾಗಿಯೇ ಉಳಿದಿರುವುದು ದುರಂತವನ್ನು ಮತ್ತಷ್ಟು ಗಾಢವಾಗಿಸಿದೆ.

**ತೀರ್ಥ**

ಇದು ನೀರಿನ ಮತ್ತೊಂದು ರೂಪ. ಜನಪದ ಅಂತಃಸತ್ವವನ್ನು ಒಳಗಿಂದ ನಿಯಂತ್ರಿಸುತ್ತಿರುವ ಮುಖ್ಯ ದ್ರವ್ಯವಾಗಿದೆ. ಪೂಜೆಯ ಸಂದರ್ಭದಲ್ಲಿ ಬಳಕೆಯಾಗುವ ನೀರು, ದೇವರಿಗೆ ಅರ್ಪಿಸಿದ ತೆಂಗಿನ ನೀರು, ಪಾದೋದಕ, ಯಾರೂ ಮುಟ್ಟದ ಮುನ್ನ ಬಾವಿ ಅಥವಾ ನದಿಯಿಂದ ಸಂಗ್ರಹಿಸಿದ ನೀರು, ಬಲಿಕೊಟ್ಟ ಪ್ರಾಣಿಯ ರಕ್ತ ಇವು ತೀರ್ಥದ ವಿವಿಧ ರೂಪಗಳು. ತೀರ್ಥ ಅತ್ಯಂತ ಪವಿತ್ರವಾದುದು. ದೇವರ ಅನುಗ್ರಹದ ಸಂಕೇತ, ದೈವಶಕ್ತಿಯಿಂದ ಕೂಡಿದೆ. ತೀರ್ಥ ಕುಡಿದರೆ ಪಾಪ ಪರಿಹಾರವಾಗುತ್ತೆ. ತೀರ್ಥವನ್ನು ತಲೆಯ ಮೇಲೆ ಹಾಕಿಕೊಳ್ಳುವುದರಿಂದ ಕೇಡಿನ ಕಾಟದಿಂದ ಪಾರಾಗಬಹುದು. ರೋಗರುಜಿನಗಳನ್ನು ವಾಸಿಯಾಗಿಸುವ ಔಷಧೀಯ ಹುಣವನ್ನು ಒಳಗೊಂಡಿದೆ.

ಅಷ್ಟೇ ಅಲ್ಲದೆ ಬಹುಮುಖ್ಯವಾಗಿ ಅಂತರಂಗ ಮತ್ತು ಬಹಿರಂಗಗಳು ತೀರ್ಥದ ಸಂಸರ್ಗದಿಂದ ಪರಿಶುದ್ಧವಾಗುತ್ತವೆ ಎಂದೇ ಜನಪದ ವಿವೇಕ ನಂಬುತ್ತದೆ. ತೀರ್ಥ ಧಾರ್ಮಿಕ ಪೂಜಾಚರಣಗಳಲ್ಲಿ ಉತ್ಪನ್ನವಾಗುವ ಪ್ರಬಲ ದೈವ ಸಂಕೇತ. ತೀರ್ಥವನ್ನು ಕಾಲಿಂದ ತುಳಿಯಬಾರದು.

ತೀರ್ಥವನ್ನು ಮೈಮೇಲೆ ಹಾಕಿಕೊಂಡರೆ ಕೇಡು ಹರಿಯುತ್ತೆ ಮುಂತಾದ ತೀರ್ಥದ ವಿವಿಧ ಕಾರ್ಯಗಳನ್ನು ವಿವರಿಸುವ ನೂರಾರು ನಂಬಿಕೆಗಳು ಕಾಣಸಿಗುತ್ತವೆ. ಈ ನಂಬಿಕೆಗಳು ಮೇಲುನೋಟಕ್ಕೆ ದೈವತ್ವದ ಪ್ರತಿರೂಪದಂತೆ ತೋರಿದರೂ ಅವುಗಳ ಒಳ ಆಶಯಗಳು ಒಂದು ನಿರ್ದಿಷ್ಟ ಸಮಾಜದ ಪುರೋಹಿತಶಾಹಿ ನೆಲೆಗಳನ್ನು ಭದ್ರಗೊಳಿಸುವ ಕಡೆ ಅಥವಾ ಛಿದ್ರಿಸುವ ಕಡೆ ಕ್ರಿಯಾತ್ಮಕವಾಗಿರುತ್ತದೆ. ಎಂಬುದು ಜನಪದ ಸಂವೇದನೆಯು ಅತ್ಯಂತ ಸೂಕ್ಷ್ಮವೂ ಆಗಿರುವ ಅಂಶವನ್ನು ಪ್ರತಿಪಾದಿಸುತ್ತದೆ.

**ನೀರು**

ಜನಪದರಲ್ಲಿ ನೀರು, ಗಂಗೆ, ಮಳೆ, ನದಿ, ತೀರ್ಥದ ರೂಪಗಳಲ್ಲಿ ದೈವತ್ವವಾಗಿ ನಿಸರ್ಗದ ಪ್ರತೀಕವಾಗಿ, ಸೃಷ್ಟಿ ಹಾಗೂ ನಾಶದ ಪ್ರಚಂಡ ಶಕ್ತಿಯಾಗಿ ಪ್ರಾಯಶ್ಚಿತ್ತದ ಮಾದ್ಯಮವಾಗಿ ಜನಪದರ ಬದುಕನ್ನು ಆವರಿಸಿಕೊಂಡಿರುವುದು ಸರಿಯಷ್ಟೆ. ಜಲಕ್ಕೆ ಇವಲ್ಲದೆ ಒಂದು ಸಹಜ ನೆಲೆಯೂ ಇದೆ. ಅದೇ ದಿನನಿತ್ಯದ ನಮ್ಮ ವ್ಯಾಪಾರಗಳಲ್ಲಿ ಶೌಚ, ಮಜ್ಜನ, ಪಚನಕ್ಕೆ ಉಪಯೋಗವಾಗುವ ಜೀವದ್ರವ್ಯ. ಇಲ್ಲಿ ನೀರು ತನ್ನ ಎಲ್ಲಾ ಆದಿಭೌತಿಕ, ದೈವಿಕ ಗುಣಗಳನ್ನು ಬಿಟ್ಟುಕೊಟ್ಟಿದ್ದು ಕೇವಲ ಉಪಯೋಗದ ಗುಣಗಳನ್ನು ಮಾತ್ರ ಪಡೆದುಕೊಂಡಿದೆ.

ನೀರನ್ನು ಬಳಸುವವರ ಮನಸ್ಸಿನಲ್ಲಿ ಮೇಲಿನ ಎಲ್ಲಾ ಸಹಯೋಗಗಳು ಇದ್ದರೂ ನೀರನ್ನು ತನ್ನ ಉಪಭೋಗದ ಪದಾರ್ಥವನ್ನಾಗಿ ಬಳಸುವುದನ್ನು ಕಾಣುತ್ತೇವೆ. ನೀರು ಈ ನೆಲೆಯಲ್ಲಿ ಸ್ವತಂತ್ರವಾದ ಅಸ್ತಿತ್ವವನ್ನು ಕಳೆದುಕೊಂಡು ಕೇವಲ ಪ್ರತಿಫಲನ ಶಕ್ತಿಯನ್ನು ಮಾತ್ರ ಪಡೆದುಕೊಂಡಿರುತ್ತದೆ. ನೀರನ್ನು ಬಳಸುವ ವ್ಯಕ್ತಿಯ ಗುಣಧರ್ಮಗಳಲ್ಲದೆ, ಅವರ ಜಾತಿ, ಲಿಂಗ, ವಯಸ್ಸು ಮುಂತಾದ ಅಧಿಕಾರ ಸ್ತರಗಳು ಸಾಮಾಜಿಕ ನಿಷೇಧಗಳು ನೀರಿಗೆ ಆರೋಪಿಸಲ್ಪಟ್ಟಿರುತ್ತವೆ. ವ್ಯಕ್ತಿಗೆ ದತ್ತವಾಗುವ ಎಲ್ಲಾ ವಿಧಿ–ನಿಷೇಧಗಳನ್ನು ನೀರಿಗೆ ಅನ್ವಯಿಸಲಾಗುತ್ತದೆ.

ಹೊಲೆಯರು ನೀರು ಮುಟ್ಟಿದರೆ ನೀರು ಕೆಡುತ್ತದೆ ಅಪವಿತ್ರಗೊಳ್ಳುತ್ತದೆ ಎನ್ನುವ ನಂಬಿಕೆ. ವಿಧವೆ ನೀರೊತ್ತು ಎದುರಾದರೆ ಅಶುಭ ಎನ್ನುವ ನಂಬಿಕೆ ಇತ್ಯಾದಿಗಳನ್ನು ಗಮನಿಸಬಹುದು.

ಈ ನಂಬಿಕೆಗಳಲ್ಲಿ ನೀರಿಗೆ ಸ್ವತಂತ್ರವಾದ ಗುಣ ಧರ್ಮವಿಲ್ಲ. ಅದು ಉಪಯೋಗಿಸುವವನ ಗುಣಾವಗುಣಗಳನ್ನು ಪ್ರತಿಫಲಿಸುತ್ತದೆ. ಸಮಾಜದ ಪಟ್ಟಭದ್ರ ಹಿತಾಸಕ್ತಿಗಳು ರಚಿಸಿಕೊಂಡಿರುವ ತನ್ನ ಅಸ್ತಿತ್ವಕ್ಕೆ ಪೋಷಕವಾಗುವಂತೆ ನೀರನ್ನು ಬಳಸುವ ನಿಯಮ, ನಂಬಿಕೆ, ವಿಧಿಗಳನ್ನು

ರೂಪಿಸುತ್ತಿರುತ್ತದೆ ಎಂಬುದನ್ನು ಗಮನಿಸಬಹುದು. ನೀರು ಶಕುನವಾಗಿ, ಔಷಧಿಯಾಗಿ, ನಿಷೇಧಿಸುವ ಪದಾರ್ಥವಾಗಿ ಹೀಗೆ ಜನಪದ ಬದುಕಿನ ಗುರುತ್ವ ಕೇಂದ್ರವಾಗಿ ಸ್ವೀಕರಿಸಲ್ಪಟ್ಟಿರುವುದನ್ನು ಕಾಣುತ್ತೇವೆ. ಜನಪದ ಪರಂಪರೆ ಮತ್ತು ನೀರಿನ ಸಂಬಂಧಗಳ ಸ್ವರೂಪವು ಉಪಭೋಗದ ನೆಲೆಗಳಿಂದ ಆಚೆಗೆ ಚಾಚಿಕೊಂಡಿರುವುದನ್ನು ಗಮನಿಸಬಹುದು.

**ಜಲಸಂಸ್ಕೃತಿ**

ನೀರಿನಿಂದಲೇ ಜಗತ್ತು ಸೃಷ್ಟಿಯಾಗಿದೆ ಮತ್ತು ಜಲಪ್ರಳಯದಿಂದಲೇ ನಾಶವಾಗುತ್ತದೆ ಎನ್ನುವ ಬಲವಾದ ನಂಬಿಕೆ ಜನಪದ ತಾತ್ವಿಕತೆಯ ತಳಹದಿಯಾಗಿದೆ. ನೀರು ಕೇವಲ ಭೌತಿಕ ಪದಾರ್ಥವಾಗಿ ಅಲ್ಲದೆ ಅದು ಒಟ್ಟಾರೆ ಒಂದು ಸಂಸ್ಕೃತಿಯ ಸ್ವರೂಪವನ್ನು ಪಡೆದುಕೊಂಡಿರುವುದನ್ನು ಗಮನಿಸಿದರೆ ಜಲಸಂಸ್ಕೃತಿಯನ್ನು ಜಲ ಸಂಸ್ಕೃತಿ ಎಂದು ಗುರುತಿಸುವುದು ಸೂಕ್ತವೆನಿಸುತ್ತದೆ ಮತ್ತು ಜಲಸಂಸ್ಕೃತಿಯೇ ಈ ದೇಶದ ಮೂಲಸಂಸ್ಕೃತಿಯಾಗಿದೆ. ಜಲಸಂಸ್ಕೃತಿಯ ಲಕ್ಷಣಗಳನ್ನು ಆರ್ಯೀಕರಣ ಪ್ರಕ್ರಿಯೆಯು ವ್ಯವಸ್ಥಿತವಾಗಿ ನಾಶಗೊಳಿಸುತ್ತಾ ಬಂದ ವಿವರಗಳು ಸಮುದ್ರ ಮಂಥನ ವೃತ್ರಾಸುರ ಸಂಹಾರ–ಕಾಳಿಂಗಮರ್ಧನ ಮುಂತಾದ ಪುರಾಣಗಳಲ್ಲಿ ದಾಖಲಾಗಿವೆ.

ಇಂದು ಭಾರತೀಯ ಸಂಸ್ಕೃತಿಯನ್ನು ಏಕಶಿಲಾಕೃತಿಯೆಂಬಂತೆ ಗ್ರಹಿಸಿ ವಿವರಿಸುತ್ತಿರುವ ಪುರೋಹಿತಶಾಹಿಗಳು ಅತ್ತ ನೀರಿನ ಪ್ರತೀಕಾತ್ಮಕ ನೆಲೆಯನ್ನು ನಾಶಗೊಳಿಸುತ್ತಿದ್ದರೆ, ಇತ್ತ ಜಾಗತೀಕರಣ ಏಜೆಂಟರು ನೀರನ್ನು ವ್ಯಾಪಾರದ ಪದಾರ್ಥವಾಗಿಸುವುದರ ಮೂಲಕ ಸಾಮಾನ್ಯ ಜನರಿಂದ ದೂರವಾಗಿಸುವ ಹುನ್ನಾರ ನಡೆಸಿದ್ದಾರೆ. ವಿಜ್ಞಾನ ಮತ್ತು ತಂತ್ರಜ್ಞಾನಗಳ ಆವಿಷ್ಕಾರಗಳಿಂದಾಗಿ ನಿಸರ್ಗದ ಜೊತೆಗಿದ್ದ ಮನುಷ್ಯನ ಭಾವನಾತ್ಮಕ ನೆಲೆಯು ಕಣ್ಮರೆಯಾಗುತ್ತದೆ. ಈ ಅಪಾಯಗಳಿಂದ ಪಾರಾಗುವ ಮಾರ್ಗೋಪಾಯಗಳು ಜನಪದ ಜೀವನಕ್ರಮಗಳಲ್ಲಿ ಅಂತಸ್ಥವಾಗಿವೆಯಾದರೂ ಅವು ನಿರ್ಲಕ್ಷಕ್ಕೆ ಒಳಗಾಗಿವೆ. ಜೀವದ್ರವ್ಯ ಹಾಗೂ ಜೀವಕ್ಕೆ ಒದಗಿರುವ ಈ ಸಂಕಷ್ಟಗಳಿಂದ ಪಾರಾಗಲು ಜನಸಂಸ್ಕೃತಿಯ ವಿವೇಕವಲ್ಲದೆ ಅನ್ಯಮಾರ್ಗವಿಲ್ಲ.

*****

## ೨. ಕೃಷಿ ಮೊದಲು ಸರ್ವಕ್ಕೆ...

**–ಡಾ. ರಂಗಾರೆಡ್ಡಿಕೋಡಿರಾಂಪುರ**

“ಬೇಸಾಯ ಉತ್ತಮ, ವ್ಯಾಪಾರ ಮಧ್ಯಮ, ನೌಕರಿ ಕನಿಷ್ಠ” ಎಂಬ ಗಾದೆ ಮೂರು ಪ್ರಮುಖ ವೃತ್ತಿಗಳನ್ನು ಕುರಿತು ಬೆಳಕು ಚೆಲ್ಲುತ್ತದೆ. ಒಂದು ಕಾಲಕ್ಕೆ ಅತ್ಯಂತ ಗೌರವದ ಸ್ಥಾನದಲ್ಲಿದ್ದ ಹಾಗೂ ತರತಮ ಭಾವಗಳಲ್ಲಿ ಶ್ರೇಷ್ಟಸ್ಥಾನದಲ್ಲಿದ್ದ ಬೇಸಾಯ ಇಂದಿನ ಆಧುನಿಕ ಪರಿಸರದಲ್ಲಿ ‘ಬೇಸಾಯ ನೀ ಸಾಯ’ ಎಂಬ ಸ್ಥಿತಿಗೆ ಇಳಿದಿದೆ. ಇಪ್ಪತ್ತು ಎಕರೆ ಜಮೀನನ್ನು ಹೊಂದಿರುವ ಒಬ್ಬ ಜಮೀನ್ದಾರನ ಮಗ ಕೂಡ ಒಂದು ಸರ್ಕಾರಿ ಕಛೇರಿಯಲ್ಲಿ ಸಣ್ಣ ಗುಮಾಸ್ತನ ಹುದ್ದೆ ಅಥವಾ ಬಾಗಿಲ ಬಳಿ ನಿಂತಿರುವ ಜವಾನನ ಹುದ್ದೆ ದೊರಕಿದರೂ ಸಾಕು ನೆಮ್ಮದಿ ಹಾಗೂ ಭದ್ರತೆ ದೊರೆಯುತ್ತದೆ ಎಂದು ಭಾವಿಸುತ್ತಾನೆ. ಸರ್ಕಾರಿ ಉದ್ಯೋಗಗಳು ದುರ್ಲಭವಾದಾಗ ವಿವಿಧ ಕಂಪನಿಗಳು, ಗಾರ್ಮೆಂಟ್ಸ್‌ಗಳು, ಸಣ್ಣ ಸಣ್ಣ ಕೈಗಾರಿಕ ಘಟಕಗಳು, ಟೂರ್ಸ್ ಮತ್ತು ಟ್ರಾವೆಲ್ಸ್ ಸೇವೆಗಳು ಕಾರ್ಪೊರೆಟ್ ಕಂಪನಿಗಳ ವ್ಯಾಪಾರ, ವಹಿವಾಟುಗಳು ಹೆಚ್ಚಾಗಿ, ಉದ್ಯೋಗ ಸೃಷ್ಟಿಸಿದಾಗ ಹಳ್ಳಿಗಳಲ್ಲಿರುವ ವಿದ್ಯಾವಂತ ಅರೆವಿದ್ಯಾವಂತ, ಕೊರೆವಿದ್ಯಾವಂತರೆಲ್ಲರೂ ನಗರಗಳನ್ನು ಸೇರಿದರು. ಹೀಗಾಗಿ ಇಂದು ಹಳ್ಳಿಗಳೆಲ್ಲವೂ ‘ವೃದ್ಧಾಶ್ರಮ’ಗಳಾಗಿ ಪರಿವರ್ತಿತವಾಗಿವೆ.

ಆಧುನಿಕ ವಿದ್ಯಾಭ್ಯಾಸ ಪದ್ಧತಿ, ಜೀವನಶೈಲಿ, ಅಲೋಚನಾ ವಿಧಾನ, ಸೌಲಭ್ಯಗಳ ಮಹಾಪೂರದಿಂದಾಗಿ ‘ಸಾಂಪ್ರದಾಯಿಕ’ ಎನ್ನಬಹುದಾದ ಎಲ್ಲವೂ ಬದಲಾಗತೊಡಗಿದವು. ಸಾಂಪ್ರದಾಯಕವಾದ ಎಲ್ಲ ಅಂಶಗಳೂ ಕೆಟ್ಟವಲ್ಲ. ಆಧುನಿಕವಾದ ಆಂಶಗಳೆಲ್ಲವೂ ಒಳ್ಳೆಯವಲ್ಲ ಎಂಬ ಒಂದು ವಿವೇಚನಾಪ್ರಜ್ಞೆ ಯುವಜನತೆಯಲ್ಲಿ ಕಾಣಿಸುತ್ತಿಲ್ಲ. ಹಳೆಯದೆಲ್ಲವನ್ನೂ ತಿರಸ್ಕಾರ ಮಾಡುವ ಭರಾಟೆಯಲ್ಲಿ ಕೃಷಿಯನ್ನೂ ಉಪೇಕ್ಷಿಸುತ್ತಾರೆ. ಬಹಳ ಬೇಗ ಹಣ ತರುವಂತಹ ಸಸ್ಯಜಾತಿಗಳನ್ನು ಭೂಮಿಗೆ ಇಳಿಸಿ ನೆಲವನ್ನು ಬಂಜೆ ಮಾಡುತ್ತಾರೆ. ಆದರೆ ನಮ್ಮ ಹಿರಿಯರು ವೇದಗಳ ಕಾಲದಿಂದಲೂ ಭೂಮಿಯನ್ನು, ಬೇಸಾಯವನ್ನು ಅತ್ಯಂತ ಶ್ರಧ್ಧೆ, ಭಕ್ತಿ ಗೌರವಗಳಿಂದ ಪರಿಗಣಿಸಿದ್ದರೆಂಬುದಕ್ಕೆ ಮುನಿ ಕಶ್ಯಪರ “ಕೃಷಿಸೂಕ್ತಿ”ಯಲ್ಲಿ ಉದಾಹರಣೆಗಳು ಸಿಗುತ್ತವೆ. ಕಶ್ಯಪರ ಪ್ರಕಾರ ಮೊದಲ ಹುಳುಮೆಯ ಸಂದರ್ಭದಲ್ಲಿ ಈ ಕೆಳಗಿನಂತೆ ಪ್ರಾರ್ಥನೆ ಮಾಡಿ ಪುಣ್ಯಕಾರ್ಯವನ್ನು ಆರಂಭಿಸಬೇಕು.

“ ಓ ಭೂದೇವಿಯೇ, ಸಮಸ್ತವನ್ನು ಧರಿಸುವ ವಿಶಾಲಿನಿಯೇ,
ನಿನಗೆ ನಮಸ್ಕರಿಸಿ ಕೃಷಿ ಮಾಡಲು ಹೊರಟಿದ್ದೇನೆ; ನನ್ನ

ಕರ್ಮದಿಂದ ಸಂತುಷ್ಟಳಾಗು. ಓಪವಿತ್ರಳೇ. ಉಳುವುದು

ಅಗೆಯುವುದು ಇತ್ಯಾದಿಗಳಿಂದ ನಿನಗೆ ಯಾವುದೇ ರೀತಿಯಿಂದ

ಧಕ್ಕೆ ಮಾಡಿದರೂ ನನ್ನನ್ನೂ ಕ್ಷಮಿಸು, ಈ ಎಲ್ಲ ಜೀವಿಗಳು

ನಿನ್ನ ಕಲೆ. ನನ್ನ ಮೇಲೆ ಕರುಣೆಯಿಟ್ಟು ಅಮಿತ ಲಾಭವನ್ನು ನೀಡು''

ಎಂಬ ಈ ಸ್ತುತಿ ''ಪ್ರಾಚೀನ ಕೃಷಿತಂತ್ರಗಳು'' (ಪುಟ–೩೭) ಎಂಬ ಕೃತಿಯಲ್ಲಿ ಉಲ್ಲೇಖವಾಗಿದೆ. ಈ ಸ್ತುತಿಯಲ್ಲಿ ಕೃಷಿ ಬಗ್ಗೆಯಾಗಲಿ ನಮ್ಮ ಪ್ರಾಚೀನರಿಗಿದ್ದ ಗೌರವಾದಾರಗಳು, ಭಕ್ತಿಶ್ರದ್ಧೆಗಳು ಎದ್ದುಕಾಣುತ್ತವೆ. ಎಂದು ವ್ಯವಸಾಯ ಜೀವನದ ಬಗ್ಗೆ ಕೃತಿ ರಚಿಸಿದ ಡಾ.ಎಂ.ಜಿ.ಈಶ್ವರಪ್ಪನವರು ಅಭಿಪ್ರಾಯಪಡುತ್ತಾರೆ.

ಮುನಿ ಕಶ್ಯಪರ ''ಕೃಷಿಸೂಕ್ತಿ'' ಅತ್ಯಂತ ಪ್ರಾಚೀನ ಕಾಲಕ್ಕೆ ಸೇರಿದ್ದರೆ, ಸ್ವಾತಂತ್ರ ಪೂರ್ವದ ಕಾಲ ಅಂದರೆ ನೂರೈವತ್ತು–ಇನ್ನೂರು ವರ್ಷಗಳ ಹಿಂದಿನ ಕಾಲಘಟ್ಟದಲ್ಲಿಯೂ ಭೂಮಿಯ ಬಗ್ಗೆ ಇಷ್ಟೆ ಗೌರವಾದಾರಗಳು ಎದ್ದು ಕಾಣುತ್ತವೆ. ಕೃಷಿ ಮೂಲದ ನಮ್ಮ ಜನರು ಏಳುತ್ತಲೆ ನೆನೆಯುವುದು ಭೂಮಿತಾಯಿಯನ್ನೇ:

ಬೆಳಗಾಗ ನಾನೆದ್ದು ಯಾರ್‍ಯಾರ ನೆನೆಯಾಲಿ

ಎಳ್ಳುಜೀರಿಗೆ ಬೆಳೆಯೊಳ। ಭೂಮ್ತಾಯ್ನ

ಎದ್ದೊಂದು ಘಳಿಗೆ ನೆನೆದೇನು॥

ಹೊತ್ತಾರೆ ಎದ್ದು ನಮ್ಮನೇಗೌಡ ಏನೇನು ನೆನೆದಾನು

ಸಕಲೆಂಟು ಬೆಳೆಯೋ ಭೂಮಿತಾಯಿಯ ನೆನೆದಾನು

ಸಕಲೆಂಟ ಬೆಳಿಯೋ ಭೂಮಿತಾಯಿಯ ನೆನೆದಾರೆ

ಸಂಕಟವೆಲ್ಲ ಬಯಲಾದೊ॥ (ಉಧೃತ:ಹಗೇವು ತುಂಬ್ಯಾವೆ ಹದಿನಾರು.ಪುಟ:೨೬)

ಇಂತಹ ಭೂತಾಯಿಯ ಮಣ್ಣು ಉತ್ಪತ್ತಿ ಸಾಧನ: ಜೀವದ್ರವ್ಯ. ಪಾಶ್ಚಾತ್ಯ ವಿದ್ವಾಂಸ ಪೀಟರ್ ಫಾರ್ಬ್ ಹೇಳುವಂತೆ '' ಈ ಮಣ್ಣು ಜೀವಂತವಾದುದು. ಜೀವವಿರದ ಮಣ್ಣೆಇಲ್ಲ. ಮಣ್ಣಿರದೆ ಜೀವವಿಲ್ಲ. ಅದಕ್ಕೆ ನಾವು ಹಾಕುವ ಎಲೆಗಳ ಕೊಳೆತ ಹಸುರಿನತಾಯಿ. ಅದೇ ಮಣ್ಣು ಜೀವನದ ಚಕ್ರ. ಮಣ್ಣಿನ ಉಳುಮೆ ಎರೆಹುಳುಗಳಿಂದಲೇ ಆಗುತ್ತದೆ. ಭೂಮಿಯ ಒಳಗೆ ಅಪಾರ ಸಂಖ್ಯೆಯಲ್ಲಿರುವ ಇವನ್ನು ಅರಿಸ್ಟಾಟಲ್ ಕರುಳುಗಳು ಎಂದು ಪರಿಗಣಿಸಿದ್ದ. ನೇಗಿಲು ಮಾನವನ ಅತ್ಯಂತ ಪ್ರಾಚೀನವಾದ ಅತ್ಯುಪಯೋಗವಾಗುವ ಯಂತ್ರ ಸಾಧನಗಳಲ್ಲಿ ಒಂದಾಗಿದ್ದರೂ, ಅವನು ಬದುಕಿರುವ ಮುಂಚೆಯೇ ನಿಜವಾಗಿ ಎರೆಹುಳುಗಳಿಂದ ಕ್ರಮವಾಗಿ ಉಳಲ್ಪಟ್ಟಿರುವುದಲ್ಲದೆ, ಇನ್ನು ಉಳಲ್ಪಡುತ್ತಿವೆ.

ವಿಲ್‌ಡ್ಯುರಾಟ್ ಎಂಬ ತಜ್ಞರ ಪ್ರಕಾರ ''ವ್ಯವಸಾಯವೇ ವಿಜ್ಞಾನದ ಮೂಲ''. ವಿಜ್ಞಾನವು ಭೂಮಿಯನ್ನು ಅಳೆಯುವ ಶಾಸ್ತ್ರ. ಬೆಳೆಗಳ ಸರದಿಯ ಲೆಕ್ಕಾಚಾರಕ್ಕಾಗಿ ಆಕಾಶದಲ್ಲಿನ ನಕ್ಷತ್ರಗಳನ್ನು ವೀಕ್ಷಿಸಿ ಕ್ಯಾಲೆಂಡರ್ ನಿರ್ಮಾಣವಾಯಿತು. ಅಲ್ಲಿಂದ ಪ್ರಾರಂಭವಾದ ಖಗೋಳವಿಜ್ಞಾನ ಸಮುದ್ರಪ್ರಯಾಣ ಕೈಗೊಂಡುದರಿಂದ ಖಚಿತವಾಗುತ್ತಾ ನಡೆಯಿತು. ಹಾಗೆಯೆ ವ್ಯವಸಾಯವನ್ನು ''ಕಲೆ'' ಎಂದು ಕರೆಯಬಹುದು. ವೆಬ್‌ಸ್ಟರ್ ನಿಘಂಟು ಅಗ್ರಿಕಲ್ಚರ್ ಎಂದರೆ ''ದಿ ಸೈನ್ಸ್ ಆರ್ ಅರ್ಟ್ ಅಫ್ ಕಲ್ಟಿವೇಟಿಂಗ್ ದಿ ಸಾಯಿಲ್, ಪ್ರೊಡ್ಯುಸಿಂಗ್ ಕ್ರಾಪ್ಸ್ ಅಂಡ್ ರೈಸಿಂಗ್ ಲಿವ್‌ಸ್ಟಾಕ್'' ಎಂದು ಅರ್ಥ ನೀಡುತ್ತದೆ. ಅದರ ಪ್ರಕಾರ ಅಗ್ರಿಕಲ್ಚರ್ ಎಂದರೆ ಭೂಮಿಯನ್ನು ಉಳುವ ವಿಜ್ಞಾನ ಅಥವಾ ಕಲೆ. ಉಳುಮೆಯ ಜೊತೆ ಪಶುಸಂವರ್ಧನೆಯು ಆಗುತ್ತದೆ. ''ಸಂಸ್ಕೃತಿ ವ್ಯವಸಾಯವನ್ನು ಧ್ವನಿಸುತ್ತದೆ. ನಾಗರೀಕತೆ ನಗರವನ್ನು ಧ್ವನಿಸುತ್ತದೆ'' ಎನ್ನುತ್ತಾನೆ ವಿಲ್‌ಡ್ಯುರಾಟ್.

ಬೇಸಾಯ ಅಥವಾ ವ್ಯವಸಾಯಕ್ಕೆ ಪರ್ಯಾಯವಾಗಿ ಆರಂಭ, ಒಕ್ಕಲುತನ, ಕೃಷಿ, ಕಮತ, ಶೇತಕಿ, ಜೆರಾಯಿತು ಮುಂತಾದ ಪದಗಳು ಕರ್ನಾಟಕದಾದ್ಯಂತ ಬಳಕೆಯಾಗುತ್ತಿವೆ. ಕೊನೆಯ ಮೂರು ಪದಗಳು ಮರಾಠಿ ಪ್ರಭಾವದಿಂದ ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಪ್ರಯೋಗವಾಗುತ್ತಿವೆ. ಆರಂಭ ಮತ್ತು ಒಕ್ಕಲುತನ ಎಂಬ ಪದಗಳು ಅಚ್ಚ ಕನ್ನಡದವು. ಆರಂಭ ಎನ್ನುವುದು 'ಆರ್' ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. ಆರ್>ಆರು>ಏರು ಎಂದರೆ ನೇಗಿಲಿಗೆ ಕಟ್ಟಿದ ಜೋಡೆತ್ತುಗಳು ಎಂದು ಕಿಟೆಲ್ ನಿಘಂಟುವಿನಲ್ಲಿ ಅರ್ಥ ಕೊಟ್ಟಿದ್ದಾರೆ. ಒಕ್ಕಲು ಒಕ್ಕಲುತನ 'ಒಕ್' ಧಾತುವಿನಿಂದ ನಿಷ್ಪನ್ನವಾಗಿದೆ. ಕೇಶಿರಾಜನ ಪ್ರಕಾರ 'ಒಕ್=ಖಲಕರಣೇಶಕುನೇಚ' ಎಂದರೆ ಧಾನ್ಯಗಳನ್ನು ಬಡಿಯುವ ನೆಲ, ತೆನೆಗಳಿಂದ ಕಾಳುಗಳನ್ನು ಬೇರ್ಪಡಿಸುವುದು ಎಂದರ್ಥ. ವ್ಯವಸಾಯದ ತದ್ಭವರೂಪ ಬೇಸಾಯ. ಬವಸು, ಬವಸೆ, ಬೆವಸಾಯ, ಬೇಸಾಯ, ಯವಸಾಯ, ವೆವಸಾಯ ಎಂಬ ರೂಪಾಂತರಗಳು ಕಾವ್ಯಗಳಲ್ಲಿ ಆಡುನುಡಿಗಳಲ್ಲಿ ದೊರಕುತ್ತವೆ. ಕೃಷಿ ಎನ್ನುವುದು 'ಕೃಷ್' ಧಾತುವಿನಿಂದ ನಿಷ್ಪನ್ನವಾಗಿದೆ. ಮೇಲಿನ ಈ ಎಲ್ಲಾ ಪದಗಳಿಗೂ ಉಳುಮೆ ಸಾಗುವಳಿ ಎಂಬ ಅರ್ಥಗಳಿವೆ.

ಇಂಥ ಜೀವನಾಧಾರವಾಗಿದ್ದ ಕೃಷಿಯನ್ನು ಕೈಬಿಟ್ಟು ವಿದ್ಯಾವಂತರಾದವರು ಉದ್ಯೋಗಗಳ ಸಲುವಾಗಿ ನಗರಗಳ ಕಡೆ ಮುಖ ಮಾಡಿದರೆ ಸ್ವಾತಂತ್ರ ನಂತರ ಸರ್ಕಾರಗಳು ಕೈಗಾರಿಕೋದ್ಯಮಿಗಳ ಹಿತಕಾಯುವ ಸಲುವಾಗಿ ಹಳ್ಳಿಗಳ ಕಡೆ ಮುಖ ಮಾಡಿದವು. ಅಂದರೆ ವ್ಯವಸಾಯಕ್ಕೆ ಯೋಗ್ಯವಾಗಿದ್ದ, ಫಲವತ್ತಾಗಿದ್ದ ಭೂಮಿಯನ್ನು ಉದ್ಯಮಿಗಳಿಗೆ ಕಡಿಮೆ ಬೆಲೆಗೆ ಕೊಡಿಸಲು ತುದಿಗಾಲಿನಲ್ಲಿ ನಿಂತವು. ಅಧಿಕ ಇಳುವರಿಗೆ ಅನುಕೂಲವಾಗಲೆಂದು ರಸಗೊಬ್ಬರ ಉತ್ಪಾದಿಸುವ ಕೈಗಾರಿಕೆಗಳಿಗೆ ನಡೆ ಮುಡಿ ಹಾಸಿದವು. ಮಳೆ ಮಾರುತಗಳಿಗೆ ಅನುಕೂಲವಾಗಿದ್ದ

ಸಹಜ ಕಾಡುಗಳನ್ನು ನಾಶಮಾಡಿ, ಬರವನ್ನು ಸ್ವಾಗತಿಸುವ ನೀಲಗಿರಿ ತೋಪುಗಳನ್ನು ಬೆಳೆಸಲು ಉತ್ತೇಜನ ನೀಡಿದವು. ಬೆಳ್ಳಿಗಟ್ಟಿಗಳಂತಿದ್ದ ಬೆಟ್ಟಗುಡ್ಡಗಳನ್ನು ಗ್ರಾನೆಟ್ ವ್ಯಾಪಾರದ ಸಲುವಾಗಿ ಬಹುರಾಷ್ಟ್ರೀಯ ಕಂಪನಿಗಳ ಪದತಲದಲ್ಲಿಟ್ಟವು. ಬೃಹತ್ ಅಣೆಕಟ್ಟೆಗಳನ್ನು ನಿರ್ಮಾಣ ಮಾಡುವುದಕ್ಕಾಗಿ ಲಕ್ಷಾಂತರ ಹೆಕ್ಟೇರ್ ಮಳೆಕಾಡುಗಳನ್ನು ನಾಶಮಾಡಿದವು. ಸ್ವಾವಲಂಬಿ ಜೀವನದ ಭಾಗವಾಗಿದ್ದ ಹಳ್ಳಿಗಳ ಗೃಹಕೈಗಾರಿಕೆಗಳಿಗೆ ಮಾರುಕಟ್ಟೆ ಇಲ್ಲದಂತಾಗಿ ಬೃಹತ್‌ಕೈಗಾರಿಕೆಗಳ ಮುಂದೆ ತಲೆತಗ್ಗಿಸಿದವು. ಕೃಷಿಗೆ ಪೂರಕವಾಗಿದ್ದ ವಾತಾವರಣ ಇಲ್ಲದಂತೆ ಮಾಡಿ ಕೈಗಾರಿಕೆ ಉದ್ದಿಮೆ ಸ್ನೇಹಿ ವಾತಾವರಣ ನಿರ್ಮಾಣಮಾಡಿದವು.

ಆಧುನಿಕ ಕೃಷಿ ವಿಜ್ಞಾನ ಮತ್ತು ಹಸಿರುಕ್ರಾಂತಿಯ ಘೋಷಣೆ ಸಾಂಪ್ರದಾಯಿಕ ಕೃಷಿ ಜಗತ್ತಿನ ಮೇಲೆ ಸಿಡಿಲಿನಂತೆರಗಿತು. ಸ್ವಾತಂತ್ರನಂತರ ಮರಣ ಪ್ರಮಾಣ ಕಡಿಮೆಯಾಗಿ ಜೀವಿಸುವ ಅವಧಿ ಜಾಸ್ತಿಯಾಯಿತು. ಕೃಷಿ ಕುಟುಂಬಗಳಲ್ಲಿ ಸಹಜವಾಗಿ ಉತ್ಪತ್ತಿ ಕಡಿಮೆಯಾದಾಗ ಧವಸಧಾನ್ಯಗಳನ್ನು ಹೆಚ್ಚು ಬೆಳೆಯಬೇಕೆಂಬ ಅಲೋಚನೆಗೆ ಪೂರಕವಾಗಿ ಸರ್ಕಾರಗಳು ಮಾಡಿದ ಹಸಿರುಕ್ರಾಂತಿಯ ಘೋಷಣೆ ರೈತರ ಕಿವಿಗಳಿಗೆ ಹಿತವಾಗಿ ಕೇಳಿಸಿತ್ತು. ಅದರಿಂದ ಹೆಚ್ಚು–ಹೆಚ್ಚು ಬೆಳೆಯಲು ಕಾಡು ಕಡಿದು ಸಾಗುವಳಿ ಮಾಡಲಾಯಿತು. ಭೂಮಿಯನ್ನು ಕೊರೆದು–ಕೊರೆದು ನೀರು ತೆಗೆಯಲಾಯಿತು. ರಾಸಾಯನಿಕ ಕೃಷಿಯನ್ನು ಉತ್ತೇಜಿಸಿ ಬೆಳೆಗಳನ್ನು ದುಪ್ಪಟ್ಟು ಮಾಡಲಾಯಿತು. ಹೈಬ್ರಿಡ್ ತಳಿಗಳನ್ನು ಸೃಷ್ಟಿಸಿ ಹೆಚ್ಚು ಧಾನ್ಯಗಳನ್ನು ಬೆಳೆಯಲಾಯಿತು.

ರಸಗೊಬ್ಬರ, ಅತಿಯಾದ ನೀರು ಹಾಗೂ ರಸಾಯನಿಕ ಔಷಧಗಳು ವಿಷವಾಗಿ ಮಣ್ಣಿನಲ್ಲಿರುವ ಸೂಕ್ಷ್ಮಜೀವಿಗಳನ್ನು ಕೊಂದು ಅದರಲ್ಲಿರುವ ಸಾವಯವ ವಸ್ತುವನ್ನು ನಾಶಮಾಡಿ ಮಣ್ಣನ್ನು ನಿರ್ಜೀವಗೊಳಿಸಿವೆ. ವಿಷಕಾರಕ ರಸಾಯನಿಕ ಸಿಂಪಡಣೆಗಳು ಜೈವಿಕ ಸಮತೋಲನವನ್ನು ನಾಶಮಾಡಿ ಕೀಟ, ಹಕ್ಕಿ–ಪಕ್ಕಿ ಮುಂತಾದ ಕೃಷಿ ಉಪಕಾರಿಗಳನ್ನು ಇಲ್ಲದಂತೆ ಮಾಡಿವೆ. ಪಾರಂಪಾರಿಕ ಕೃಷಿಪದ್ಧತಿಯಲ್ಲಿ ಇವೆಲ್ಲ ರೈತನಿಗೆ ಒಂದಲ್ಲ ಒಂದು ವಿಧದಲ್ಲಿ ನೆರವಾಗುತ್ತಿದ್ದವು.

ಬೀಜರಹಿತ ಧವಸಧಾನ್ಯಗಳ ಬೆಳವಣಿಗೆಯಿಂದ ರೈತ ಪರಾವಲಂಬಿಯಾಗಿದ್ದಾನೆ. ಸಾಂಪ್ರದಾಯಿಕ ಕೃಷಿ ನಡೆಯುತ್ತಿದ್ದಾಗ ಪ್ರತಿಯೊಂದು ಬೆಳೆಗಳ ಬೀಜವನ್ನು ರೈತರೆ ಸ್ವಯಂ ಮಾಡಿ ಸಂಗ್ರಹಿಸಿಟ್ಟುಕೊಳ್ಳುತ್ತಿದ್ದರು. ಈಗ ಉದ್ಯಮಪತಿಗಳು ತಯಾರಿಸುವ ಬೀಜಗಳನಷ್ಟೆ ಕೊಳ್ಳಬೇಕಾಗಿದೆ. ಇಂಥ ಬೀಜಗಳು ನಮ್ಮ ಭೂಮಿಯ ವಾತಾವರಣಕ್ಕೆ ಒಮ್ಮೊಮ್ಮೆ ಹೊಂದಿಕೊಳ್ಳದಿದ್ದರೆ ಬಿತ್ತಿದ ಬೆಳೆಯೆಲ್ಲ ನಾಶವಾಗುತ್ತದೆ. ಬೆಳೆಬೆಳೆದು ಮಾರುಕಟ್ಟೆಗೆ ತಂದರೆ ಸರಿಯಾದ ಬೆಲೆ ಸಿಗದೆ ನಷ್ಟ ಅನುಭವಿಸುವಂತಾಗುತ್ತದೆ. ಒಂದು ಶೀಶೆ ನೀರಿಗೆ, ಒಂದು ಬಾಟಲ್ ಔಷಧಿಗೆ, ಒಂದು ಪಾಕೆಟ್ ಬೀಜಕ್ಕೆ, ಒಂದು ಚೀಲ ರಾಸಾಯನಿಕ ಗೊಬ್ಬರಕ್ಕೆ ನಿಗದಿಪಡಿಸಿರುವ

ಬೆಲೆಗೆ ರೈತ ಕೊಳ್ಳಬೇಕು. ಆದರೆ ರೈತ ಬೆಳೆದು ಮಾರುಕಟ್ಟೆಗೆ ತಂದ ಈರುಳ್ಳಿಗಾಗಲಿ, ಟೊಮ್ಯಾಟೊಗಾಗಲಿ ಒಂದು ಚೀಲ ಕಡಲೆಬೀಜಕ್ಕಾಗಲಿ ರೈತ ಬೆಲೆ ನಿಗದಿಪಡಿಸುವಂತಿಲ್ಲ. ಮಧ್ಯವರ್ತಿಗಳು ಮಾರುಕಟ್ಟೆಯಲ್ಲಿ ಬೆಲೆ ನಿಗಧಿಪಡಿಸುತ್ತಾರೆ. ಹೀಗಾಗಿ ಬೆಳೆಬೆಳೆದ ರೈತರು ಈ ಕಾರಣಕ್ಕಾಗಿಯೇ ಆತ್ಮಹತ್ಯೆಯ ದಾರಿ ಹಿಡಿಯುತ್ತಾರೆ. ಸರ್ಕಾರಗಳನ್ನು ನಡೆಸುವ ಮುಖ್ಯಸ್ಥರು ರೈತಾಪಿವರ್ಗಗಳಿಂದಲೇ ಬಂದವರಾದರೂ ರೈತರ ಹಿತ ಕಾಯುವುದಿಲ್ಲ.
ಏಕೆಂದರೆ ಬಂಡವಾಳಶಾಹಿ ಉದ್ಯಮಗಳ ಒತ್ತಡದಲ್ಲಿ ಅವರು ಕೆಲಸ ಮಾಡುತ್ತಿರುತ್ತಾರೆ.

ಆಧುನಿಕ ಕೃಷಿರಸಗೊಬ್ಬರ ಮತ್ತು ರಸಾಯನಿಕ ಔಷದಿ ಮುಕ್ತವಾಗಿ ಪಾರಂಪಾರಿಕ ಕೃಷಿಯ ಉತ್ತಮಾಂಶಗಳನ್ನು ಒಳಗೊಂಡು ಬಂದಿದ್ದರೆ, ಇಷ್ಟು ದೊಡ್ಡ ಅನಾಹುತಗಳು ಸಂಭವಿಸುತ್ತಿರಲಿಲ್ಲ. ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಅತಿ ಹೆಚ್ಚು ಮುಂದುವರೆದಿರುವ ಜಪಾನ್ ದೇಶದ ವಿಜ್ಞಾನಿ ದಿ॥ಮಸುನೊಬುಫುಕುವೋಕ ಅವರೆ ಸಹಜಕೃಷಿ ಚಿಂತನೆಯನ್ನು ಪ್ರಪಂಚದಾತ್ಯಂತ ಪಸರಿಸಿದ್ದಾರೆ. ಸಾಂಪ್ರದಾಯಿಕ ಸಾವಯುವ ಕೃಷಿಯಲ್ಲಿರುವ ಅನಗತ್ಯ ಕೆಲಸಗಳಿಗೆ ರಜೆ ನೀಡಿ ಅದನ್ನು ಸರಳೀಕರಿಸಿದ ವಿಧಾನ ಈ ಸಹಜಕೃಷಿ. ಈ ಕಾರಣದಿಂದ ಫುಕುವೋಕ ಸಹಜ ಕೃಷಿಯನ್ನು "ಏನೂಮಾಡದ" ಬೇಸಾಯ ಎಂದು ಕರೆಯುತ್ತಾರೆ. ಇದು ನಮ್ಮ ಕೃಷಿಕರಿಗೆ ಒಪ್ಪಗೆಯಾಗದಿದ್ದರೆ ಉಳುಮೆ ಮಾಡುತ್ತಲೆ ಫುಕುವೋಕ ಹೇಳಿದ ಬೇರೆ ಸಾವಯುವ ಅಂಶಗಳನ್ನು ಅಳವಡಿಸಿಕೊಂಡರೆ ಸಾಕು. ನಮ್ಮ ದೇಶದಲ್ಲೂ ಈಗ ರಸಗೊಬ್ಬರ ರಾಸಾಯನಿಕ ಮಿಶ್ರಿತ ಆಧುನಿಕ ಬೇಸಾಯವನ್ನು ತ್ಯಜಿಸಿ ಪರ್ಯಾಯವಾದ ಪಾರಂಪಾರಿಕ ಸಾವಯುವಕೃಷಿ, ಜೈವಿಕಕೃಷಿ, ಜೀವಚೈತನ್ಯಕೃಷಿ, ಸಹಜಕೃಷಿ, ನೈಸರ್ಗಿಕ ಕೃಷಿಮಾರ್ಗಗಳನ್ನು ಕಂಡುಕೊಂಡವರಿದ್ದಾರೆ. ಹಿತಮಿತವಾದ ಉಳುಮೆ, ಕೊಟ್ಟಿಗೆಗೊಬ್ಬರ, ಕೋಳಿಗೊಬ್ಬರ, ಎಣ್ಣೆತೆಗೆದ ಎಲ್ಲಾ ಬಗೆಯ ಹಿಂಡಿಗಳು, ಕೆರೆಕುಂಟೆಗೋಡು, ಹಸಿರೆಲೆ ಗೊಬ್ಬರ, ಮಿಶ್ರಬೆಳೆ–ಹೀಗೆ ಪರಿಸರಪೂರಕ ಚಟುವಟಿಕೆಯಾಗಿರುತ್ತದೆ. ಈ ಕೃಷಿ ಮರಾಧಾರಿತ, ಪ್ರಾಣಿಆಧಾರಿತ, ಸ್ಥಳೀಯ ಸಂಪನ್ಮೂಲಾಧಾರಿತವಾಗಿರುತ್ತದೆ. ಈ ಸಾವಯುವ ಕೃಷಿ ಮುಖ್ಯವಾಗಿ ಭೂಮಂಡಲದ ಸಮಸ್ತ ಚರಾಚರಾ ವಸ್ತು ಮತ್ತು ಜೀವಿಗಳನ್ನು ಒಳಗೊಂಡಂತೆ ಕೃಷಿಮಾಡುವ ವಿಧಾನ. ಈ ಹಿನ್ನಲೆಯಲ್ಲಿ ಕೃಷಿಯ ಮಹತ್ವ ಮತ್ತು ಪ್ರಾಮುಖ್ಯತೆಯನ್ನು ಕುರಿತು ರಾಂಧನ್ ಎಂಬ ವಿದ್ವಾಂಸ ತಮ್ಮ ಹಿಸ್ಟರಿ ಆಫ್ ಅಗ್ರಿಕಲ್ಚರ್ ಇನ್ ಇಂಡಿಯಾ ಎಂಬ ಕೃತಿಯಲ್ಲಿ ಹೀಗೆ ಹೇಳುತ್ತಾರೆ. "ಅಕ್ಕಿಯನ್ನು ಕಂಡುಹಿಡಿದ ವ್ಯಕ್ತಿ ಈ ಪ್ರಪಂಚಕ್ಕೆ ಸಲ್ಲಿಸಿದ ಸೇವೆಯಷ್ಟು ಯಾವ ರಾಜನು ಸಲ್ಲಿಸಿಲ್ಲ" ಈ ಮಾತನ್ನು ನೋಡಿದರೆ "ಕೃಷಿ ಮೊದಲು ಸರ್ವಕೆ" ಎಂಬ ಕುಮಾರವ್ಯಾಸನ ಮಾತು ಅಕ್ಷರಶಃ ನಿಜವೆನಿಸುತ್ತದೆ.

*****

## ೩. ಸುಸ್ಥಿರ ಕೃಷಿ ಪಾಠಗಳು

**– ಎಲ್.ನಾರಾಯಣ ರೆಡ್ಡಿ**

ಇವತ್ತಿನ ಕೃಷಿರಂಗದ ಸಮಸ್ಯೆಗಳನ್ನು ಹೀಗೆ ವಿವರಿಸಬಹುದು

- ಪಾರಂಪರಿಕ ಕೃಷಿಯಲ್ಲಿ ಅನುಸರಿಸಲಾಗುತ್ತಿದ್ದ ಕೃಷಿ ಪದ್ಧತಿಗಳು, ರೈತರಲ್ಲಿದ್ದ ಅಪಾರವಾದ ಜ್ಞಾನ ತಲೆಮಾರಿನಿಂದ ತಲೆಮಾರಿಗೆ ಸರಾಗವಾಗಿ ಹರಿದುಬಾರದೇ ಹೋಗಿರುವುದು. ಬಹುಮುಖ್ಯವಾಗಿ ಬೀಜರಕ್ಷಣೆ, ಗೊಬ್ಬರ ತಯಾರಿಸಿಕೊಳ್ಳುವ ಕ್ರಮ, ಬಹುಬೆಳೆ ಪದ್ದತಿ, ಕೊಯ್ಲು, ಆಹಾರ ಶೇಖರಣೆ ಇನ್ನೂ ಮುಂತಾದ ವಿಚಾರಗಳಲ್ಲಿ ನಮ್ಮ ಹಿರಿಯರು ಅನುಸರಿಸುತ್ತಿದ್ದ ವಿಧಾನಗಳು ಅರವತ್ತರ ದಶಕದ ನಂತರ ಮೂಲೆಗುಂಪಾಗಿ ಹೋಗಿರುವುದು.
- ರಾಸಾಯನಿಕ ಕೃಷಿ ಬಂದ ಮೇಲೆ ಗೊಬ್ಬರ, ಕೀಟನಾಶಕ ಅವಲಂಬನೆಯಿಂದ ಕೃಷಿ ವೆಚ್ಚ ದುಬಾರಿಯಾಗಿರುವುದು ಮತ್ತು ಮಣ್ಣಿನ ಆರೋಗ್ಯ ಹದಗೆಟ್ಟು ಇಳುವರಿ ಕುಂಠಿತಗೊಳ್ಳುತ್ತಿರುವುದು; ಭೂಮಿ, ಗಾಳಿ, ನೀರು, ಆಹಾರ, ಪರಿಸರ ಹಾನಿಗೊಂಡಿರುವುದು.
- ಕೃಷಿ ಉತ್ಪನ್ನಗಳಿಗೆ ಸರ್ಕಾರಗಳು ಯೋಗ್ಯ ಬೆಲೆ ನೀಡದಿರುವುದು.
- ರೈತರು ಏಕಬೆಳೆ ಬೇರೆ ಆಹಾರ ಪದಾರ್ಥಗಳನ್ನು ಮಾರುಕಟ್ಟೆಯಲ್ಲಿ ದುಬಾರಿ ಬೆಲೆಗೆ ಕೊಳ್ಳುತ್ತಿರುವುದು.
- ಸಾವಿರಾರು ಎಕರೆ ಜಮೀನು ಹೊಂದಿರುವ ವಿದೇಶಿ ರೈತರಿಗೆ ಅಲ್ಲಿನ ಸರ್ಕಾರಗಳು ದೊಡ್ಡ ರೀತಿಯಲ್ಲಿ ಸಬ್ಸಿಡಿ ನೀಡಿ ಕೃಷಿ ಉತ್ಪಾದನಾ ವೆಚ್ಚವನ್ನು ಸರಿದೂಗಿಸುತ್ತಿರುವುದು; ನಮ್ಮ ದೇಶದ ರೈತರು ಮುಕ್ತ ಮಾರುಕಟ್ಟೆಯಲ್ಲಿ ಅವರೊಂದಿಗೆ ಸ್ಪರ್ಧಿಸಲಾಗದೇ ಸೋಲುತ್ತಿರುವುದು.

**ಇದಕ್ಕೆ ಪರ್ಯಾಯ ಮಾರ್ಗಗಳೆಂದರೆ:**

- ಪಾರಂಪರಿತ ಕೃಷಿ ಜ್ಞಾನ ಅಳಡಿಸಿಕೊಳ್ಳುವುದು, ಬೀಜ ಮತ್ತು ಗೊಬ್ಬರ, ಕೀಟನಾಶಕ ತ್ಯಜಿಸುವುದು.
- ಬಹುಬೆಳೆ ಬೆಳೆಯುವುದು, ಮೇವು–ಆಹಾರ–ಹಸಿರೆಲೆ–ಕಟ್ಟಿಗೆ ನೀಡುವ ಮರಾಧಾರಿತ ಕೃಷಿ ಮಾಡುವುದು.

- ❖ ಹಸು–ಕುರಿ–ಮೇಕೆ–ಕೋಳಿ–ಮೀನು–ಜೇನು ಮುಂತಾದವುಗಳ ಸಾಕಾಣಿಕೆಯಲ್ಲಿ ತೊಡಗುವುದು.
- ❖ ಸರ್ಕಾರಗಳು ಪರಿಸರ ಸ್ನೇಹಿ ಕೃಷಿ ಮಾಡಲು ಉತ್ತೇಜನ ಮತ್ತು ನೆರವು ನೀಡುವುದು.
- ❖ ಕುಟುಂಬಕ್ಕೆ ಅಗತ್ಯವಿರುವ ಮತ್ತು ಸ್ಥಳೀಯ ಪ್ರದೇಶದಲ್ಲಿ ಬೇಡಿಕೆ ಇರುವ ಬೆಳೆ ಬೆಳೆಯುವುದು ಹಾಗೂ ಬೆಳೆದ ಬೆಲೆಗೆ ಸೂಕ್ತ ಬೆಲೆ ನಿಗದಿ ಮಾಡಿ, ನೇರ ಮಾರಾಟ ಮಾಡುವುದು.

ಸರ್ಕಾರ ರೈತರ ಉತ್ಪನ್ನಗಳಿಗೆ ಯೋಗ್ಯ ಬೆಲೆ ನೀಡಿದಾಗಿ ಕೂಲಿ ಕಾರ್ಮಿಕರಿಗೆ ಹೆಚ್ಚಿನ ಕೂಲಿ ಹಳ್ಳಿಗಳಲ್ಲೇ ಸಿಗುವಂತಾಗಿ ನಗರಕ್ಕೆ ವಲಸೆ ಬರುವುದು ನಿಲ್ಲುತ್ತದೆ. ರೈತರು ಎದುರಿಸುತ್ತಿರುವ ಕಾರ್ಮಿಕರ ಅಭಾವ ತಪ್ಪಿಸಿ ಹೆಚ್ಚಿನ ಉತ್ಪಾದನೆಯಾಗುತ್ತದೆ.

ರೈತರ ಸಾಕಷ್ಟು ಸಂಕಷ್ಟಗಳಿಗೆ ರಾಸಾಯನಿಕ ಕೃಷಿ, ಅವೈಜ್ಞಾನಿಕ ಬೆಳೆ ನೀತಿ ಮತ್ತು ಆಹಾರ ಕ್ರಮಗಳು ಪ್ರಮುಖ ಆಂಶಗಳಾಗಿ ಕಾಣುತ್ತವೆ. ಇದರಿಂದ ಭೂಮಿಯ ಫಲವತ್ತತೆ ಮತ್ತು ಮನುಷ್ಯರ ಆರೋಗ್ಯದ ಮೇಲೆ ಆದ ದುಷ್ಪರಿಣಾಮಗಳು

ಎಲ್ಲರಿಗೂ ತಿಳಿದ ವಿಚಾರವಾಗಿರುವುದರಿಂದ ಈ ಬಗ್ಗೆ ಪ್ರತ್ಯೇಕವಾಗಿ ಹೇಳು ಅವಶ್ಯಕತೆ ಇಲ್ಲ. ಬೆಳೆ ನೀತಿ ಮತ್ತು ಆಹಾರ ಕ್ರಮ ಸರಿಪಡಿಸುವ ಅನಿವಾರ್ಯತೆ ಮತ್ತು ರೈತರ ಜೀವನ ಸುಧಾರಣೆಗೆ ಮಾರ್ಪಾಡಾಗಬೇಕಾದ ಕೆಲವು ಮುಖ್ಯ ವಿಚಾರಗಳ ಬಗ್ಗೆ ಗಮನಹರಿಸೋಣ.

ಆಹಾರ ಭದ್ರತೆಯ ಹೆಸರಿನಲ್ಲಿ ನಮಗೆ ಅಗತ್ಯಕ್ಕಿಂತ ಹೆಚ್ಚು ಉತ್ಪಾದನೆ ಮಾಡುತ್ತಿದ್ದೇವೆ. ಹಾಗೆಯೇ, ರೈತರ ಆತ್ಮಹತ್ಯೆಗಳು ದಾಖಲೆಯ ಪ್ರಮಾಣದಲ್ಲಿ ನಡೆದಿದೆ. ಏಕರೂಪ ಕೃಷಿ ಜಾರಿಗೆ ಬಂದು, ಬೆಳೆ ವೈವಿಧ್ಯವನ್ನು ಕಳೆದುಕೊಂಡು ಏನೆಲ್ಲಾ ಹಾನಿಯಾಯಿತು ಎಂಬುದರ ಅನುಭವ ಆಗಿದೆ. ನಮ್ಮಲ್ಲಿದ್ದ ಆಹಾರ ಪದ್ಧತಿ, ಬೆಳೆ ಪದ್ಧತಿ, ವೈವಿಧ್ಯತೆ ಇವೆಲ್ಲವೂ ನಾಶವಾಗಿ, ನಮ್ಮ ಆಹಾರ ಮತ್ತು ಬೆಳೆಗಳು ಹೊರಗಡೆಯಿಂದ ನಿಯಂತ್ರಿಸಲ್ಪಡುತ್ತಿವೆ. ಆ ಮೂಲಕ ಕೃಷಿ ಮತ್ತು ಮಾರುಕಟ್ಟೆಯನ್ನು ಬಹುರಾಷ್ಟ್ರೀಯ ಕಂಪನಿಗಳು ವ್ಯವಸ್ಥಿತವಾಗಿ ತಮ್ಮ ಲಾಭಕ್ಕೆ ತಕ್ಕಂತೆ ಬಳಸಿಕೊಳ್ಳುತ್ತಿವೆ. ಸರ್ಕಾರಗಳಿಗೆ ಆ ಕಂಪನಿಗಳ ಮೂಲಕ ದೇಣಿಗೆ ಸಿಗುವುದರಿಂದ ಅವುಗಳ ತಾಳಕ್ಕೆ ಕುಣಿಯುತ್ತಿವೆ. ರಾಸಾಯನಿಕ ಕೃಷಿಗೆ ಬೇಕಾಗುವ ಬೃಹತ್ ಯಂತ್ರಗಳಿಗೆ ನಾವು ಪಾಶ್ಚಿಮಾತ್ಯ ದೇಶಗಳ ಬಳಿ ಅಂಗಲಾಚುತ್ತಿದ್ದೇವೆ. ಈ ಕೃಷಿ ಯಂತ್ರಗಳು ಶೇ.೬೦ರಷ್ಟು ಕೃಷಿ ಉದ್ಯೋಗ ಅವಲಂಬಿಸಿರುವ ಜನಗಳ ಉದ್ಯೋಗ ಕಳೆಯುತ್ತವೆ. ಪಾಶ್ಚಿಮಾತ್ಯ ದೇಶಗಳಲ್ಲಿ ಜನಸಂಖ್ಯೆ ಕಡಿಮೆ ಇರುವುದರಿಂದ ಅದು ಅವರಿಗೆ ಸರಿ ಹೊಂದಬಹುದು. ನಮ್ಮ ಜನಸಂಖ್ಯೆಗೆ ಯಾಂತ್ರೀಕರಣ ಮಾರಕವಾಗಬಹುದು.

ಅಮೆರಿಕ ಮತ್ತು ಮುಂದುವರೆದ ದೇಶಗಳು ಅಷ್ಟೆಲ್ಲಾ ತಾಂತ್ರಿಕತೆ ಬಳಸಿ ಹೆಚ್ಚು ಇಳುವರಿ ಪಡೆಯುತ್ತಿರುವುದು. ಆದರೆ, ಅಲ್ಲಿನ ಉತ್ಪಾದನಾ ವೆಚ್ಚ ಊಹಿಸಲಸಾಧ್ಯ, ಶುದ್ಧ ನೀರು, ಗಾಳಿ ಕ್ಷೀಣಿಸುತ್ತಿದೆ. ಮಣ್ಣು ಸಾಯುತ್ತಿದೆ. ಜಾಗತಿಕ ತಾಪಮಾನ ಏರಿಕೆಯಾಗುತ್ತಿದೆ. ಕ್ಯಾನ್ಸರ್ ಮುಂತಾದ ಮಾರಣಾಂತಿಕ ಕಾಯಿಲೆಗಳು ಏರುಗತಿಯಲ್ಲಿ ಅವರಿಸಿಕೊಳ್ಳುತ್ತಿವೆ. ಬಡದೇಶಗಳ ಮೇಲೆ ಆರ್ಥಿಕವಾಗಿ ಹಿಡಿತ ಸಾಧಿಸಲು ಮುಂದುವರಿದ ದೇಶಗಳು ಮಾಡುತ್ತಿರುವ ನೀತಿಗಳಿಂದ ಮುಂದೆ ಮನುಕುಲವೇ ನಾಶವಾದರೂ ಅಚ್ಚರಿ ಇಲ್ಲ.

ಅಮೆರಿಕ, ಕೆನಡಾ, ಅಸ್ಟ್ರೇಲಿಯಾ, ಜಪಾನ್, ಜರ್ಮನಿ ಮುಂತಾದ ಶ್ರೀಮಂತ ರಾಷ್ಟ್ರಗಳಲ್ಲಿ ಶೇ.೧೦ಕ್ಕಿಂತ ಕಡಿಮೆ ಜನ ಕೃಷಿ ಮಾಡಿ ಉಳಿದ ಶೇ.೯೦ರಷ್ಟು ಜನರಿಗೆ ಆಹಾರ, ಬಟ್ಟೆ ಕೊಟ್ಟು, ಕೃಷಿ ಉತ್ಪನ್ನಗಳನ್ನು ರಫ್ತು ಮಾಡುತ್ತಿದ್ದಾರೆ. ಮುಂದುವರೆದ ದೇಶಗಲ್ಲಿ ರೈತರು ಮತ್ತು ಗ್ರಾಹಕರಿಗೆ ಉತ್ಪಾದನೆ ಮಾಡಲು ಮತ್ತು ಖರೀದಿಸಲು ಹೊರೆಯಾಗದ ರೀತಿ ಸರ್ಕಾರಗಳು ಸಬ್ಸಿಡಿ ನೀಡುತ್ತಾ ಬಂದಿದೆ. ಈ ದೇಶಗಳು ಹೆಚ್ಚಿಗೆ ಸಬ್ಸಿಡಿ ಕೊಡುತ್ತದೆಯಾದುದರಿಂದ ಆ ದೇಶಗಳ ರೈತರ ಜೊತೆ ಸಬ್ಸಿಡಿ ಸಿಗದ ನಮ್ಮ ದೇಶದ ರೈತರು ಸ್ಪರ್ಧೆ ಮಾಡಲು ಸಾಧ್ಯವಿಲ್ಲ. ಈ ದೇಶಗಳು ಬೃಹತ್ ಕೃಷಿ ಉತ್ಪಾದನೆ ಮಾಡಲು ಹೇರಳವಾಗಿ ರಾಸಾಯನಿಕ ಗೊಬ್ಬರ, ಕ್ರಿಮಿನಾಶಕಗಳನ್ನು ಹಾಕುವುದರಿಂದ ಭೂಮಿಯ ಫಲವತ್ತತೆ ನಾಶವಾಗಿ ಭೂಮಿ ಬರಡಾಗುತ್ತಿದೆ. ಅಮೇರಿಕದಲ್ಲಿ ವ್ಯಾಪಕ ರಸಗೊಬ್ಬರ ಬಳಕೆಯ ಪರಿಣಾಮ ಸುಮಾರು ೧೦ಲಕ್ಷ ಹೆಕ್ಟೇರು ಕೃಷಿ ಭೂಮಿ ಕೃಷಿಗೆ ಯೋಗ್ಯವಲ್ಲ ಎಂದು ಬೀಳುಬಿಡಲಾಗಿದೆ. ಭಾರತಕ್ಕಿಂತ ಅಮೆರಿಕ ಭೂಪ್ರದೇಶ ಮೂರು ಪಟ್ಟು ಹೆಚ್ಚಿರುವುದರಿಂದ ಅವರು ಜೀರ್ಣಿಸಿಕೊಳ್ಳಬಹುದೇನೋ. ಆದರೆ, ಭಾರತದಲ್ಲಿ ಒಂದು ಗುಂಟೆ ಭೂಮಿ ಕಳೆದುಕೊಳ್ಳಲು ಸಾಧ್ಯವೇ? ಉಗ್ರ ಕೃಷಿ ವಿಧಾನಕ್ಕೆ ಪ್ರಕೃತಿಯೇ ಪ್ರತಿಭಟನೆ ವ್ಯಕ್ತಪಡಿಸುತ್ತಿದೆ. ರೋಗಗಳಿಗೆ ತುತ್ತಾಗುವವರ ಸಂಖ್ಯೆ ಹೆಚ್ಚುತ್ತಿದೆ. ತಾಪಮಾನ ಏರಿಕೆಯಾಗುತ್ತಿದೆ. ಅಂತರ್ಜಲ ಕಲುಷಿತವಾಗುತ್ತಿದೆ. ಕುಲಾಂತರಿ ತಂತ್ರಜ್ಞಾನ ಬಳಸಿ ಕಂಪನಿಗಳು ತಯಾರಿಸುತ್ತಿರುವ ಬೀಜಗಳು ಮನುಷ್ಯನ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮಗಳನ್ನು ಉಂಟುಮಾಡುತ್ತಿವೆ. ಅಮೆರಿಕದಿಂದ ಬಂದಿರುವ ವರದಿಯ ಪ್ರಕಾರ ಈ ತಂತ್ರಜ್ಞಾನದಿಂದ ತಯಾರಾದ ಮುಸುಕಿನ ಜೋಳವನ್ನು ತಿಂದರೆ ಗಂಡಸರಲ್ಲಿ ವೀರ್ಯಾಣುವಿನ ಚಟುವಟಿಕೆಯೇ ನಿಂತು, ಸ್ತ್ರೀ ಗರ್ಭಿಣಿಯಾಗುವ ಅವಕಾಶವೇ ಇಲ್ಲವಾಗುತ್ತದೆ.

ಪರಿಸರ ಸ್ನೇಹಿ ಕೃಷಿ ಮೂಲಕ ನಮ್ಮ ಬಹು ಸಂಸ್ಕೃತಿ, ವೈವಿಧ್ಯತೆ ಬಹುಬೆಳೆ ಪದ್ಧತಿ, ಆಹಾರ ಸಂಸ್ಕೃತಿ, ಶುದ್ಧ ಪರಿಸರ ಉಳಿಸಿಕೊಳ್ಳಬಹುದೇ ಹೊರತು, ರಾಸಾಯನಿಕ ಕೃಷಿಯಿಂದ

ಸಾಧ್ಯವಿಲ್ಲ. ಇಂದು ಭಾರತ ದೇಶದಲ್ಲಿ ಸಣ್ಣ ಹಿಡುವಳಿ ಪ್ರಮಾಣ ಜಾಸ್ತಿಯಾಗುತ್ತಾ ಹೋದಂತೆಲ್ಲ ಆ ಭೂಮಿಯಿಂದ ಬರುವ ಆದಾಯದಿಂದ ಜೀವನ ನಿರ್ವಹಿಸಲು ಸಾಧ್ಯವಾಗದೆ, ನಗರಗಳಿಗೆ ವಲಸೆ ಹೋಗುವುದು ಅನಿವಾರ್ಯವಾಗಿದೆ. ಇದರಿಂದ ಮುಂದೆ ಮತ್ತೊಂದು ಭೀಕರ ಸಮಸ್ಯೆಗಳ ಸರಮಾಲೆ ಸೃಷ್ಟಿಯಾಗುವುದರಲ್ಲಿ ಯಾವುದೇ ಸಂಶಯವಿಲ್ಲ. ಕೆಲವು ಯುವಕರ ವಿದ್ಯಾಭ್ಯಾಸ ಮುಗಿದ ನಂತರ ಸೂಕ್ತ ಉದ್ಯೋಗ ದೊರಕದೇ ಅಥವಾ ಇವರು ಉದ್ಯೋಗದಲ್ಲಿ ನೆಮ್ಮದಿ ಇಲ್ಲದೆ ಕೃಷಿ ಆಯ್ಕೆ ಮಾಡಿಕೊಳ್ಳುತ್ತಿರುದನ್ನು ನಾವು ಕಾಣುತ್ತಿದ್ದೇವೆ. ಇದು ಒಳ್ಳೆಯ ಬೆಳವಣಿಗೆ. ಇಂಥ ಯುವಕರಿಗೆ ಕೃಷಿ ತೋಟಗಳಿಗೆ ಭೇಟಿ ಮಾಡಿಸುವುದು, ಕೃಷಿ ತರಬೇತಿ ಕಾರ್ಯಾಗಾರದಲ್ಲಿ ಮಣ್ಣಿನ ಬಗ್ಗೆ ಸೂಕ್ತ ತಿಳಿವಳಿಕೆ ನೋಡುವುದು ನಮ್ಮ ಜವಾಬ್ದಾರಿ ಮತ್ತು ಅತ್ಯವಶ್ಯಕವಾಗಿ ಮಾಡಬೇಕಾದ ಕರ್ತವ್ಯ ಕೂಡ.

ಏಕಬೆಳೆ ಬೆಳೆದು, ಆ ಬೆಳೆಯನ್ನು ಮಾರಾಟ ಮಾಡಿ ಬಂದ ಹಣದಲ್ಲಿ ರೈತ ತನ್ನ ದಿನನಿತ್ಯದ ಅವಶ್ಯಕತೆಗೆ ಬೇಕಾದ ಆಹಾರ ಕೊಂಡುಕೊಳ್ಳಲಾಗುವುದಿಲ್ಲ. ಮಾರಾಟ ಮಾಡುವ ಯಾವುದೇ ಬೆಳೆಯನ್ನು ರೈತರು ಪುನ: ಮಾರುಕಟ್ಟೆಯಲ್ಲಿ ಕೊಂಡುಕೊಳ್ಳಲು ಮಾರಾಟ ಮಾಡಿದ ಬೆಲೆಗಿಂತ ಮೂರರಿಂದ ನಾಲ್ಕು ಪಟ್ಟು ಹೆಚ್ಚು ಹಣ ವ್ಯಯಿಸಬೇಕಾಗುತ್ತದೆ. ಇದನ್ನು ಎಲ್ಲಾ ರೈತರು ಮುಖ್ಯವಾಗಿ ಅರಿಯಬೇಕು. ಮನೆ ಬಳಕೆಗೆ ಬೆಳೆಯಬಹುದಾದ ಆಹಾರ ಬೆಳೆದುಕೊಂಡು, ಆಹಾರ ಸ್ವಾವಲಂಬನೆ ಸಾಧಿಸುವುದು, ನೇರ ಮಾರಾಟ ಸಣ್ಣ ಯಂತ್ರಗಳ ಮೂಲಕ ಸಂಸ್ಕರಣೆ, ಮೌಲ್ಯವರ್ಧನೆ, ಬೆಲೆ ನಿರ್ಧಾರ ಮಾಡುವ ಸ್ವತಂತ್ರ ಹೀಗೆ ತಮ್ಮದೇ ಕೃಷಿ ಕ್ರಮ ಅನುಸರಿಸಬೇಕು.

ಕೃಷಿಯಲ್ಲಿ ಹೆಚ್ಚು ಬಂಡವಾಳ ಹಾಕಿ ಹೆಚ್ಚು ಇಳುವರಿ ಪಡೆಯುವ ಸಾಹಸ ಕೆಲವು ವರ್ಷಗಳಿಗೆ ಸೀಮಿತವೇ ಹೊರತು, ಕೈಗಾರಿಕೆಗಳಲ್ಲಿ ಯಂತ್ರದ ಮೂಲಕ ತೆಗೆಯುವ ಉತ್ಪನ್ನದಂತೆ ನಿರಂತರವಾಗಿ ಬೆಳೆ ಬೆಳೆಯಲಾಗುವುದಿಲ್ಲ. ಈ ಹುಚ್ಚು ಕಲ್ಪನೆ ಪರಿಸರಕ್ಕೆ ಮತ್ತು ರೈತರ ಆರ್ಥಿಕತೆಗೆ ದೊಡ್ಡ ಪೆಟ್ಟು. ಆಯಾಯ ಪ್ರದೇಶಗಳಲ್ಲಿ ಯಾವುದೇ ಒಳಸುರಿ, ರೋಗಬಾಧೆ ಹೆಚ್ಚಾಗಿ ಬಾಧಿಸದೇ ಸಹಜವಾಗಿ ಬೆಳೆಯುವ ಸ್ಥಳೀಯ ಬೆಳೆ ಆಯ್ಕೆ ಎಲ್ಲಾ ರೀತಿಯಿಂದಲೂ ಸೂಕ್ತ. ಹೆಚ್ಚು ಇಳುವರಿ ತೆಗೆಯಬೇಕೆಂದು ಭೂಮಿಗೆ ಒತ್ತಡ ಹಾಕುವುದಲ್ಲದೆ, ರೈತ ಆರ್ಥಿಕ ಒತ್ತಡಕ್ಕೆ ಸಿಲುಕುತ್ತಿದ್ದಾನೆ. ಸಹಜವಾದ ಇಳುವರಿಯಲ್ಲಿ ಉತ್ಪನ್ನದ ಗುಣಮಟ್ಟ ಹೆಚ್ಚಿರುತ್ತದೆ ಹಾಗೂ ಪೂರೈಕೆ–ಬೇಡಿಕೆ ಸರಿ ಹೊಂದುವುದರಿಂದ ಮಾರುಕಟ್ಟೆ ಮತ್ತು ಬೆಲೆ ಸ್ಥಿರತೆ ಕಾಪಾಡಿಕೊಳ್ಳಬಹುದು. ಇಳುವರಿ ಕಡಿಮೆಯಾದರೆ ಬೆಲೆ ಜಾಸ್ತಿಯಾಗುತ್ತದೆ. ಅದು ರೈತರಿಗೆ ತೊಂದರೆಯಾಗುವುದಿಲ್ಲ. ಇಳುವರಿ ಕಡಿಮೆಯಾದರೆ ರೈತರು ಚಿಂತಿಸಬೇಕಿಲ್ಲ. ಕೊಂಡು ತಿನ್ನುವ ಗ್ರಾಹಕನಿಂದ ನ್ಯಾಯಯುತ ಬೆಲೆ ದೊರೆಯುತ್ತದೆ. ಆದ್ದರಿಂದ ನಾವು ಹೆಚ್ಚು ಬಂಡವಾಳ ಹಾಕದೆ

ಸಹಜ ಇಳುವರಿ ಪಡೆಯುವ ಬಗ್ಗೆ ಗಮನಹರಿಸಬೇಕು. ಭೂಮಿ ಸಹಜವಾಗಿ ನೀಡುವ ಇಳುವರಿ ಎಲ್ಲಾ ದೃಷ್ಟಿಯಿಂದಲೂ ಒಳ್ಳೆಯದು. ಪೂರೈಕೆ–ಬೇಡಿಕೆ ಸರಿಯಾದರೆ ಆಹಾರಕ್ಕೆ ಎಲ್ಲ ರೀತಿಯ ಮೌಲ್ಯವಿರುತ್ತದೆ.

ರೈತರು ರಾಸಾಯನಿಕ ಕೃಷಿಯಿಂದ ಹೊರಬಂದು ಸ್ಥಳೀಯ ಪ್ರದೇಶಕ್ಕೆ ಅನುಗುಣವಾಗಿ ಕೃಷಿಕ್ರಮ, ನೇರ ಮಾರಾಟ/ಮಾರುಕಟ್ಟೆ ನಿರ್ಮಾಣ ಮಾಡಿಕೊಳ್ಳುವ ನಿಟ್ಟಿನಲ್ಲಿ ಪ್ರಯೋಗಶೀಲರಾಗಬೇಕು. ರೈತರು ತಮ್ಮ ಶ್ರಮ, ಸಮಯ, ಬಂಡವಾಳಕ್ಕೆ ಮಹತ್ವ ಕೊಟ್ಟು ಯೋಜನಾಬದ್ಧವಾಗಿ ಕೃಷಿ ಮಾಡಿದರೆ ಬೇರೆ ಕ್ಷೇತ್ರದ ಜನರಂತೆಯೇ ದುಡಿಮೆಗೆ ತಕ್ಕ ಆದಾಯ ಪಡೆದು ಆರ್ಥಿಕ ಭದ್ರತೆ ಸಾಧಿಸಬಹುದು.

*****

## ೪. ಕೃಷಿ ಉತ್ಪನ್ನಕ್ಕೂ ಆನ್‌ಲೈನ್ ಸ್ಪರ್ಶ

**– ಸಚ್ಚಿದಾನಂದ ಕುರಗುಂದ**

ಕಿರಿದಾಗಿರುವ ವ್ಯಾಪಾರ ವಹಿವಾಟು ಗಡಿಗಳನ್ನು ಮೀರಿ ಬೆಳೆದಿದೆ. ಬೆರಳ ತುದಿಯ ಸ್ಪರ್ಶದಲ್ಲೇ ನಡೆಯಲು ಆರಂಭವಾಗಿರುವ ವಹಿವಾಟು ಮಣ್ಣಿನ ಮಕ್ಕಳು ನಿಬ್ಬೆರಗಾಗುವಂತೆ ಮಾಡಿದೆ.

ಅಂತರ್ಜಾಲದ ನಂಟು ಬೆಸೆದುಕೊಂಡು ಕ್ಷಣ ಮಾತ್ರದಲ್ಲೇ ವಸ್ತುಗಳನ್ನು ಖರೀದಿಸಬಹುದಾದ ಅಥವಾ ಮಾರಾಟ ಮಾಡಬಹುದಾದ ಆನ್ಸೈನ್ ವ್ಯವಸ್ಥೆ ಈಗ ಮಾರುಕಟ್ಟೆಯ ಅವಿಭಾಜ್ಯ ಅಂಗ. ರಾಜ್ಯದಲ್ಲಿನ ಕೃಷಿ ಭೂಮಿಯಲ್ಲಿ ಬೆಳೆಯುವ ಉತ್ಪನ್ನಗಳೂ ಸಹ ಈಗ ಆನ್‌ಲೈನ್ ಮಾರಾಟ ವಹಿವಾಟಿಗೆ ಸೇರ್ಪಡೆಯಾಗುವ ಮೂಲಕ ಬದಲಾವಣೆಯ ಶಕೆ ಆರಂಭವಾಗಿದೆ. ಇಡೀ ರಾಜ್ಯದ ಮಾರುಕಟ್ಟೆಯನ್ನು ಒಂದೇ ಸೂರಿನ ಅಡಿಯಲ್ಲಿ ತರುವ ಪ್ರಯತ್ನ ಬೆಲೆ ಕುಸಿತವನ್ನು ಸಹ ನಿಯಂತ್ರಸಬಲ್ಲದು.

ಗುಲ್ಬರ್ಗದ ವರ್ತಕ ಅಲ್ಲಿಂದಲೇ ತಿಪಟೂರಿನಲ್ಲಿರುವ ಕೊಬ್ಬರಿಯನನನ್ನು ಖರೀದಿಸಬಹುದು. ಬೆಂಗಳೂರಿನ ಖರೀದಿದಾರ ಚಿತ್ರದುರ್ಗದ ಮೆಕ್ಕೆಜೋಳವನ್ನು ರಾಜಧಾನಿಯಲ್ಲಿದ್ದುಕೊಂಡೇ ಆನ್‌ಲೈನ್‌ನಲ್ಲೇ ಖರೀದಿಸಬಹುದು. ಒಟ್ಟಾರೆಯಾಗಿ ದೇಶದೆಲ್ಲೆಡೆಯ ವರ್ತಕರಿಗೂ ರಾಜ್ಯದ ಕೃಷಿ ಮಾರುಕಟ್ಟೆಯಲ್ಲಿ ಮಾರಾಟಕ್ಕಿಡಲಾಗಿರುವ ಕೃಷಿ ಉತ್ಪನ್ನಗಳ ಮಾಹಿತಿ ಸುಲಭದಲ್ಲಿ ಅಂತರ್ಜಾಲದಲ್ಲಿ ಲಭ್ಯವಾಗುತ್ತದೆ. ಕೃಷಿ ಉತ್ಪನ್ನ ಖರೀದಿಯಲ್ಲಿ ಸ್ಪರ್ಧೆ ಏರ್ಪಟ್ಟರೆ ಅತ್ಯುತ್ತಮ ಬೆಲೆಯೂ ರೈತರಿಗೆ ದೊರೆಯಲು ಅವಕಾಶವಾಗುತ್ತದೆ.

ರೈತರು ಸಹ ವರ್ತಕರ ಅಥವಾ ದಲ್ಲಾಳರ ಬೆನ್ನುಹತ್ತಿ ಹಣಕ್ಕಾಗಿ ಅಲೆದಾಡಬೇಕಾಗಿಲ್ಲ. ಕೃಷಿ ಉತ್ಪನ್ನಗಳು ಮಾರಾಟವಾದ ತಕ್ಷಣ ನೇರವಾಗಿ ರೈತರ ಖಾತೆಗೆ ಹಣ ಪಾವತಿಸುವ ವ್ಯವಸ್ಥೆಯೂ ಇಲ್ಲಿದೆ. ಕೃಷಿ ಮಾರಾಟ ಇಲಾಖೆ ಇಂತಹ ಪ್ರಯೋಗ ಜಾರಿಗೊಳಿಸುವ ಮೂಲಕ ರೈತರಿಗೆ ಸ್ಪರ್ಧಾತ್ಮಕ ದರದಲ್ಲಿ ಕೃಷಿ ಉತ್ಪನ್ನಗಳಿಗೆ ಬೆಲೆ ದೊರಕಿಸಿಕೊಡುವ ಪ್ರಯತ್ನ ಆರಂಭಿಸಿದೆ. ಜತೆಗೆ ದೇಶದ ಎಲ್ಲ ಮಾರುಕಟ್ಟೆಗಳ ಜೊತೆಗೆ ರಾಜ್ಯದ ಕೃಷಿ ಉತ್ಪನ್ನಗಳ ಮಾರುಕಟ್ಟೆಯನ್ನು ಅಂತರ್ಜಾಲದ ಮೂಲಕ ಜೋಡಿಸುವ ಪ್ರಯತ್ನವೂ ಇದಾಗಿದೆ.

ಪ್ರಥಮವಾಗಿ ರಾಜ್ಯದಲ್ಲಿ ಜಾರಿಗೆ ಬಂದಿರುವ ಆನ್‌ಲೈನ್ ಮಾರಾಟ ವ್ಯವಸ್ಥೆ ಕೃಷಿ ಕ್ಷೇತ್ರದಲ್ಲಿ ಮತ್ತು ರೈತರ ಬದುಕಿನಲ್ಲಿ ಕ್ರಾಂತಿಕಾರಿ ಬದಲಾವಣೆ ವ್ಯವಸ್ಥೆ ಕೃಷಿ ಕ್ಷೇತ್ರದಲ್ಲಿ ಮತ್ತು ರೈತರ ಬದುಕಿನಲ್ಲಿ ಕ್ರಾಂತಿಕಾರಿ ಬದಲಾವಣೆ ತರಲಿದೆ ಎಂದೇ ಆಶಿಸಲಾಗಿದೆ. ಕೃಷಿ ಉತ್ಪನ್ನಗಳ

ಮಾರಾಟದಲ್ಲಿ ಸರಳ ಪ್ರಕ್ರಿಯೆ, ನಿಖರತೆ, ಪಾರದರ್ಶಕತೆ ತರುವ ಮೂಲಕ ಮಾರಾಟ ವ್ಯವಸ್ಥೆಯನ್ನು ಸುಗಮ ಹಾಗೂ ಸುವ್ಯವಸ್ಥಿತಗೊಳಿಸುವ ಸದುದ್ದೇಶದಿಂದ ರಾಜ್ಯ ಸರ್ಕಾರ "ಕೃಷಿ ಮಾರಾಟ ನೀತಿ–೨೦೧೩" ಜಾರಿಗೊಳಿಸಿದೆ. ನಿಗದಿತ ಸಮಯದಲ್ಲಿ ಸ್ಪರ್ಧಾತ್ಮಕ ಪೈಪೋಟಿಯೊಂದಿಗೆ ರೈತರ ಉತ್ಪನ್ನಗಳಿಗೆ ಗುಣಮಟ್ಟಕ್ಕೆ ತಕ್ಕ ಬೆಲೆ ಒದಗಿಸುವುದರ ಜೊತೆಗೆ ರೈತರಿಗೆ ತಮ್ಮ ಉತ್ಪನ್ನಗಳು ಮಾರಾಟವಾದ ತಕ್ಷಣ ಹಣ ಸಂದಾಯವಾಗುವಂತೆ ಪೂರಕ ವ್ಯವಸ್ಥೆ ಕಲ್ಪಿಸುವುದು ನೀತಿಯ ಉದ್ದೇಶ.

ರೈತರು ಬೆಳೆದ ಬೆಳೆಗಳ ಗುಣಮಟ್ಟಕ್ಕೆ ತಕ್ಕ ಬೆಲೆ ದೊರೆಯುವಂತಾಗಲು ಸ್ಪರ್ಧಾತ್ಮಕ ಪೈಪೋಟಿ ಬಹುಮುಖ್ಯ. ಒಂದು ಪ್ರದೇಶದಲ್ಲಿ ರೈತರು ಮಾರಾಟಕ್ಕಾಗಿ ತಂದ ಉತ್ಪನ್ನಗಳನ್ನು ವಿದ್ಯುನ್ಮಾನ ವೇದಿಕೆ ಮೂಲಕ ಅಂತರ್ಜಾಲದಲ್ಲಿ ಪ್ರಸಾರ ಮಾಡಿದರೆ ಹೆಚ್ಚಿನ ಸಂಖ್ಯೆಯಲ್ಲಿ ಖರೀದಿದಾರರು ಪೈಪೋಟಿ ನಡೆಸುವುದರಿಂದ ಯೋಗ್ಯ ಬೆಲೆ ದೊರೆಯಲು ಸಹಕಾರಿಯಾಗುವುದು ಹಾಗೂ ಮಾರುಕಟ್ಟೆಯ ಕಾರ್ಯಕ್ಷಮತೆ ಹೆಚ್ಚಾಗುವುದು. ಈ ನಿಟ್ಟಿನಲ್ಲಿ ಕೃಷಿ ಮಾರಾಟ ಇಲಾಖೆ ಇಂತಹ ವೇದಿಕೆಯನ್ನು ನಿರ್ಮಿಸಿದೆ.

ರೈತರು ತಮ್ಮ ಉತ್ಪನ್ನದ ಗುಣಮಟ್ಟ, ವರ್ಗ ಹಾಗೂ ಇತರೆ ಗುಣಲಕ್ಷಣಗಳ ಮಾಹಿತಿಯನ್ನು ಅಂತರ್ಜಾಲದಲ್ಲಿ ನೀಡಿದ ನಂತರ ಕೃಷಿ ಮಾರಾಟ ಇಲಾಖೆಯ ನಿರ್ದೇಶಕರಿಂದ ಲೈಸನ್ಸ್ ಪಡೆದ ಯಾವುದೇ ಭಾಗದ ವರ್ತಕರು ತಾವಿರುವ ಸ್ಥಳದಿಂದಲೇ ಆನ್‌ಲೈನ್ ವೇದಿಕೆಯಲ್ಲಿ ಉತ್ಪನ್ನಗಳ ಬೆಲೆ ನಮೂದಿಸಿ ಖರೀದಿಸಬಹುದಾಗಿದೆ.

ಆನ್‌ಲೈನ್ ಮೂಲಕ ಕೃಷಿ ಉತ್ಪನ್ನಗಳ ಮಾರಾಟದಿಂದ ಅನಧಿಕೃತ ಮಾರುಕಟ್ಟೆ ವ್ಯವಸ್ಥೆಗೆ ಕಡಿವಾಣ ಬೀಳುವುದರ ಜೊತೆಗೆ ರೈತರಿಗೆ ಸಮಯದ ಉಳಿತಾಯ ಹಾಗೂ ಪಾರದರ್ಶಕ ಮಾರಾಟ ವ್ಯವಸ್ಥೆ ಅನುಕೂಲ ದೊರೆಯುತ್ತದೆ.

**ಶುಭಾರಂಭ**

ಆರಂಭದಲ್ಲಿ ಆನ್‌ಲೈನ್ ಮಾರುಕಟ್ಟೆ ವ್ಯವಸ್ಥೆಯನ್ನು ತಿಪಟೂರು ಮತ್ತು ಅರಸಿಕೆರೆಯ ಕೊಬ್ಬರಿ ಹಾಗೂ ಚಾಮರಾಜನಗರದಲ್ಲಿ ಅರಿಶಿಣ ಮಾರಾಟಕ್ಕೆ ಜಾರಿ ಮಾಡಲಾಗಿದೆ. ರಾಜ್ಯದ ಇತರ ಮಾರುಕಟ್ಟೆಗಳಲ್ಲಿಯೂ ಹಂತ ಹಂತವಾಗಿ ಈ ವ್ಯವಸ್ಥೆ ಜಾರಿಗೆ ಬರಲಿದೆ. ಆನ್‌ಲೈನ್ ವ್ಯವಸ್ಥೆ ಆರಂಭವಾದ ಫೆ.೨೨ರಂದು ಕೊಬ್ಬರಿಗೆ ಬಂಪರ್ ಬೆಲೆ ದೊರೆಯಿತು. ಇತಿಹಾಸದಲ್ಲೇ ಪ್ರಥಮ ಬಾರಿಗೆ ಕೊಬ್ಬರಿಗೆ ಆನ್‌ಲೈನ್ ಹರಾಜಿನಲ್ಲಿ ಕ್ವಿಂಟಲ್‌ಗೆ ರೂ.೯೧೦೬ ಧಾರಣೆ ಸಿಕ್ಕಿತು.

**ಉಗ್ರಾಣ ಮೂಲಕ ಮಾರಾಟ!**

ರೈತರು ಕೃಷಿ ಉತ್ಪನ್ನಗಳನ್ನು ತಮ್ಮ ಊರಿಗೆ ವೈಜ್ಞಾನಿಕವಾದ ಉಗ್ರಾಣಗಳಲ್ಲಿಟ್ಟು ಮಾರಾಟ ಮಾಡಲು ಸಹ ಈ ವ್ಯವಸ್ಥೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಉಗ್ರಾಣಗಳಲ್ಲಿ ದಾಸ್ತಾನಿಟ್ಟ ಉತ್ಪನ್ನಗಳನ್ನು ವರ್ಗೀಕರಿಸಿ ಅದರ ಗುಣ ಲಕ್ಷಣಗಳ ವಿವರಣೆಯನ್ನು ಆನ್‌ಲೈನ್ ಮಾರುಕಟ್ಟೆಯ ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡಿ ವರ್ತಕರು ವೀಕ್ಷಿಸಲು ಅನುವು ಮಾಡಿಕೊಟ್ಟು ಮಾರಾಟ ಮಾಡುವ ಅವಕಾಶವೂ ರೈತರಿಗಿದೆ.

**ಹತಾಶರಾಗಬೇಕಿಲ್ಲ**

ಒಂದೊಮ್ಮೆ ವರ್ತಕ ಅಥವಾ ಖರೀದಿ ಸಂಸ್ಥೆ ಸೂಚಿಸುವ ಬೆಲೆ ರೈತರಿಗೆ ಒಪ್ಪಿಗೆ ಆಗದೇ ಮಾರಾಟ ಮಾಡದೇ ಇರಲು ನಿರ್ಧರಿಸುವ ಹಕ್ಕು ರೈತರಿಗೆ ಇದೆ. ಹಾಗೆಂದು ಬಹಳ ಕಷ್ಟಪಟ್ಟು ಬೆಳೆದ ಕೃಷಿ ಉತ್ಪನ್ನಕ್ಕೆ ಬೆಳೆದ ಕೃಷಿ ಉತ್ಪನ್ನಕ್ಕೆ ಒಳ್ಳೆ ಬೆಲೆ ಸಿಗಲಿಲ್ಲ ಅಥವಾ ಮಾರಾಟವೇ ಆಗಲಿಲ್ಲ ಎಂದು ರೈತರು ಹತಾಶರಾಗಬೇಕಿಲ್ಲ. ಇನ್ನೂ ಕೆಲಕಾಲ ಅಥವಾ ಮಾರುಕಟ್ಟೆಯಲ್ಲಿ ಉತ್ತಮ ಧಾರಣೆ ಬರುವವರೆಗೂ ಕೃಷಿ ಉತ್ಪನ್ನವನ್ನು ಉಗ್ರಾಣದಲ್ಲಿಯೇ ಮತ್ತಷ್ಟು ದಿನ ಇಡಬಹುದು.

**ತುರ್ತಿಗೆ ಹಣ ಲಭ್ಯ**

ತುರ್ತಾಗಿ ಹಣವೇನಾದರೂ ಬೇಕಿದ್ದರೆ ಗೋದಾಮಿನಲ್ಲಿರುವ ಕೃಷಿ ಉತ್ಪನ್ನಗಳನ್ನೇ ಖಾತರಿಯಾಗಿ ನೀಡಿ ಬ್ಯಾಂಕ್‌ಗಳಿಂದ ಸಾಲ ಪಡೆಯಬಹುದು. ನಂತರ ಸೂಕ್ತ ಸಮಯದಲ್ಲಿ ಬೆಲೆ ಏರಿಕೆಯಾಗಿದ್ದನ್ನು ನೋಡಿಕೊಂಡು ಮಾರಾಟ ಮಾಡಬಹುದು. ಇದರ ಹಣ ರೈತರ ಖಾತೆಗೆ ಜಮಾ ಆಗುವಾಗಲೇ ಈ ಕೃಷಿ ಉತ್ಪನ್ನ ಆಧರಿಸಿ ಪಡೆದಿದ್ದ ಸಾಲ ಮತ್ತು ಬಡ್ಡಿ ಬ್ಯಾಂಕ್‌ಗೆ ಜಮಾ ಆಗುತ್ತದೆ.

**ವಿವಾದ ಇತ್ಯರ್ಥ ಹೇಗೆ?**

ಆನ್‌ಲೈನ್ ಮಾರಾಟ ವೇದಿಕೆಯ ಮೂಲಕ ಉತ್ಪನ್ನಗಳು ಮಾರಾಟವಾಗುವ ಹಂತದಲ್ಲಿ ದರ ನಿಗದಿಪಡಿಸುವುದು, ಉತ್ಪನ್ನಗಳ ಗುಣಮಟ್ಟ, ತೂಕ, ಹಣ ಪಾವತಿ ಮುಂತಾದ ವಿಷಯಗಳ ಬಗ್ಗೆ ಉದ್ಭವವಾಗುವ ವಿವಾದಗಳನ್ನು ಮಾರುಕಟ್ಟೆ ಸಮಿತಿ ಹಂತದಲ್ಲಿಯೇ ಇತ್ಯರ್ಥಗೊಳಿಸಲು 'ವಿವಾದ ಇತ್ಯರ್ಥ ಸಮಿತಿ'ಯನ್ನೂ ರಚಿಸಲಾಗಿದೆ. ರೈತರು ಅಥವಾ ವರ್ತಕರು ಸಮಸ್ಯೆಗಳ ಬಗ್ಗೆ ದೂರು ನೀಡಿ ಸಮರ್ಪಕ ಪರಿಹಾರ ಪಡೆದುಕೊಳ್ಳಬಹುದು.

**ವರ್ತಕರಿಗೆ ಒಂದೇ ಲೈಸನ್ಸ್**

ವರ್ತಕರು ಒಂದೇ ಲೈಸನ್ಸ್ ಪಡೆದು ರಾಜ್ಯದ ಎಲ್ಲ ಕೃಷಿ ಉತ್ಪನ್ನ ಮಾರುಕಟ್ಟೆಗಳ ಖರೀದಿಯಲ್ಲಿ ಭಾಗವಹಿಸಲೂ ಈಗ ಅವಕಾಶ ಕಲ್ಪಿಸಲಾಗಿದೆ.

ಕೃಷಿ ಮಾರಾಟ ಇಲಾಖೆಯ ನಿರ್ದೇಶಕರು ಅಥವಾ ಅವರಿಂದ ಅಧಿಕಾರ ಪಡೆದ ಅಧಿಕಾರಿ ವರ್ತಕರಿಗೆ ನೀಡಲು ಅವಕಾಶ ಕಲ್ಪಿಸಿ ಶಾಸನಕ್ಕೆ ತಿದ್ದುಪಡಿಯನ್ನೂ ಮಾಡಲಾಗಿದೆ.

ಆನ್‌ಲೈನ್ ಮಾರುಕಟ್ಟೆ ವೇದಿಕೆಯ ನಿರ್ವಹಣೆಗಾಗಿ ರಾಜ್ಯ ಸರ್ಕಾರ ಹಾಗೂ 'ಎನ್‌ಸ್ಪಾಟ್' ಪಾಲುದಾರಿಕೆಯಲ್ಲಿ 'ರಾಷ್ಟ್ರೀಯ ಇ–ಮಾರ್ಕೆಟ್ ಸರ್ವಿಸಸ್ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಈ ಸಂಸ್ಥೆಯಲ್ಲಿ ವರ್ತಕರು ತಮ್ಮ ಹೆಸರನ್ನು ನೋಂದಾಯಿಸಬಹುದು. ಆನ್‌ಲೈನ್ ಮಾರಾಟ ವೇದಿಕೆಯಲ್ಲಿ ವರ್ತಕರು ತಾವಿರುವ ಸ್ಥಳದಿಂದಲೇ ಉತ್ಪನ್ನಗಳ ಗುಣಲಕ್ಷಣಗಳ ಮಾಹಿತಿಯನ್ನು ಪರಿಶೀಲಿಸಿ ಆನ್‌ಲೈನ್‌ನಲ್ಲಿ ಬೆಲೆ ನಮೂದಿಸಬಹದು. ನಿಗದಿತ ನಮಯದ ನಂತರ ಉತ್ಪನ್ನಕ್ಕೆ ನೋಡಿರುವ ಅತಿ ಹೆಚ್ಚಿನ ಬೆಲೆ ಹಾಗೂ ವರ್ತಕರ ವಿವರಗಳು ಆನ್‌ಲೈನ್ ವೇದಿಕೆಯಲ್ಲಿ ದೊರೆಯುವ ವ್ಯವಸ್ಥೆ ಮಾಡಲಾಗಿದೆ.

ಒಂದು ವೇಳೆ ಆನ್‌ಲೈನ್ ಮಾರಾಟ ಮಾರಾಟ ಫಲಕದಲ್ಲಿ ನೀಡಿದ ಗುಣಲಕ್ಷಣಗಳಿಗೂ, ಭೌತಿಕವಾಗಿ ಉತ್ಪನ್ನಗಳನ್ನು ಹಸ್ತಾಂತರ ಮಾಡುವಾಗ ಗುಣಮಟ್ಟದ ವ್ಯತ್ಯಾಸಗಳು ಕಂಡು ಬಂದರೆ ಸಂಬಂಧಪಟ್ಟವರು ನಷ್ಟವನ್ನು ತುಂಬಿಕೊಡುವ ಜವಾಬದಾರಿಯನ್ನು ಹೊಂದಿರುತ್ತಾರೆ. ಉತ್ಪನ್ನಗಳು ವಿಲೇವಾರಿಯಾಗುವವರೆಗೂ ದಲ್ಲಾಳಿಗಳು ಅಥವಾ ಉಗ್ರಾಣ ನಿರ್ವಹಣಾ ಸಂಸ್ಥೆಗಳು ಸಂದರ್ಭಕ್ಕೆ ಅನುಸಾರವಾಗಿ ಸಂರಕ್ಷಣೆ ಮಾಡುವ ಜವಾಬ್ದಾರಿ ಹೊಂದಿರುತ್ತಾರೆ.

**ಉತ್ಪನ್ನ ಸ್ವೀಕಾರ ಹೇಗೆ?**

ದರ ನಿಗದಿಪಡಿಸುವ ಪ್ರಕ್ರಿಯೆ ಬಳಿಕ ರೈತರಿಗೆ ಹಣ ಪಾವತಿಯಾಗಿರುವ ವಿಷಯ ಖಚಿತಪಡಿಸಿಕೊಂಡ ನಂತರವೇ ದಲ್ಲಾಳರು ಖರೀದಿದಾರರಿಗೆ ಉತ್ಪನ್ನಗಳನ್ನು ಹಸ್ತಾಂತರಿಸುತ್ತಾರೆ. ಈ ಸಂದರ್ಭದಲ್ಲಿ ಖರೀದಿದಾರರು ಇಚ್ಛಿಸಿದರೆ ಉತ್ಪನ್ನಗಳ ತೂಕವನ್ನು ಮತ್ತೊಮ್ಮೆ ಪರಿಶೀಲಿಸಿ ಖಚಿತಪಡಿಸಿಕೊಳ್ಳಬಹುದು, ಇಲ್ಲದಿದ್ದರೆ ಮಾರಾಟ ಪೂರ್ವದ ತೂಕದಂತೆಯೇ ಉತ್ಪನ್ನಗಳನ್ನು ಖರೀದಿದಾರರು ಪಡೆಯಬಹುದು.

ಉತ್ಪನ್ನಗಳ ಖರೀದಿ ನಂತರ ವರ್ತಕರು ತಮ್ಮ ಲೈಸನ್ಸ್ ದಾಖಲಾತಿಯೊಂದಿಗೆ ದಲ್ಲಾಳರ ಅಂಗಡಿಯಲ್ಲಿ ಉತ್ಪನ್ನಗಳನ್ನು ಪರಿಶೀಲಿಸಿ ಪಡೆದುಕೊಳ್ಳಬಹುದು ಅಥವಾ ತಮ್ಮ ಏಜೆಂಟರಿಗೆ ಅಧಿಕಾರ ಪತ್ರ ನೀಡಿ ದಲ್ಲಾಳರಿಂದ ಉತ್ಪನ್ನಗಳನ್ನು ಪಡೆದುಕೊಳ್ಳುವ ವ್ಯವಸ್ಥೆಯನ್ನೂ ಮಾಡಿಕೊಳ್ಳಬಹುದು.

**ಆನ್‌ಲೈನ್ ವಹಿವಾಟು ವೈಖರಿ**


- ❖ ರೈತರು ಮಾರಾಟಕ್ಕಿಡುವ ಕೃಷಿ ಉತ್ಪನ್ನಗಳ ವಿವರಗಳನ್ನು ಎಪಿಎಂಸಿ ಪ್ರವೇಶ ದ್ವಾರದಲ್ಲಿಯೇ ಪ್ರತ್ಯೇಕವಾಗಿ ದಾಖಲಿಸಿ ವಿಶಿಷ್ಟ ಗುರುತಿನ ಸಂಖ್ಯೆಯನ್ನು ಪಡೆದುಕೊಳ್ಳುವುದು.
- ❖ ದಲ್ಲಾಳರ ಅಂಗಡಿ ಮುಂದೆ ಕೃಷಿ ಉತ್ಪನ್ನವನ್ನು ಇಳಿಸುವುದು.
- ❖ ದಲ್ಲಾಳರು ಆ ಕೃಷಿ ಉತ್ಪನ್ನಗಳು ಸಂಗ್ರಹವಾಗಿದ್ದನ್ನು ದಾಖಲಿಸಿಕೊಳ್ಳುವುದು.
- ❖ ಕೃಷಿ ಉತ್ಪನ್ನಗಳನ್ನು ಪ್ರಾಂಗಣದಲ್ಲಿ ರಾಶಿ ಹಾಕುವುದು ಮತ್ತು ಉತ್ಪನ್ನದ ಸ್ಯಾಂಪಲ್ (ಮಾದರಿ) ಪ್ರದರ್ಶಿಸುವುದು.
- ❖ ಪ್ರವೇಶ ದ್ವಾರದಲ್ಲಿ ನೀಡಿದ ವಿಶಿಷ್ಟ ಗುರುತಿನ ಸಂಖ್ಯೆಗೆ ಅನುಗುಣವಾಗಿ ಕೃಷಿ ಉತ್ಪನ್ನಗಳ ನಿರೀಕ್ಷಿತ ಧಾರಣೆಯನ್ನು ವಿದ್ಯುನ್ಮಾನ ವ್ಯವಸ್ಥೆ ಮೂಲಕ ಆನ್‌ಲೈನ್ ಮಾರುಕಟ್ಟೆಗೆ ದಾಖಲಿಸುವುದು.
- ❖ ಮಾರಾಟಕ್ಕಿಟ್ಟ ಕೃಷಿ ಉತ್ಪನ್ನಕ್ಕೆ ಆನ್‌ಲೈನ್ ವ್ಯವಸ್ಥೆಯಡಿ ವರ್ತಕರಿಂದ ನಮೂದಾದ ಅತಿ ಹೆಚ್ಚಿನ ಧಾರಣೆಯ ಮಾಹಿತಿ ಪ್ರಕಟಣೆ, ರೈತರ ಮೊಬೈಲ್ ಫೋನ್‌ಗೆ ಎಸ್.ಎಂ.ಎಸ್. ರವಾನೆ.
- ❖ ನಂತರ ವಿದ್ಯುನ್ಮಾನ ವ್ಯವಸ್ಥೆಯಡಿ ಕೃಷಿ ಉತ್ಪನ್ನವನ್ನು ತೂಕ ಮಾಡುವುದು.
- ❖ ಆನ್‌ಲೈನ್‌ನಲ್ಲಿ ನಿಗದಿಯಾದ ಗರಿಷ್ಠ ಬೆಲೆ ರೈತರಿಗೆ ಒಪ್ಪಿಗೆಯಾದರೆ ಮಾರಾಟದ ರಶೀದಿ ಸಿದ್ಧಪಡಿಸುವುದು.
- ❖ ನಂತರ ಖರೀದಿದಾರರು ಅಥವಾ ಅವರ ಪ್ರತಿನಿಧಿಯಾದ ದಲ್ಲಾಳರಿಂದ ಮಾರುಕಟ್ಟೆ ಸಮಿತಿಗೆ ಹಣ ಪಾವತಿ.
- ❖ ರೈತರ ಬ್ಯಾಂಕ್ ಖಾತೆಗೆ ನೇರ ಹಣ ವರ್ಗಾವಣೆ.
- ❖ ಹಣ ಪಾವತಿಯಾಗಿದ್ದಕ್ಕೆ ರೈತರಿಂದ ರಶೀದಿ / ಸ್ವೀಕೃತಿ ಪತ್ರ ಪಡೆಯುವುದು.
- ❖ ಅಂತಿಮವಾಗಿ ಮಾರಾಟವಾದ ಕೃಷಿ ಉತ್ಪನ್ನ ಮಾರುಕಟ್ಟೆಯಿಂದ ಹೊರ ಹೋಗಿದ್ದನ್ನು ದಾಖಲಿಸಿಕೊಂಡು ಒಟ್ಟು ಮಾರಾಟ ಪ್ರಕ್ರಿಯೆ ಪೂರ್ಣಗೊಳಿಸುವುದು.

**ವ್ಯವಸ್ಥೆಯಲ್ಲಿ ಭಾಗೀದಾರರು**

ಕರ್ನಾಟಕ ಸರ್ಕಾರದ ಕೃಷಿ ಮಾರುಕಟ್ಟೆ ಸಚಿವಾಲಯದ ಮಾರ್ಗದರ್ಶನದಲ್ಲಿ ಆರಂಭಗೊಂಡಿರುವ 'ಕೃಷಿ ಉತ್ಪನ್ನಗಳ ಆನ್‌ಲೈನ್ ಮಾರುಕಟ್ಟೆ' ವ್ಯವಸ್ಥೆಯಲ್ಲಿ ಇನ್ನೂ ಎರಡು

ಸಂಸ್ಥೆಗಳು ಭಾಗಿಯಾಗಿವೆ. ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ ಮತ್ತು ರಾಷ್ಟ್ರೀಯ ಇ ಮಾರ್ಕೆಟ್ ಸರ್ವಿಸಸ್ (ಆರ್ಇಎಂಎಸ್).

ಒಂದೇ ಸೂರಿನಡಿಯಲ್ಲಿ ಮಾರುಕಟ್ಟೆ ಜೋಡಣೆಯಾಗಿರುವ ಮಾದರಿಯನ್ನು ಈ ಕೆಳಗಿನ ಚಿತ್ರದಲ್ಲಿ ತೋರಿಸಲಾಗಿದೆ.




**ಬದಲಾವಣೆಯ ಪರ್ವಕ್ಕೆ ನಾಂದಿ**

ಮಾರುಕಟ್ಟೆಯ ಸಾಮರ್ಥ್ಯ, ದಕ್ಷತೆ ಹೆಚ್ಚಿಸುವುದು ಏಕೀಕೃತ (ಆನ್‌ಲೈನ್) ಮಾರುಕಟ್ಟೆ ಉದ್ದೇಶ, ಏಕೀಕೃತ ಮಾರುಕಟ್ಟೆಯಲ್ಲಿ ಹೆಚ್ಚಿನ ಸಂಖ್ಯೆಯ ವರ್ತಕರಿಗೆ ಪಾಲ್ಗೊಳ್ಳಲು ಅವಕಾಶವಾಗಲಿದೆ. ಜೊತೆಗೆ ಗುಣಮಟ್ಟದ ಉತ್ಪನ್ನಗಳ ಪಡೆಯಲೂ ಸಾಧ್ಯವಾಗುತ್ತದೆ, ಇಡೀ ಪ್ರಕ್ರಿಯೆಯಲ್ಲಿ ರೈತರು ವರ್ತಕರು, ಗ್ರಾಹಕರು ಸೇರಿದಂತೆ ಪ್ರತಿಯೊಬ್ಬರಿಗೂ ಲಾಭವಾಗುತ್ತದೆ.

ಮಾರಾಟ ಮಾಡಿದ ಕೃಷಿ ಉತ್ಪನ್ನದ ಹಣ ಬ್ಯಾಂಕ್ ಖಾತೆಗೇ ನೇರ ಜಮಾ ಆಗುವುದರಿಂದ ರೈತರನ್ನು ಆದಾಯ ತೆರಿಗೆಯಿಂದ ವಿನಾಯಿತಿ ಇದೆ ಎಂದು ಆದಾಯ ತೆರಿಗೆ ಇಲಾಖೆಯೇ ಸ್ಪಷ್ಟಪಡಿಸಿದೆ. ಆದ್ದರಿಂದ ರೈತರು ಆತಂಕ ಪಡಬೇಕಾಗಿಲ್ಲ. ಪ್ರಸಕ್ತ ಸಾಲಿನ ಅಂತ್ಯಕ್ಕೆ ರಾಜ್ಯದ ಕನಿಷ್ಠ ೩೦ ಮರುಕಟ್ಟೆಗಳಲ್ಲಿ 'ಆನ್ಲೈನ್ ಮಾರುಕಟ್ಟೆ' ವ್ಯವಸ್ಥೆ ಜಾರಿಯಾಗಲಿದೆ. ರೈತರ ಸಬಲೀಕರಣ ಆಶಯದ ಈ ವ್ಯವಸ್ಥೆ ಈಗಿನ ಮಾರುಕಟ್ಟೆಯಲ್ಲಿ ತೀವ್ರಗತಿಯ ಬದಲಾವಣೆಯನ್ನು ತರಲಿದೆ.

**ನೇರ ಹಣ ಪಾವತಿ**

ಕೃಷಿ ಉತ್ಪನ್ನಗಳ ಖರೀದಿ ಪ್ರಕ್ರಿಯೆ ಮುಗಿದ ತಕ್ಷಣವೇ ರೈತರ ಬ್ಯಾಂಕ ಖಾತೆಗೆ ನೇರವಾಗಿ ಹಣ ಪಾವತಿಸುವುದು ಆನ್‌ಲೈನ್ ಮಾರುಕಟ್ಟೆಯ ಮತ್ತೊಂದು ವಿಶೇಷ. ಮಾರುಕಟ್ಟೆಗೆ

ಉತ್ಪನ್ನಗಳನ್ನು ತಂದಾಗ ಪ್ರವೇಶ ದ್ವಾರದಲ್ಲಿ ರೈತರ ಹೆಸರು, ವಿಳಾಸ, ಮೊಬೈಲ್, ದೂರವಾಣಿ ಸಂಖ್ಯೆ ಬ್ಯಾಂಕ್ ಖಾತೆಸಂಖ್ಯೆ ಮತ್ತು ಬ್ಯಾಂಕ್ ಶಾಖೆಯ 'ಐಎಫ್ಎಸ್‌ಸಿ' ಕೋಡ್ ಕೃಷಿ ಉತ್ಪನ್ನದ ಹೆಸರು ಮತ್ತು ಪ್ರಮಾಣ ಮೊದಲಾದ ವಿವರಗಳನ್ನು ಪೂರ್ಣವಾಗಿ ದಾಖಲಿಸಿಕೊಂಡು ವಿಶೇಷ ಸಂಕೇತದ 'ಲಾಟ್' ಸಂಖ್ಯೆ ನೋಡಲಾಗುತ್ತದೆ.

ರೈತರು ವಿಶೇಷ ಸಂಕೇತದ 'ಲಾಟ್' ಸಂಖ್ಯೆಯ 'ಲಾಟ್' ಸಂಖ್ಯೆಯ ಚೀಟಿಯೊಂದಿಗೆ ಅಂಗಡಿಗೆ ಹೋಗಿ ಅಥವಾ ನೇರ ಖರೀದಿ ವ್ಯವಸ್ಥೆಯಲ್ಲಿ ಉತ್ಪನ್ನಗಳನ್ನು ಮಾರಾಟಕ್ಕೆ ಇಡಬಹುದು. ಇಂತಹ ಸಂದರ್ಭಗಳಲ್ಲಿ ಉತ್ಪನ್ನಗಳನ್ನು ವಿಶ್ಲೇಷಣೆ ಮಾಡಿ ಅದರ ಎಲ್ಲ ಗುಣಲಕ್ಷಣಗಳ ವಿವರಗಳನ್ನು ಆನ್‌ಲೈನ್ ಮಾರಾಟ ವೇದಿಕೆಯಲ್ಲಿ (ಕೃಷಿ ಉತ್ಪನ್ನ ಆನ್‌ಲೈನ್ ಮಾರುಕಟ್ಟೆ ವೆಬ್‌ಸೈಟ್‌ನಲ್ಲಿ) ಪ್ರಕಟಿಸಲಾಗುವುದು.

ಮಾರಾಟದ ಹಂತದಲ್ಲಿ ಉತ್ಪನ್ನಗಳ ತೂಕ, ಬೆಲೆ, ಹಣಪಾವತಿ ಮುಂತಾದ ವಿವರಗಳು, ರೈತರ ಮೊಬೈಲ್ ಫೋನ್‌ಗೆ 'ಎಸ್.ಎಂ.ಎಸ್. ಮೂಲಕ ರವಾನೆಯಾಗುತ್ತದೆ. ಇದರಿಂದ ರೈತರು ಹೆಚ್ಚಿನ ಸಮಯುವನ್ನು ಮಾರುಕಟ್ಟೆಯಲ್ಲಿ ವ್ಯರ್ಥ ಮಾಡುವ ಅವಶ್ಯಕತೆ ಇರುವುದಿಲ್ಲ.

ಬೆಲೆ ನಿಗದಿಪಡಿಸಿದ ನಂತರ ರೈತರ ಒಪ್ಪಿಗೆ ಪಡೆದು ಉತ್ಪನ್ನಗಳನ್ನು ಮಾರಾಟ ಮಾಡಲಾಗುವುದು. ಇದಕ್ಕೆ ಪೂರ್ವದಲ್ಲಿ ವರ್ತಕರ ಬ್ಯಾಂಕ್ ಖಾತೆಯಿಂದ ಉತ್ಪನ್ನದ ಮೌಲ್ಯ ಹಾಗೂ ನಿಯಮಾನುಸಾರ ಅವರು ಭರಿಸುವ ವೆಚ್ಚಗಳನ್ನು ಆನ್‌ಲೈನ್ ವೇದಿಕೆ ನಿರ್ವಹಣಾ ಸಂಸ್ಥೆಯು ವರ್ಗಾಯಿಸಲಿದೆ.

ಕೃಷಿ ಉತ್ಪನ್ನ ಮಾರಾಟವಾಗಿದ್ದರೆ ಹಣವನ್ನು ರೈತರ ಬ್ಯಾಂಕ್ ಖಾತೆಗೆ ಉತ್ಪನ್ನ ಮಾರಾಟವಾದ ದಿನವೇ ಆನ್‌ಲೈನ್ ಮೂಲಕ ವರ್ಗಾವಣೆ ಮಾಡಲಾಗುತ್ತದೆ.

*****

**ಮೊದಲನೇ ಸೆಮಿಷ್ಟರ್ ಬಿ.ಎಸ್ಸಿ.(ಫ್ಯಾಡ್)ಪರೀಕ್ಷೆ ೨೦೨೦**
**ಕನ್ನಡ ಭಾಷಾ ಪಠ್ಯ–೧**
**ಮಾದರಿ ಪ್ರಶ್ನೆಪತ್ರಿಕೆ**
**ಸ್ವರೂಪ**

## ಭಾಗ=೧

1. **ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ:** **1*12=12**
   (ಪ್ರತಿ ಭಾಗದಿಂದ ಮೂರು ಪ್ರಶ್ನೆಗಳು: ಎಲ್ಲ ಪ್ರಶ್ನೆಗಳಿಗೂ ಪೂರ್ಣ ವಾಕ್ಯದಲ್ಲಿ ಉತ್ತರ ಬರೆಯಿರಿ)

2. **ಗ್ರಹಿಸಿ ಉತ್ತರಿಸಿ,** **5*2=10**
   ಓದು ಪಠ್ಯ ಆಧರಿಸಿದ ಭಾಗ ಮತ್ತು ೫ ಪ್ರಶ್ನೆಗಳು

## ಭಾಗ=೨

1. **ಅ) ಕೆಳಗಿನವುಗಳಲ್ಲಿ ಯಾವುದೇ ೨ ಪ್ರಶ್ನೆಗಳಿಗೆ ಐವತ್ತು ಪದಗಳಿಗೆ ಮೀರದಂತೆ ಉತ್ತರ ಬರೆಯಿರಿ.**
   (ಮೂರು ಪ್ರಶ್ನೆಗಳಲ್ಲಿ ಎರಡು ಪ್ರಶ್ನೆಗಳಿಗೆ ಉತ್ತರಿಸಿ); **2*3=06**
   **ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ.**
   (ಎರಡು ಪ್ರಶ್ನೆಗಳಲ್ಲಿ ಒಂದು ಪ್ರಶ್ನೆಗೆ ಉತ್ತರ ಬರೆಯಿರಿ)

2. **ಅ) ಕೆಳಗಿನವುಗಳಲ್ಲಿ ಯಾವುದೇ ೨ ಪ್ರಶ್ನೆಗಳಿಗೆ ಐವತ್ತು ಪದಗಳಿಗೆ ಮೀರದಂತೆ ಉತ್ತರ ಬರೆಯಿರಿ.**
   (ಮೂರು ಪ್ರಶ್ನೆಗಳಲ್ಲಿ ಎರಡು ಪ್ರಶ್ನೆಗಳಿಗೆ ಉತ್ತರಿಸಬೇಕು) **2*3=06**
   **ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ.**
   (ಎರಡು ಪ್ರಶ್ನೆಗಳಲ್ಲಿ ಒಂದು ಪ್ರಶ್ನೆಗೆ ಉತ್ತರ ಬರೆಯಿರಿ)

3. **ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ.**
   (ಮೂರು ಪ್ರಶ್ನೆಗಳಲ್ಲಿ ಎರಡು ಪ್ರಶ್ನೆಗಳಿಗೆ ಉತ್ತರಿಸಬೇಕು) **6+6=12**
   **ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ.**
   (ಎರಡು ಪ್ರಶ್ನೆಗಳಲ್ಲಿ ಒಂದು ಪ್ರಶ್ನೆಗೆ ಉತ್ತರ ಬರೆಯಿರಿ) **6+6=12**
4. **ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ.**
   (ಮೂರು ಪ್ರಶ್ನೆಗಳಲ್ಲಿ ಎರಡು ಪ್ರಶ್ನೆಗಳಿಗೆ ಉತ್ತರಿಸಬೇಕು) **6+6=12**

**********

## ಮೊದಲನೇ ಸೆಮಿಷ್ಟರ್ ಬಿ.ಎಸ್ಸಿ.(ಫ್ಯಾಡ್)ಪರೀಕ್ಷೆ ೨೦೨೦
## ಕನ್ನಡ ಭಾಷಾ ಪಠ್ಯ–೧
## ಮಾದರಿ ಪ್ರಶ್ನೆಪತ್ರಿಕೆ
## ಭಾಗ=೧

**೧. ಅ. ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ: 1*12=12**

೧. ಪುಸ್ತಕ ಓದದೆ ಏನನ್ನು ಅರಿತರು ಹಿಂದಿನಸಾಲಿನ ಹುಡುಗರು?
೨. ತೇಜಸ್ವಿಯವರ ನಾಯಿಯ ಹೆಸರೇನು?
೩. ಪುಟ್ಟಾಚಾರಿ ಹೆಂಡತಿಯನ್ನು ಯಾವ ಕೋಲಿನಿಂದ ಹೊಡೆಯುತ್ತಿದ್ದರು?
೪. ಕನ್ನಡಿಗರ ಗುಣಸ್ವಭಾವ ಹೇಳುವ ಶಾಸನ ಯಾವುದು?
೫. ಯಾವ ಬೆರಳಿನಿಂದ ಕರ್ಣ ಹಲ್ಲುಜ್ಜುತ್ತಿದ್ದನು?
೬. ಇರುಳಿಗರು ಕರ್ನಾಟಕವಲ್ಲದೆ ಇನ್ಯಾವ ರಾಜ್ಯದಲ್ಲಿ ವಿಸ್ತರಿಸಿದ್ದಾರೆ?
೭. ಹಸಿದವರಿಗೆ ಯಾವ ದೇಗುಲವಿದೆ?
೮. 'ದೇವರಹೆಣ' ಕಥೆಯ ಲೇಖಕರು ಯಾರು?
೯. ರೈಲ್ವೆನಿಲ್ದಾಣದಲ್ಲಿ ವ್ಯಕ್ತಿ ಏನನ್ನು ಕದ್ದನು?
೧೦. ಹಣ್ಣಿನಮರ ಯಾವುದು?
೧೧. ಪರಿಸರವನ್ನು ಬದಲಿಸುವ ಏಕೈಕಜೀವಿ ಯಾರು?
೧೨. ಹೂವಿನ ಮೇಲೆ ಕುಳಿತಿರುವುದೇನು?

**ಆ. ಕೆಳಗಿನ ಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸಿ; ಓದು ಪಠ್ಯದಿಂದ) 2*5=10**

ನೆಗಡಿಗೆ ಇಂಥ ಕಾಲ, ಇಷ್ಟು ಸಲ ಎಂಬ ಕಟ್ಟುಪಾಡು ಯಾವುದೂ ಇದ್ದಂತೆ ನನ್ನ ಅನುಭವಕ್ಕೆ ಬಂದಿಲ್ಲ. ಚಳಿಗಾಲದಲ್ಲಿ, ಅದರಲ್ಲೂ ತುಂತುರು ಹನಿ ಬೀಳುವಾಗ, ಇದು ಉರುಬು ಹೆಚ್ಚು ಎಂದು ಹೇಳುವವರುಂಟು, ನವೆಂಬರ್ ತಿಂಗಳ ಮೊದಲನೆಯ ವಾರದಲ್ಲಿ ನೆಗಡಿ ಭೇಟಿ ಕೊಡದಿದ್ದರೆ ಋತುಧರ್ಮವೇ ಬದಲಾದಂತೆ ಆತಂಕಪಡುವವರೂ ಉಂಟು. ಆದರೆ, ನನ್ನ ನೆಗಡಿ ಹೀಗೆ ತನ್ನ ಸವಾರಿಗೆ ಪರಿಮಿತಿಗಳನ್ನು ಕಲ್ಪಿಸಿಕೊಂಡಿಲ್ಲ, ಆದ ಕಾರಣವೋ ಒಮ್ಮೊಮ್ಮೆ ನನ್ನ ಪ್ರಶಂಸೆಯನ್ನು ಕೂಡ ಗಳಿಸಿದೆ. ನನ್ನ ಗುರುತಿನ ದೊಡ್ಡ ಮನುಷ್ಯರೊಬ್ಬರು, "ನನಗೆ ಮೂರು ತಿಂಗಳಿಗೊಂದು ಸಲ ತಪ್ಪದೆ ನೆಗಡಿ ಹಿಡಿಯುತ್ತದೆ" ಎಂದು ಹೇಳಿ ಒಂದು ಸಾವಿರ ರೂಪಾಯಿ ಸಂಬಳ ತೆಗೆಯುವವರ ಹಾಗೆ ಹೆಮ್ಮೆ ಕೊಚ್ಚಿಕೊಂಡರು, ಆದರೆ ಅವರನ್ನು ಕುರಿತು ಕನಿಕರವೂ ಅವರ ನೆಗಡಿಯ ವಿಷಯದಲ್ಲಿ ತಿರಸ್ಕಾರವೂ ನನಗೆ ಹುಟ್ಟಿದೆ. ನನ್ನ ನೆಗಡಿಯ ಪೂರ್ಣ ಸ್ವಾತಂತ್ರ್ಯವನ್ನು ನೆನೆದು ಅದರಲ್ಲಿ ಅಭಿಮಾನ ಉಕ್ಕಿತು.

೧. ನೆಗಡಿಗೆ ಯಾವುದರ ಕಟ್ಟುಪಾಡು ಇಲ್ಲ?
೨. ಲೇಖಕರಿಗೆ ನೆಗೆಡಿ ಬರುವ ಕಾಲ ಯಾವುದು?
೩. ಯಾವುದಕ್ಕೆ ಆತಂಕ ಪಡಬೇಕೆಂದು ಲೇಖಕರು ಹೇಳಿದ್ದಾರೆ?

೪. ಲೇಖಕರಿಗೆ ಗುರುತಿನವರು ಏನು ಹೇಳಿದರು?
೫. ಯಾವುದರ ಬಗ್ಗೆ ನೆನೆದು ಅಭಿಮಾನ ಉಕ್ಕಿತು?

**ಭಾಗ=೨**

**೨. ಅ. ಕೆಳಗಿನವುಗಳಲ್ಲಿ ಯಾವುದೇ ೨ ಪ್ರಶ್ನೆಗಳಿಗೆ ಐವತ್ತು ಪದಗಳಿಗೆ ಮೀರದಂತೆ ಉತ್ತರ ಬರೆಯಿರಿ. 3*2=06**

೧. ಹಿಂದಿನಸಾಲಿನ ಹುಡುಗರು ಯಾವುದಕ್ಕೆ ಚಿಂತಿಸಲಾರರು ತಿಳಿಸಿ;
೨. ಕಿವಿ ಚಪ್ಪಲಿಯನ್ನು ಏನು ಮಾಡುತ್ತಿತ್ತು?
೩. ಹೆಂಡತಿಯನ್ನು ಯಾವಾಗ ಹೊಡೆದರೆ ಸರಿ ಎಂದು ಲೇಖಕರು ಹೇಳಿದ್ದಾರೆ?

**ಆ. ಒಂದು ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ: 6*1=06**

೧. ಮಾರ ಕೆಲಸಕ್ಕೆ ಸೇರಿದ ಪ್ರಸಂಗವನ್ನು ತಿಳಿಸಿ;
೨. ಹೆಂಡತಿಯನ್ನು ಹೊಡೆಯುವ ಆಯುಧಗಳನ್ನು ಪರಿಚಯಿಸಿ;

**೩. ಅ. ಕೆಳಗಿನವುಗಳಲ್ಲಿ ಯಾವುದೇ ೨ ಪ್ರಶ್ನೆಗಳಿಗೆ ಐವತ್ತು ಪದಗಳಿಗೆ ಮೀರದಂತೆ ಉತ್ತರ ಬರೆಯಿರಿ. 3*2=06**

೧. ಕರ್ನಾಟಕವು ಭಾರತದ ಶಿಲ್ಪರಚನೆಯ 'ತಾಯಿ' ಎನಿಸಿದೆ ಎಂದು ಹೇಳಿದವರು ಯಾರು?
೨. ಕರ್ಣನಿಗೆ ಹೇಗೆ ಸಿಂಗರಿಸಲಾಯಿತು?
೩. ಇರುಳಿಗರು ಎಲ್ಲೆಲ್ಲಿ ವಾಸಿಸುತ್ತಿದ್ದಾರೆ?ತಿಳಿಸಿ:

**ಆ. ಒಂದು ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ: 6*1=06**

೧. ಕರ್ಣನು ವಿದ್ಯೆ ಕಲಿಯಲು ಹೋದ ಪ್ರಸಂಗವನ್ನು ತಿಳಿಸಿ;
೨. ಇರುಳಿಗರ ಮೂಲವನ್ನು ಲೇಖಕರು ಹೇಗೆ ವಿವರಿಸಿದ್ದಾರೆ?

**೪. ಅ. ಕೆಳಗಿನವುಗಳಲ್ಲಿ ಯಾವುದೇ ೨ ಪ್ರಶ್ನೆಗಳಿಗೆ ಐವತ್ತು ಪದಗಳಿಗೆ ಮೀರದಂತೆ ಉತ್ತರ ಬರೆಯಿರಿ. 3*2=06**

೧. ನಾದಬ್ರಹ್ಮದ ಕಗ್ಗವಿಯನ್ನು ಕವಿ ಬೇದ್ರೆ ಏನೆಂದು ಹೇಳಿದ್ದಾರೆ?
೨. ಠೊಣ್ಣಿ ಹುಲುಲಿಹಳ್ಳದ ದಡವನ್ನು ಹೇಗೆ ಸೇರಿದನು?
೩. 'ರೊಟ್ಟಿ' ಕತೆಯಲ್ಲಿ ರೈಲ್ವೆನಿಲ್ದಾಣದ ಪರಿಸ್ಥಿತಿ ಹೇಗಿತ್ತು?

**ಆ. ಒಂದು ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ: 6*1=06**

**೧.** ದೇವರ ಹೆಣವನ್ನು ಹೇಗೆ ಸಿಂಗರಿಸಲಾಗಿತ್ತು? ವಿವರಿಸಿ;
**೨.** ಭಿಕ್ಷುಕ ರೊಟ್ಟಿ ಕಿತ್ತುಕೊಂಡ ಪ್ರಸಂಗವನ್ನು ತಿಳಿಸಿ;

**೫. ಅ. ಕೆಳಗಿನವುಗಳಲ್ಲಿ ಯಾವುದೇ ೨ ಪ್ರಶ್ನೆಗಳಿಗೆ ಐವತ್ತು ಪದಗಳಿಗೆ ಮೀರದಂತೆ ಉತ್ತರ ಬರೆಯಿರಿ.** **3*2=06**

೧. ಕಣೆಹಂದಿ ಬೇಟೆಯ ಸಿದ್ಧತೆ ಹೇಗಿತ್ತು?
೨. ಮಾನವ ಪ್ರಕೃತಿಗೆ ಏನೆಲ್ಲಾ ಅನ್ಯಾಯ ಮಾಡುತ್ತಿದ್ದಾನೆ?
೩. ಭೂಮಿಯ ಮೇಲಿನ ಪರಿಸರ ಕವಿಗೆ ಹೇಗೆ ಕಂಡಿದೆ?

**ಆ. ಒಂದು ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ:** **6*1=06**

೧. ಪ್ರಕೃತಿ ಮತ್ತು ಮನುಷ್ಯರ ಸಂಬಂಧ ಹೇಗಿರಬೇಕು ತಿಳಿಸಿ:
೨. ಕವಿ ದೊಡ್ಡರಂಗೇಗೌಡರು ತಮ್ಮ ಪರಿಸರ ಗೀತೆ ಮೂಲಕ ಏನನ್ನು ಹೇಳಿದ್ದಾರೆ?

...............

**ಸಂಪಾದಕರ ವಿಳಾಸ**

**ಡಾ.ಚನ್ನವೀರಯ್ಯ**

**ಸಹಪ್ರಾಧ್ಯಾಪಕರು**

**ಕನ್ನಡ ವಿಭಾಗ**

**ಆಚಾರ್ಯ ಪದವಿ ಅಧ್ಯಯನ ವಿದ್ಯಾಲಯ**

**ಬೆಂಗಳೂರು–೫೬೦೧೦೭**

**ಜಂಗಮವಾಣಿ ಸಂಖ್ಯೆ:೯೪೪೮೫೭೯೫೬೫**

**ಡಾ.ರಿಯಾಜ಼್ ಪಾಷ**

**ಕನ್ನಡ ಸಹಾಯಕ ಪ್ರಾಧ್ಯಾಪಕರು**

**ಸರ್ಕಾರಿ ಪ್ರಥಮದರ್ಜೆ ಕಾಲೇಜು,**

**ಯಲಹಂಕ,ಬೆಂಗಳೂರು.೫೬೦೦೬೪**

**ಜಂಗಮವಾಣಿ ಸಂಖ್ಯೆ:೯೦೧೬೦೦೧೭೭**

**ಪ್ರೊ.ರಾಜು ಹೆಚ್ ಎಸ್**

**ಸಹಪ್ರಾಧ್ಯಾಪಕರು**

**ಕನ್ನಡ ವಿಭಾಗ**

**ಸಿಂಧಿ ಮಹಾವಿದ್ಯಾಲಯ #೩೩/೨ಬಿ**

**ಕೆಂಪಾಪುರ ಹೆಬ್ಬಾಳ, ಬೆಂಗಳೂರು. ೫೬೦೦೨೪**

**ಜಂಗಮವಾಣಿ ಸಂಖ್ಯೆ:೯೬೪೫೪೦೨೭೩**